ಇಂದಾನೊಂದು ಕಾಲದಲ್ಲಿ

ನವ್ಯ ಅಡುಗೂಲಜ್ಜಿಯ ದಿವ್ಯ ಕತೆಗಳು



— ಬಲಿತವರ
ನೀತಿ
ಚಿಂತಾಮಣಿ —

ರಾ. ಶಿ.

ಮುದ್ದು ಅಜ್ಜಿ ಹಳೆಯ ಕತೆಯನು
ಬೆನ್ನು ತಟ್ಟುತ ಪಲುಕುತಿದ್ದಳು
ಕಾಲದೇಶವು ಲಾಗ ಹಾಕಲು
ಕತೆಯು ಹಳಸುತ ಹೋಯಿತು.

ನನ್ನ ಅಜ್ಜಿ ಬಲು ಖಿಲಾಡಿ
ಹೋದಳವಳು ಪಡುವಲಿಂಗೆ
ಬಂದಳವಳು ಲಂಗ ತೊಟ್ಟು
ನುಡಿವಳೀಗ ನವ್ಯ ಕತೆಗಳ

*   *   *

ರಾಜರತ್ನಂ ಜೀ. ಪಿ. ಎಂಬ
ಏಜು ಅರವತ್ತರ ಕನ್ನಡದ ಸರ್ವೆಂಟು
ಬಾರ್ಜು ಬುಕ್ಕುಗಳವಗೆ, ಬೀಯಿಂಗು, ಬಿಕಮಿಂಗಿಕ್ಕು
ಕ್ರೇಜಿಯಾಗುವ ತನಕ ಫ್ರೆಂಡ್ಸರನೆ
ನ್ರೇಜಿಸವರ ಹ್ಯಾಂಡ್ಸಲಿ ರೈಟಿಸುವನಿವನು
ಗಾರ್ಜಿಯಸ್ ವರ್ಕಿದು, ಎಂಬೆ, ಬೆಸ್ಟುಪರಿಚಾರಿಕೆಯು.

ರೂ. 3–50

11.3.67

ಇಂದಾನೊಂದು ಕಾಲದಲ್ಲಿ

ನವ್ಯ ಅಡುಗೂಲಜ್ಜಿಯ ದಿವ್ಯ ಕತೆಗಳು


— ಬಲಿತವರ ನೀತಿ ಚಿಂತಾಮಣಿ —

ರಾ. ಶಿ.

'ವಿದೇಹ'
14, 17ನೇ ಕ್ರಾಸ್ ರೋಡ್
ಮಲ್ಲೇಶ್ವರಂ, ಬೆಂಗಳೂರು-3.

ಪ್ರಥಮ ಪ್ರಕಾಶನ:
ತಾ. 5-12-1968

ಮುದ್ರಣ:
ಯು. ನರಸಿಂಹ ಮಲ್ಯ
ಬಿ. ಬಿ. ಡಿ. ಪವರ್ ಪ್ರೆಸ್
ಅರಳೇಪೇಟೆ, ಬೆಂಗಳೂರು-2A



ಶ್ರೀ ಜಿ. ಪಿ. ರಾಜರತ್ನಂ

ಅಭಿನಂದನಾರ್ಪಣೆ

ಪ್ರಿಯ ರಾಜರತ್ನಂ,

ಕೀರ್ತಿಶೇಷ ಕೈಲಾಸಂ ಅವರು ಕೊಂಡಿಯ ಮಾತುಗಳನ್ನು ಝುಳಪಿಸಿದಾಗಲೆಲ್ಲ, ಬೇಗ ಅರ್ಥಗ್ರಹಿಸಿ ನಕ್ಕವರಲ್ಲಿ ನೀವೂ ಮೊದಲ ಮೊದಲಿಗರು. ಆಗ ನಮ್ಮಿಬ್ಬರಿಗೂ ಹರೆಯದ ವಯಸ್ಸು. ಚುಟುಕಾಗಳಲ್ಲಾಗಲಿ, ಕತೆಗಳಲ್ಲಾಗಲಿ; ಪದ್ಯಗಳಲ್ಲಾಗಲಿ, ನಾಟಕಗಳಲ್ಲಾಗಲಿ, ಸಾಹಿತ್ಯದ ಯಾವುದೇ ಪ್ರಕಾರದಲ್ಲಿ, ಚುಚ್ಚಿ ಎಚ್ಚರಿಸುವಂತಾದರೆ, ಚಚ್ಚಿ ಕಚಗುಳಿ ಇಡುವಂತಾದರೆ ತುಂಬಾ ಮೋಜೆನಿಸುತ್ತಿತ್ತು. ಬಾಳಿನಲ್ಲೂ ಇದೇ ಅನುಭವಗಳು ಪ್ರತಿಬಿಂಬಿಸಿದುವು.

ಪೂರ್ವ ಸಂಸ್ಕಾರದ ಫಲವಿರಬಹುದು; ಸಂಯಮ ಜೀವನದಿಂದ ಗಳಿಸಿದ ಪುಣ್ಯವಿರಬಹುದು; ಅಥವಾ ಸಂಶಯರಹಿತವಾದ ಆಜನ್ಮ ಸ್ವಭಾವವಿರಬಹುದು; ಯಾವುದೋ ಒಂದು; ಅಥವಾ ಮೂರೂ, ಮತ್ತೊಂದು ಕಾಣದುದು, ನಿಮ್ಮನ್ನು ಧ್ಯೇಯವಾದಿ ಹಾದಿಯಲ್ಲಿ ನಡಸಿ, ಶುಚಿರುಚಿಯಾಗಿ ಬಾಳುವಂತೆ ಅನುಗ್ರಹಿಸಿತು.

ಆದರೆ ಯಾವ ನಿರ್ಬಂಧವೂ, ಯಾವ ರೀತಿ ರೂಢಿಗಳೂ ನನ್ನನ್ನು ಹಿಡಿದು ನಡಸಲಿಲ್ಲ. ಗಾಳಿ ಪಟವು ಹಾರಾಡುವಾಗ, ಬಾಲ ಕಳಚಿದರೆ ಯಾವ ರೀತಿ ಹುಚ್ಚು ತಿಪ್ಪರಲಾಗ ಹಾಕುತ್ತದೋ, ಆ ರೀತಿಯಲ್ಲಿ, ಬಾಳಿನಲ್ಲಿ ಗುರಿಯನ್ನು ಕಾಣದ ನಾನು, ಹುಚ್ಚುಚ್ಚು ಬಾಳ ನಡಸುವಂತಾಯಿತು.

ನಿಮ್ಮ ವಿಹಿತ ಬಾಳಿಗೂ, ನನ್ನ ಅಡ್ಡಾದಿಡ್ಡಿ ಬದುಕಿಗೂ ಏನೊಂದೂ ಸಂಬಂಧವಿಲ್ಲ. ಕಣ್ಣಮುಂದೆ ಸ್ಪಷ್ಟಕಂಡ ದಿವ್ಯ ಧ್ಯೇಯವನ್ನು ಸಾಧಿಸಿದ ನಿಮ್ಮಂತಹವರ ಬಳಿಯಲ್ಲಿ ನನ್ನಂತಹ ಸಂಶಯ ಪಿಶಾಚಿಗಳ ನೆರಳೂ ಬೀಳಬಾರದು. ಹಾಗಿದ್ದರೂ ನನ್ನ ಹವ್ಯಾಸೀ ಬರವಣಿಗೆಗೆ ಪ್ರೇರಕರಾದಿರಿ.

ಕಾರಣ, ತುಸು ಧೈರ್ಯಮಾಡಿ ಈ ಪುಸ್ತಕವನ್ನು ನಿಮಗೆ ಅರ್ಪಿಸುತ್ತಿದ್ದೇನೆ. ಒಮ್ಮೊಮ್ಮೆ ಅನಿಸುತ್ತದೆ, ಮೂಲಭೂತವಾಗಿ ನಮ್ಮದು ಸಮಾನ ಧರ್ಮವೆಂದು. ಒಂದೇ ಗೋತ್ರ ಅಲ್ಲವೇ?

ಅರವತ್ತಕ್ಕೆ ಅರಳು ಮರುಳು ಎಂದು ಹಿರಿಯರನ್ನುತ್ತಿದ್ದರು. ಅರವತ್ತರ ಪ್ರಾಯ ಬಂದಾಗ, ನಿಮ್ಮ ಕಾಯಕದಿಂದ ಪರಿಚಿತರಿಗೆ ಅರಳು ಮರುಳು ಹಿಡಿಸುತ್ತಿದ್ದೀರಿ. ಗಾದೆಯ ಅರ್ಥ ಇದೇ ಏನೋ? ಅಂತಹ ಅರಿವು ಮೂಡಿದ ಶುಭ ಕಾಲದಲ್ಲಿ ಈ ಕಿರುಹೊತ್ತಗೆಯನ್ನು ಅರ್ಪಿಸುವುದು ಸಮ ಎನ್ನಿಸಿತು.

ಸ್ವೀಕರಿಸುವ ಕೃಪೆಮಾಡಿ.

5-12-1968
ಬೆಂಗಳೂರು-3

ಸರ್ವಂ ಶಿವಂ ಮಂಗಳಂ.
ರಾ. ಶಿ.

ಧನ್ಯವಾದ

ಹಸ್ತಪ್ರತಿಯನ್ನು ಹಸಿಯಾಗಿದ್ದಾಗಲೇ ಓದಿ ಸೂಕ್ತ ಸಲಹೆಗಳನ್ನು ಕೊಟ್ಟು ಬಿಸಿಮಾಡಲು ಉಪಕರಿಸಿದ ಮಾನ್ಯ ಮಿತ್ರ ಶ್ರೀ ಬಿ. ಪುಟ್ಟಸ್ವಾಮಯ್ಯನವರಿಗೆ ಮೊದಲ ಧನ್ಯವಾದಗಳು.

ಕತೆಯ ಅರ್ಥವನ್ನು ಎತ್ತಿ ತೋರಿಸುವ ರೇಖಾ ಚಿತ್ರಗಳನ್ನು ಬರೆದುಕೊಟ್ಟ ಧೀಮಂತ ಚಿ|| ಮೂರ್ತಿಗೆ ಧನ್ಯವಾದಗಳನ್ನು ನುಡಿದರೆ ಆತ ರೇಗಿದರೂ ರೇಗಿದನೇ! ಅಷ್ಟು ಆತ್ಮೀಯ.

ಹಸ್ತಪ್ರತಿಯನ್ನು ಮುದ್ರಣಕ್ಕಾಗಿ ಬಿ. ಬಿ. ಡಿ. ಪವರ್ ಪ್ರೆಸ್ಸಿನ ಚಿ|| ಮಾಧವ ಮಲ್ಯ ಅವರಿಗೆ ಕೊಟ್ಟಾಗ, ಶ್ರೀ ರಾಜರತ್ನಂ ಅವರಿಗೆ ಅರ್ಪಿತವಾದುದನ್ನು ಕಂಡಾಗ, ಅವರಂದರು "ಈ ಪುಸ್ತಕದ ಸಾಹಿತ್ಯ ನಿಮ್ಮದಾಗಲಿ, ಪ್ರಕಟಣೆಯ ಹೊಣೆ ನಮ್ಮದಾಗಲಿ. ನಮ್ಮ ಅಭಿಮಾನ ಧಣಿಯೂ, ಪ್ರಾತಃಸ್ಮರಣೀಯರೂ ಆದ ಅವರಿಗೆ, ಇಬ್ಬರೂ ಕೂಡಿ ಅರ್ಪಿಸುವ" ಎಂದರು. ಸಂತೋಷದಿಂದ ಅವರ ಸಲಹೆಯನ್ನು ಒಪ್ಪಿದೆ. ಸಹೃದತೆಯು ಧನ್ಯವಾದಾತೀತವಾದುದು.

ಕೊಂಡು ಓದುವವರಿಗಂತೂ ನಾವಿಬ್ಬರೂ ಆಭಾರಿಗಳು.

ರಾ. ಶಿ.

ಮುನ್ನುಡಿ

" ನಿನ್ನ ಹಾಳು ಚಟ ನನಗೆ ಗೊತ್ತುಕಣೋ, ಮರಿ! ಈಗ ನಾನು ಹೇಳಿದ ಅಡುಗೂಲಜ್ಜಿ ಕತೆಗಳನ್ನೆಲ್ಲಾ, ಮುಂದೆ ಎಂದಾದರೂ ಬರೆದು ಪ್ರಕಟಿಸಿ ಬಿಡುತ್ತಿ. ಅವುಗಳಿಗೆಲ್ಲಾ ಜುಟ್ಟು ಕತ್ತರಿಸಿ, ಬಾಲಂಗೋಚಿಗೆ ಸರಿಗೆ ಕಟ್ಟಿ; ಖಾರ ಖಾರವಾಗಿರೋ ಹಾಗೆ ಒಗ್ಗರಣೆ ಹಾಕಿ, ಕುಲಗೆಡಿಸಿ ಬಿಡುತ್ತಿ. ಹೀನ ಸುಳಿ ಬೋಳಿಸಿದರೆ ಹೋಗುಲ್ಲ, ಮೇಣ ಹಾಕಿ ತೀಡಿದರೂ ನೆಟ್ಟಗಾಗುಲ್ಲ. ಅದೂ ನನಗೆ ಗೊತ್ತು. ಆದರೆ, ಮರಿ! ನೀನು ಮುಂದೆ ಹಾಗೆ ಮಾಡಿದಾಗ ಅದಕ್ಕೊಂದು ಮುನ್ನುಡಿಯನ್ನು ನೀನೇ ಬರೆದುಬಿಡು. ಮುನ್ನುಡಿ ಎನ್ನುವುದು ಹೆಂಗಸಿನ ಕತ್ತಿಗೆ ತಾಳಿ ಕಟ್ಟಿದ ಹಾಗೆ. ತಾಳಿ ಕಟ್ಟಿದಮೇಲೆ ಆ ಹೆಂಗಸಿನ ಪೀಡೆಯೆಲ್ಲಾ ಗಂಡನಿಗೆ ಹೇಗೆ ಅಮರಿಕೊಳ್ಳುತ್ತೋ, ಹಾಗೆಯೇ ಮುನ್ನುಡಿ ಬರೆದವನ ಮೇಲೆ ಕತೆ ಹೇಳಿದವರ ಪೀಡೆಗಳೆಲ್ಲಾ ಅಮರಿಕೊಳ್ಳುತ್ತೆ. ಹಾಗಾದಾಗ ನನ್ನ ಅಂತರ್ ಪಿಶಾಚಿ ಸ್ಥಿತಿಯು ಮುಕ್ತಾಯವಾಗಬಹುದು"

ಎಂದು ನನ್ನ ಮುದ್ದಜ್ಜಿ, ಕತೆ ಹೇಳಿದಾಗಲೆಲ್ಲ, ಮರೆಯದೆ ಹೇಳುತ್ತಿದ್ದಳು.

ಈ ಕತೆಗಳನ್ನೆಲ್ಲಾ ಹೇಳಿದ ಮುದ್ದಜ್ಜಿ, ಪಂಚಾಂಗದ ಪ್ರಕಾರ ನೋಡಿದರೆ ವಯಸ್ಸಾದವಳು. ಆದರೆ ಕಡೆಯತನಕ ಬಾಳಿ ಬದುಕಿದ ರೀತಿಯನ್ನು ಕಂಡರೆ ಇನ್ನೂ ಹರೆಯ ವಯಸ್ಸಿನವಳು ಅನ್ನಿಸುತ್ತಿತ್ತು. ಧರ್ಮಾವರದ ಸೀರೆ ಉಟ್ಟ ದೊರೆಸಾನಿ ಅನ್ನಬಹುದು. ದಿನಾಲೂ ಸಂಜೆ ಮುಂದೆ ಸಮಾಜಕ್ಕೆ ತಪ್ಪದೆ ಹೋಗುತ್ತಿದ್ದಳು. ಅಲ್ಲಿನ ಕ್ಯಾಂಟೀನಿನಿಂದ ತಿಂಡಿ ಪೊಟ್ಟಣಗಳನ್ನು ತಪ್ಪದೆ ತರುತ್ತಿದ್ದಳು. ಮನೆಗೆ ಆಕೆ ಹಿಂತಿರುಗುವ ವೇಳೆಗೆ ನಮ್ಮ ರಾತ್ರಿಯ ಊಟವೆಲ್ಲಾ ಮುಗಿದಿರುತ್ತಿತ್ತು. ಡ್ರಾಯಿಂಗ್ ರೂಮಿನಲ್ಲಿ ಅವಳಿಗಾಗಿ ಕಾಯುತ್ತಿದ್ದೆವು. "ಅಜ್ಜಿ, ಒಂದು ಕತೆ ಹೇಳು, ಆಮೇಲೆ ಹೋಗಿ ಮಲಗ್ತೀವಿ" ಎಂದು ಮೊಮ್ಮಕ್ಕಳು ನಾವು ಆಕೆ ಬಂದಕೂಡಲೆ ಸುತ್ತಲೂ ಫಿರ್ಕಾಯಿಸುತ್ತಿದ್ದೆವು.

"ಏನು ಸತಾಯಿಸ್ತೀರೋ! ದಣಿದುಬಂದ ಮುದುಕೀನ" ಎಂದು ಹೇಳುತ್ತ ಆಕೆ ಸೋಫಾದಮೇಲೆ ಕೂತು, ವ್ಯಾನಿಟಿಬ್ಯಾಗಿನಿಂದ ತಿಂಡಿ ಪೊಟ್ಟಣಗಳನ್ನು ತೆಗೆದು, ನಮಗೆಲ್ಲಾ ಹಂಚಿ, ತಾನೂ ಒಂದಿಷ್ಟು ಮುಕ್ಕಿ, " ಇವತ್ತು ಇಸ್ಪೀಟಿನಲ್ಲಿ ಯಾರಿಗೂ ತಿಳಿಯದಂತೆ ರಂಗ್‌ಚೋರ್ ಮಾಡಿ ಮೂರು ರೂಪಾಯಿ ಸಂಪಾದಿಸಿದೆ. ಅಂತಹ ಹಣವನ್ನು ಇಟ್ಟುಕೋಬಾರದು ಅಂತ, ಅದರಲ್ಲಿ ತಿಂಡಿ ಕಟ್ಟಿಸಿಕೊಂಡು ಬಂದೆ" ಎಂದು ದಿನಾಲುಹೇಳಿ ಆಮೇಲೆ ಕತೆಯನ್ನು ಹೇಳುತ್ತಿದ್ದಳು.

ಹೀಗೆ ನಗು ನಗ್ತಾ ಇದ್ದ ನನ್ನ ಮುದ್ದಜ್ಜಿ, ಅಕಾಲ ಮರಣಕ್ಕೆ ತುತ್ತಾದಳು.

ಎಂಬತ್ತೆರಡರ ಪ್ರಾಯದಲ್ಲಿ ಎಲಡಿಕೆ ಅಗಿಯುತ್ತಿದ್ದಾಗ, ಸೊಕ್ಕಿ ಪ್ರಾಣ ಬಿಟ್ಟಳು.

ಬಾಳಿನಲ್ಲಿ ಅವಳಿಗೆ ಅತಿಯಾದ ಆಸೆ ಇತ್ತು. ಮೊಮ್ಮಕ್ಕಳು ನಾವೆಲ್ಲಾ ನಗು ನಗುತ್ತಾ ಬಾಳಬೇಕೆಂಬ ಆಸೆ. ಹಾಗೆ ನಾವು ಬಾಳುವುದನ್ನು ನೋಡುವ ಮೊದಲೇ ಆಕೆಯ ಪ್ರಾಣಪಕ್ಷಿಯು, ಕವಿಗಳು ಹೇಳುವಂತೆ, ಗರಿಗೆದರಿ ಹಾರಿ ಹೋಯಿತು. ತುಂಬಾ ಆಸೆ ಇಟ್ಟುಕೊಂಡು ಸತ್ತವರು ಅಂತರ್ ಪಿಶಾಚಿಗಳಾಗಿ ರಿಟೈರ್ಡ್ ಆಫೀಸರುಗಳ ತರಹ ಅಲೆದಾಡುತ್ತಿರುತ್ತಾರಂತೆ. ಆಗ ನಮ್ಮನ್ನು ನೋಡುತ್ತಾ ಇರುತ್ತಾರಂತೆ. ಅವರು ಬಯಸಿದ ಹಾಗೆ ನಾವು ಬಾಳುವುದನ್ನು ಕಂಡಮೇಲೆ ಪರ್ಮನೆಂಟ್ ಆಗಿ ಪರಲೋಕಕ್ಕೆ ಹೋಗುತ್ತಾರಂತೆ.

ನಾವೆಲ್ಲ ನಗ್ತಾ ಇದೀವಿ, ಏನೇ ಕಷ್ಟಗಳು ಮನೆಯಲ್ಲಿ ಬರಲಿ; ಎಂತಹ ಸಂಕಟಗಳನ್ನು ವಿನಾಕಾರಣ ಸರ್ಕಾರವು ಹೇರಲಿ; ಅರಿಯದೆ ಸಮಾಜವು ಎಷ್ಟೇ ಎಡರು ತೊಡರುಗಳನ್ನಿಡಲಿ, ಎಲ್ಲವನ್ನೂ ನಗ್ತಾ ಎದುರಿಸುತ್ತೇವೆ. ಉಪಾಯದಿಂದ ಎಲ್ಲರ ಕಣ್ಣಿಗೂ ನಗ್ತಾ ನಗ್ತಾ ಮಣ್ಣುಹಾಕಿ, ನಮ್ಮ ಬಾಯನ್ನು ಸಿಹಿ ಮಾಡಿಕೊಳ್ಳುತ್ತಿದ್ದೀವಿ ಎಂದು ಆಕೆಯ ಅಂತರ್ ಪಿಶಾಚಿಗೆ ಸಾಕ್ಷ್ಯ ನೀಡಲು ಈ ಪುಸ್ತಕವನ್ನು ಪ್ರಕಟಿಸುತ್ತಿದ್ದೇನೆ.

ಪೀಡೆ ಪಿಶಾಚಿ ಪರಿಹಾರಾರ್ಥವಾಗಿ ಮಾಡುವ ಪೂಜೆ; ಇದು.

ಇನ್ನು ಹೆಚ್ಚು ಮುನ್ನುಡಿಯನ್ನು ಬರೆಯಬಾರದು. ಬರೆದರೆ ರುದ್ರಪ್ಪ ಮಂತ್ರಿಗಳನ್ನು ಸ್ವಾಗತಿಸಿದ ಹಾಗಾಗುತ್ತೆ.

ರುದ್ರಪ್ಪ ಸ್ಮಶಾನದ ಕಾವಲುಗಾರ. ಸ್ಮಶಾನದ ಬಾವೀಗೆ ರಾಟೆಬೇಕು ಎಂತ ಇಂಗ್ಲೀಷಿನವರು ಆಳ್ತಾ ಇದ್ದ ಕಾಲದಿಂದ ಅರ್ಜಿ ಬರೆದು ಸರ್ಕಾರಕ್ಕೆ ಕಳಿಸುತ್ತಿದ್ದ. ಸ್ವಾತಂತ್ರ್ಯ ಬಂತಲ್ಲ, ಆ ಹುಮ್ಮಸ್ಸಿನಲ್ಲಿ ಮಂತ್ರಿಗಳು ರಾಟೆಯ ಸ್ಯಾಂಕ್ಷನ್ ಮಾಡಿದರು. ಅದರ ಉದ್ಘಾಟನೆಗೆ ಮಂತ್ರಿಗಳು ಬರಲೇ ಬೇಕಲ್ಲ; ಫ಼ೋಟೋ ಹಿಡಿಯುವವ ಇರಲೇಬೇಕಲ್ಲ!

ಸ್ಮಶಾನವನ್ನು ರುದ್ರಪ್ಪ ಸಿಂಗರಿಸಿದ. ಸ್ಮಶಾನದ ಬಾಗಿಲ ಮೇಲೆ ಹಸಿರು ವಾಣಿ ಕಟ್ಟಿದ. ಮಂತ್ರಿ. . . .ಗಳಿಗೆ "ಸ್ವಾಗತ" ಎಂದು ದೊಡ್ಡ ಅಕ್ಷರಗಳಲ್ಲಿ ಬರೆದ ಬಟ್ಟೆಯ ಬ್ಯಾನರ್ ಅನ್ನು ಕಟ್ಟಿದ. ಆ ಬ್ಯಾನರ್ ಕೆಳಗೆ ನಿಂತಿದ್ದಾಗ ತೆಗೆದ ಮಂತ್ರಿಗಳ ಫ಼ೋಟೋ ಪತ್ರಿಕೆಗಳಲ್ಲಿ ಪ್ರಕಟವಾಯಿತು.

ಹಾಗಾಗದೆ ಇರಲಿ ಎಂದು ಮುನ್ನುಡಿಗೆ ತುಂಡು ಹಾಕುತ್ತೇನೆ.

ರಾ. ಶಿ.

ಪರಿವಿಡಿ

ಬಕಾಸುರ ಸಚಿವನ ಕತೆ

" ಇಂದಾನೊಂದು ಕಾಲದಲ್ಲಿ ಶೋಕಚಕ್ರಪುರ ಅಂತ ಒಂದು ಊರು ಇದೆ ಯಂತೆ. ಅಲ್ಲಿ ಬಕಾಸುರ, ಬಕಾಸುರ ಅಂತ ಒಬ್ಬ ರಾಕ್ಷಸ ಇದಾನಂತೆ"

ಎಂದು ನಮ್ಮ ಅಡುಗೂಲಜ್ಜಿ ಕತೆ ಹೇಳುಕ್ಕೆ ಶುರುಮಾಡಿದಳು. ಆದರೆ ಒಂದೇ ನಿಮಿಷದಲ್ಲಿ ಪುಟ್ಟ ಮಗಳು ಲೀಲಾ

" ಶೋಕಚಕ್ರಪುರ ಅಲ್ಲ, ಅಜ್ಜೀ, ಏಕಚಕ್ರಪುರ ಅಂತ, ಅಲ್ಲಿ ಬಕಾಸುರ ಇದ್ದದ್ದು." ಎಂದು ಮಧ್ಯೆ ಮಾತನಾಡಿದಳು.

" ಏಕಚಕ್ರಪುರದಲ್ಲಿದ್ದ ಬಕಾಸುರನ ಕತೆ ನಿಂಗೊತ್ತೇನಮ್ಮ ಲೀಲ, ಹಾಗಾದರೆ ನೀನು ಹೇಳು. ನಾನು ಕೇಳ್ತೀನಿ" ಎಂದಳು ಅಡುಗೂಲಜ್ಜಿ.

ಬಾಯಿಪಾಠ ಒಪ್ಪಿಸುವಂತೆ ಲೀಲ ಕತೆ ಹೇಳಿದಳು.

ಒಂದಾನೊಂದು ಕಾಲದಲ್ಲಿ ಬಕಾಸುರ ಎಂಬ ರಾಕ್ಷಸನಿದ್ದ. ಬಹಳ ಶಕ್ತಿವಂತ. ಊರಿಗೆ ನುಗ್ಗಿ ದರೋಡೆ ಮಾಡುವುದು, ಲೂಟಿ ಹೊಡೆಯುವುದು, ಕಂಡ ತೋಟಕ್ಕೆ ನುಗ್ಗಿ ಸಿಕ್ಕಿದ್ದನ್ನು ತಿನ್ನುವುದು. ಹೀಗೆಲ್ಲಾ ಜನರನ್ನು ಗೋಳು ಹುಯ್ದುಕೊಳ್ಳುತ್ತಿದ್ದ. ಇವನ ಹಾವಳಿಯನ್ನು ತಡೆಯಲು ಏನಾದರೂ ಉಪಾಯ ಹೂಡಬೇಕು ಅಂತ ಊರ ಜನರೆಲ್ಲ ಸೇರಿ ಸಭೆ ಮಾಡಿದರು. " ಈ ರಾಕ್ಷಸನ ಹೊಟ್ಟೆಗೆ ಏನು ಬೇಕೋ ಅವೆಲ್ಲವನ್ನೂ ನಾವೇ ತೆತ್ತುಬಿಡೋಣ. ಮನೆಗೆ ಇಷ್ಟು ಅಂತ, ಬಕಾಸುರನ ತೆರಿಗೆಯನ್ನು ವಸೂಲುಮಾಡಿ ಅವನಿಗೆ ದಿನಾಗಲೂ ಕಳಿಸಿಕೊಡೋಣ," ಎಂದು ತೀರ್ಮಾನಿಸಿದರಂತೆ. ಊರಿನ ಮುಖಂಡರು ಬಕಾಸುರನ ಹತ್ತಿರ ಹೋಗಿ " ದಿನಾಗಲೂ ತಿನ್ನುಕ್ಕೆ ಎಷ್ಟು ಬೇಕೋ ಏನೇನು ಬೇಕೋ ಎಲ್ಲವನ್ನೂ ನಾವೇ ಕಳಿಸಿಕೊಡುತ್ತೇವೆ. ಊರ ತಂಟೆಗೆ ಬರಬೇಡಪ್ಪ" ಎಂದು ಕೇಳಿಕೊಂಡರು.

" ಆಗಲಿ" ಅಂತ ಬಕಾಸುರ ಒಪ್ಪಿಕೊಂಡ. " ಆದರೆ ಊಟ ಮಾಡುವಾಗ ನಂಜಿಕೊಳ್ಳುಕ್ಕೆ ನರಮಾಂಸ ಬೇಕು. ಆದ್ದರಿಂದ ದಿನಕ್ಕೊಬ್ಬನನ್ನು, ಭಂಡಿ ತುಂಬಾ ಅನ್ನ ಮಾಂಸದ ಜತೆಗೆ ಕಳಿಸಿ" ಎಂದ.

ಊರಿನವರು ಒಪ್ಪಿಕೊಂಡು ಹಿಂತಿರುಗಿದರು. ಈ ಏರ್ಪಾಡು ಸುಮಾರು

ಕಾಲ ನಡೆಯಿತು. ಮಕ್ಕಳೊಂದಿಗೆ ಕುಂತಿ ಆ ಊರಿಗೆ ಬಂದಳು. ಪಕ್ಕದ ಮನೆಯಲ್ಲಿದ್ದ ಒಬ್ಬನೇ ಮಗನನ್ನು ಬಕಾಸುರನ ಬಳಿಗೆ ಆ ದಿನ ಕಳಿಸಬೇಕಾಗಿತ್ತು. ಅದಕ್ಕೇ ಆ ಮನೆಯಾಕೆ ಗೊಳೋ ಅಂತ ಅಳುತ್ತಿದ್ದಳು. ಕುಂತಿ ಹೋಗಿ ವಿಚಾರಿಸಿದಳು. ವಿಷಯ ತಿಳಿದಾಗ, "ನನಗೆ ಐದು ಜನ ಗಂಡು ಮಕ್ಕಳಿದ್ದಾರೆ. ನಿನಗೆ ಒಬ್ಬನೇ ಮಗ. ಆದ್ದರಿಂದ ನನ್ನ ಮಗನೊಬ್ಬನನ್ನು ಕಳಿಸುತ್ತೇನೆ" ಎಂದಳು. "ಹಾಗೆ ಮಾಡಿದರೆ, ನಿಮಗೆ ಪುಣ್ಯ ಬರುತ್ತಮ್ಮ" ಎಂದಳು ಪಕ್ಕದ ಮನೆಯವಳು.



"ಲೀಲ ಕತೆ ಹೇಳಿದರೆ ತೂಕಡಿಕೆ ಬರುತ್ತಜ್ಜೀ! ಮೇಷ್ಟರು ನೋಟ್ಸ್ ಬರೆಸಿದ ಹಾಗೆ ಒಂದೇ ಅಳು ದನಿಯಲ್ಲಿ ಹೇಳ್ತಾಳೆ, ಬೇಜಾರಾಗುತ್ತೆ. ನೀನು ಹೇಳು ಅಜ್ಜಿ" ಎಂದು ರಾಜು, ಕಮಲ, ಕುಸುಮ ಎಲ್ಲರೂ ಪೀಡಿಸಲು ಶುರು ಮಾಡಿದರು. ಲೀಲ ಮುಂದುವರಿಯಲು ಅವಕಾಶವೇ ಸಿಗಲಿಲ್ಲ.

ಹಾಗೇ ಆಗಲಿ ಎಂದು ಅಜ್ಜಿ ಹೇಳಿ ಕತೆ ಮುಂದುವರಸಿದಳು.

"ಬಂಡಿ ತುಂಬಾ ಊಟ ತಿಂಡಿ ಇದೆ. ಇದನ್ನು ಊರಾಚೆ ಕಾಡಿನಲ್ಲಿರುವ

ಬಕಾಸುರನ ಹತ್ತಿರಕ್ಕೆ ತೆಗೆದುಕೊಂಡು ಹೋಗಪ್ಪ. ಬೇಗ ಹೋಗಪ್ಪ, ಇಲ್ಲದೆ ಇದ್ದರೆ ಬಕಾಸುರನಿಗೆ ಕೋಪಬರುತ್ತೆ" ಎಂದು ಹೇಳಿ ಕಳಿಸಿದರು.

ಭೀಮನಿಗೋ ತಿಂಡಿ ಕಂಡರೆ ಬಾಯಲ್ಲಿ ನೀರಾಡುತ್ತಿತ್ತು. ಆದಕಾರಣ ಊರು ಬಿಟ್ಟು ಹೋದ ಕೂಡಲೆ, ಬಂಡಿಯಲ್ಲಿದ್ದುದನ್ನೆಲ್ಲಾ ತಾನೇ ಛಪಾವಣೆ ಮಾಡಿ ಗಬ ಗಬ ಅಂತ ತಿಂದೇಬಿಟ್ಟ. ಬಕಾಸುರನ ಬಳಿಗೆ ಹೋದಾಗ ಬಂಡಿ ಖಾಲಿಯಾಗಿತ್ತು.

"ಖಾಲಿ ಬಂಡೀನ ಯಾಕೋ ತಂದೆ? ನಿನ್ನ ಸಿಗಿದು ಬಿಡ್ತೀನಿ" ಎಂದು ಬಕಾಸುರ ಕೋಪದಿಂದ ಘರ್ಜಿಸಿದ. ಆ ಘರ್ಜನೆಯ ರಭಸಕ್ಕೆ ಭೀಮನ ಹೊಟ್ಟೆಯಲ್ಲಿದ್ದ ವಡೆ, ಪಾಯಿಸ, ಗುಳೋರಿಗೆ, ಪುಳಿಯೋಗರೆ, ಕುರಿ, ಮೀನು, ಇತ್ಯಾದಿ ಎಲ್ಲವೂ ಕದಡಿ ಜೀರ್ಣವಾದುವು. ಒಂದು ಸರ್ತಿ ಭೀಮ ತೇಗಿದ. ಆಮೇಲೆ ಹೇಳಿದ:

"ಎಲವೋ ರಾಕ್ಷಸ, ಊರಿನವರು ನಿನಗೆ ದಿನಾಗಲೂ ಯಾಕೆ ತಿಂಡಿ ಒದಗಿಸ ಬೇಕು? ಅದಕ್ಕೆ ತಕ್ಕ ಉಪಕಾರ ನೀನೇನು ಮಾಡ್ತಿ" ಅಂತ.

"ನೀನು ಯಾರೋ ಅದನ್ನೆಲ್ಲಾ ಕೇಳುಕ್ಕೆ." ಅಂತ ಬಕಾಸುರ ಭೀಮನನ್ನು ತದುಕಲು ಬಂದ.

"ಹುಷಾರು, ಬಕಾಸುರ, ಈಗಲೇ ಎಚ್ಚರಿಕೆ ಕೊಟ್ಟಿದ್ದೇನೆ. ಮೊದಲು ನೀನು ದುಡಿದು ಶಕ್ತಿವಂತನಾಗಿದ್ದೆ. ಜನ ಸುಸ್ತಾಗಿದ್ದರು. ಆದರೆ ಈಗ ತಿಂದು ನೀನು ಕೊಬ್ಬಿದಿ. ಶಕ್ತಿ ಇಲ್ಲ. ಜಗಳಕ್ಕೆ ಬಂದರೆ ತೌಡು ಹರೀತೀನಿ" ಎಂದ ಭೀಮ.

ಬಕಾಸುರ ನಕ್ಕ. ನನ್ನ ಬೆದರಿಸ್ತೀಯಾ ಮರಿ, ಅಂತ ಮುಂದೆ ನುಗ್ಗಿದ. ಇಬ್ಬರೂ ಕಾಳಗ ಮಾಡಿದರು. ಬಕಾಸುರ ಸತ್ತುಹೋದ.

ಹಿಂದಾನೊಂದು ಕಾಲದಲ್ಲಿ ಬಕಾಸುರ ಸತ್ತುಹೋದ. ದಿಟ. ಆದರೆ ಇಂದಾನೊಂದು ಕಾಲದಲ್ಲಿ ಅವನೇ ಶೋಕಚಕ್ರಪುರಿಯಲ್ಲಿ ಹಣಕಾಸಿನ ಸಚಿವನಾಗಿ ಜನ್ಮತಾಳಿದ್ದಾನೆ. ಜನರೊಂದಿಗೆ ಈ ವರ್ಷ ಮಾಡಿಕೊಂಡ ಒಪ್ಪಂದವನ್ನು ಮುಂದಿನ ವರ್ಷ ಗುಟ್ಟಾಗಿ ಬದಲಾಯಿಸುತ್ತಾನೆ. ಇವನ ಹೊಟ್ಟೆಗೆ ತಳವೇ ಇಲ್ಲ. ಎಷ್ಟುಕೊಟ್ಟರೂ ಇನ್ನೂಬೇಕು ಅಂತ ಬೊಬ್ಬೆ ಹೊಡೆಯುತ್ತಾನೆ. ಕಂಡಹಾಗೆ ಕಾಣದಹಾಗೆ ಎಲ್ಲರ ಜೇಬಿಗೂ ಕೈ ಇಳಿಬಿಟ್ಟು ಲಪಟಾಯಿಸಿಬಿಡ್ತಾನೆ.

ಇವನ ಹಾವಳಿ ಹೀಗೆ ವರ್ಷ ವರ್ಷಕ್ಕೂ ಏರುತ್ತಾ ಇದ್ದರೆ, ಇವನ ಪಟಾಲಂ ರವರ ಹಾವಳಿ ಮತ್ತೂ ಉಗ್ರ. ಕಂಡ ಹೋಟಲಿಗೆ ನುಗ್ಗಿ ಕಂಡಾಪಟ್ಟೆ ತಿಂದು, ತನಿಖೆ ಮಾಡುಕ್ಕೆ ಬಂದಿದ್ದೀವಿ ಅಂತಾರೆ. ಸಿಕ್ಕಿದ ಅಂಗಡೀಗೆ ಹೋಗಿ ಆದಷ್ಟು ದೋಚುತ್ತಾರೆ.

ಅದಕ್ಕೇ ಮಕ್ಕಳಿರಾ, ಹಿಂದಾನೊಂದು ಕಾಲದಲ್ಲಿದ್ದ ಬಕಾಸುರ ಕರುಣಾಳು. ಅವನ ಪುನರಾವತಾರವಾದ ಇಂದಾನೊಂದು ಕಾಲದ ಅರ್ಥಸಚಿವ, ಮತ್ತು ಅವನ ದಂಡು, ಅತಿ ಕ್ರೂರಿಗಳು; ನರಭಕ್ಷಕರು ಅಂತ ಜನ ಅಂದು ಕೊಳ್ಳುವುದು.

ಎಂದು ನವ್ಯ ಅಡುಗೂಲಜ್ಜಿ ಬಕಾಸುರನ ನವ್ಯ ಕತೆಯನ್ನು ಬಡಕಲು ಮೊಮ್ಮಕ್ಕಳಿಗೆ ಹೇಳಿದಳಂತೆ.

ಕೊಕ್ಕರೆ ನರಿ ಕತೆ

ಇಂದಾನೊಂದು ಕಾಲದಲ್ಲಿ ಒಂದಾನೊಂದು ಕಾಡಿನಲ್ಲಿ ಒಂದು ನರಿ ಇತ್ತಂತೆ. ಆಲದ ಮರದ ಕೆಳಗೆ ಒಂದು ಪೊಟರೆಯನ್ನು ಬಾಡಿಗೆಗೆ ತೆಗೆದು ಕೊಂಡು ವಾಸಮಾಡುತ್ತಾ ಇತ್ತಂತೆ. ಕಾಡಿನಲ್ಲೆಲ್ಲ ಓಡಾಡುವುದು, ಶಕ್ತಿ ಯಿದ್ದವರನ್ನು ಗುರುತಿಸುವುದು; ನಂತರ ಅವರನ್ನು ಹಿಂಬಾಲಿಸಿ ದಕ್ಕಿದಷ್ಟನ್ನು ತಿಂದು ಜೀವನ ನಡಸುತ್ತಿತ್ತಂತೆ. ಯಾವುದಾದರೂ ನಷ್ಟ ಸಂಭವಿಸುವ ವ್ಯವ ಹಾರವಿದ್ದರೆ, ಇತರರನ್ನು ಮುಂದೂಡುತ್ತಿತ್ತಂತೆ. ಗೆದ್ದರೆ ನನಗೊಂದು ಭಾಗ, ಸೋತರೆ ನೀನು ಯಾವ ಊರ ದಾಸಯ್ಯ ಎಂಬ ನೀತಿಯನ್ನು ಅನುಸರಿಸಿಕೊಂಡು ಬಾಳ ನಡಸುತ್ತಿತ್ತಂತೆ. ಸಿಂಹಗಳೇ ಬರಲಿ ಗ್ರಾಮ ಸಿಂಹಗಳೇ ಬರಲಿ; ಹುಲಿ ಗಳೇ ಇರಲಿ, ಮೊಹರಂ ಹುಲಿಗಳೇ ಇರಲಿ; ಕರಡಿಗಳೇ ಇರಲಿ, ಕುಣಿಯುವ ಕರಡಿಗಳೇ ಆಗಲಿ; ಕಾಡ ಚುನಾವಣೆಯಲ್ಲಿ ಯಾರು ಗೆದ್ದರೂ ಅವರ ಬಾಲವನ್ನೇ ಹಿಡಿದುಕೊಂಡು ಜಯ್ ಜಯ್ ಎಂದು ಘೋಷಿಸುತ್ತಿತ್ತಂತೆ.

ಕಾಡಿನಲ್ಲೂ ಕಾಲ ಬದಲಾವಣೆಯಾಗುತ್ತಲ್ಲ! ಹೊಸಾ ಹೊಸಬರು ಅಧಿ ಕಾರಕ್ಕೆ ಬರಬಹುದಲ್ಲ. ಆದ್ದರಿಂದ ನರಿಯು ಮುಂದೆ ಯಾರು ಅಧಿಕಾರಕ್ಕೆ ಬರ ಬಹುದು ಎಂದು ಸೂಕ್ಷ್ಮವಾಗಿ ಗಮನಿಸುತ್ತಿತ್ತಂತೆ. ನಂತರ ಅವರನ್ನು ಹಿಂಬಾ ಲಿಸಿ ಹೊಗಳಿ ಅವರ ಸ್ನೇಹವನ್ನು ಗಿಟ್ಟಸುತ್ತಿತ್ತಂತೆ. ಯಾವ ಅಧಿಕಾರವೂ ಇಲ್ಲದೆ ಪಡಪೋಸಿಗಳಾಗಿದ್ದಾಗ ಸ್ನೇಹವನ್ನು ಸಂಪಾದಿಸುವುದು ಸುಲಭ. ಅಧಿ ಕಾರಕ್ಕೆ ಬಂದಮೇಲೆ ಅಸಾಧ್ಯ ಕಷ್ಟ ಎಂಬ ಸತ್ಯವನ್ನು ನರಿ ತಿಳಿದಿತ್ತಂತೆ. ಆದುದ ರಿಂದಲೇ ಅದಕ್ಕೆ ಕೊಳದ ಹತ್ತಿರ ಇದ್ದ ಕೊಕ್ಕರೆಯ ಮೇಲೆ ಕಣ್ಣು ಬಿದ್ದಿತಂತೆ.

ಉದ್ದಾನೆ ಕತ್ತಿನ ಆ ಕೊಕ್ಕರೆಯು ಅದೇ ಕೇರಿಯ ಅಂಚಿನಲ್ಲಿದ್ದ ಕೊಳದ ಮಂಟಪದಲ್ಲಿ ಬಿಡದಿ ಮಾಡಿಕೊಂಡಿತ್ತಂತೆ. ಕಾಡಿನ ಎಂಟೂ ಹತ್ತು ಸಂಘ ದವರು ಇದನ್ನೇ ಕರಸಿ ಅಧ್ಯಕ್ಷನನ್ನಾಗಿ ಕೂರಿಸುತ್ತಿದ್ದರಂತೆ. ಕಾರಣ, ಹೂವಿನ ಹಾರಗಳನ್ನು ಹಾಕಿದಾಗ ಕತ್ತು ಡಿಖಾವಾಗಿ ಕಾಣಿಸುತ್ತೆ ಅಂತ. ಹೀಗಾಗಿ ಎಷ್ಟೋ ಸಂಘ ಸಂಸ್ಥೆಗಳಿಗೆ ಗೌರವ ಅಧ್ಯಕ್ಷನಾಗಿ, ಎಷ್ಟೋ ವಿದ್ಯಾರ್ಥಿ ಸಂಸ್ಥೆ ಗಳಿಗೆ ಉಪಾಧ್ಯಕ್ಷನಾಗಿ ಆಯ್ಕೆಗೊಂಡಿತ್ತಂತೆ. ಮಾಡುಕ್ಕೆ ಕೆಲಸವಿಲ್ಲದಿದ್ದರೂ,

ಒಂದು ನಿಮಿಷ ಪುರಸೊತ್ತು ಇಲ್ಲದೆ ತನ್ನ ಉದ್ದಾನೆ ಕಾಲುಗಳನ್ನು ಕೇರಿ ಕೇರಿಯಲ್ಲೂ, ಗಲ್ಲಿ ಗಲ್ಲಿಗಳಲ್ಲೂ ಓಡಾಡಿಸಿದ್ದೂ ಓಡಾಡಿಸಿದ್ದೇ! ಪಾದ ಯಾತ್ರೆ ಮಾಡಿದ್ದೂ ಮಾಡಿದ್ದೇ! ಕೊಕ್ಕರೆ ಧ್ವನಿಯಲ್ಲಿ ಮೂರು ರಸ್ತೆಗಳು ಸೇರುವಕಡೆ ಭಾಷಣ ಬಿಗಿದಿದ್ದೂ ಬಿಗಿದಿದ್ದೇ. ಎಲ್ಲಿ ನಡೆಯುತ್ತಿದ್ದರೂ ಕೊಕ್ಕರೆಯ ಹಿಂದೆ ನಾಲ್ಕಾರು ಪ್ರಾಣಿಗಳು ಯಾವಾಗಲೂ ಇರುತ್ತಲೇ ಇದ್ದುವಂತೆ.

ಇದನ್ನು ಕಂಡ ನರಿಯು "ಈ ಕೊಕ್ಕರೆಯೇನೋ ಕ್ರಾಕ್ ತರಹ ಪರದಾಡುತ್ತೆ. ಗಂಟಲು ಉದ್ದ ಇದೆ ಅಂತ ವೃಥಾ ಒಣಗಿಸಿಕೊಳ್ಳುತ್ತೆ. ಬುದ್ಧಿ ಗಿದ್ಧಿ ಎಳ್ಳಷ್ಟೂ ಇದ್ದಹಾಗಿಲ್ಲ. ಆದರೂ ಈಗೀಗ ಕ್ರಾಕ್ ಕ್ರಾಕ್ ಆಗಿ ಕಂಠ ಶೋಷಣೆ ಮಾಡಿಕೊಂಡವರು ಹಠಾತ್ತನೆ ಹಿಂಡಿನ ಬೆಂಬಲದಿಂದ ಗದ್ದುಗೆಯನ್ನು ಏರುವುದುಂಟು. ಗದ್ದುಗೆ ಏರಿದ ಮೇಲೆ ಗಡದ್ದು ಮೆರೆಯುವುದೂ ಉಂಟು. ಆನಂತರ ಏನು ತಪ್ಪುಮಾಡಿದರೂ ಎಷ್ಟು ಹುಚ್ಚು ಹುಚ್ಚಾಗಿ ಆಡಿದರೂ, ಮೇಲ ಮೇಲಕ್ಕೆ ಏರುವುದನ್ನೂ ನೋಡಿದ್ದೇನೆ. ಅಂದಮೇಲೆ ಇದರ ಸ್ನೇಹವನ್ನು ಗಳಿಸಿಟ್ಟುಕೊಳ್ಳುವುದು ಜಾಣತನ. ಮುಂದೆ ಪ್ರಯೋಜನಕ್ಕೆ ಬಂದರೂ ಬರಬಹುದು." ಎಂದೆಲ್ಲ ಯೋಚಿಸಿತಂತೆ. ಜಾಣ ನರಿ ಅಲ್ಲವೇ?

ಬೆಳಿಗ್ಗೆ ಎದ್ದು ಯಾವ ಹೋಟಲಿಗೆ ಕೊಕ್ಕರೆಯು ನಾಷ್ಟಮಾಡಲು ಹೋಗುತ್ತಿತ್ತೋ ಅದನ್ನು ತಿಳಿದುಕೊಂಡು ನರಿಯೂ ಅಲ್ಲಿಗೆ ಹೋಗಲು ಶುರು ಮಾಡಿತಂತೆ. ಯಾವ ದೋಬಿ ಅಂಗಡಿಗೆ ಕೊಕ್ಕರೆ ಮಾಸಲ ಬಟ್ಟೆಗಳನ್ನು ಕೊಡುತ್ತಿತ್ತೋ ಅಲ್ಲಿಗೆ ನರಿಯೂ ಹೋಗಲಾರಂಭಿಸಿತಂತೆ. ಗಂಟಲ ಕೆರೆತ ಬಂದಾಗ ಕೊಕ್ಕರೆಯು ಯಾವ ದವಾಖಾನೆಗೆ ಹೋಗುತ್ತಿತ್ತೋ ಅಲ್ಲಿಗೆ ನರಿಯೂ ಕೆಕ್ಕೆಕಾಯಿ ತಿಂದಮೇಲೆ ಹೋಗಲು ಶುರುಮಾಡಿತಂತೆ.

ಇಷ್ಟೆಲ್ಲ ಶ್ರಮಪಟ್ಟಮೇಲೆ ಫಲ ಸಿಗದೇ ಇರುತ್ತದೆಯೇ? ಕೊಕ್ಕರೆಯ ಪರಿಚಯ ಆಯಿತು. ಒಟ್ಟೊಟ್ಟಿಗೆ ಸಭೆಗಳಿಗೆ ಹೋಗಲು ಆರಂಭಿಸಿತು. ಕೊಕ್ಕರೆಗೆ ಹಾಕಿದ ಹಾರಗಳನ್ನೆಲ್ಲ ಜೋಪಾನವಾಗಿ ನರಿಯು ಹೊತ್ತು ತರಲಾರಂಭಿಸಿತು. ಭಾಷಣ ಮಾಡಿ ಗಂಟಲು ಒಣಗಿದಾಗ ನರಿಯೇ ಗುಟುಕು ನೀರನ್ನು ಕುಡಿಸಲು ಮುಂದಾಗುತ್ತಿತ್ತು.

ಕಡೆಗೊಮ್ಮೆ ತುಂಬಾ ಖುಷಿಯಾಗಿದ್ದಾಗ ಕೊಕ್ಕರೆಯು, "ನರೀ! ನರೀ! ನಾಳೆ ನನ್ನ ಬಿಡಾರಕ್ಕೆ ಊಟಕ್ಕೆ ಬಾರೋ. ಉಂಡು ಹರಟೆ ಹೊಡೆಯೋಣ.

ಇನ್ನು ಯಾರನ್ನೂ ಕರೆಯುಲ್ಲ. ನಾವಿಬ್ಬರೇ" ಎಂದು ಕರೆಯಿತಂತೆ. ಆ ವೇಳೆಗೆ ಅಷ್ಟು ಸಲಿಗೆ ಬೆಳೆದಿತ್ತು.

ಕೊಕ್ಕರೆ ಬಿಡಾರಕ್ಕೆ ನರಿ ಊಟಕ್ಕೆ ಹೋಯಿತು. ಇವತ್ತಿನ ಊಟಕ್ಕೆ ಅಂತ "ಇಸ್ಪೆಷಲ್" ಆಗಿ ಕೊಕ್ಕರೆಯು ಕಾಕಾ ಹೋಟಲಿನಿಂದ ಟಿಫಿನ್‌ಕ್ಯಾರಿಯರ್ ತರಿಸಿತ್ತಂತೆ. ಊಟಕ್ಕೆ ಕುಳಿತಮೇಲೆ ಟಿಫಿನ್‌ಕ್ಯಾರಿಯರಿನಿಂದ ಕೊಕ್ಕರೆಯು ಚಪಾತಿಯನ್ನು ತೆಗೆದು ಬಡಿಸಿತು. ಮೀನು ತುಂಡುಗಳನ್ನು ಹಾಕಿತು. ತನ್ನ ತಟ್ಟೆಗೂ ಸ್ವಲ್ಪ ಬಡಿಸಿಕೊಂಡಿತು. ನಂತರ "ಶುರುಮಾಡಯ್ಯ, ನರಿರಾಯ, ತುಪ್ಪಬಡಿಸಲಿ ಅಂತ ಕಾಯಬೇಡ. ತುಪ್ಪ ಬಡಿಸುವುದಕ್ಕೆ ಬಳೆತೊಟ್ಟವರಾರೂ ಮನೆಯಲ್ಲಿಲ್ಲ." ಎಂದು ಹೇಳಿ ತಾನು ತಿನ್ನುಕ್ಕೆ ಶುರುಮಾಡಿತು.

ಒಂದು ಚೂರು ಚಪಾತಿಯನ್ನು ನರಿ ಹರಿಯುಕ್ಕೆ ಹೋಯಿತು. ಬಡ ಪೆಟ್ಟಿಗೆ ಅದು ಚೂರಾಗಲಿಲ್ಲ. ಹೊಸ ಹಲ್ಲುಗಳನ್ನು ಕಟ್ಟಿಸಿಕೊಂಡಿದ್ದ ನರಿಗೆ ಚಪಾತಿಯನ್ನು ಕಚ್ಚಲು ಭಯವಾಯಿತು. ಚಪ್ಪಲಿ ತಳಕ್ಕೆ ಜಡಿಯಬಹುದಾದ ಇಂತಹ ತಂಗಳು ಚಪಾತಿಯನ್ನು ಈ ಕೊಕ್ಕರೆ ಏಕೆ ತಿನ್ನುತ್ತೆ? ಇದನ್ನೇ ರುಚಿ ಯಾಗಿದೆ ಅಂತ ಗಂಟಲುದ್ದಕ್ಕೂ ನುಂಗುತ್ತಿದೆಯಲ್ಲ! ಮುಂದೆ ಪದವಿ ದೊರೆತರೆ ಯಾವ ಸುಖವನ್ನು ತಾನೆ ಅನುಭವಿಸಬಲ್ಲುದು ಎಂದು ಸಂದೇಹಪಡಲಾರಂಭಿಸಿ ತಂತೆ, ನರಿ.

ಇದೇ ರೀತಿ ಹಳಸಲು ಹುರುಳಿ ಹುಳಿ, ಕರಕಲು ಮೀನು, ಕರಕಲು ಸಂಡಿಗೆ, ಹಸಿ ತೊವ್ವೆ; ಯಾವುದರಲ್ಲಾದರೂ ಹೊಟ್ಟೆ ತುಂಬಿಸಿಕೊಳ್ಳೋಣ ಎಂದರೆ ಆಗಲಿಲ್ಲವಲ್ಲ ಅಂತ ನರಿ ಮನಸ್ಸಿನಲ್ಲೇ ಕೊರಗಿತಂತೆ. ಆದರೂ ದೇಶಾವರದ ನಗೆ ಹೂಡಿ, ಬಾಲದ ಜುಟ್ಟನ್ನು ನೀವಿಕೊಂಡು, ಎರಡು ಬಾರಿ ತೇಗಿ, ಹೆಚ್ಚಾಗಿ ತಿಂದು ಬಿಟ್ಟೆ ಅಂತ ಮಾಮೂಲು ಹೊಗಳಿಕೆ ಹೇಳಿ ಸ್ವಸ್ತಿಪಾನಮಾಡಿ ತನ್ನ ಪೊಟರೆಗೆ ಹಿಂತಿರುಗಿತಂತೆ.

ಹಿಂತಿರುಗುವಾಗ ಯೋಚಿಸಿತಂತೆ "ದೇವರು ಈ ದರಿದ್ರ ಮುಂಡೇದಕ್ಕೆ ಭರ್ಜರಿ ಗಂಟಲು ಕೊಟ್ಟಿದ್ದಾನೆ, ಅಡ್ಡಾಡಲು ಉದ್ದಾನೆ ಕಾಲುಗಳನ್ನು ದಯ ಪಾಲಿಸಿದ್ದಾನೆ. ಇವುಗಳ ಸಹಾಯದಿಂದ ರಾಜಮಹಾರಾಜರ ಮಜ ಮಾಡ ಬಹುದು. ಅದು ಬಿಟ್ಟು ತಂಗಳು ರೊಟ್ಟಿ ಕರಕಲು ಮೀನು ಸುಟ್ಟ ಸಂಡಿಗೆ ಇವನ್ನೇ ತಿಂದು ತೇಗುತ್ತಲ್ಲ. ಇದಕ್ಕೆ ಮಜಾ ಊಟದ ರುಚಿಯನ್ನು ಕಲಿಸ

ಬೇಕು. ಇವನ ಹಿಂದೆ ಪುಢಾರಿಯಂತೆ ತಿರುಗಿ ಇವನಿಗೆ ಲಕ್ಷಣವಾದ ಅಭಿರುಚಿಯನ್ನು ಕಲಿಸಲೇ ಬೇಕು ಎಂದು ತೀರ್ಮಾನಿಸಿತಂತೆ.

ಸಭ್ಯರ ಸಂಪ್ರದಾಯದ ರೀತಿಯಲ್ಲಿ ಕೊಕ್ಕರೆಯನ್ನು ಮಾರನೆವಾರ ನರಿಯು ಭೋಜನಕ್ಕೆ ಕರೆಯಿತು. ಕೊಕ್ಕರೆಯೂ ಊಟಕ್ಕೆ ಬಂತು.

ಬಾಳೆಲೆಹಾಕಿ ಮೇಲಂಚಿನಲ್ಲಿ ರಂಗೋಲಿ ಹಾಸಿ ಅಣಿಮಾಡಿತ್ತು. ಕೊಕ್ಕರೆಯನ್ನು ಮೆಚ್ಚಿಸುಕ್ಕೆ ಅಂತ ನರಿ ವಿಧವಾ ಸದನದಿಂದ ಹಬ್ಬದ ಅಡಿಗೆ ಮಾಡುವುದಕ್ಕೆ ಅಡಿಗೆಯವಳನ್ನು ಕರೆಸಿತ್ತು. ಕೊಕ್ಕರೆಗಾಲಿನ ಆಕೆ ಪಾಯಸ ಬಡಿಸಿದಳು. ಹಾಲುಬಾಯಿ ಬಡಿಸಿದಳು. ಬಾದಾಮಿ ಹಲ್ವ ಬಡಿಸಿದಳು. ಘಮಘಮ ಅಂತಿದ್ದ ಸಕ್ಕರೆ ಪೊಂಗಲನ್ನು ಬಡಿಸಿದಳು.

ಬಡಿಸಿದವರನ್ನು ಕಣ್ಣೆತ್ತಿ ಕೂಡ ನೋಡದೆ ಕೊಕ್ಕರೆಯು ಕೊಕ್ಕಿನಿಂದ ಕೊಕ್ಕಿ ಕೊಕ್ಕಿ ಚೂರು ಚೂರು ತಿಂತಂತೆ. ಹೊಟ್ಟೆತುಂಬಾ ನುಂಗುಕ್ಕೆ ಆಗಲಿಲ್ಲವಂತೆ. ತನ್ನ ಊಟ ಮುಗಿದ ಮೇಲೆ ನರಿಯು ಸ್ವಸ್ತಿಪಾನಮಾಡಿ, ಎಲಡಿಕೆಯನ್ನೂ ಕೊಡದೆ ಕೊಕ್ಕರೆಯನ್ನು ಬೀಳ್ಕೊಟ್ಟತಂತೆ.

ಆಮೇಲೆ ತಾನು ಎಲಡಿಕೆಯನ್ನು ಅಗಿಯುತ್ತಾ ಕೂಲಿ ಅಡಿಗೆಯವಳಿಗೆ "ಆ ಮುಂಕುಶಿಖರದ ಸ್ನೇಹಕ್ಕೆ ಎಷ್ಟೆಲ್ಲಾ ಕಷ್ಟಪಟ್ಟೆ. ಬಡಿಸಿದ ಎಲೆಮುಂದೆ ತೂಕಡಿಸುತ್ತಾ ಕೂತಿತ್ತಲ್ಲ, ಇದನ್ನು ಹಿಂಬಾಲಿಸಿದರೆ ಏನೂ ಸುಖವಿಲ್ಲ" ಎಂದು ಹೇಳಿ ನಕ್ಕಿತಂತೆ, ನರಿ.

ಅದಕ್ಕೇ ಮರಿ! ಗಂಟಲಿದ್ದೋರು ಗೆಲ್ಲಬಹುದು. ಆದರೆ ಅಂತಹವರ ಬಾಲ ಹಿಡಿದರೆ ಸುಖ ಉಂಟು ಅನ್ನೋದನ್ನ ಮೊದಲು ಖಾತರಿ ಮಾಡಿಕೊಂಡು ನಂತರ ಪುಢಾರಿ ಮಂತ್ರ ಪಠಿಸಬೇಕು. ಎಂದು ನಮ್ಮ ಅಡುಗೂಲಜ್ಜಿ ನರಿ ಕೊಕ್ಕರೆ ಕತೆಯನ್ನು ಹೇಳಿದಳಂತೆ.

ಚಿನ್ನದ ಮೊಟ್ಟೆ ಇಟ್ಟ ಕೋಳಿ

ಇಂದಾನೊಂದು ಕಾಲದಲ್ಲಿ ಒಬ್ಬ ಜಂಭದ ಕೋಳಿ ಇದ್ದನಂತೆ. ಕಂಡವರ ಕಣ್ಣಿಗೆ ಡಿಖಾವಾಗಿ ಕಾಣಿಸಬೇಕು ಅಂತ ಅವನಿಗೆ ತೀವ್ರ ಹಂಬಲ. ಹಾಗಾಗಿ ಹೊಟ್ಟೆಗೆ ಹಿಟ್ಟಲ್ಲದೆ ಇದ್ದರೂ, ಮೀಸೆಗೆ ಮೂರಗಳು ಅನ್ನ ಸಿಕ್ಕಿಸಿಕೊಂಡು ಮೆರೆಯುತಿದ್ದನಂತೆ. ಮನೇಲಿ ಚಾಪೆಮೇಲೆ ಮಲಗುತ್ತಿದ್ದರೂ ರಸ್ತೇಲಿ ಕಾಣಿಸಿಕೊಂಡಾಗ ರೇಷ್ಮೆ ಜುಬ್ಬಾ ತೊಡುತ್ತಿದ್ದನಂತೆ. ಬ್ಯಾಂಕಿನಲ್ಲಿ ಮೂರು ರೂಪಾಯಿ ಇಲ್ಲದೆ ಇದ್ದರೂ ಚೆಕ್ ಬುಕ್ಕನ್ನು ಒಳಜೇಬಿನಲ್ಲಿ ಹೊರಗೆ ಇಣಿಕಿ ನೋಡುವಂತೆ, ಮೆರೆಸುತ್ತಿದ್ದನಂತೆ. ಇಂತಹ ಜಾಯಮಾನದ ಜಂಭದ ಕೋಳಿಗೆ ಬಾಯಿಬೀಗ ಹಾಕಲು ಸಾಧ್ಯವೇ? ಅವನು ಕೊಚ್ಚಿದ್ದೇ ಕೊಚ್ಚಿದ್ದು. ಬೊಗಳೆ ಬಿಟ್ಟದ್ದೇ ಬಿಟ್ಟದ್ದು!

ಜರತಾರಿ ರುಮಾಲು, ಭಾರಿ ಮೀಸೆ, ಕಿವಿಗಳಲ್ಲಿ ಬಡಾ ಹತ್ತುಕಡಕು, ರೇಷ್ಮೆ ನಿಲುವಂಗಿ, ಸರಿಗೆ ಅಂಚಿನ ಪಂಚಕಚ್ಚೆ ಪಂಚೆ, ಲಕ್ಷಣವಾದ ಚಪ್ಪಲಿ; ೩೫-೪೦ ವರ್ಷದ ಜಂಭದ ಕೋಳಿ ಷಹರಿನಲ್ಲಿ ಎಲ್ಲರ ಕಣ್ಣು ಸೆಳೆಯುವ ವ್ಯಕ್ತಿಯಾಗಿದ್ದನಂತೆ.

ಊರಿನಲ್ಲಿ ಯಾವ ಸಂಸ್ಥೆಯಾಗಲೀ, ಯಾವ ಪಕ್ಷವಾಗಲೀ, ಯಾವ ಧರ್ಮಾರ್ಥದವರಾಗಲೀ, ಯಾವ ಕರ್ಮಾರ್ಥಿಗಳಾಗಲೀ, ಯಾವ ಸಭೆಯಾಗಲೀ, ಯಾವ ದೊಂಬಿ ಸೇರಲಿ, ಜಂಭದ ಕೋಳಿಯ ಬಳಿಗೆ ಮೊದಲು ಚಂದಾ ಪಟ್ಟೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಜಂಭದ ಕೋಳಿಯು ಚಂದಾ ಪಟ್ಟಿಗೆ ಧಡೂತಿ ಮೊಬಲಗನ್ನು ಕೊಡುತ್ತೇನೆಂದು ವಚನವಿತ್ತ ಕೂಡಲೇ ಮನೆಗೆ ಹೋಗಿ, ಏನಾದರೂ ಚೂರುಪಾರು ಉಳಿದಿದ್ದುದನ್ನು ಸಿಕ್ಕಿದ ಬೆಲೆಗೆ ಮಾರಿ ವಚನದಂತೆ ಹಣ ಪೂರೈಸುತ್ತಿದ್ದ.

ಇಂತಹ ಜಂಭದ ಕೋಳಿಯನ್ನು ರಾಜಕೀಯ ಪಕ್ಷಗಳು ಬಿರಿ ಬಿರಿ ಕಣ್ಣುಗಳಿಂದ ನೋಡುತ್ತಿದ್ದುದು ಸ್ವಾಭಾವಿಕ, ಚಂದಾಪಟ್ಟೆಯನ್ನು ತೋರಿಸಿದ ಕೂಡಲೆ ಕೈತುಂಬಾ ಚಿನ್ನದ ಮೊಟ್ಟೆಗಳನ್ನು ಇಡುತ್ತಿದ್ದ ಜಂಭದ ಕೋಳಿಯನ್ನು

ರಾಜಕೀಯ ಮುಂದಾಳುಗಳು ಅಂತರಂಗದಲ್ಲಿ ಹೊಗಳಿ, ಬಹಿರಂಗದಲ್ಲಿ ಅವ ನಿಲ್ಲದಿದ್ದಾಗ ತೆಗಳಿ, ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದ್ದರು.

ಒಂದು ರಾಜಕೀಯದ ಪಕ್ಷದ ಪುಢಾರಿಗಳು ಸಮಾಲೋಚನೆ ನಡೆಸಿದರು. ಯೋಚನೆ ಮಾಡಿದರು. ತಂತ್ರ ಹೂಡಿದರು.

"ಜಂಭದ ಕೋಳಿಯನ್ನು ನಮ್ಮ ಪಕ್ಷಕ್ಕೆ ನಾಯಕನನ್ನಾಗಿ ಸೇರಿಸಿ ಕೊಂಡರೆ, ಚಿನ್ನದ ಮೊಟ್ಟೆಗಳಿಗಾಗಿ ಭಿಕ್ಷೆ ಬೇಡಬೇಕಾಗುವುದಿಲ್ಲ. ಚಿನ್ನದ ಗಣಿಯೇ ಸಿಕ್ಕಿದಂತಾಗುತ್ತದೆ. ಅಕ್ಷಯಪಾತ್ರೆ ದೊರಕಿದಂತಾಗುತ್ತದೆ. ನಮ್ಮ ಗೋಳು ನಿವಾರಣೆಯಾಗುತ್ತದೆ" ಎಂದು ತೀರ್ಮಾನಿಸಿದರು.

ಪುಢಾರಿಗಳೆಲ್ಲ ಜಂಭದ ಕೋಳಿಯ ಬಳಿಗೆ ಹೋದರು. ತಮ್ಮ ಸಲಹೆ ಯನ್ನು ಮುಂದಿಟ್ಟರು. "ನಮ್ಮ ಪಕ್ಷದ ನಾಯಕರಾಗಿ ನಮ್ಮ ದೇಶವನ್ನು ಸ್ವರ್ಗದಂತೆ ಮಾರ್ಪಡಿಸಬೇಕು" ಎಂದು ನಯ ವಿನಯದಿಂದ, ಒತ್ತಾಯ ಪೂರ್ವಕ, ಬೇಡಿಕೊಂಡರು.

ಹೊಗಳಿಕೆಯ ಹೊನ್ನ ಶೂಲಕ್ಕೆ ತಲೆ ಕೊಡದವನಾರು? ಜಂಭದ ಕೋಳಿಯು ಭಕ್ತಿ ಭಾಂಡಾರಿಯಲ್ಲವಲ್ಲ! "ಆಗಲಿ" ಎಂದ.

ಪತ್ರಿಕೆಗಳು ಈ ಸುದ್ದಿಯನ್ನು ಮೊಳಗಿದುವು.

ಗರಿ ಗರಿ ಬಿಳಿಟೋಪಿ. ಗರಮಾ ಗರಂ ಮೀಸೆ. ಹತ್ತು ಕಡುಕು ತೆಗೆದ, ತೂತುಬಿದ್ದ ಕಿವಿಗಳು. ಖದ್ದರ್ ರೇಷ್ಮೆಯ ಜುಬ್ಬ. ಮಗ್ಗಲುಹಾಸಿಗೆಯ ಬಟ್ಟೆಯ ಪಂಚೆ. ಚಿತ್ರದುರ್ಗದ ಚಪ್ಪಲಿ. ಜಂಭದ ಕೋಳಿಯು ಪ್ರಕೃತಿಯಲ್ಲಿ ಕಂಬಳಿ ಹುಳು ಪತಂಗವಾಗಿ ಮಾರ್ಪಾಡಾಗುವುದನ್ನು ತಿಪ್ಪರಿಸಿದ್ದ. ಪತಂಗದಂತೆ ಹೊಳೆ ಹೊಳೆಯುತ್ತಿದ್ದವ ಕಂಬಳಿಹುಳವಾಗಿ ಧಿಮಾಕು ಮಾಡುತ್ತ ಅಡ್ಡಾಡಿದ.

ಪಕ್ಷದ ಎರಡು ಮೂರು ಸಭೆಗಳಾಗುವ ಹೊತ್ತಿಗೆ ಜಂಭದ ಕೋಳಿಗೆ ತಿಳಿದು ಬಂತು. "ನಾನು ಚಿನ್ನದ ಗಣಿಯ, ಹೊನ್ನಿನ ಹುತ್ತದ, ಹಣದ ಹಗೇವಿನ ನಾಯ ಕತ್ವ ಪಡೆದಿದ್ದೇನೆ; ಮುಂದೆ ಬಾಳುವುದು, ಬದುಕುವುದು, ನನ್ನ ಬುದ್ಧಿಯಿಂದ. ದೇವರೇನೋ ಕೈಮುರ ತೋರಿಸಿದ. ಮುಂದಿನ ನಡಿಗೆ ನನ್ನ ಕಾಲ ಮೇಲೆ ಸಾಗ ಬೇಕು. ಪರಮಾತ್ಮ ಹೇಳಿದ; ಆತ್ಮದ ಉದ್ಧಾರವು ಆತ್ಮದಿಂದಲೇ ಆಗಬೇಕು. ನಾನೂ ಹಾಗೇ ಮಾಡಬೇಕು" ಎಂದೆಲ್ಲ ಯೋಚಿಸಿ ಕಾರ್ಯೋನ್ಮುಖನಾದ. ಸಂಕಲ್ಪ ಮಾಡಿ ಸರ್ವತ್ರ ಲೂಟಿಗಾರಂಭಿಸಿದ.

ಜಂಭದ ಕೋಳಿ ರಣಹದ್ದಾದ. ಹೆಣವನ್ನು ರಣಹದ್ದು ತಿಂದು ಮುಗಿಸಿದ ಮೇಲೆ, ಉಳಿದವರಿಗೆ ಏನಾದರೂ ತಿನ್ನಲು ಸಿಗುವುದೇ?

* * * *

"ಅಯ್ಯೋ! ಚಿನ್ನದ ಮೊಟ್ಟೆಇಡುವ ಕೋಳಿ ಕತೆಯನ್ನು ಕೇಳಿದ್ದೆವು. ಅದರಂತೆಯೇ ಜಂಭದ ಕೋಳಿಯೂ ಪರ್ಯವಸಾನವಾಯಿತಲ್ಲ! ಇವನನ್ನು ಮುಂದಾಳಾಗಿ ಚುನಾಯಿಸಿ, ನಮ್ಮ ಹೊಟ್ಟೆಗೆ ನಾವೇ ಮಣ್ಣು ತುಂಬಿಕೊಂಡೆವಲ್ಲಾ! ಭೋಗ ಜೀವನವನ್ನು ಬಿಟ್ಟು ತ್ಯಾಗಬಾಳು ನಡೆಸಬೇಕಾಯಿತಲ್ಲ! ನಮ್ಮೆಲ್ಲರ ಭೋಗ ಸುಖಗಳನ್ನೂ ಅವನೊಬ್ಬನೇ ಅನುಭವಿಸುತ್ತಿರುವನಲ್ಲ."

ಎಂದು ಜಂಭದ ಕೋಳಿಯನ್ನು ಮುಂದೆ ತಂದವರೆಲ್ಲರೂ ಲಬೋ ಲಬೋ ಮಾಡುತ್ತಿದ್ದರಂತೆ.

ಎಂದು ನಮ್ಮ ಅಡುಗೂಲಜ್ಜಿ, ಚಿನ್ನದ ಮೊಟ್ಟೆ ಇಡುವ ಕೋಳಿಯ ಕತೆಯನ್ನು ಹೇಳಿದಳಂತೆ.


ಕೂಗು ಮಾರಿ ಕತೆ

ಸಕತ್ ಸನ್ನಿ ಬಂದವರು ಬಡ ಬಡ ಅಂತ ಅರ್ಥವಿಲ್ಲದ ಮಾತಾಡಿಕೊಳ್ಳು ತ್ತಾರಲ್ಲ! ಅಂತಹವರು ಆಗ ಸತ್ತುಹೋದರೆ, ಕೂಗುಮಾರಿಯರಾಗುತ್ತಾರಂತೆ. ರಾತ್ರಿಹೊತ್ತು ಬಂದು ಬಾಗಿಲು ತಟ್ಟುತ್ತಾರಂತೆ. ಪೆಚ್ಚುಪೆಚ್ಚಾಗಿ ಬಾಗಿಲು ತೆಗೆದರೆ ಒಳಕ್ಕೆ ಬಂದು ಮನೇಲಿ ಸೇರಿಕೊಂಡು ಯಾರನ್ನಾದರೂ ಹಿಡಿದುಕೊಂಡು ಬಿಡ್ತಾರಂತೆ. ಆದರೆ ಬಾಗಿಲಮೇಲೆ ಮೂರುನಾಮ ಬಳಿದು ನಾಳೆ ಅಂತ ಬರೆದರೆ, ಕೂಗು ಮಾರಿ ಬಂದು ಬಾಗಿಲ ತಟ್ಟುಕ್ಕೆ ಮುಂಚೆ, ಬರೆದಿದ್ದನ್ನು ಓದುತ್ತಂತೆ. ಓ ಹೋ! ನಾಳೆ ಅಂತ ಬರೆದಿದ್ದಾರೆ, ನಾಳೆ ಬಂದು ಬಾಗಿಲು ತಟ್ಟಿದರೆ ಬಾಗಿಲು ತೆಗೆಯುತ್ತಾರೆ ಅಂತ ತಿಳಿದುಕೊಂಡು, ಬಾಗಿಲು ತಟ್ಟದೆ ಹೊರಟು ಹೋಗು ತ್ತಂತೆ.

ಇಂದಾನೊಂದು ಕಾಲದಲ್ಲಿ ಬಾಳಪೇಟೆಯ ಮೂರನೆ ಅಡ್ಡರಸ್ತೆಯಲ್ಲಿ ಹಳೆ ಕಾಲದ ಎಂಟಂಕಣದ ಮನೆ ಒಂದಿತ್ತಂತೆ. ಆ ಮನೆ ಬಾಗಿಲ ಮೇಲೆ ನಾಮವನ್ನೂ ಹಾಕಿತ್ತಿಲ್ಲವಂತೆ. ನಾಳೆ ಅಂತ ಬರೆದೂ ಇತ್ತಿಲ್ಲವಂತೆ. ರಾತ್ರಿಯಲ್ಲಿ ಬಂದ ಕೂಗು ಮಾರಿ ಬಾಗಿಲು ತಟ್ಟಿದಾಗ, ಮನೆಯ ಮೊದಲನೆಯ ಮಗನೇ ಹೋಗಿ ಬಾಗಿಲು ತೆಗೆದನಂತೆ. ಕೂಗು ಮಾರಿಗೆ ಬಲು ಖುಷಿಯಾಯ್ತಂತೆ. ಅವನನ್ನು ನಗುತಾ ತಬ್ಬಿಕೊಂಡು, ಕಡೆಗೆ ಮೆಟ್ಟಿಕೊಂಡಿತಂತೆ. ಯಾರೂ ಬಾಗಿಲ ಹೊರಗೆ ಇದ್ದುದನ್ನು ಕಾಣದೆ ಮನೆಯ ಮಗ ಬಾಗಿಲು ಹಾಕಿಕೊಂಡು, ಮಲಗಲು ಹಿಂತಿರುಗಿದಾಗ ಅವನ ತಲೆ ಸ್ವಲ್ಪ ಹಗುರಾದುದನ್ನು ಗಮನಿಸಿದನಂತೆ. ಬಾಗಿಲು ತೆಗೆದಾಗ ಥಂಡಿಯ ಹೊರಗಿನ ಗಾಳಿ ಬಡಿದು ಹೀಗಾಗಿರಬಹುದು ಎಂದು ಮನಸ್ಸಿನಲ್ಲಿಯೇ ಅಂದುಕೊಂಡನಂತೆ.

ಬೆಳಗಾಗಿ ಎದ್ದು ಎಲ್ಲರ ಜತೆಯಲ್ಲೂ ಕಾಫಿ ತಿಂಡಿಗೆ ಕುಳಿತಾಗ, "ಏನಮ್ಮಾ ಇದು, ಉಪ್ಪಿಟ್ಟಿಗೆ ಇಷ್ಟು ತುಪ್ಪ ಹಾಕಿದೀಯಲ್ಲಮ್ಮಾ; ಇಷ್ಟು ಜಿಡ್ಡು ತಿಂದರೆ ಅಪ್ಪನಿಗೆ ರಕ್ತದಒತ್ತಡ ಹೆಚ್ಚಾಗುತ್ತಲ್ಲಮ್ಮಾ!" ಎಂದು ಶುರುಮಾಡಿದನಂತೆ. ನಿಮ್ಮಪ್ಪನಿಗೆ ಬಡಿಸಿದ ಉಪ್ಪಿಟ್ಟಿಗೆ ತುಪ್ಪ ಹಾಕಿಲ್ಲ, ಮಗೂ, ನಿನಗೆ ಜಿಡ್ಡು ಇಷ್ಟ ಅಂತ ನಿನಗೆ ಬಡಿಸಿದ ಉಪ್ಪಿಟ್ಟಿಗೆ ಮಾತ್ರ ಬೆಣ್ಣೆಕಾಯಿಸಿದ ಘಂ ಅಂತಿರುವ

ತುಪ್ಪವನ್ನು ಹೆಚ್ಚಾಗಿ ಕಲಸಿದೆ ಕಣಪ್ಪಾ!" ಎಂದು ಅಮ್ಮ ಸಮಾಧಾನ ಹೇಳಿದರೆ, "ನನಗೆ ರಕ್ತದ ಒತ್ತಡ ಬಂದರೂ ಪರವಾಗಿಲ್ಲ, ನಾವು ಐದುಜನ ಗಂಡು ಮಕ್ಕಳು: ಆದರೆ ಒಬ್ಬನೇ ಗಂಡ, ಅವನಿಗೆ ರಕ್ತದ ಒತ್ತಡ ಬರಬಾರದು ಅಂತ ಲೇನಮ್ಮಾ" ಎಂದು ವಿತಂಡಾವಾದವನ್ನು ಮುಂದು ಮಾಡಿದನಂತೆ.



"ಏನೋ, ಪ್ರೀತಿ ನಿನಗೆ ಅಂತ ತುಪ್ಪಕಲಿಸಿ ಉಪ್ಪಿಟ್ಟು ಬಡಿಸಿದರೆ ಸನ್ನಿ ಬಡಬಡಿಸೋ ಹಾಗೆ ಏನೇನೋ ಅಂತೀಯಲ್ಲೋ, ಮಂಕು ಮುಂಡೇದೇ! ತೆಪ್ಪನೆ ಕೂತುಕೊಂಡು ತಿನ್ನು. ಬೇಡದೆ ಇದ್ದರೆ ಎದ್ದು ಹೋಗು" ಅಂತ ಅಪ್ಪ ಗದರಿಸಿ ಕೊಂಡರಂತೆ.

"ಇದ್ದ ವಿಷಯಾನ ಇದ್ದಹಾಗೆ ಹೇಳಿದರೆ, ಅದರ ಅರ್ಥ ಹೀಗಿರಬಹುದು ಎಂದು ವಿಚಾರ ಮಾಡಿ ಹೇಳಿದರೆ, ಕಂಡದ್ದನ್ನು ಕಂಡ ಹಾಗೇ ಹೇಳಿದರೆ, ನೀವ್ಯಾಕೆ ಕೆಂಡದ ಹಾಗೆ ಕೋಪಿಸ್ಕೊಳ್ಳೀರಪ್ಪ!" ಎಂದನಂತೆ ಮಗ.

"ಏನಾಗಿದೆಯೇ ನಿನ್ನ ಮಗನಿಗೆ, ಹುಚ್ಚು ಹುಚ್ಚಾಗಿ ಬಡ ಬಡಿಸ್ತಾ ಇದ್ದಾನೆ. ನೀನು ಮಾಡಿದ ಮುದ್ದಿನ ಫಲ ಇದು. ಎರಡು ತಪರಾಕು ಹಾಕಿ ಒದ್ದು ಬುದ್ಧಿ ಕಲಿಸಬೇಕು" ಅಂತ ಹೇಳುತ್ತಾ ಅಪ್ಪ ಎದ್ದರಂತೆ.

ಅಪ್ಪ ಆಜಾನುಬಾಹು. ಗರಡಿ ಮಾಡಿದ ಆಳು. ಮಗ ಅಮ್ಮನ್ನ ಹೋತು ಕೊಂಡಿದ್ದ. ಅಮ್ಮ ಕಂಚಿಕಡಸನ್ನು ಹೋತುಕೊಂಡಿದ್ದಳು. ಅಂದಮೇಲೆ ಅಪ್ಪ ಎದ್ದು ಒದೆಯುಕ್ಕೆ ಅಂತ ಕಾಲಿಗೆ ಝೋಕು ಕೊಟ್ಟಾಗ ಮಗ ಅಲ್ಲಿಂದ ಕಂಬಿ ಕಿತ್ತನಂತೆ. ಆ ಮನೆಯಿಂದಲೇ ಓಡಿ ಹೋದನಂತೆ.

ಹೋದೋನು ನಾಲ್ಕು ಜನರು ಸೇರಿದ್ದ ಕಡೆಯೆಲ್ಲಾ ಬಡಬಡಿಸುಕ್ಕೆ ಶುರು ಮಾಡಿದನಂತೆ. ಇವನು ಹೇಳಿದ್ದು ಯಾರಿಗೂ ಅರ್ಥವಾಗದೆ ಇದ್ದರೂ, ಬಹಳ ಚೆನ್ನಾಗಿ ಮಾತನಾಡ್ತಾನಲ್ಲ, ಸ್ವಲ್ಪವೂ ತಡವರಿಸುವುದಿಲ್ಲವಲ್ಲ! ಇವನು ಹೇಳೋ ದರಲ್ಲಿ ಸತ್ಯ ಇರಬೇಕು ಎಂದು ಜನರು ಹೇಳುಕ್ಕೆ ಶುರುಮಾಡಿದರಂತೆ.

ಪಾಪ! ಅವರಿಗ್ಯಾರಿಗೂ ಗೊತ್ತಿಲ್ಲ. ಕೂಗು ಮಾರಿ ಅಮರಿಕೊಂಡಿದೆ ಇವ ನನ್ನ ಅಂತ.

ಜನದ ಬಾಯನ್ನು ಕಟ್ಟುಕ್ಕೆ ಸಾಧ್ಯವೇ? ಬಹಳ ಶಹಣ. ಬಹಳ ವಿಚಾರ ಮಾಡಿ ತರ್ಕಹೂಡಿ ಮುಂದಾಗುವುದನ್ನು ಇಂದೇ ಊಹಿಸಿ ಹೇಳ್ತಾನೆ, ಅಂತ ಜನರು ಅನ್ನುಕ್ಕೆ ಶುರು ಮಾಡಿದರು. ಅನ್ನುಕ್ಕೆ ಶುರು ಮಾಡಿದವರು ನೀವೇ ನಮ್ಮ ನಾಯಕ ಕಣಪ್ಪಾ ಅಂತ ಆರಿಸಿಯೂ ಬಿಟ್ಟರು. ಕಡೆಗೆ ರಾಜ್ಯದ ಆಡಳಿತವನ್ನು ಅವನ ಕೈಗೆ ಕಂಕಣ ಕಟ್ಟಿದ ಹಾಗೆ ಕಟ್ಟೇಬಿಟ್ಟರು.

ರಾಜ್ಯದ ಆಡಳಿತವನ್ನು ಸುಸೂತ್ರವಾಗಿ ನೆರವೇರಿಸಬೇಕಾದರೆ ಏನೇನು ಗುಣಗಳಿರಬೇಕೋ ಅವುಗಳಲ್ಲಿ ಒಂದಾದರೂ ಇವನಿಗಿತ್ತಿಲ್ಲ. ಪಾಪ, ಅವನೇನು ಮಾಡಬೇಕು? ರಾಜ್ಯ ಪುರೋಹಿತರನ್ನು ಕರೆಸಿ, ಜಾತಕ ನೋಡಿಹೇಳಿ ಮುಂದೆ ಹೇಗೆ ಎಂದು ಕೇಳಿದನಂತೆ. ರಾಜ್ಯ ಪುರೋಹಿತರು ಜಾತಕ ನೋಡಿದರು. ಕವಡೆ ಹಾಕಿ ನೋಡಿದರು. ಎಲ್ಲವೂ ತಿಳಿಯಿತು. "ಮಹಾರಾಯರೇ? ನಿಮಗೆ ಕೆಲವು ಕಾಲದ ಹಿಂದೆ ಕೂಗು ಮಾರಿ ಅಮರಿಕೊಂಡಿತು. ಅವತ್ತಿನಿಂದಲೇ ನೀವು ಭಾಷಣಾಪ್ರವೀಣರಾದುದು, ಸನ್ನಿ ಬಂದವರ ಹಾಗೆ ಮಾತನಾಡಿ ಜಯಿಸಿರೋದು. ಈಗ ಆಡಳಿತ ಮಾಡಬೇಕು. ಕೂಗು ಮಾರಿಯಿಂದ ಇದು ಸಾಧ್ಯವಿಲ್ಲ. ಅದ ಕ್ಕೋಸ್ಕರ ಕೂಗು ಮಾರೀನ ಬಿಡಿಸಬೇಕು. ಅದಕ್ಕೆ ಒಂದೇ ದಾರಿ ನಾವು

ಹಾಕೋದು. "ನಾಳೆ" ಅಂತ ಮಂತ್ರ ಉಚ್ಚರಿಸುವುದು." ಎಂದು ರಾಜ್ಯ ಪುರೋಹಿತರು ಹೇಳಿದರಂತೆ.

ಅವತ್ತಿನಿಂದ ರಾಜ್ಯಭಾರ ಸುಸೂತ್ರವಾಗಿ ನಡೆಯಿತಂತೆ. ಕಂಡವರಿಗೆಲ್ಲಾ ಬಂದವರಿಗೆಲ್ಲಾ ನಾಮ ಹಾಕೋದು: "ನಾಳೆ" ಆಗಲಿ, "ನಾಳೆ" ನೋಡೋಣ, "ನಾಳೆ" ಪರಿಶೀಲಿಸುತ್ತೇನೆ. "ನಾಳೆ" ಮಾಡಿಕೊಡುತ್ತೇನೆ, ಇತ್ಯಾದಿ ನಾಳೆ ಮಂತ್ರವನ್ನು ಜಪಿಸಲಾರಂಭಿಸಿದನಂತೆ.

ಈಗರ್ಥವಾಯ್ತೇ ಮಗು, ನಾಳೆ ಅಂತ ಯಾಕೆ ಮುಂದೂಡ್ತಾ ಕಾಲ ಹಾಕ್ತಾರೆ; ಕೂಗು ಮಾರಿ ಬಡಿದು ಮೇಲಕ್ಕೆ ಬಂದವರೆಲ್ಲಾ, ನಾಳೆ ಮಂತ್ರೋಚ್ಚಾರಣೆಮಾಡಿ ಬಾಳ್ತಾರೆ, ಅಂತ ನನ್ನ ಅಡುಗೂಲಜ್ಜಿ ಕೂಗು ಮಾರಿ ಕತೆ ಹೇಳಿದಳಂತೆ.

ತಿಗಣೆ ಸೊಸೆ ಕತೆ

ಬಾಳಪೇಟೇಲಿ ಹೊಸದಾಗಿ ಕಟ್ಟಿರೋ ಮನೆ ಚೆನ್ನಾಗಿದೆ ಅಂತ ಹೊಸದಾಗಿ ಸಂಸಾರ ಹೂಡಿದ ರಾಮಯ್ಯ ಆ ಮನೇನ ಬಾಡಿಗೆಗೆ ತೆಗೆದುಕೊಂಡನಂತೆ. ಅಮ್ಮನ್ನ ಮತ್ತು ಹೆಂಡತೀನ ಆ ಮನೆಗೆ ಕರೆದುಕೊಂಡು ಹೋದನಂತೆ. ಒಬ್ಬನೇ ಮಗ, ಹೇಳಿದಹಾಗೆ ಕೇಳಬೇಕು, ಇಲ್ಲದೆ ಇದ್ದರೆ ಕೋಟೆ ಒಳಗಿನ ಸ್ವಂತಮನೇಲೆ ಇರಬಹುದಾಗಿತ್ತು, ಎಂದು ಅಂದುಕೊಂಡು ರಾಮಯ್ಯನ ತಾಯಿ ಅರೆಮನಸ್ಸಿನಿಂದಲೇ ಬಂದಳಂತೆ. "ಕೋಟೆ ಒಳಗಿನ ಇವರ ಮನೇಲಿ ಗಾಳಿ ಬರುಲ್ಲ. ಬೆಳಕು ಇಣಿಕಿಕೂಡ ನೋಡುಲ್ಲ, ಅವೇಳೆಯಲ್ಲಿ ಕೈಕಾಲು ತೊಳೆದುಕೊಳ್ಳುಕ್ಕೆ ಲಾಂದ್ರ ಹಿಡಿದುಕೊಂಡು ಅರ್ಧ ಫರ್ಲಾಂಗ್ ನಡೀಬೇಕು. ಇದನ್ನು ಬಿಟ್ಟು ಹೊಸ ಮನೆಗೆ ಹೋಗೋಣ ಅಂದ್ರೆ" ಅಂತ ಹೆಂಡತಿ ರಾತ್ರಿಂ ರಾತ್ರಿಯೂ ಅಹವಾಲು ಸಲ್ಲಿಸಿದ ಮೇಲೆ ರಾಮಯ್ಯನಿಗೂ ಅದೇ ನ್ಯಾಯ ಅಂತ ಅನ್ನಿಸಿತಂತೆ. ಅಂದಮೇಲೆ ಕುಣಿಯೋ ಹೆಜ್ಜೆ ಹಾಕ್ತಾ ಸೊಸೆ ಹೊಸಮನೆಯ ಹೊಸಲು ದಾಟದಳು ಅಂತ ಹೇಳಬೇಕೇ? ಹೋದ ಎರಡು ವಾರದಲ್ಲಿ ಗಾಜಿನಮಣಿಯ ಪರದೆಗಳನ್ನು ಕಿಟಕಿ ಬಾಗಿಲುಗಳಿಗೆ ಹಾಕಿದಳು ಸೊಸೆ. ಚಾಪೆ, ಜಮಖಾನ ತೆಗೆದು ಕುರ್ಚಿ ಮಂಚಗಳನ್ನು ತರಿಸಿ ಹಾಕಿದಳು.

ಅತ್ತೆಮ್ಮ ಹಳೆ ಕಾಲದವಳು. ಮುಂದಲಿಗೆ ಮೇಲೆ ಬಾಳು ನಡೆಸಿದವಳು. "ನನ್ನ ಮಗ ಸಂಪಾದಿಸಿದ ಹಣವನ್ನೆಲ್ಲಾ ಈ ಬಿನ್ನಾಣಿ ಹೀಗೆಲ್ಲಾ ಪೋಲು ಮಾಡ್ತಾಳಲ್ಲ" ಅಂತ ಒಂದುಕಡೆ ದುಃಖ. "ಇವಳು ಹಾಡಿದಹಾಗೆ, ಮೂಗುದಾರ ಹಾಕಿದ ಕರಡಿ ಹಾಗೆ, ಇವ ಕುಣೀತಾನಲ್ಲ" ಅಂತ ಇನ್ನೊಂದು ಕಡೆ ದುಃಖ. "ದೊಡ್ಡೋಳು ನಾನು, ನನ್ನ ಒಂದು ಮಾತು ಕೇಳಿಬಿಟ್ಟು, ಹೂ ಅಂತ ಅನ್ನಿಸಿಕೊಂಡು ಮಾಡೋದನ್ನು ಮಾಡಲಿಲ್ಲವಲ್ಲ" ಅಂತ ಮತ್ತೊಂದು ಕಡೆ ದುಃಖ. ಹೀಗೆ ಮೂರೂ ತರಹಾ ದುಃಖಗಳು ಅತ್ತೆಮ್ಮನನ್ನು ಕಾಡಲು ಶುರುಮಾಡಿದ ಮೇಲೆ, "ಅಯ್ಯೋ! ನನ್ನ ಗಂಡನ ಜತೆಗೆ ಹೀಗೆ ಪ್ರಾಯದಲ್ಲಿ ಸಂಸಾರ ಮಾಡಿಕೊಂಡು ಇರಲು ಆಗಲಿಲ್ಲವಲ್ಲ" ಅಂತ ಹೊಟ್ಟೆ ಉರಿಯುಕ್ಕೆ ಶುರುವಾಯ್ತಂತೆ.

ಹೊಟ್ಟೆ ಉರಿಯುತ್ತಿರುವ ಅತ್ತೆಮ್ಮ ಸೊಸೆ ಮೇಲೆ ತಾನೆ ಬೆಂಕಿ ಕಾರ

ಬೇಕು! ನಿಂತರೆ ತಪ್ಪು, ಕೂತರೆ ಮೈಲಿಗೆ, ಓಡಾಡಿದರೆ ಬೈಗಳು, ತೆಪ್ಪಗೆ ಬಿದ್ದು ಕೊಂಡಿದ್ದರೂ ಲೊಟಗುಟ್ಟುವುದು ಹೀಗೆ ಸೊಸೇನ ಕಾಡುಕ್ಕೆ ಶುರುಮಾಡಿದಳಂತೆ.

ರಾಮಯ್ಯ ತನ್ನ ಕೆಲಸದ ನಿಮಿತ್ತ ಒಂದು ವಾರ ಬೇರೆ ಊರಿಗೆ ಹೋಗಿದ್ದ ನಂತೆ. ಆ ಅವಕಾಶವನ್ನು ಕಳೆದುಕೊಳ್ಳಬಾರದು ಅಂತ ಅತ್ತೆಮ್ಮ ಸೊಸೆಯನ್ನು ಹುರಿದು ಮುಕ್ಕುಕ್ಕೆ ಶುರುಮಾಡಿದಳಂತೆ. ಪಾಪ! ಬಯಕೆ ಹತ್ತಿದೆ ಸೊಸೆಗೆ ಅನ್ನೋದನ್ನೂ ಲಕ್ಷಿಸದೆ, ಚಟ್ಟಣಿಪುಡಿ ಕುಟ್ಟು, ಹಪ್ಪಳ ಒತ್ತು, ಗುಳಪಾವಟೆ ಮಾಡು, ಅಕ್ಕಿ ಆರಿಸು, ಅಂತ ಬೆಳಗಿನಿಂದ ಸಂಜೆತನಕ ಸೊಸೆಗೆ ಕೆಲಸ ಹಚ್ಚಿದ್ದೂ ಹಚ್ಚಿದ್ದೆ. ಹೂವು ಬತ್ತಿ ಮಾಡ್ತಾ ತಾನು ಅಂಗಳದಲ್ಲಿ ಉಸ್ತುವಾರಿ ನೋಡ್ತಾ ಕೂತುಕೊಂಡು, ಟೀಕೆ ಮಾಡಿದ್ದೂ ಮಾಡಿದ್ದೆ.

ಎರಡು ದಿನ ಬಿಡುವಿಲ್ಲದೆ ಸೊಸೆ ಹೀಗೆ ದುಡಿದಮೇಲೆ ರಾತ್ರಿ ಹುಶ್ಯಪ್ಪಾ ಅಂತ ಮಲಗಿಕೊಂಡಳಂತೆ. ಬೆಳದಿಂಗಳು ಹೊರಗೆ ಬಿದ್ದಿತ್ತಂತೆ. ಕಿಟಕಿಯಿಂದ ಹಾದುಬಂದ ಬೆಳದಿಂಗಳ ಕೋಲು ಇವಳ ತೋಳುಮೇಲೆ ಬಿದ್ದಿತ್ತಂತೆ. ಸುಸ್ತಾಗಿದ್ದ ಸೊಸೆಗೆ ಬೆಳದಿಂಗಳಿಂದ ಏನುತಾನೆ ಆಗಬೇಕು? ನಿದ್ರೆಹತ್ತಬೇಕು. ಝೋಂಪು, ಅನ್ನೋಹೊತ್ತಿನಲ್ಲಿ ತೋಳನ್ನು ಯಾರೋ ಗಿಳ್ಳಿದಹಾಗೆ ಆಯ್ತಂತೆ. ಇವರು ಯಾವ ಮಾಯದಲ್ಲಿ ಬಂದರು ಅಂತ ಸೊಸೆ ಕಣ್ಣು ಬಿಟ್ಟು ನೋಡಿದಳಂತೆ. ದಢೂತಿ ತಿಗಣೆಯೊಂದು ಅವಳ ತೋಳಮೇಲೆ ಕೂತು ಕುಕ್ಕಿ ರಕ್ತ ಹೀರ್ತಾ ಇತ್ತಂತೆ. "ದರಿದ್ರಮುಂಡೇದೇ ನಿನಗಿಂತ ನಮ್ಮತ್ತೇನೆ ವಾಸಿ. ಆಕೆ ನಿನ್ನ ಹಾಗೆ ಕುಕ್ಕುತಾಳೆ, ಕಟಕಾರಿಸ್ತಾಳೆ, ಆದರೆ ಇದ್ದ ರಕ್ತಾನ ಬಾಯಿಹಾಕಿ ಹೀರುಲ್ಲ, ತಡಿ ನಿನಗೆ ಮಾಡ್ತೀನಿ, ಶಾಸ್ತ್ರೀನ" ಅಂತ ಎಡಗೈ ಎತ್ತಿದಳಂತೆ, ಹೊಡೆದು ಅಪ್ಪಚ್ಚಿ ಮಾಡುಕ್ಕೆ.

ತಿಗಣೆ ಆಗ ಬಾಯಿಬಿಟ್ಟು "ಅಮ್ಮಾ! ನಿನ್ನ ಹಾಗೆಯೇ ನಾನೂ ಎರಡು ಜೀವಿ. ಪ್ರಾಣಭಿಕ್ಷೆ ಬೇಡ್ತೀನಿ. ನನ್ನ ಉಳಿಸು, ನನ್ನ ಕೈಲಾದ ಸಹಾಯವನ್ನು ಮಾಡ್ತೇನೆ, ಕೇಳು" ಎಂದು ಬೇಡಿತಂತೆ.

ಸೊಸೆ ನಗುಕ್ಕೆ ಶುರು ಮಾಡಿದಳಂತೆ. ಮೊದಲಾಗಿ ಮಾತಾಡೋ ತಿಗಣೇನ ಅವಳು ನೋಡೇ ಇತ್ತಿಲ್ಲ. ಅದಕ್ಕೇ ನಗು; ಎರಡನೆಯದಾಗಿ ತಿಗಣೆ ಏನು ಸಹಾಯವನ್ನು ತಾನೆ ಮನುಷ್ಯರಿಗೆ ಮಾಡಬಲ್ಲದು? ಆಗ ತಿಗಣೆ "ಸಿಂಹ ಇಲಿ ಕತೆ

ಕೇಳಿಲ್ಲವೇ ತಾಯಿ. ಅದರ ಹಾಗೇನೇ. ನಿನ್ನ ಕಷ್ಟ ಏನು ಹೇಳು ನನ್ನಿಂದ ಏನಾದರೂ ಸಹಾಯ ಆಗುವ ಹಾಗಿದ್ದರೆ ಮಾಡ್ತೀನಿ" ಅಂತ ತಿರುಗಿ ಹೇಳಿತಂತೆ.

ತನ್ನ ಮನಸ್ಸಿನ ಉದ್ವೇಗವನ್ನೂ ಅಳಲನ್ನೂ ಹೇಳಿಕೊಳ್ಳುಕ್ಕೆ ಈ ತಿಗಣೆಯಾದರೂ ಸಿಕ್ಕಿತಲ್ಲ ಅಂತ ಸೊಸೆ "ನೋಡಮ್ಮಾ ಬಸುರಿ! ನಮ್ಮತ್ತೆ ಹೀಗೆ ಗೋಳು ಹುಯ್ದುಕೊಳ್ಳುತ್ತಾಳೆ. ಎರಡು ದಿವಸದಿಂದ ಅನಕ, ಇವರು ಬೇರೆ ಊರಿಗೆ ಹೋದಮೇಲೆ ಅದೇನೆಲ್ಲಾ ಕಿರಕುಳ ಕೊಡ್ತಾಳೆ ಅಂತೀ! ತಡೆಯುಕ್ಕಾಗುಲ್ಲ. ಬಾವೀಗೆ ಬಿದ್ದು ಪ್ರಾಣ ಕಳೆದುಕೊಳ್ಳಲೇ ಅಂತ ಒಂದೊಂದು ಸರ್ತಿ ಅನ್ನಿಸುತ್ತೆ" ಅಂತ ಹೇಳಿಕೊಂಡು ಅತ್ತಳಂತೆ.

"ಅಯ್ಯೋ! ಪೆಚ್ಚು ಮುರವಿ, ಇದಕ್ಕೆ ಯಾಕೆ ಹೀಗೆ ಕೊರಗ್ತಿ. ಅತ್ತೆಮ್ಮ ಈ ಮನೆಬಿಟ್ಟು ಹೋಗೋ ಹಾಗೆ ನಾನು ಮಾಡ್ತೀನಿ. ಹದಿನೈದು ದಿವಸ ತಡಕೋ, ಆಮೇಲೆ ನನ್ನ ಸಾಮರ್ಥ್ಯ ನೋಡುವಿಯಂತೆ" ಎಂದು ತಿಗಣೆ ಅಭಯ ಕೊಟ್ಟಿತಂತೆ.

ಬಸುರಿ ತಿಗಣೆ ಯಾರು ಗೊತ್ತೆ? ಆ ಮನೆಯ ಗೋಡೆಯ ತಳದಲ್ಲಿದ್ದ ತಿಗಣೆ ರಾಜ್ಯದ ರಾಣಿ. ತಿಗಣೆ ರಾಜ್ಯದಲ್ಲಿ ಅರಸುತನ ನಡೆಸೋದು ರಾಣಿಯೇ! ಒಂದು ತರಹಾ ಸ್ತ್ರೀ ಮಲಯಾಳ. ರಾಣಿ ಹಿಂತಿರುಗಿದಾಗ ಒಂದು ಫರ್ಮಾನ್ ಹೊರಡಿಸಿದಳಂತೆ. ಹೀಗೆ ನನ್ನ ಪ್ರಾಣವನ್ನು ಈ ರಾತ್ರಿ ಮನೆ ಸೊಸೆ ಉಳಿಸಿದಳು. ಅವಳತ್ತೆ ಆಕೇನ ಗೋಳು ಹುಯ್ದು ಕೊಳ್ಳುತ್ತಿದ್ದಾಳೆ. ನಮ್ಮ ಸೈನಿಕರೆಲ್ಲಾ ಅತ್ತೆಮ್ಮನ ಮೇಲೆ ಲಗ್ಗೆ ಹೂಡಬೇಕು. ಒಂದು ವಾರದಲ್ಲಿ ಬಾವಿಗೆ ಬಿದ್ದರೆ ಚೆನ್ನು ಅಂತ ಆಕೆಗೆ ಅನ್ನಿಸಬೇಕು ಅಂತ ಹುಕುಂ.

ಮಾರನೆ ದಿನದಿಂದ ನೋಡಿ, ಅತ್ತೆಮ್ಮ ತನ್ನ ಜತೆಯವರೊಂದಿಗೆ ಮಾತಾಡ್ತಾ ಕುಳಿತರೆ, ಹಾಡು ಹಗಲಿನಲ್ಲಿ ತೊಡೆಯನ್ನೇ ಕಚ್ಚುವುದಕ್ಕೆ ಶುರು ಮಾಡಿದವಂತೆ ತಿಗಣೆಗಳು. ಕಚ್ಚಬಾರದ ಕಡೆಯೆಲ್ಲಾ ಕಚ್ಚಿದವಂತೆ. ಅರಳು ಹಿಟ್ಟಿನ ಡಬ್ಬ ತೆಗೆದರೆ ಅಲ್ಲಿ ನಾಲ್ಕು ತಿಗಣೆ. ಅವಲಕ್ಕಿ ಚಬರಿ ತೆಗೆದರೆ ಅಲ್ಲಿ ನಾಲ್ಕು ತಿಗಣೆ. ಸ್ನಾನಮಾಡುವಾಗ ಸೀಗೆಕಾಯಿ ಪುಡಿ ಕೈಗೆ ಹಾಕಿಕೊಂಡರೆ ಅದರಲ್ಲಿ ನಾಲ್ಕು ತಿಗಣೆ. ಹೀಗಾಗಿ ಎಚ್ಚರವಾಗಿದ್ದಾಗಲೆಲ್ಲಾ ತಿಗಣೆಗಳ ಕಾಟ. ಸ್ವಲ್ಪ ಜೋಂಪು ಬಂದರೆ, ತಿಗಣೆ ಸ್ವಪ್ನ. ಮಕ್ಕಳ ಹಾಗೆ ಕಿರಿಚಿಕೊಂಡು ಅತ್ತೆಮ್ಮ ಏಳುತ್ತಿದ್ದಳಂತೆ. ತಿಗಣೆಗಳು ಕಚ್ಚೀಕಚ್ಚೀ ಅತ್ತೆಮ್ಮನ ಮೈಯೆಲ್ಲಾ ತೊಂಡೆ

ಹಣ್ಣಿನ ತರಹ ಕೆಂಪು ಬಾಸುಂಡೆಗಳಿಂದ ತುಂಬಿದುವಂತೆ. "ಈ ಹಾಳು ಮನೇಗೆ ಕರಕೊಂಡು ಬಂದೆಯಲ್ಲೇ ಅಂತ ಹಿಡಿಶಾಪ ಹಾಕಿದರೆ, ಸೊಸೆ, ತಿಗಣೆಗಳೇ ಇಲ್ಲವಲ್ಲಮ್ಮಾ! ಒಂದಾದರೂ ನನಗೆ ಸಿಕ್ಕಿಲ್ಲವಲ್ಲಮ್ಮಾ ಅಂತ ಹೇಳ್ತಾ ಇದ್ದಳಂತೆ.

ಒಂದು ವಾರ ಆಯಿತು. ರಾಮಯ್ಯ ಹಿಂತಿರುಗಿದ. ಬಂದ ಕ್ಷಣದಲ್ಲೇ "ಮಗೂ! ಈ ಹಾಳು ಮನೇಲಿ ಇರುಕ್ಕೆ ಸಾಧ್ಯವಿಲ್ಲಪ್ಪಾ! ನೀನು ಹೋದ ಮೇಲೆ ಅರೆಕ್ಷಣ ನಿದ್ದೆ ಮಾಡುಕ್ಕಾಗಿಲ್ಲ. ತಿಗಣೆಯ ಗೂಡೇ ಎದ್ದಿದೆ. ನಿನ್ನ ತಂಗಿ ಮನೆಗೆ ಹೋಗ್ತೀನಪ್ಪಾ, ಇವತ್ತೇ ಹೋಗ್ತೀನಪ್ಪಾ. ಸಾಮಾನೆಲ್ಲಾ ಕಟ್ಟಿಟ್ಟಿದೀನಿ" ಎಂದು ಬಡಬಡಿಸಿದಳಂತೆ.

"ಅಷ್ಟು ಇಷ್ಟಪಟ್ಟರೆ ನಾನ್ಯಾಕೆ ಬೇಡ ಅನ್ನಲಿ. ಇನ್ನರ್ಧ ಗಂಟೆಗೆ ತಂಗಿ ಊರಿಗೆ ಬಸ್ಸು ಹೊರಡುತ್ತೆ, ನಾನು ಬಂದ ಜಟ್ಕಾ ಇಲ್ಲೇ ಇದೆ. ಅದರಲ್ಲೇ ಬಸ್‌ಸ್ಟಾಂಡಿಗೆ ಹೋಗೋಣ" ಅಂತ ಮಗ ಹೇಳಿ, ತಾಯಿಯನ್ನು ಮಗಳ ಮನೆಗೆ ಸಾಗಿಹಾಕಿಬಿಟ್ಟು ಬಂದನಂತೆ.

ಆ ರಾತ್ರಿ ಪೌರ್ಣಮಿ. ಉಂಡು ಮಲಗಿದ ಮೇಲೆ "ಲೇ! ಎಷ್ಟು ತಂಪಾಗಿದೆಯೇ ಬೆಳದಿಂಗಳು" ಎಂದನಂತೆ ರಾಮಯ್ಯ. "ಅಲ್ಲವೇ ಅಂದ್ರೆ, ಎಷ್ಟು ಶಾಂತವಾಗಿದೆ, ಎಷ್ಟು ಪ್ರಶಾಂತವಾಗಿದೆ" ಎಂದಳಂತೆ ಹೆಂಡತಿ. ಬೆಳದಿಂಗಳ ಕೋಲು ರಾಮಯ್ಯನ ತೋಳಿನ ಮೇಲೆ ಬಿತ್ತು. ಕಿರು ಬೆವರುತ್ತಿದ್ದ ಅವನಿಗೆ ಜೋಂಪು ಹತ್ತಿತ್ತು. ತೋಳನ್ನು ಯಾರೋ ಹಗೂರಾಗಿ ಚಿವುಟಿದಂತಾಯ್ತು. ಎಚ್ಚೆತ್ತು ಪಕ್ಕಕ್ಕೆ ತಿರುಗಿದ. ಹೆಂಡತಿ ಕೈಮುಗಿದುಕೊಂಡು ಕೂತಿದ್ದಳು. ಮತ್ತೆ ಚಿವುಟಿದವರು ಯಾರು? ಅಂತ ತೋಳನ್ನ ನೋಡಿದ. ತಿಗಣೆ! ಅಂಗೈ ಎತ್ತಿದ ರಾಮಯ್ಯ ತಿಗಣೆ ಸಂಹಾರಕ್ಕೆ. ಕೂತಿದ್ದ ಹೆಂಡತಿ, ಗಂಡನ ಎತ್ತಿದ ಕೈಯನ್ನು ಹಿಡಿದುಕೊಂಡಳು "ತಿಗಣೇನ ಕೊಲ್ಲಬೇಡಿ ಅಂದ್ರೆ; ಹೀಗೆ ಹೀಗೆ ಆಯಿತು ಅಂತ ಆದುದ್ದನ್ನೆಲ್ಲಾ ಹೇಳಿದಳಂತೆ.

ಹೀಗೇನ ಅಂತ ರಾಮಯ್ಯ ಗಲ್ಲ ಹಿಡಿದನಂತೆ.

* * *

ಗೊತ್ತಾಯ್ತೆ ಮಗು, ಯಾವ ಬೇನೆಗೆ ಯಾವ ವಿಷ ಔಷಧವಾಗುತ್ತೋ? ಅಲ್ಲವೇ, ಅಂತ ನಮ್ಮ ಅಡುಗೂಲಜ್ಜಿ ತಿಗಣೆ ಸೊಸೆ ಕತೆ ಹೇಳಿದಳಂತೆ.

ನಾಯಿ ಬೇಡನ ಕತೆ

ಇಂದಾನೊಂದು ಕಾಲದಲ್ಲಿ ಕಾಡಿನಹತ್ತಿರ ಒಬ್ಬಬೇಡರವನು ಗುಡಿಸಿಲು ಕಟ್ಟಿಕೊಂಡು ಸಂಸಾರ ಮಾಡ್ತಿದ್ದನಂತೆ. ಅಣಿಯಾದ ಪುಟ್ಟ ಸಂಸಾರ. ಕಡೆದ ಪಟ್ಟದಬೊಂಬೆ ಹಾಗಿರುವ ಹೆಂಡತಿ, ವಿಳಂಬವಾಗಿ ಹುಟ್ಟಿದರೂ ವೈನವಾಗಿರುವ ತೊಟ್ಟಿಲಮಗು, ಮನೆನಾಯಿ. ಎಲ್ಲರೂ ನಗ್ತ ನಗ್ತ ಬಾಳುವ ಪ್ರಕೃತಿಯವರು. ಅಂದಮೇಲೆ ಸುಖವಾದ ಸಂಸಾರ ಅಂತ ಹೇಳಬೇಕೇ?

"ಮೆಣಸಿನಕಾಯಿ, ಉಪ್ಪು ತೊಗೊಂಡು ಬರ್ತೀನಿ, ಈವತ್ತು ಸಂತೆಗೆ ಹೋಗಿ" ಎಂದು ಬೇಡ ಹೇಳಿದನಂತೆ. "ನಾನೂ ಬರ್ತೀನಿ ಅಂದ್ರೆ, ರಿಬ್ಬನ್ ಕೊಂಡುಕೋಬೇಕು" ಎಂದು ಹೆಂಡತಿ ಹೇಳಿದಳಂತೆ. "ಮತ್ತೆ ಮಗೂನ ಯಾರು ನೋಡಿಕೋತಾರೆ, ನೀನೂ ಬಂದ್ಬಿಟ್ರೆ" ಎಂದನಂತೆ ಬೇಡ. "ಮನೆ ನಾಯಿ ಮಗೂನ ನೋಡಿಕೊಳ್ಳುತ್ತೆ" ಎಂದಳಂತೆ. "ನಿನಗೆ ಅಷ್ಟು ಧೈರ್ಯ ಇದ್ದರೆ ನನಗೇನು ಯೋಚನೆ, ಬಾ" ಅಂದನಂತೆ ಬೇಡ. ಇಬ್ಬರೂ ಹೊರಡೋವಾಗ ಮಗುವಿನ ತೊಟ್ಟಿಲನ್ನು ನಾಯಿಗೆ ತೋರಿಸಿ ಹುಷಾರಾಗಿ ನೋಡಿಕೊ ಎಂದು ಹೇಳಿ ಸಂತೆಗೆ ಹೋದರಂತೆ.

ಸಂಜೆ ಮುಂಚೆ ಕಣ್ಣು ಬೆಳಕಲ್ಲೇ ಹಿಂತಿರುಗಿದರಂತೆ. "ನಾಲ್ಕು ರಿಬ್ಬನ್ ಎಳೆ ಕೊಂಡುಕೊಳ್ಳುಕ್ಕೆ ಎರಡು ಗಂಟೆ ಒದ್ದಾಡಿದ್ಯಲ್ಲೇ, ಇಲ್ಲದೆ ಇದ್ದರೆ ಮಧ್ಯಾಹ್ನವೇ ಹಿಂತಿರುಗಬಹುದಾಗಿತ್ತು, ಹಸಿವಿಗೆ ಮಗು ಅಳ್ತಾ ಇರುತ್ತೇನೋ" ಎಂದು ಬೇಡ ಲೊಟಕ್ತಾ ಬಂದನಂತೆ.

"ಮಗು ಅಂದರೆ ಅಳದೇ ಇರುತ್ತ್ಯೇ! ಎರಡು ನಿಮಿಷ ಅತ್ತರೆ ಆಮೇಲೆ ಮಲಗಿ ನಿದ್ರೆ ಹೋಗುತ್ತೆ" ಎಂದು ರಿಬ್ಬನ್ನುಗಳನ್ನು ನೋಡುತ್ತಾ ಹೆಂಡತಿ ಹೇಳಿದಳಂತೆ.

ಮನೆಗೆ ಬಂದಾಗ ನೋಡ್ತಾರೆ, ಬಾಗಿಲಲ್ಲೇ ಒಂದು ಘಟಸರ್ಪ ಕತ್ತರಿಸಿ ಬಿದ್ದಿದೆ. ನಾಯಿನ ಬಾಯೆಲ್ಲಾ ರಕ್ತ ಆಗಿದೆ. ತೊಟ್ಟಿಲಲ್ಲಿ ಮಗು ಸುಖವಾಗಿ ನಿದ್ರೆಮಾಡ್ತಾ ಇದೆ.

ಗಂಡ ಓಡಿಹೋಗಿ ಮಗೂನ ಎತ್ತಿಕೊಂಡು ಏನಾದರೂ ಪೆಟ್ಟಾಗಿದೆಯೋ

ಅಂತ ನೋಡಿದನಂತೆ. ಹೆಂಡತಿ ಓಡಿಹೋಗಿ ನಾಯನ್ನು ಎತ್ತಿಕೊಂಡು, ನನ್ನ ಮಗೂನ ಕಾಪಾಡಿದೆಯಲ್ಲಪ್ಪಾ ಅಂತ ಮುದ್ದಾಡಿದಳಂತೆ. ಏನಾದರೂ ಪೆಟ್ಟಾಯ್ತೇ ಅಂತ ತಡವಿ ನೋಡಿದಳಂತೆ. "ಏನೂ ಪೆಟ್ಟಾಗಿಲ್ಲ" ಅಂತ ಗಂಡ ಹೆಂಡತಿ ಇಬ್ಬರೂ ಒಂದೇಕಾಲದಲ್ಲಿ ಸಂತಸದ ದನಿಯಲ್ಲಿ ಹೇಳಿದರಂತೆ. ನಾಯಿನ ಕತ್ತಿಗೆ ಒಂದು ರಿಬ್ಬನ್ ಕಟ್ಟಿದಳಂತೆ, ಬೇಡನ ಹೆಂಡತಿ.

ಅವತ್ತು ರಾತ್ರಿ ನಾಯಿಕೊಡೆ ಹುಳಿಮಾಡಿ, ಮೂಳೆಗಳ ಹೋಳು ಹಾಕಿ, ನಾಯಿಗೆ ಹಬ್ಬದ ಊಟ ಮಾಡಿಸಿದರಂತೆ. "ನೋಡಿದೆಯಾ! ಮನುಷ್ಯರು ಅಂದರೆ ಎಷ್ಟು ಕೃತಜ್ಞತೆ ಇರುತ್ತೆ. ಆ ಸರ್ಪ ಬಂದಿದ್ದು, ನೋಡದೆ ಅದರ ಮೇಲೆ ನಾನು ಕಾಲಿಟ್ಟದ್ದು, ಅದು ಭುಸ್ಸಂದಾಗ ಜಗಳ ಕಾಯಬೇಕಾಗಿ ಬಂದಿದ್ದು. ನನ್ನ ಪುಣ್ಯ, ಅದು ಸತ್ತಿದ್ದು. ಇಷ್ಟನ್ನೂ ನೋಡಿ ಅವರ ಮಗುವನ್ನ ಕಾಪಾಡಿದೆ ಅಂತ ತಿಳಕೊಂಡು ಇಷ್ಟೆಲ್ಲಾ ಆದರಿಸುತ್ತಾರಲ್ಲ" ಅಂತ ನಾಯಿ, ಬೇಡ, ಬೇಡನ ಹೆಂಡತಿಯನ್ನು ತುಂಬಾ ಮೆಚ್ಚಿಕೊಂಡಿತಂತೆ.

ಮಗು ಬೆಳೆಯಿತು. ಮೂರು ವರ್ಷ ಆಯಿತು. ನಾಯಿನ ಜತೆಗೆ ಆಟ ಆಡ್ತಾ ಅಲ್ಲಿ ಇಲ್ಲಿ ಸುತ್ತಾಡುವುದನ್ನೂ ಕಲಿತುಕೊಂಡಿತು. ಕಾಡಿನಲ್ಲಿ ಸಿಕ್ಕಿದ್ದನ್ನು ತಿನ್ನೋದು, ಮಳೆ ಗಾಳೀಲಿ ಆಟ ಆಡೋದು, ಆಲಿಕಲ್ಲು ಮಳೆಬಿದ್ದರೆ ಆಲಿಕಲ್ಲು ಆರಿಸಿಕೊಂಡು ಚಪ್ಪರಿಸೋದು, ಹೀಗೆ ಬಾಲ್ಯವನ್ನು ಕಳೆಯುತ್ತಾ ಇತ್ತು.

ಒಂದು ರಾತ್ರಿ ಮಗುವಿಗೆ ಕೆಮ್ಮು ಬಂತು. ಭಯಂಕರ ಕೆಮ್ಮು. ಉಸಿರು ಸಿಕ್ಕಿಹಾಕಿಕೊಳ್ಳುತ್ತೇನೋ ಅನ್ನುವಷ್ಟು ಕೆಮ್ಮು. ತಾನು ಕಲಿತ ಮನೆ ಔಷಧಿಗಳನ್ನೆಲ್ಲಾ ಹೆಂಡತಿ ಮಾಡಿದಳು. ಏನೂ ಪ್ರಯೋಜನವಾಗಲಿಲ್ಲ. ಬೇಡನಾಗಲಿ ಅವನ ಹೆಂಡತಿಯಾಗಲಿ, ಮಗುವಾಗಲಿ, ಒಂದುರಾತ್ರಿಕೂಡ ನಿದ್ರೆ ಮಾಡುಕ್ಕೆ ಸಾಧ್ಯವಾಗಲಿಲ್ಲ. ಒಂದು ವಾರ ಹೀಗೆ ಕಳೆದಮೇಲೆ ಬೇಡ ಹೇಳಿದ, ನಾಳೆ ದಿನ ಪೇಟೆಗೆ ಹೋಗಿ ಡಾಕ್ಟರಿಗೆ ತೋರಿಸಿ ಔಷಧಿ ತರಬೇಕು, ಅಂತ. "ಚುಚ್ಚು ಮದ್ದೇ ಕೊಡಿಸಿಬಿಡೋಣ, ಖರ್ಚು ಹೆಚ್ಚಾದರೂ ಪರವಾಗಿಲ್ಲ" ಅಂತ ಬೇಡನ ಹೆಂಡತಿ ಸೇರಿಸಿದಳು.

ಮಾರನೆ ದಿನ ಪೇಟೆಗೆ ಮಗೂನ ಕರೆದುಕೊಂಡು ಹೋದರು. ಇವರ ಹತ್ತಿರ ಇದ್ದ ಹಣವನ್ನೆಲ್ಲಾ ಕಸಿದುಕೊಂಡು, ಚುಚ್ಚುಮದ್ದು ಹಾಕಿ, ಮೂರು ದಿನಗಳ

ಔಷಧಿಕೊಟ್ಟು, ನಾಯಿಕೆಮ್ಮು ನಿಮ್ಮ ಮಗುವಿಗೆ, ಮೂರುತಿಂಗಳು ಕಾಡುತ್ತೆ ಹುಷಾರಾಗಿರಿ ಅಂತ ವೈದ್ಯರು ಹೇಳಿಕಳಿಸಿದರಂತೆ.

ಹಿಂದಿರುಗುವಾಗ "ಕಾಡಿನಂಚಲ್ಲಿರುವ ನಮ್ಮ ಮಗುವಿಗೆ ನಾಯಿಕೆಮ್ಮು ಹೇಗೆ ಬಂದಿರಬಹುದು" ಎಂದು ಬೇಡ ಹೇಳಿದನಂತೆ. "ನಮ್ಮನೆ ನಾಯಿ ಕಾಡಿನಲ್ಲೆಲ್ಲ ಸಿಕ್ಕುಸಿಕ್ಕಿದ ಹೆಣ್ಣುನಾಯಿಗಳ ಜತೆಯಲ್ಲೆಲ್ಲಾ ಅಲ್ಲೆ ಹೊಡೆದು ಬರುತ್ತೆ. ಏನೇನು ಖಾಯಿಲೆ ಅಂಟಿಸಿಕೊಂಡು ಬಂದಿದೆಯೊ? ಅದರಿಂದಲೇ ನಮ್ಮ ಮಗುವಿಗೂ ಬಂದಿರಬೇಕು" ಎಂದಳಂತೆ ಬೇಡನ ಹೆಂಡತಿ.

ಗುಡಿಸಲಿಗೆ ಬರೋಹೊತ್ತಿಗೆ ಮೂರುವರ್ಷದ ಮಗುವನ್ನು ಹೊತ್ತೂ ಹೊತ್ತು ಬೇಡನಿಗೆ ಬಲು ದಣುವಾಗಿತ್ತಂತೆ. ಇನ್ನು ಮೂರುತಿಂಗಳು ನಾಯಿ ಕೆಮ್ಮು ಮಗುವನ್ನು ಕಾಡಿದರೆ, ನಿದ್ರೆ ಹೇಗೆ ಮಾಡೋದಪ್ಪ ಅಂತ ಯೋಚನೆಯು ಬಂದಿತ್ತಂತೆ. ಪಾಪ! ಬಯಕೆಯಿಂದ ನರಳೋ ಹೆಂಡತಿ ಕೈಲಿ ಮಗುವನ್ನು ಹೇಗೆತಾನೆ ಕೊಟ್ಟಾನು! ಹುಶ್ಯಪ್ಪಾ ಅಂತ ಹೆಂಡತಿ ಬೆವರುತ್ತಾ ಹಿಂದೆ ಬರುತ್ತಿದ್ದಳಂತೆ.

ಗುಡಿಸಲಿಗೆ ಬಂದಾಗ ಎದುರಿಗೆ ನಾಯಿ ಕಂಡಿತಂತೆ. ಏನನ್ನೋ ತಿಂದು ಅದು ಕ್ಯಾಕರಿಸುತ್ತಾ ಇತ್ತಂತೆ. ನೋಡಿ ಅಂದ್ರೆ, ನಾಯಿ ಕೆಮ್ಮುತ್ತಾ ಇದೆ ಎಂದಳಂತೆ ಬೇಡನ ಹೆಂಡತಿ. "ವೈದ್ಯರು ಹೇಳಿದ್ದು ದಿಟ ಅಂದ್ರೆ" ಅಂದಳಂತೆ.

"ಹೌದಲ್ಲೇ! ಈ ಪಾಪಿ ನಾಯಿಯಿಂದಲೇ ನಮ್ಮ ಮಗುವಿಗೆ ನಾಯಿ ಕೆಮ್ಮು ಬಂದಿದ್ದು" ಎಂದು ಬೇಡ ಹೇಳಿದನಂತೆ. ಕೋಪ ಬಂತಂತೆ. ಮಗೂನ ಹಾಸಿಗೆ ಮೇಲೆ ಮಲಗಿಸಿ ಮುಂದಿನ ಬಾಗಿಲ ಹತ್ತಿರಕ್ಕೆ ಬಂದನಂತೆ, ಕೈಝಾಡಿಸುಕ್ಕೆ.

ನಾಯಿ ಬಂದು ಗೊಳ್ ಗೊಳ್ ಅಂತ ಬಾಲ ಆಡಿಸ್ತಾ ನಿಂತುಕೊಂಡಿತಂತೆ. ಕೋಪ ಬಂದಿತ್ತು ಬೇಡನಿಗೆ. ಪಕ್ಕದಲ್ಲೇ ಕೊಡಲಿ ಇತ್ತಂತೆ. "ದರಿದ್ರ ಮುಂಡೇದೆ, ಇಲ್ಲಿ ಬರಬೇಡ ಅಂತ ನಾಯನ್ನು ಗದರಿಸಲು ಕೊಡಲಿ ಎತ್ತಿದನಂತೆ. ಬೆವರಿದ ಅಂಗೈಯಿಂದ ಕೊಡಲಿ ಜಾರಿತಂತೆ. ನೇರನೆ ನಾಯಿನ ತಲೇನ ಗುಮ್ಮಿತಂತೆ. ನಾಯಿ ಸ್ವರ್ಗಕ್ಕೆ ಹೋಯಿತಂತೆ.

ಸ್ವರ್ಗದಲ್ಲಿ ಹೇಳಿತಂತೆ ನಾಯಿ, ಮನುಷ್ಯರು ಕೃತಜ್ಞತೆಯನ್ನೇನೋ ತೋರಿಸುತ್ತಾರೆ, ಹೌದು. ಆದರೆ ಸುದ್ದಿ ಮಾತು ಕೇಳಿ ತಲೆ ಒಡೆದು ಬಿಡ್ತಾರೆ ಅಂತ.

ಎಂದು ನಾಯಿ ಬೇಡನ ಕತೇನ ನವ್ಯ ಅಡುಗೂಲಜ್ಜಿ ಹೇಳಿದಳಂತೆ.

ಕಾಗೆ ಹಾಡಿದ ಕತೆ

ಹಳೇ ಪೇಟೇಲಿ ಒಂದು ಕಾಗೆ ಇತ್ತಂತೆ. ಓದಿದವರು ಬರೆದವರು ಇಂತಹ ವರಿಗೆಲ್ಲಾ ಜ್ಞಾಪಕಾರ್ಥವಾಗಿ ಇಟ್ಟ ಪಿಂಡ ತಿಂದು ಆ ಕಾಗೆ ಬಹಳ ಜಾಣ ತನವನ್ನು ಸಂಪಾದಿಸಿ ಕೊಂಡಿತ್ತಂತೆ. ಬೆಳಗಿನ ಝಾಮು ಎದ್ದು ಫ್ಯಾಕ್ಟರಿಗಳಿಗೆ ಜನ ಹೋಗ್ತಾರಲ್ಲಾ, ಅದೇ ಹೊತ್ತಿಗೆ ಇದೂ ತನ್ನ ಗೂಡು ಬಿಟ್ಟು ಹೊರಟು, ಕಸಾಯಿ ಅಂಗಡಿ ಹತ್ತಿರ, ಕಾಕಾಹೋಟಲುಗಳ ಹಿತ್ತಿಲಿನಲ್ಲಿ, ಮಾರುಕಟ್ಟೆಯ ಪೌಳಿ ಗೋಡೆಯಮೇಲೆ, ಕುಳಿತು ಪಹರೆ ನಡಸಿ, ಸಮಯ ಸಿಕ್ಕಿದಾಗ ದಕ್ಕಿದ್ದನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಸರ್ರಂತ ಹಾರಿ ಹೋಗುತ್ತಿತ್ತಂತೆ. ಆಮೇಲೆ ಎತ್ತರದ ಎಲೆಕ್ಟ್ರಿಕ್ ಕಂಬದ ಅಡ್ಡಗೋಲಿನಬಳಿ ಕುಳಿತು ಆರಾಮವಾಗಿ ತಿನ್ನುತ್ತಿತ್ತಂತೆ.

ಒಂದು ದಿವಸ ಬೆಳಿಗ್ಗೆ ಫ್ಯಾಕ್ಟರಿ ವಿಸಲ್ ಊದಿದಾಗಲೇ ಕಾಗೆಗೆ ಎಚ್ಚರ ವಾಯ್ತಂತೆ. ಹೊತ್ತಾಗಿ ಹೋಯ್ತಲ್ಲಪ್ಪಾ ! ಇಷ್ಟುಹೊತ್ತಿಗೆ ನನ್ನ ಜತೆಯವ ರೆಲ್ಲಾ ಸಿಗಬಹುದಾದ್ದನ್ನು ಗಿಟ್ಟಿಸಿಕೊಂಡು ಹೊರಟು ಹೋಗಿರ್ತಾರೆ, ಇವತ್ತು ಏಕಾದಶಿ ಮಾಡಬೇಕಾಗುತ್ತೇನೋ ಎಂದು ಆತಂಕಪಡುತ್ತ ಮುಖ ತೊಳೆದು ಕೊಂಡಿತಂತೆ. ನಂತರ ನಿತ್ಯ ಯಾತ್ರೆಗೆ ಹೊರಟಿತಂತೆ.

ಹೊರಟಾಗ ಅದಕ್ಕೆ ಮೊದಲು ಸಿಗೋದು ಊರ ಪಾಳುಬಿದ್ದ ಗುಡಿ. ಈಗಿನ ಕಾಲದ ಗುಡಿಗಳಲ್ಲಿ ಕಾಗೆಗೆ ಸಿಗೋ ನೈವೇದ್ಯ ಸೊನ್ನೆ. ಹಾಗಾಗಿ ಸಾಮಾನ್ಯ ವಾಗಿ ಕೆಳಕ್ಕೂ ನೋಡದೆ ಕಾಗೆಯು ಗುಡಿಯಮೇಲೆ ಹಾರಿಹೋಗುವ ಮಾಮೂ ಲಂತೆ. ಆದರೆ ಇವತ್ತು ಕೆಳಗೆ ನೋಡಿತಂತೆ. ಗುಡಿಯಲ್ಲೆಲ್ಲಾ ನಿಶ್ಶಬ್ದ. ಆದರೆ ಗುಡಿಯ ಹೊರಗೆ ತುಳಸಿ ತೋಟದಲ್ಲಿ ಹುಲ್ಲು ಚೆನ್ನಾಗಿ ಬೆಳೆದಿತ್ತಂತೆ. ಆ ಹುಲ್ಲಿನ ಮೇಲೆ ರಸಭರಿತವಾದ ಕಾಗೆಕಡುಬೊಂದು ಅಂಬೆಗಾಲಿಟ್ಟುಕೊಂಡು ಹೋಗುತ್ತಿದ್ದುದು ಕಂಡಿತಂತೆ. ಗುಡಿಯ ಗರುಡಗಂಬದ ಮೇಲೆ ಕಾಗೆ ಕೂತು ಕೊಂಡಿತಂತೆ. ಕಾಗೆಕಡುಬನ್ನೇ ನೋಡಿತಂತೆ.

ಕಾಗೆಕಡುಬು ಅಂದರೆ ಈ ಕಾಲದ ನಿಮಗೆ ತಿಳಿಯುಲ್ಲವೇನೋ ? ತೋಟ ಗಳಲ್ಲಿ ಗಿಡಗಳಿದ್ದಲ್ಲಿ ಕಡುಬಿನಹಾಗೆ ದಪ್ಪನಾಗಿರುವ ಹಚ್ಚಹಸುರಿನ ನೂರೆಂಟು ಕಾಲಿನ ಜರಿಗಳನ್ನು ನೋಡಿಲ್ಲವೇ ? ಎಂಟೆಂಟು ಕಾಲುಗಳನ್ನು ಎತ್ತಿ ಮುಂದಕ್ಕೆ

ಹಾಕಿ ಮೈ ಒಂಕಿಸಿ ನಡೆಯುಲ್ಲವೇ? ಆ ದಪ್ಪ ಜರಿಯಂತಿರುವ ಪ್ರಾಣಿಗಳನ್ನು ಕಂಡರೆ ಕಾಗೆಗೆ ಬಲು ಖುಷಿ. ಕಾಗೆ ಗಣೇಶನ ಪೂಜೆ ಮಾಡುವ ದಿನ ಈ ಕಡು ಬನ್ನೇ ತಲಾಷುಮಾಡಿ ತಂದು ನೈವೇದ್ಯಕ್ಕೆ ಮೊದಲಿಟ್ಟು ಆಮೇಲೆ ಹಬ್ಬದ ಊಟ ಅಂತ ತಿಂದುಬಿಡುತ್ತೆ.

ದೇವಸ್ಥಾನದ ಕಡೆ ದೃಷ್ಟಿ ಹಾಯಿಸಿದ್ದರಿಂದ ಸುಪ್ರೀತನಾದ ಗುಡಿದೇವರು ಈ ಹಬ್ಬದೂಟವನ್ನು ನನಗೆ ನೀಡಿದ ಎಂದು ಕಾಗೆ ತನ್ನ ಮನಸ್ಸಿನಲ್ಲಿ ತಾನೇ ಬೆನ್ನು ತಡವಿಕೊಂಡಿತಂತೆ.

ಕಾಗೆಕಡುಬು ಗರುಡಗಂಬದ ಕಡೆಗೆ ತೆವಳಿಕೊಂಡು ಬಂದಿತಂತೆ. ಮಣ್ಣಿನ ನೆಲದ ಹತ್ತಿರ ಬಂದಾಗ, ಅಯ್ಯೋ ಮಣ್ಣು ಅಂಟಿಕೊಂಡು ಬಿಡುತ್ತೆ ಆಮೇಲೆ ತೊಳೆದು ತಿನ್ನಬೇಕಾಗುತ್ತೆ ಅಂತ ಹೆದರಿ ಕಾಗೆ ಬಾಂಬ್‌ಡೈವ್ ಮಾಡಿ, ಕೊಕ್ಕಿನಿಂದ ಅದನ್ನು ಕಚ್ಚಿಕೊಂಡು ಗರುಡಗಂಬದ ಮೇಲೆ ಹೋಗಿ ಕೂತುಕೊಂಡಿತಂತೆ.

ಹಾಗೆ ಕೂತುಕೊಳ್ಳುವಾಗ ಗರುಡಗಂಬದ ಗಂಟೆಗೆ ಕಾಗೆಯ ರೆಕ್ಕೆ ತಾಕಿತಂತೆ. ಗಂಟೆ ಬಡಿದ ಸಪ್ಪಳ ಕೇಳಿಸಿತಂತೆ.

ಈ ಶಬ್ದಾನ ಕೇಳಿ ಗುಡಿಹಿಂದೆ, ಅಡಿಗೆ ಮನೆ ದೊಗರಿನಲ್ಲಿ ವಾಸಮಾಡುತ್ತಿದ್ದ ನರಿ ಕಣ್ಣುಜ್ಜಿಕೊಂಡು ಹೊರಕ್ಕೆ ಬಂದು ನೋಡಿತಂತೆ. ನರಿ ಹಿಂದೆ ಒಂದುಸರ್ತಿ ಬಾಲ ಕಳೆದುಕೊಂಡಿತ್ತು ನೋಡಿ, ಆಗಲೇ ಅದು ಮೀಸೇನೂ ಬೋಳಿಸಿ ದೇವಸ್ಥಾನದ ಪಾಕಶಾಲೆಯ ಹತ್ತಿರ ಬಂದು ತಳ ಊರಿತ್ತಂತೆ. ನೋಡಿದವರೆಲ್ಲರೂ ಇದು ಯಾವುದೋ ಕಂತ್ರಿನಾಯಿ ಅಂತ ಅಂದುಕೊಳ್ತಾ ಇದ್ದರಂತೆ. ಆದರೆ ಹುಟ್ಟುಗುಣ, ನರಿ ಜಾಣತನ, ಎಲ್ಲಿ ಹೋಗುತ್ತೆ?

ನರಿ ಬಂತು, ಗರುಡಗಂಬ ನೋಡಿತು, ಕಾಗೇನ ಕಂಡಿತು. ಕಾಗೆ ಕೊಕ್ಕಿನಲ್ಲಿದ್ದ ಸುಮಾರು ಎಂಟಾಣೆ ಬೆಲೆ ಬಾಳುವ ಕಾಗೆಕಡುಬನ್ನೂ ನೋಡಿತು. ಹಾರವರ ದೇವಸ್ಥಾನದ ಎಂಜಲನ್ನು ತಿನ್ನುತ್ತಿದ್ದ ಆ ನರಿಗೆ ಕಾಗೆಕಡುಬನ್ನು ನೋಡಿ ಬಾಯಲ್ಲಿ ನೀರೂರಿತಂತೆ.

ನರಿ ಉಪಾಯ ಕೇಳಬೇಕೇ? ಅರೆಕ್ಷಣದಲ್ಲಿ ಯೋಚನೆ ಮಾಡಿ, ಗರುಡಗಂಬದ ಹತ್ತಿರ ನಮ್ರವಾಗಿ ಬಂದು ನಿಂತು ಕಾಗೆಯ ಕಡೆ ಕತ್ತೆತ್ತಿ

“ ಎಲೈ ಕಾಕರಾಜನೇ! ನಿನ್ನ ಧ್ವನಿಯನ್ನು ಕೇಳಿ ತುಂಬಾದಿನಗಳಾದುವು.

ಆವತ್ತು ಗುಡಿ ಪೂಜಾರಿಯ ತಿಥಿಮಾಡಿದಾಗ ನೀನು ಹಾಡಿದ್ದು, ನಾನು ಕೇಳಿದ್ದು. ಆಮೇಲಿನಿಂದ ಇಲ್ಲಿ ಯಾರ ತಿಥಿಯೂ ನಡೆದಿಲ್ಲ. ನೀನೂ ಬಂದಿಲ್ಲ. ಇವತ್ತು ನನ್ನ ಪುಣ್ಯ, ದಯವಿಟ್ಟು ಒಂದು ಹಾಡು ಹೇಳು ಪ್ರಭೋ" ಎಂದು ಹಿಂಗಾಲ ಮೇಲೆ ಕುಳಿತು ಕೇಳಿಕೊಂಡಿತಂತೆ.

ಕಾಗೆಗೆ ಬಲು ಖುಷಿಯಾಯಿತಂತೆ. ಹೊತ್ತಾಗಿ ಎದ್ದಿದ್ದರೂ, ಹತ್ತಿರದಲ್ಲೇ ಹಬ್ಬದ ಊಟ ದೊರೆತಿತ್ತು. ಕಾಕರಾಜ ಎಂದು ನರಿ ಮರ್ಯಾದೆ ಮಾಡಿತ್ತು. ನಿನ್ನಹಾಡು ಕೇಳಬೇಕು ಎಂದು ಹೊಗಳಿತ್ತು. ಇನ್ನು ಕೇಳಬೇಕೇ? ಆದರೂ ಬುದ್ಧಿವಂತರಿಗಿಟ್ಟ ಪಿಂಡ ತಿಂದಿತ್ತಲ್ಲಾ ! ಎಲ್ಲಿ ಹೋಗುತ್ತೆ ಜಾಣತನ!

ಕಾಗೆಕಡುಬನ್ನು ಗರುಡಗಂಬದ ಅಡ್ಡಗೋಲಿನ ಮೇಲಿಟ್ಟು, ಕಾಲಿನಿಂದ ಅದನ್ನು ಅಮುಕಿ ಹಿಡಿದು, ಬಾಯಿತೆರೆದು, ಒಂದೆರಡುಸಾರಿ ಸಂಗೀತಗಾರರ ತರಹ ಕ್ಯಾಕರಿಸಿ ಗಂಟಲು ಸರಿಮಾಡಿಕೊಂಡು ಕಾ ಕಾ ಅಂತ ಕರ್ಕಶವಾಗಿ ಕೂಗಿತಂತೆ.

ನಮ್ಮ ತಾತ ಮುತ್ತಾತನ ಕಾಲದ ಕಾಗೆಗೂ ಇಂದಿನ ಪೇಟೆಕಾಗೆಗೂ ಅಜ ಗಜಾಂತರ ವ್ಯತ್ಯಾಸ ಈಗಿನ ಪೇಟೆ ಕಾಗೆಗಳು ತಮಗೆ ಸಿಕ್ಕಿದ್ದನ್ನು ಭದ್ರಮಾಡಿ, ಕಂಡೋರ ಹಣದಲ್ಲಿ ಕಂಪೆನಿಕಟ್ತಾವೆ, ಇವರ ಮುಂದೆ ನಮ್ಮ ಜಾಣತನ ಏನೂ ನಡೆಯುಲ್ಲ ಅಂತ ನರಿ ಬಾಲದ ಉಳಿದ ತುಂಡನ್ನು ಕೆಳಗಿಳಿಸಿ ತನ್ನ ದೊಗರಿಗೆ ಹೋಯಿತಂತೆ.

ಈ ಕಾಲದಲ್ಲಿ ಕಾಗೆ ಹೇಗೆ ಹಾಡುತ್ತೆ ತಿಳಿಯಿತೆ ಮಗು, ಎಂದು ನಮ್ಮ ಅಡುಗೂಲಜ್ಜಿ ಕಾಗೆ ಹಾಡಿದ ಕತೆಯನ್ನು ಹೇಳಿದಳಂತೆ.

ಮುದುಕ ಮಾವಿನ ಸಸಿಯ ಕತೆ

ಒಂದೂರಿನಲ್ಲಿ ಒಬ್ಬ ಪಾಳೇಗಾರ ಇದ್ದನಂತೆ. ಪಾಳೇಗಾರ ಅಂದರೆ ಅವರಪ್ಪ ಪಾಳೇಗಾರ ಆಗಿದ್ದ, ಅವನು ಸತ್ತಾಗ ಇವನು ಪಟ್ಟಕ್ಕೆ ಬಂದ, ಅಂತಲ್ಲ. ಸ್ವಶಕ್ತಿಯಿಂದ ಬಹುಮತ ಗಳಿಸಿದ್ದರಿಂದ, ಕೂಗುಮಾರಿ ಅಮರಿಕೊಂಡಿದ್ದರಿಂದ, ಆ ಊರಿನ ವಿಶಿಷ್ಟ ಆಡಳಿತವೂ ಇವನ ಬೆರಳತುದಿಯಲ್ಲಿ ತಾಂಡವವಾಡುತ್ತಿತ್ತಂತೆ.

ಕುದುರೆ ಹತ್ತಿ ಒಂದು ದಿನ ಪಾಳೇಗಾರ ಗಾಳಿಸವಾರಿಗೆ ಹೊರಟನಂತೆ. ಊರಾಚೆ ತೋಟದ ಅಂಚಿನಲ್ಲಿ ಹಣ್ಣು ಹಣ್ಣು ಮುದುಕ ಒಬ್ಬ ಮಾವಿನ ಸಸಿಯನ್ನು ನೆಡುತ್ತಾ ಇದ್ದನಂತೆ.

"ಅಯ್ಯೋ! ಬೆಪ್ಪುಮುದುಕ, ಈ ಸಸಿ ಗಿಡವಾಗಿ ಅದು ಹಣ್ಣುಬಿಡೋ ಹೊತ್ತಿಗೆ ನೀನು ಉದುರಿ ಹೋಗಿರ್ತೀಯಲ್ಲೋ" ಎಂದು ಹೇಳಿ ನಕ್ಕನಂತೆ, ಪಾಳೇಗಾರ.

"ಮಹಾಸ್ವಾಮಿ! ನಮ್ಮ ತಾತ ನೆಟ್ಟ ಮಾವಿನಸಸಿಯು ಈಗ ಫಲಕೊಡ್ತಾ ಇದೆ. ಅದನ್ನು ನಾವೆಲ್ಲಾ ತಿನ್ನುತ್ತಾ ಇದೀವಿ. ನಾನು ನೆಟ್ಟ ಈ ಸಸಿ; ಮೊಮ್ಮಕ್ಕಳ ಕಾಲಕ್ಕೆ ಫಲ ಕೊಡುತ್ತೆ. ಅವರು ತಿಂದು ಸುಖ ಪಡ್ತಾರೆ, ನನ್ನೊಡೆಯಾ" ಅಂದನಂತೆ ಮುದುಕ.

"ಭೇಷ್! ಮುದುಕ. ಪಸಂದ್ ಮಾತಂದೆ. ಬಲುಜಾಣ ನೀನು" ಅಂತ ಪಾಳೇಗಾರ ಹೊಗಳಿ ಹೇಳುತ್ತಾ, "ಯಾರೋ ಅಲ್ಲಿ, ಈ ಮುದುಕನಿಗೆ ಹತ್ತು ಸವರನ್ ಬಹುಮಾನಕೊಡ್ರೊ" ಅಂತ ಕೂಗಿದನಂತೆ. ಪಾಳೆಯಗಾರನ ಹಿಂದೆ ಮಾಮೂಲಾಗಿ ಬರ್‍ತಾಇದ್ದ ಲೇಣಿದೇಣಿ ಆಸಾಮಿ ಮುಂದೆನುಗ್ಗಿ ಸೊಂಟದ ಚೀಲದಿಂದ ಹತ್ತು ಸವರನ್‌ಗಳನ್ನು ತೆಗೆದು ಮುದುಕನಿಗೆ ಕೊಟ್ಟು, ಈ ಕಾಗದದ ಮೇಲೆ ಇಲ್ಲಿ ನಿನ್ನ ಎಡಗೈ ಹೆಬ್ಬೆಟ್ಟು ಒತ್ತು ಎಂದನಂತೆ.

ಹೆಬ್ಬೆಟ್ಟು ಒತ್ತಿದನಂತರ ಮುದುಕ ಅಡ್ಡಬಿದ್ದು "ಮಹಾಸ್ವಾಮಿ; ನಿಮ್ಮ ಕೃಪಾಕಟಾಕ್ಷ ಈ ಸಸಿಯಮೇಲೆ ಬಿತ್ತು. ಆ ಕಾರಣದಿಂದ ಈಗಲೇ ಹತ್ತು ಸವರನ್ ಫಲ ಕೊಟ್ಟಿತು. ಮೊಮ್ಮಗನ ತನಕ ಫಲಕ್ಕೆ ಕಾಯಬೇಕಾಗಿಲ್ಲ" ಎಂದು ತಿರುಗಿ ಅಡ್ಡಬಿದ್ದನಂತೆ.

ಪಾಳೆಯಗಾರನಿಗೆ ತುಂಬಾ ಖುಷಿಯಾಯ್ತಂತೆ. "ಎಂಥ ಚೂಟಿ ಮಾತೆಲ್ಲಾ ಆಡ್ತಿ, ನಂಗೆ ಬೋ ಖುಸಿಯಾಯ್ತು." ಅಂತ ಉದ್ಗಾರ ತೆಗೆದನಂತೆ. ಕೃಪಾ ಕಟಾಕ್ಷ ಅನ್ನೋಮಾತನ್ನೇ ಅವ ಕೇಳಿತ್ತಿಲ್ಲವಂತೆ. ತನ್ನ ಅಜ್ಞಾನಾನ ಮುಚ್ಚಲು ಈ ರೀತಿ ಹೇಳಿ "ಇನ್ನೊಂದು ಹತ್ತು ಸವರನ್ ಕೊಡ್ರೋ" ಅಂದನಂತೆ. ಲೇಣಿದೇಣಿ ಆದ್ಮಿ ತಿರುಗಿ ಮುಂದೆಬಂದು ಹಣ ಕೊಟ್ಟು ಹೆಬ್ಬೆಟ್ಟು ಒತ್ತಿಸಿದನಂತೆ.

"ಮುಂದಕ್ಕೆ ಗಾಳಿಸವಾರಿ ಬೆಳೆಸೋಣವೇ, ಪ್ರಭು; ಇಲ್ಲದೆ ಇದ್ದರೆ ಈ ಮುದುಕ ಇವತ್ತು ನೆಟ್ಟಸಸಿ ಎರಡು ಫಲ ಕೊಡ್ತು" ಎಂದು ಅಂದೇ ಅಂತಾನೆ ಎಂದನಂತೆ, ಪಾಳೆಯಗಾರನ ಮುಖ ನೋಡುತ್ತಾ, ಲೇಣಿದೇಣಿ ಆಸಾಮಿ.

ಆಗ ಪಾಳೆಯಗಾರನ ದೃಷ್ಟಿ ತೋಟದ ಗುಡಿಸಿಲಿನ ಬಾಗಿಲಬಳಿ ಕಟ್ಟಿದ್ದ ಕುದುರೆಯಮೇಲೆ ನೆಟ್ಟಿತ್ತಂತೆ. ಲೇಣಿದೇಣಿ ಅದ್ಮಿ ಹೇಳಿದ್ದು ಕೇಳಿಸದೆ ಇದ್ದರೂ, ಕುದುರೆ ಮುಂದೆ ನಡೆದಿದ್ದರಿಂದ ಗಾಳಿಸವಾರಿಯನ್ನು ಮುಂದುವರೆಸಿದನಂತೆ.

ನೆಲತಲೆ ಮುಟ್ಟಿಕೊಂಡು ಮುದುಕ ಡೊಗ್ಗುಸಲಾಂ ಹಾಕಿದನಂತೆ.

ಮುಂದು ನಡೆದಾಗ "ಗುಡಿಸಿಲತಾವ ಕಟ್ಟಿದ್ದ ಕುದುರೆ ಬಲು ಚೆಂದಾಗಿತ್ತಲ್ವ" ಎಂದು ಪಾಳೆಯಗಾರ ಹೇಳಿದನಂತೆ.

"ಅದಕ್ಕೊಂದುಪಾಯ ಇದೆ. ಮಹಾಸ್ವಾಮಿ. ನನಗೆ ಜವಾಬ್ದಾರಿ ವಹಿಸಿದರೆ ನಾನು ನೋಡಿಕೋತೀನಿ" ಎಂದನಂತೆ ಲೇಣಿದೇಣಿ ಮನುಷ್ಯ.

"ಸೈ" ಅಂದನಂತೆ ಪಾಳೆಯಗಾರ.

ಗಾಳಿಸವಾರಿಯಿಂದ ಹಿಂತಿರುಗುವಾಗ ಅದೇ ಮುದುಕ ಅಲ್ಲೇ ಇದ್ದನಂತೆ. ಪಾಳೆಯಗಾರರ ಪರಿವಾರ ನೋಡಿ ಅಡ್ಡಬಿದ್ದನಂತೆ.

ಆಗ ಲೇಣಿದೇಣಿ ಮನುಷ್ಯ ಮುಂದೆಹೋಗಿ "ಹೋದವರ್ಷದ ವರಮಾನದ ಮೇಲೆ ತೆರಿಗೆ ಕಟ್ಟಿದ್ದೀಯಾ" ಎಂದು ಕೇಳಿದನಂತೆ.

"ಇಲ್ಲ, ನನ್ನೊಡೆಯಾ, ತೆರಿಗೇ ಕೊಡೋ ಅಷ್ಟು ವರಮಾನ ನಂಗೆ ಇಲ್ಲ" ಎಂದನಂತೆ ಮುದುಕ.

"ಕಾನೂನು ಗೊತ್ತಿಲ್ಲವೇ? ಎಕರೆಗಿಷ್ಟು ಅಂತ ತೆರಿಗೆಕೊಡಬೇಕು ಅಂತ" ಎಂದು ಗದರಿಸಿಕೊಂಡನಂತೆ. ಆಮೇಲೆ ಪಾಳೆಯಗಾರರ ಕಡೆ ತಿರುಗಿ

"ಮಹಾಪ್ರಭೋ, ಈತನ ತೋಟಕ್ಕೆ ಮೂವತ್ತು ಸವರನ್ ತೆರಿಗೆ ಬಾಕಿ ಇದೆ. "ಏನು ಅಪ್ಪಣೆ" ಎಂದನಂತೆ.

"ಕಾನೂನು ಪ್ರಕಾರ ಸುಲಿಗೆಮಾಡು" ಎಂದನಂತೆ ಪಾಳೆಯಗಾರ. ಮುದುಕನ್ನ ಒದ್ದು, ಇದ್ದ ಇಪ್ಪತ್ತು ಸವರನ್ ಕಿತ್ತುಕೊಂಡು, ಇಷ್ಟೇ ಇರೋದು ಬಾಕಿ ಹತ್ತುಸವರನ್ನಿಗೆ ಏನಪ್ಪಣೆ? ಯಾವುದಾದರೂ ಚರ ಆಸ್ತಿಯನ್ನು ಮುಟ್ಟು ಗೋಲು ಹಾಕಿಕೊಳ್ಳೋಣವೇ" ಎಂದನಂತೆ.

ಸೈ ಅಂದನಂತೆ ಪಾಳೆಯಗಾರ. ಪರಿವಾರದಲ್ಲೊಬ್ಬ ಓಡಿಹೋಗಿ ಗುಡಿಸಲು ಬಳಿ ಕಟ್ಟಿದ್ದ ಕುದುರೇನ ಬಿಚ್ಚಿಕೊಂಡು ಬಂದನಂತೆ. ಪಾಳೆಯಗಾರ ಪರಿವಾರದೊಡನೆ ಮನೆಗೆ ಹೋದನಂತೆ.

"ಮನೆದೇವರೇ! ನಿನಗೆ ಕೈಮುಗಿದೆ! ಹೊರಗಡೆ ಕಟ್ಟಿದ್ದೆ ಕುದುರೇನ ಕಸಿದುಕೊಂಡು ಹೋದರು, ನನ್ನ ಪುಣ್ಯ. ಮೊಮ್ಮಗಳು ಕಾಲೇಜಿಂದ ಬರೋ ಹೊತ್ತಿಗೆ ಇವರೂ ಬಂದಿದ್ದರೆ!" ಅಂತ ಮುದುಕ ಮನಸ್ಸಿನಲ್ಲೇ ದೇವರಿಗೆ ವಂದನೆ ಮಾಡಿದನಂತೆ.

ಎಂದು ನನ್ನ ಅಡುಗೂಲಜ್ಜಿ ಮುದುಕ ಮಾವಿನ ಸಸಿ ಕತೆ ಹೇಳಿದಳಂತೆ.

ಮೇಕೆ ಬಾಯಿಗೆ ಮೊಸರನ್ನದ ಕತೆ

ಇಂದಾನೊಂದು ಕಾಲದಲ್ಲಿ ಗುಮಾಸ್ತ ಒಬ್ಬನಿದ್ದನಂತೆ. ಅವನು ಊರ ಪೌರ ಸಭೆಯಲ್ಲಿ ಇಂದಾ–ಗೆ ಪುಸ್ತಕವನ್ನು ನೋಡಿಕೋತಾ ಇದ್ದನಂತೆ. ಹದಿನೈದು ಇಪ್ಪತ್ತು ದಿನಕ್ಕೊಂದು ಸರ್ತಿ ಅವನು ಕ್ಷೌರ ಮಾಡಿಸಿಕೊಳ್ಳುತ್ತಿದ್ದನಂತೆ. ಬೆಳೆದ ಗಡ್ಡವಾದರೋ ಪುರುಚುಲು ಪುರುಚುಲಾಗಿ ಬೆಳೆಯುತ್ತಿತ್ತಂತೆ. ಈ ಗಡ್ಡ ನೋಡಿ ಜತೆಯವರೆಲ್ಲರೂ ಮೇಕೆ ಎಂದು ಅವನನ್ನು ಅಪಹಾಸ್ಯ ಮಾಡುತ್ತಿದ್ದರಂತೆ. ಸಾಧುಸ್ವಭಾವ ಅವನದು. ಯಾರೇನಂದರೂ ತಲೆತಗ್ಗಿಸಿ ನಕ್ಕು ಬಿಡುತ್ತಿದ್ದನಂತೆ. ಪೌರಸಭೆ ಅಧ್ಯಕ್ಷರಿಗೆ ಇವನನ್ನು ಕಂಡರೆ ಬಹಳ ಪ್ರೀತಿಯಂತೆ. ಹೇಳಿದಹಾಗೆ ಕೇಳ್ತಾನೆ, ಮನೆ ಕೆಲಸ ಮಾಡಿಕೊಡ್ತಾನೆ, ಎಷ್ಟು ದುಡಿಸಿದರೂ ಎದುರು ಬೀಳುಲ್ಲ ಎಂದು ಅವರಿಗೆ ಖುಷಿಯಂತೆ.

ಅದೇ ಕಚೇರಿಯಲ್ಲಿ ಲೆಕ್ಕದ ಗುಮಾಸ್ತೆ ಒಬ್ಬನಿದ್ದನಂತೆ. ಬಲು ಘಾಟಿ ಅಂತೆ. ಪಾದರಸ ಹರಿದ ಹಾಗೆ ಅತ್ತ ಇತ್ತ ಸುತ್ತ ಓಡಾಡೋನಂತೆ. ಎಲ್ಲರ ಕೆಲಸದಲ್ಲೂ ಕೈ ಹಾಕೋನಂತೆ. ಹೆಸರು ಹನುಮಂತರಾಯ. ಹೆಸರಿಗೆ ತಕ್ಕಂತೆ ಕಪಿಚೇಷ್ಟೆ ಮಾಡ್ತಾ ಇರೋನಂತೆ. ಇಷ್ಟೆಲ್ಲಾ ತಂಟೆಕೋರನಾದರೂ ಅಧ್ಯಕ್ಷರಿಗೆ ಇವನನ್ನು ಕಂಡರೆ ಸ್ವಲ್ಪ ಮೆಚ್ಚುಗೆಯೇ ಇತ್ತಂತೆ. ಯಾಕೆ ಅಂದರೆ ಯಾವ ಖರ್ಚು ಯಾರು ಹೇಗೇ ಮಾಡಿರಲಿ, ಇವ ಬರೆದಿಡೋವಾಗ ಸಮಂಜಸವಾಗಿ ಕಾನೂನು ಪ್ರಕಾರ ಬರೆದಿಡ್ತಾಇದ್ದನಂತೆ. ಯಾವ ಆಡಿಟರ್ ಬರಲಿ, ಲೆಕ್ಕಪತ್ರ ಸರಿಯಾಗಿದೆ ಅಂತ ಷರಾ ಬರೆದು ಹೋಗ್ತಿದ್ದನಂತೆ.

ಇಂದಾ–ಗೆ ಗುಮಾಸ್ತೇನೂ, ಹನುಮಂತರಾಯನೂ ಆಗಿಂದಾಗ್ಗೆ ಅಧ್ಯಕ್ಷರ ಮನೆಯಲ್ಲಿ, ಪೌರಸಭಾ ಕಚೇರಿಯಲ್ಲಿ, ಹರಿಕತೆ ಮಂದಿರದಲ್ಲಿ ಭೇಟಿಯಾಗುತ್ತಿದ್ದರಂತೆ. ಅಲ್ಲದೆ ಅಕ್ಕಪಕ್ಕದ ಮನೇಲಿ ವಾಸಮಾಡಿಕೊಂಡಿದ್ದರಂತೆ. ಹೀಗಾಗಿ ಇಬ್ಬರಿಗೂ ಸ್ನೇಹ ಬೆಳೆದಿತ್ತಂತೆ. ಎಷ್ಟೋ ದಿವಸ ಇಂದಾ–ಗೆ ಗುಮಾಸ್ತೆ ಮೊಸರನ್ನದ ಬುತ್ತೀನ ಮನೆಯಿಂದ ಕಟ್ಟಿಸಿಕೊಂಡು ಬಂದು, ಮಧ್ಯಾಹ್ನ ಕಚೇರೀಲಿ ತಿನ್ನೋವಾಗ, ಹನುಮಂತರಾಯನಿಗೂ ಎರಡು ತುತ್ತು ಕೊಡ್ತಾ ಇದ್ದನಂತೆ. ತಿನ್ನೋವಾಗ ತಿಂದುಬಿಟ್ಟು "ಕತೇಲಿ ಮೇಕೆಬಾಯಿಗೆ ಮೊಸರನ್ನ ಒರೆಸಿ,

ಕೋತೀನೇ ಮೊಸರನ್ನ ತಿಂದುಬಿಡ್ತಿತ್ತು. ಈಗ ಮೇಕೇನೆ ಮೊಸರನ್ನ ತಿಂದು ಎರಡು ತುತ್ತು ಕೋತೀಗೆ ಕೊಡ್ತಾ ಇದೆ. ಕಾಲ ಕೆಟ್ಟುಹೋಯ್ತು, ಅಥವಾ ಕಾಲ ಪ್ರಗತಿ ಹೊಂದಿದೆ, ಅಲ್ಲವೇನೋ ಮೇಕೆ" ಅಂತ ಹಾಸ್ಯಮಾಡ್ತಾ ಇದ್ದನಂತೆ ಹನುಮಂತರಾಯ.

ಹನುಮಂತರಾಯ ಸ್ವಲ್ಪ ಖಯಾಲಿ ಮನುಷ್ಯ ಅಂತ ಆಗಲೇ ಹೇಳಿದೆವಲ್ಲ! ರಾಮಾಯಣದಲ್ಲಿ ಇವನು ಮುಖ್ಯ ಪಾತ್ರವಹಿಸಿದ್ದರೂ ಕೂಡ, ಈಗ ಹನುಮಂತ ರಾಯನಿಗೆ ಮಹಾಭಾರತದ ಧರ್ಮರಾಯನಲ್ಲೇ ಮೆಚ್ಚುಗೆ ಮೂಡಿತ್ತಂತೆ. ಮನೆ ಮಠ ಮಡದಿ ಎಲ್ಲವನ್ನೂ ಬಾಜಿ ಇಟ್ಟು ಜೂಜಾಡಿದನಲ್ಲ, ಗಂಡಸು ಅಂದರೆ ಅವನೇ! ಜೂಜು ಆಡಿದ ಹಾಗೂ ಆಯ್ತು " ಸಂಕೋಲೆಗಳನ್ನು ಕಳೆದುಕೊಂಡ ಹಾಗೂ ಆಯಿತು. ಅವನ ಹಾಗೆ ನಾನು ಸಾಧಿಸುಕ್ಕೆ ಆಗುಲ್ಲ, ಏಕೆ ಅಂದರೆ ನನಗೆ ಹೆಂಡತಿ ಇಲ್ಲ. ಆದರೂ ಕುದುರೆಬಾಲ ಹಿಡಿದು ಹಾರೋ ಪಾರಿವಾಳ ನೋಡಿ, ದಾಳ ಉರುಳಿಸಿ, ಜೂಜು ಆಡಬಹುದಲ್ಲ" ಅಂತ ಹನುಮಂತರಾಯ ಜೂಜಾಡುಕ್ಕೆ ಕಳ್ಳತನದಲ್ಲಿ ಶುರುಮಾಡಿದನಂತೆ. ಈ ಖಯಾಲಿ ಶುರುವಾದ ಮೇಲೆ ಯಾವನಿಗೆ ತಾನೆ ಸಾಕಷ್ಟು ಹಣ ಇರುತ್ತೆ? ಹಾಗಾಗಿ ಪೌರಸಭೆಯಲ್ಲಿ ಲೆಕ್ಕಪತ್ರ ಸರಿಯಾಗಿಟ್ಟರೂ, ಹಣಾನ ಮಾತ್ರ ತಾನೇ ಮುಕ್ಕಿಬಿಡ್ತಾ ಇದ್ದನಂತೆ. ಮುಕ್ಕಿದ ಹಣವೆಲ್ಲಾ ಜೂಜಿನ ಬಾವೀಗೆ ಬೀಳ್ತಾ ಇತ್ತು. ಇವನು ಯಥಾ ಪ್ರಕಾರ ಹರುಕಲು ಅಂಗಿ, ತೇಪೆ ಷರ್ಟು, ಮಾಸಿದ ಪಂಚೆಯಲ್ಲೇ ಶೋಭಾಯ ಮಾನವಾಗಿದ್ದನಂತೆ. ಆದ್ದರಿಂದಲೇ ಇವನ ಮೇಲೆ ಯಾರಿಗೂ ಅನುಮಾನವೇ ಬರಲಿಲ್ಲವಂತೆ.

ವರ್ಷದ ಕೊನೆ ಹೊತ್ತಿಗೆ ಯಥಾಪ್ರಕಾರ ಆಡಿಟರ್ ಬಂದರು. ಆದರೆ ಈ ಸರ್ತಿ ಬಂದ ಆಡಿಟರ್ ಹೊಸಬರಂತೆ. ಹೊಸ ಅಗಸನ ತರಹ ಅವರು ಲೇಖಣೀನ ಎತ್ತಿ ಎತ್ತಿ ಕುಕ್ಕಿ ಕುಕ್ಕಿ ಟಿಕ್ ಮಾಡುತ್ತಿದ್ದರಂತೆ. ಪೌರಸಭೆಯ ಲೆಕ್ಕ ಪತ್ರಗಳೆಲ್ಲಾ ಸರಿಯಾಗಿತ್ತು. ಆದರೆ ಪೌರಸಭೆಗೆ ಪಾವತಿಮಾಡಿದ ಹಣಕ್ಕೆ ಇಂದಾ–ಗೆ ಗುಮಾಸ್ತೆ ಸಹಿ ಹಾಕಿ ರಸೀತಿ ಬರೆದಿದ್ದನ್ನು ಗಮನಿಸಿದರಂತೆ. ಪ್ರಾಯದ ಆಡಿಟರು, ಇನ್ನೂ ಮದುವೆಯಾಗಿತ್ತಿಲ್ಲ ಅವರಿಗೆ, ಅದಕ್ಕೇ ಅವರ ಕೊಂಡಿ ಹರಿತವಾಗಿತ್ತು. ಇಂದಾ–ಗೆ ಗುಮಾಸ್ತೆ ಸಹಿ ಹಾಕಿದ ರಸೀತಿಗಳನ್ನೆಲ್ಲಾ

ಒಟ್ಟುಗೂಡಿಸಿ ಲೆಕ್ಕ ನೋಡಿದರೆ, ಇಪ್ಪತ್ತು ಸಾವಿರದ ಹತ್ತಿರ ಹತ್ತಿರಕ್ಕೆ ಬಂದಿತ್ತಂತೆ.

ಇಂದಾ–ಗೆ ಗುಮಾಸ್ತೆ ಯಾಕೆ ರಸೀದಿ ಬರೆದುಕೊಟ್ಟ ಅಂತ ಆಡಿಟರಿಗೆ ಅನುಮಾನ ಬಂತಂತೆ. ಲೆಕ್ಕದ ತಪಾಸಣೆ ಆಯಿತು. ಆದರೆ ಬೊಕ್ಕಸದಲ್ಲಿರ ಬೇಕಾದ ಹಣದ ತಪಾಸಣೆ ಮಾಡೋಣ ಅಂತ ಹೊರಟರಂತೆ. ಬೊಕ್ಕಸದಲ್ಲಿ ಏನಿದೆ? ಮೂರು ಹೆಗ್ಗಣಗಳು!

ಅಧ್ಯಕ್ಷರನ್ನು ಭೇಟಿಯಾಗಿ ನಿಮ್ಮ ಕಚೇರಿಯಲ್ಲಿ ಹೀಗೆ ಇಪ್ಪತ್ತು ಸಾವಿರ ಕ್ಕಿಂತ ಹೆಚ್ಚಾಗಿ ಛಪಾವಣೆ ಆದಹಾಗಿದೆ; ನೀವು ಹುಷಾರಾಗಿರಬೇಕಾಗಿತ್ತು ಎಂದು ವಿವರಗಳನ್ನೆಲ್ಲಾ ಕೊಟ್ಟರಂತೆ.

"ಏನಯ್ಯಾ! ಹನುಮಂತರಾಯ! ಜಾಣ ನೀನು ಅಂತಿದ್ದರೆ, ಹೀಗೆ ನನ್ನ ಆಡಳಿತದಲ್ಲಿ ಛಪಾವಣೆ ಸಿಕ್ಕಿ ಹಾಕೋ ಹಾಗೆ ಆಯ್ತಲ್ಲಯ್ಯಾ" ಎಂದು ಗೋಗರೆದರಂತೆ.

"ಛಪಾವಣೆ ಆಗಿಲ್ಲ ಸ್ವಾಮಿ ಆಗಿದ್ದರೂ ಹಣ ಹೋಗಿಲ್ಲ ಸ್ವಾಮಿ. ಇಂದಾ–ಗೆ ಗುಮಾಸ್ತೆ ರಸೀದಿಗಳಿಗೆಲ್ಲಾ ಸಹಿ ಹಾಕಿದ್ದಾರೆ. ಅಂದ ಮೇಲೆ ಹೋದಹಣವನ್ನೆಲ್ಲಾ ಅವರಿಂದ ವಸೂಲ್ ಮಾಡಿಕೊಳ್ಳಬಹುದು, ಅದಕ್ಕೆ ಸಾಕಷ್ಟು ರುಜುವಾತಿದೆ. ಆದರೆ ಸ್ವಾಮಿ, ಮೇಕೆ ಹಾಗಿದಾನೆ, ಸಾಧುಪ್ರಾಣಿ, ತಲೆ ಬಗ್ಗಿಸಿಕೊಂಡೇ ನಡೀತಾನೆ, ಆತ....ಹೀಗೆ....ಛೇ ಛೇ ನಂಬುಕ್ಕಾಗುಲ್ಲ" ಅಂತ ಹನುಮಂತರಾಯ ಚಡಪಡಿಸಿದನಂತೆ.

"ಲೇ! ಮೇಕೆ! ಏನು ಮಾಡಿದೆಯೋ ಅಷ್ಟು ಹಣಾನೂನು" ಅಂತ ಇಂದಾ–ಗೆ ಗುಮಾಸ್ತರನ್ನು ಅಧ್ಯಕ್ಷರು ಕೇಳಿದಾಗ, "ಸ್ವಾಮಿ, ನನಗೊಂದೂ ತಿಳಿಯದು: ಎರಡಕ್ಕೆ ಮೂರಕ್ಕೆ ಹನುಮಂತರಾಯರು ಬಂದು ಇವತ್ತು ಆ ನೌಕರ ಬಂದಿಲ್ಲ, ನಾನು ಸಹಿ ಮಾಡಕೂಡದು, ಅದಕ್ಕೆ ನೀನು ರುಜುಹಾಕು ಅಂತ ಹೇಳ್ತಾ ಇದ್ದರು. ಕಚೇರಿ ಕೆಲಸ ಅಂದರೆ ಎಲ್ಲಾನೂ ಮಾಡಬೇಕು ಅಂತ ನಾನೂ ಗುದ್ದಲಿ ಗುರ್ತಿಡ್ತಾ ಇದ್ದೆ. ಅಷ್ಟೇ ನನಗೆ ತಿಳಿಯೋದು. ಹನುಮಂತರಾಯರು ಅಷ್ಟು ಜಾಣರು. ಅವರು ಹೀಗೆ ಸಿಕ್ಕಿಹಾಕ್ಕೋತ್ತಾರೆ ಅಂತ ಯಾರಿಗೆ ಗೊತ್ತು" ಎಂದು ಹೇಳಿಕೊಂಡನಂತೆ.

ದಸ್ತಗಿರಿ ಮಾಡಿಸಿದರು ಮೇಕೇನ. ರುಜುಹಾಕಿದೀಯೆ ರಸೀದಿಗಳಿಗೆ. ಆ

ಹಣವನ್ನು ಪಡೆದೇ ರುಜುಹಾಕಿರಬೇಕು. ಆ ಹಣವೆಲ್ಲಾ ಎಲ್ಲಿ ಎಂದು ಪೋಲೀಸಿನವರು ಕೇಳುಕ್ಕೆ ಶುರುಮಾಡಿದರಂತೆ. ಪೋಲೀಸಿನವರು ತನಿಖೆ ಮುಗಿಸಿ ನ್ಯಾಯಾಲಯದಲ್ಲಿ ವ್ಯವಹಾರ ನಡೆಸಿ ಬಂದೀಖಾನೆಗೆ ಹಾಕಿಸುವುದಕ್ಕೆ ಒಂದು ತಿಂಗಳಾಯಿತಂತೆ.

ಒಂದು ತಿಂಗಳು ದಿನವೂ ಹನುಮಂತರಾಯರು ನಿಷ್ಠೆಯಿಂದ ಮೊಸರನ್ನದ ಬುತ್ತೀನ ಇಂದಾ–ಗೆ ಗುಮಾಸ್ತೆ ಮನೆಯಿಂದ, ಪೋಲೀಸ್ ಲಾಕಪ್ಪಿಗೆ, ತಾನೇ ತೆಗೆದುಕೊಂಡು ಹೋಗಿ ಉಣ್ಣಿಸಿ ಬರುತ್ತಿದ್ದರಂತೆ.

ಎಂದು ನಮ್ಮ ಅಡುಗೂಲಜ್ಜಿ ಮೇಕೆ ಬಾಯಿಗೆ ಮೊಸರನ್ನದ ಕತೆ ಹೇಳಿದಳಂತೆ.

ಕಪ್ಪೆ ಮತ್ತು ರಾಜಕುಮಾರಿ ಕತೆ

ಇಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದನಂತೆ. ತುಂಬಾ ಹಣವಿತ್ತಂತೆ ಅವನಿಗೆ. ತುಂಬಾಜನ ಹೆಂಡಿರೂ ಇದ್ದರಂತೆ. ಆದರೂ ಅವನಿಗೆ ಒಬ್ಬಳೇ ಮಗಳಿದ್ದಳಂತೆ. ತಾಯಿ ಚಿಕ್ಕಮ್ಮಂದಿರ ಪೋಷಣೆಯಲ್ಲಿ ರಾಜಕುಮಾರಿ ಸಿಂಧಿಹಸು ಬೆಳೆದಹಾಗೆ ಬಾಲ್ಯದಲ್ಲೇ ಬೆಳೆದಿದ್ದಳಂತೆ. ಅರಮನೆ ಅಂಗಳದಲ್ಲಿ ಒಂದು ದಿವಸ ರಾಜಕುಮಾರಿ ಚೆಂಡನ್ನಿಟ್ಟುಕೊಂಡು ಪುಟಹೊಡೆಯೊ ಆಟ ಆಡುತ್ತಾ ಇದ್ದಳಂತೆ. ಆ ಚೆಂಡು ಒಂದುಸರ್ತಿ ಇವಳು ಬಾರಿಸಿದ ರಭಸಕ್ಕೆ ಅರಮನೆ ಆಚೆಗೆ ಹೋಗಿಬಿಡ್ತಂತೆ. ರಾಜಕುಮಾರಿ ಅದರ ಹಿಂದೇನೇ ಓಡಿದಳಂತೆ. ಚೆಂಡು ಸ್ವಲ್ಪ ದೂರ ಹೋದಾಗ ಎದುರಿಗೆ ಸಿಕ್ಕ ಬಾವೀಲಿ ಬಿದ್ದುಹೋಯ್ತಂತೆ.

ಬಾವಿಕಟ್ಟೆ ಹತ್ತಿರ ನಿಂತುಕೊಂಡು "ನನ್ನ ಚೆಂಡು ಕಳೆದುಹೋಯ್ತು" ಅಂತ ರಾಜಕುಮಾರಿ ಅಳುತ್ತಾ ಇದ್ದಳಂತೆ.

ಬಾವಿ ಒಳಗೆ ಒಂದು ಕಪ್ಪೆ ಇತ್ತಂತೆ. ರಾಜಕುಮಾರಿ ಅತ್ತಿದ್ದು ಅದಕ್ಕೆ ಕೇಳಿಸಿತಂತೆ. ಬಾವಿಯಿಂದ ಹೊರಕ್ಕೆ ಅದು ಕುಪ್ಪಳಿಸಿಕೊಂಡು ಬಂದು "ರಾಜಕುಮಾರಿ! ಯಾಕೆ ಅಳ್ತಾ ಇದಿ" ಎಂದು ಕೇಳಿತಂತೆ. "ಹೀಗೆ, ನನ್ನ ಚೆಂಡು ಬಾವೀಲಿ ಬಿದ್ದುಹೋಯ್ತು" ಎಂದು ರಾಜಕುಮಾರಿ ಹೇಳಿದಳಂತೆ. "ಅದಕ್ಕೆ ಯಾಕೆ ಅಳ್ತಿ, ನಾನು ಚೆಂಡು ತಂದುಕೊಡ್ತೀನಿ, ಆದರೆ ನನ್ನನ್ನು ನೀನು ಮದುವೆ ಮಾಡಿಕೋಬೇಕು" ಎಂದಿತಂತೆ ಕಪ್ಪೆ.

"ಓಹೋ ಅದಕ್ಕೇನು ಆಗಬಹುದು" ಎಂದಳಂತೆ ರಾಜಕುಮಾರಿ. ರಾಜರಾಗಲೀ ರಾಜ್ಯಾಡಳಿತ ನಡೆಸೋರಾಗಲೀ ರಾಜಕುಮಾರಿಯರಾಗಲಿ, ಆಡಿದ ಮಾತಿನಂತೆ ಯಾವಾಗತಾನೆ ನಡೆದುಕೊಂಡಿದ್ದಾರೆ! ಅಲ್ಲದೆ ಕಪ್ಪೇನ ಯಾರಾದರೂ ಮದುವೆ ಮಾಡಿಕೊಳ್ಳುತ್ತಾರೆಯೇ? ರಾಜ್ಯದ ಯಾವ ಶಾಸನ ತಾನೆ ಅದಕ್ಕೆ ಸಮ್ಮತಿ ಕೊಡುತ್ತದೆ?

ಕಪ್ಪೆ ಬಾವಿಗೆ ಕುಪ್ಪಳಿಸಿತಂತೆ. ಚೆಂಡನ್ನು ಬಾಯಲ್ಲಿ ಕಚ್ಚಿಕೊಂಡು ಬಂದು ರಾಜಕುಮಾರಿಗೆ ಕೊಟ್ಟಿತಂತೆ. ಚೆಂಡು ಕೈಗೆ ಸಿಕ್ಕಿದ ತಕ್ಷಣ ರಾಜಕುಮಾರಿ ಅರಮನೆಗೆ ಓಡಿಬಿಟ್ಟಳಂತೆ. ಬಿಡಬಾರದು ಇವಳನ್ನ ಅಂತ ಕಪ್ಪೆ ಕುಪ್ಪಳಿಸುತ್ತಾ

ಅರಮನೆಗೆ ಬಂದಿತಂತೆ. ರಾಜನ್ನ ಕಂಡಿತಂತೆ. "ಹೀಗೆಲ್ಲಾ ಆಯಿತು ಇವತ್ತು. ನಿನ್ನ ಮಗಳು ನನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ಭಾಷೆಕೊಟ್ಟು, ಮೋಸಮಾಡಿದಳು" ಎಂದು ಅಹವಾಲು ಹೇಳಿಕೊಂಡಿತಂತೆ.

ರಾಜ ಮಗಳನ್ನು ಕರೆಸಿ ಕೇಳಿದನಂತೆ. ಹ್ಞೂ ಅಪ್ಪ ಅಂತ ಅವಳು ಹೇಳಿದ ಳಂತೆ. ಸರಿ! ಕೊಟ್ಟಮಾತಿಗೆ ತಪ್ಪಬಾರದು, ಸಿಕ್ಕ ವರವನ್ನು ಬಿಡಲುಬಾರದು ಎಂದು ಹೇಳಿ ರಾಜ ಮಗಳ ಮದುವೆಗೆ ಏರ್ಪಾಡು ಮಾಡಿದನಂತೆ. ಕಪ್ಪೆ ಪಕ್ಕ ದಲ್ಲಿ ರಾಜಕುಮಾರಿ ಕೂತುಕೊಂಡಳಂತೆ. ಪುರೋಹಿತರು ಮಂತ್ರಾಕ್ಷತೆ ಚೆಲ್ಲಿದ ರಂತೆ.



ಏನಾಶ್ಚರ್ಯ! ಕಪ್ಪೆ ಮಾಯವಾಗಿ ಸ್ಫುರದ್ರೂಪಿಯಾದ ರಾಜಕುಮಾರ ಅಲ್ಲಿ ನಿಂತುಕೊಂಡನಂತೆ. ರಾಜನಿಗೆ ರಾಜಕುಮಾರೀಗೆ, ರಾಜಕುಮಾರಿಯ ಚಿಕ್ಕಮ್ಮಂದಿರಿಗೆ ಎಲ್ಲರಿಗೂ ಬಲು ಖುಷಿಯಾಯ್ತಂತೆ.

ಅಲ್ಲಿತನಕ ಹಳೆಯ ಕತೇನೇ. ಆದರೆ ಆ ರಾತ್ರಿ ಬೇರುಮನೆಯಲ್ಲಿ ರಾಜ ಕುಮಾರಿ ಗಂಡನ ಜತೆಗೆ ಚಕ್ಕಂದ ಆಡುಕ್ಕೆ ಕುಳಿತಳಂತೆ

"ನೋಡಿ, ಅಂದ್ರೆ, ನಮ್ಮಪ್ಪನಿಗೆ ಪುಳಿಯೋಗರೆ ಅಂದರೆ ಪಂಚಪ್ರಾಣ.

ನಮ್ಮ ನಾಲ್ಕನೇ ಚಿಕ್ಕಮ್ಮ ದೇವಸ್ಥಾನದಲ್ಲಿ ಹುಟ್ಟಿದೋಳು, ಆಕೆ ಪುಳಿಯೋಗರೆ ಮಾಡಿದ ದಿವಸ ನಮ್ಮಪ್ಪನಿಗೆ ಸ್ವರ್ಗಸುಖ. ನನಗೂ ಪುಳಿಯೋಗರೆ ಅಂದರೆ ಬಲು ಖುಷಿ. ನಾಳೆನಾಡಿದ್ದರಲ್ಲಿ ನಿಮಗೂ ಆಕೆ ಕೈಲಿ ಮಾಡಿಸಿಕೊಡ್ತೀನಿ"

"ನೋಡಿ ಅಂದ್ರೆ, ನಮ್ಮ ಅಮ್ಮನಿಗೆ ಸಕ್ಕರೆ ಪೊಂಗಲು ಅಂದರೆ ಬಲು ಇಷ್ಟ. ನನ್ನ ಎಂಟನೇ ಚಿಕ್ಕಮ್ಮ ಸಕ್ಕರೆ ಪೊಂಗಲು ಮಾಡಿದರೆ ಅರಮನೆಯೆಲ್ಲಾ ಘಂ ಅಂತ ತುಂಬುತ್ತೆ. ಮುಂದಿನ ಶುಕ್ರವಾರ ಆಕೆ ಕೈಲಿ ಮಾಡಿಸಿಕೊಡ್ತೀನಿ"

"ನಮ್ಮ ಕರುಹಟ್ಟಿಯಲ್ಲಿ ಒಂದು ಪುಟಾಣಿ ಹಸು ಇದೆ ಅಂದ್ರೆ, ಎಷ್ಟು ಮುದ್ದಾಗಿದೆ ಅಂತೀರಿ! ಅದು ಅಂಬಾ ಅಂದರೆ ತಾಯಿ ಕರೆದಹಾಗೆ ಆಗುತ್ತೆ ಅಂದ್ರೆ"

ಈ ರೀತಿ ಅವಳ ಅಪ್ಪನ ಮನೆ ವೈಭವವನ್ನೆಲ್ಲಾ ಕೊಚ್ಚಿಕೊಳ್ಳೋ ಹೊತ್ತಿಗೆ ಅವಳ ಗಂಡನಿಗೆ ನಿದ್ರೆ ಬಂದುಬಿಟ್ಟಿತ್ತಂತೆ.

ಕತೆಯನ್ನೆಲ್ಲಾ ಮುಗಿಸಿ ರಾಜಕುಮಾರಿ ಪಕ್ಕದಲ್ಲಿ ನೋಡ್ತಾಳೆ. ಗಂಡನಿಗೆ ನಿದ್ರೆ. 'ಸರ್ರಿ' ಅಂತ ಅವಳೂ ಮಲಗಿಕೊಂಡಳಂತೆ. ಮಾತಾಡಿ ಮಾತಾಡಿ ಸುಸ್ತಾಗಿತ್ತು. ಅವಳಿಗೂ ಬೇಗ ನಿದ್ರೆ ಬಂದಿತಂತೆ.

ಬೆಳಗಿನ ಝಾಮ ಅರಮನೆ ಅಳಿಯ ಎದ್ದನಂತೆ. ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿದ್ದ ರಾಜಕುಮಾರೀನ ನೋಡಿದನಂತೆ. ಒಂದು ರಾತ್ರಿ, ಮೊದಲ ರಾತ್ರೀಗೆ ಹೀಗೆ ಬೇಜಾರಾಯಿತು. ಇವಳ ಜತೆ ಬಾಳು ನಡೆಸೋದು ನರಕ ಅಂತ ಅರ್ಥವಾಯ್ತಂತೆ.

ಬೆಳಗಿನ ಝಾಮ ಮಸುಕಿನಲ್ಲೇ ಬೇರುಮನೆಯಿಂದ ಮೆಟ್ಟುಗಾಲಿನಲ್ಲಿ ನಡೆದು ಅರಮನೆ ಅಂಗಳಕ್ಕೆ ಹೋದನಂತೆ. ಅಲ್ಲಿಂದ ಮೆಲ್ಲಗೆ ಪರಾರಿಯಾಗೋಣ ಅಂತ. ಆದರೆ ಆಹೊತ್ತಿಗೆ ರಾಜ ಅಲ್ಲಿಗೆ ಬಂದನಂತೆ.

ಗಂಡು ಗಂಡಸರಲ್ಲಿ ಗುಟ್ಟೇನು ಬಂತು? ಮಾವನಿಗೆ ಹಿಂದಿನ ರಾತ್ರಿಯ ಅನುಭವವನ್ನೆಲ್ಲಾ ಹೇಳಿದನಂತೆ. ನಾನು ಮೊದಲು ರಾಜಕುಮಾರನಾಗಿದ್ದೆ. ಬಾವಿಕಟ್ಟೆಯ ಭೇತಾಳ ಮಾಟಮಾಡಿ ನನ್ನನ್ನು ಕಪ್ಪೆಯನ್ನಾಗಿ ಮಾಡಿತು. ಆಗ ಅದು ರಾಜಕುಮಾರೀನ ಮದುವೆಯಾದರೆ ಶಾಪ ವಿಮೋಚನೆಯಾಗುತ್ತೆ ಅಂತಲೂ ಹೇಳಿತ್ತು. ಕಪ್ಪೆಯಾಗಿದ್ದಾಗ ಬಾವೀಲಿ ನಾನು ವಟ ವಟ ಗುಟ್ಟಿದ್ದೇ ವಟ ವಟ ಗುಟ್ಟಿದ್ದು. ಎಷ್ಟೋ ಸರ್ತಿ ಆ ಭೇತಾಳನೆ ಬಂದು ನಿನ್ನ ವಟ ವಟ

ಕೇಳುಕ್ಕಾಗುಲ್ಲ, ನಿನ್ನ ನಾಲಿಗೆ ಸೇದಿ ಹೋಗಬಾರದೆ ಅಂತ ಹೊಡಕೊಂಡಿದ್ದೂ ಉಂಟು. ನನಗೂ ಪ್ರಾಯ, ತೆರೆದ ಕೊರಲಿಂದ ಅಲವತ್ತುಕೊಳ್ಳುತ್ತಿದ್ದೆ.

ಆದರೆ ಮಾವಯ್ಯ, ನಿಮ್ಮ ಮಗಳು ವಟ ವಟ ಮಾತಾಡುಕ್ಕೆ ಶುರು ಮಾಡಿದರೆ, ಅವಳ ಮುಂದೆ ನಾನು ಮೂಗ. ನನ್ನಿಂದ ಅವಳ ಜತೆ ಬಾಳುಕ್ಕೆ ಸಾಧ್ಯವಿಲ್ಲ. ಅದಕ್ಕೇ ಈಗಲೇ ಓಡಿಹೋಗಿ ಬಾವಿಕಟ್ಟೆ ಭೇತಾಳನಿಗೆ ಅಡ್ಡ ಬಿದ್ದು "ತಿರುಗಿ ಶಾಪ ಕೊಡು, ತಿರುಗಿ ಕಪ್ಪೆ ಆಗ್ತೀನಿ. ಒಂದು ಮಾತನ್ನೂ ಆಡುಲ್ಲ" ಎಂದು ಬೇಡಿಕೋತೀನಿ ಎಂದು ಹೇಳಿಕೊಂಡನಂತೆ.

"ನಿನ್ನ ಕಷ್ಟ ನನಗೆ ಅರ್ಥವಾಯ್ತು ಅಳಿಯನ್ಯೆಯ್ಯ. ಅವರಮ್ಮನ ಜತೇಲಿ ನಾನು ಏಗಿದ್ದೇನೆ. ಅದಕ್ಕೇ ಬೆಳಗಿನ ಝಾಮದ ಚಳಿಯಲ್ಲೂ ಇಲ್ಲಿಗೆ ಶಾಂತವಾಗಿರೋಣ ಅಂತ ನಡುಗ್ತಾ ಬಂದಿದ್ದೀನಿ. ಭೇತಾಳ ನಿನ್ನ ಬೇಡಿಕೆಯನ್ನು ಈಡೇರಿಸಲಿ" ಎಂದು ಹರಸಿ ಕಳಿಸಿದನಂತೆ.

ಅದಕ್ಕೆ ಈಗ ಬಾವೀಲಿ ಕಪ್ಪೆ ಇದ್ದರೂ ವಟ ವಟ ಕೇಳಿಸುಲ್ಲ. ಆದರೆ ತಾಯಿ ಮಗಳ ವಟ ವಟವನ್ನು ತಡೆಯಲಾರದೆ ರಾಜ ಒಂದೊಂದು ಸರ್ತಿ ತಲೆಮೇಲೆ ಕೈ ಇಟ್ಟುಕೊಂಡು ಬಾವಿಕಟ್ಟೆಯ ಮೇಲೆ ಕೊರಗ್ತಾ ಕೂತಿರ್ತಾನೆ.

ಎಂದು ನಮ್ಮ ಅಡುಗೂಲಜ್ಜಿ ಕಪ್ಪೆ ರಾಜಕುಮಾರಿ ಕತೇನ ಹೇಳಿದಳಂತೆ.

ಅಗಸ ಕತ್ತೆ ಮಾರಿದ ಕತೆ

ಇಂದಾನೊಂದು ಊರಿನಲ್ಲಿ ಒಬ್ಬ ಅಗಸ ಇದ್ದನಂತೆ. ಎಲ್ಲರ ಮನೆಗೂ ಹೋಗಿ, ಕೊಟ್ಟ ಕೊಳೆ ಬಟ್ಟೆಗಳನ್ನು ಗಂಟು ಕಟ್ಟಿಕೊಂಡು ಬೆನ್ನಮೇಲೆ ಹಾಕಿ ಹೊತ್ತು ಮನೆಗೆ ತರುತ್ತಿದ್ದನಂತೆ. ಮೂರಕ್ಕೆ ನಾಲ್ಕಕ್ಕೆ ಎಲ್ಲಾ ಕೊಳೆ ಬಟ್ಟೆಗಳನ್ನೂ ದೊಡ್ಡ ಗಂಟುಕಟ್ಟಿ ಕತ್ತೆಮೇಲೆ ಹೊರಿಸಿ ಕೆರೆಗೆ ಹೋಗುತ್ತಿದ್ದನಂತೆ. ಚೌಳು ನೀಲಿ ಹಾಕಿ ಅಲ್ಲಿ ಬಟ್ಟೆಗಳನ್ನೆಲ್ಲಾ ಬೇಯಿಸಿ ಒಗೆದು, ಒಣಗಿಸಿ ಸಂಜೆ ಮುಂದೆ ಮನೆಗೆ ತರುತ್ತಿದ್ದನಂತೆ. ಗಂಡ ಹೆಂಡತಿ ಕೂಡಿ ಒಣಗಿದ ಬಟ್ಟೆಗಳನ್ನೆಲ್ಲಾ ಇಸ್ತ್ರಿ ಮಾಡುತ್ತಿದ್ದರಂತೆ. ಅಗಸರವನು ಮಡಿಬಟ್ಟೆಗಳನ್ನೆಲ್ಲಾ ಮನೆಮನೆಗಳಿಗೆ ಹಂಚಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದನಂತೆ. ಬಟ್ಟೆ ಹರಿದು ಹೋಯಿತು ಅಂತ ಹೊಟ್ಟೆ ಉರಿದ ಮನೆಯವರು ಅಗಸರವನನ್ನು ಹೀನಾಮಾನ ಬೈಯುತ್ತಿದ್ದರಂತೆ.

ಅವನ ಜತೆ ಅಗಸರವರೆಲ್ಲಾ ಈ ಬೈಗಳನ್ನು ಕೇಳಲಾರದೆ ತಮ್ಮ ಹೆಸರನ್ನೇ ಬದಲಾಯಿಸಿಕೊಂಡರಂತೆ. “ಇನ್ನುಮೇಲೆ ನಾವೆಲ್ಲಾ ದೋಬಿಗಳು” ಎಂದು ಘೋಷಿಸಿಕೊಂಡರಂತೆ. “ಇನ್ನುಮೇಲೆ ನಾವು ಇನ್ನೊಬ್ಬರ ಮನೆ ಬಾಗಿಲಿಗೆ ಹೋಗಿ ಕಾಯುವುದಿಲ್ಲ. ಅಂಗಡಿ ತೆಗೀತೀವಿ. ಅಲ್ಲಿಗೆ ಬೇಕಾದವರು ಬಂದು ಮಾಸಿದ ಬಟ್ಟೆಗಳನ್ನು ಕೊಡಲಿ. ವಿಲಾಯ್ತಿಯಿಂದ ಹೊಸ ಮಿಷೀನ್ ತರಿಸಿದ್ದೀವಿ. ಅದರಲ್ಲಿ ನೀರು ಸೋಕಿಸದೆ, ಕೈಲಿ ಮುಟ್ಟದೆ ಒಗೆದು ಕೊಡ್ತೀವಿ” ಎಂದು ಜಾಹೀರಾತು ಮಾಡಿದರಂತೆ. ಹಾಗೇ ನಡಕೊಂಡರಂತೆ. ಜನರೆಲ್ಲಾ ದೋಬಿ ಸೆಲೂನ್‌ಗಳಿಗೆ ಕೊಳೆ ಬಟ್ಟೆಗಳನ್ನು ತಾವೇ ಹೊತ್ತುಕೊಂಡುಹೋಗಲು ಅಭ್ಯಾಸ ಮಾಡಿಕೊಂಡರಂತೆ.

ನಮ್ಮ ಹಳೇ ಅಗಸನಿಗೆ ವಿಲಾಯ್ತಿಯಿಂದ ಮಿಷೀನ್ ತರಿಸುಕ್ಕಾಗಲಿಲ್ಲವಂತೆ. ಹಳೇ ಗಿರಾಕಿಗಳೆಲ್ಲಾ ಬಟ್ಟೆಗಳನ್ನು ನೀನು ಹರೀತೀಯಪ್ಪಾ ! ಹೇಳಿದ ಹೊತ್ತಿಗೆ ಬಟ್ಟೆಗಳನ್ನು ತಂದುಕೊಡುಲ್ಲ, ಮಳೆ ಬಂತು, ಗಾಳಿ ಬೀಸಲಿಲ್ಲ, ಕತ್ತೆಗೆ ಕಾಯಿಲೆ ಬಂದಿತ್ತು ಅಂತ ಏನೇನೋ ನೆಪ ಹೇಳ್ತಿ” ಅಂತ ಹೇಳಿ ಅವನ ಕೈ ಬಿಟ್ಟರಂತೆ.

ಹೀಗಾಗಿ ಅಗಸರವನಿಗೆ ಪಾಪ, ಹೆಂಡತಿ ಹೊಟ್ಟೆಗೆ ಸಂಪಾದಿಸಿ ಹಾಕುವು

ದಕ್ಕೇ ಕಷ್ಟವಾಯಿತಂತೆ. ಅಂದಮೇಲೆ ಕತ್ತೆ ಹೊಟ್ಟೆಗೆ ಏನುತಾನೆ ಹಾಕಾನು? ಕಡೆಗೊಂದು ದಿವಸ ಹೆಂಡತಿ ಹೇಳಿದಳಂತೆ "ಇವತ್ತು ರಾಗಿ ಹಿಟ್ಟೂ ಇಲ್ಲ, ಉಪ್ಪೂ ಇಲ್ಲ, ಕತ್ತೇನಾದರೂ ಮಾರಿಬಿಡಿ. ಆ ದುಡ್ಡಿನಲ್ಲಿ ಆದಷ್ಟು ದಿವಸ ಕಾಲ ಹಾಕೋಣ. ಆಮೇಲೆ ಇನ್ನೇನಾದರೂ ಯೋಚನೆ ಮಾಡೋಣ" ಅಂತ. ಅಗಸರವನು ಒಪ್ಪಿದನಂತೆ. ಮಾರನೆ ದಿನವೇ ಕತ್ತೇನ ಹೊಡಕೊಂಡು ಸಂತೇಗೆ ಹೋದನಂತೆ, ಮಾರುಕ್ಕೆ. ಕತ್ತೇ ಬೇಕೆ ಕತ್ತೆ ಎಂದು ಸಂತೆ ಮಾಳದಲ್ಲಿ ಕೂಗುಕ್ಕೆ ಶುರು ಮಾಡಿದನಂತೆ.

ಸಂತೇಲಿ ಒಬ್ಬ ಲೇಣಿದೇಣಿ ಪಠಾಣ ಇದ್ದನಂತೆ. ಬಡ್ಡಿ ಮೊದಲು ವಸೂಲ್ಮಾಡಿಕೊಂಡು ಆಮೇಲೆ ಸಾಲ ಕೊಡುವ ಜಾಣ ಪಠಾಣನಂತೆ. ಹುಟ್ಟೂರಿನಲ್ಲಿ ಹಬ್ಬ ಮಾಡುವಾಗ ಅವನ ಮನೆಯವರು ಕುದುರೆಯನ್ನೋ ಕತ್ತೆಯನ್ನೋ ಅಡಿಗೆಗೆ ಉಪಯೋಗಿಸುತ್ತಿದ್ದರಂತೆ. ಅಗಸನ ಊರಿಗೆ ಬಂದ ಎಂಟು ಹತ್ತು ವರ್ಷದಿಂದ ಅವನು ಕತ್ತೆಮಾಂಸವನ್ನು ತಿಂದೇ ಇತ್ತಿಲ್ಲವಂತೆ. ಸಂತೇಲಿ ಮಾರಾಟಕ್ಕಿದ್ದ ಕತ್ತೇನ ನೋಡಿದನಂತೆ. ಸ್ವಲ್ಪ ಬಡಕಲು ಬಡಕಲಾಗಿತ್ತು. ಸುಲಭ ಬೆಲೆಗೆ ಸಿಗುತ್ತೆ ಅಂತ ಅಂದುಕೊಂಡು "ಎಷ್ಟಯ್ಯಾ ಬೆಲೆ, ಕತ್ತೇಗೆ" ಎಂದು ಕೇಳಿದನಂತೆ. ಹತ್ತು ರೂಪಾಯಿ ಅಂದನಂತೆ ಅಗಸ. ಚೌಕಾಶಿಮಾಡಿ ಕಡೆಗೆ ಎಂಟು ರೂಪಾಯಿಗೆ ಪಠಾಣ ವ್ಯಾಪಾರವನ್ನು ಕುದುರಿಸಿದನಂತೆ. ಎಂಟು ರೂಪಾಯಿ ತೊಗೊಂಡು ಪಠಾಣನಿಗೆ ಕತ್ತೇನ ತ್ಯಾಗ ಹಾಕಿದನಂತೆ, ಅಗಸ.

ಮಟ ಮಟ ಮಧ್ಯಾಹ್ನ ಆಗ. ಪಠಾಣನಿಗೆ ಸ್ವಲ್ಪ ಖುಷಿಯಾಗಿತ್ತಂತೆ. ತಾನೊಂದು ಬೀಡಿ ಹಚ್ಚಿ, ಅಗಸನಿಗೂ ತಂಪಾಗಲಿ ಅಂತ ಅವನಿಗೂ ಒಂದು ಬೀಡಿ ಕೊಟ್ಟನಂತೆ. ಅಗಸ ಬೀಡಿ ಹಚ್ಚಿಕೊಂಡು ಕತ್ತೆ ನೆರಳಿನಲ್ಲೇ ಕೂತನಂತೆ.

ಪಠಾಣನಿಗೆ ರೇಗಿತಂತೆ. ಕತ್ತೇನ ನಾನು ಕೊಂಡುಕೊಂಡಿದೀನಿ. ಅದರ ನೆರಳೂ ನನ್ನದೇ. ಅಲ್ಲಿ ಕೂತುಕೋಬೇಡ ಅಂತ ಅಂದನಂತೆ. ಕತ್ತೇನ ಮಾರಿದ್ದು ದಿಟ. ಆದರೆ ನೆರಳನ್ನು ಮಾರಲಿಲ್ಲ ನಾನು, ಭೇಷಕ್ ಇಲ್ಲೇ ಕೂಡ್ತೀನಿ, ಏನು ಮಾಡ್ತಿ ಅಂದನಂತೆ ಅಗಸ. ಇಬ್ಬರಿಗೂ ಜಗಳ ಶುರುವಾಯಿತಂತೆ.

ಈಸೋಪನ ನೀತಿ ಕತೆಗಳನ್ನು ಓದಿದ್ದ ವಾದ್ಯಾರೊಬ್ಬರು ಅಲ್ಲಿಗೆ ಆಗ ಬಂದರಂತೆ. "ಯಾಕಪ್ಪಾ! ನೆರಳಿಗೆ ಹೀಗೆ ಗುದ್ದಾಡ್ತೀರಿ. ನಿಮ್ಮ ಈ ಜಗಳ

ದಲ್ಲಿ ಕತ್ತೆ ಓಡಿಹೋಗುತ್ತೆ. ಆಮೇಲೆ ಕತ್ತೆ ಬಾಲಾನೂ ಸಿಗುಲ್ಲ ಇಬ್ಬರಿಗೂ" ಎಂದು ಹಿಂದೆ ಕಲಿತ ಬುದ್ಧಿವಾದಾನ ಹೇಳಿದರಂತೆ.

"ಹೋಗಯ್ಯಾ ನಿನ್ನ ದಾರಿ ಹಿಡ್ಕೊಂಡು, ನಾವೇನು ಈಸೋಪನ ಕತೆಯ ಕಾಲದ ಹಳ್ಳಿಮುಕ್ಕಗಳು ಅಂತ ತಿಳಕೊಂಡಿದೀಯಾ? ಕತ್ತೆಕಾಲು ಕಟ್ಟಿಹಾಕಿ, ಅದು ಓಡದೆ ಇರೋಹಾಗೆ ಮಾಡಿ ಜಗಳಮಾಡ್ತಾ ಇದೀನಿ, ನಂಗೇ ಹೇಳಿ ಕೊಡ್ತೀಯಾ" ಅಂತ ಪಠಾಣ ಅವನನ್ನು ಮೂದಲಿಸಿದನಂತೆ.

"ಎಂಥ ಜಾಣನಯ್ಯ ನೀನು. ಎಷ್ಟು ಹೊತ್ತುತಾನೆ ನಾನು ಜಗಳ ಕಾದೇನು, ಸಂಜೆ ತನಕ ಕಾದೇನು. ಆಮೇಲೆ ನೆರಳಿಗೆ ಯಾರು ಗುದ್ದಾಡ್ತಾರೆ" ಅಂತ ಅಗಸರವನೂ ಅವನನ್ನು ಹೀಯಾಳಿಸಿದನಂತೆ.

ಅದಕ್ಕೇ ಮಗು ಇಬ್ಬರ ಜಗಳ ಮೂರನೆಯವನಿಗೆ ಲಾಭ ಅಂತ ನಂಬಿ ಮೂರನೆಯವನಾಗಬೇಡ, ನೀನೂ ಜಗಳಕ್ಕೆ ಸೇರಿದೋನಹಾಗೆ ಹಿಂದೆ ನಿಂತು ಕೂಗಾಡ್ತಾ ಇರು. ಗೆದ್ದವರಕಡೆಯೋನೆ ನಾನು ಅಂತ ಆಮೇಲೆ ಬಾಜಾ ಬಜಂತ್ರಿ ಬಜಾಯಿಸು. ಅದೇ ಬಾಳಿನಲ್ಲಿ ಬಚಾವಾಗೋ ಮಾರ್ಗ.

ಅಂತ ನಮ್ಮ ಅಡುಗೂಲಜ್ಜಿ ಅಗಸ ಕತ್ತೆ ಮಾರಿದ ಕತೇನ ಹೇಳಿದಳಂತೆ.

ಹುಳಿ ದ್ರಾಕ್ಷಿ ಕತೆ

ಇಂದಾನೊಂದು ಕಾಲದಲ್ಲಿ ಒಂದಾನೊಂದು ಊರ ಹತ್ತಿರ ಒಂದು ನರಿ ಇತ್ತಂತೆ. " ಕದ್ದು ತಿಂದ ಹಣ್ಣಿಗೆ ರುಚಿ ಹೆಚ್ಚು, ಲಂಚದ ಹಣದಲ್ಲಿ ಮನೆ ಕಟ್ಟಿಸಿದರೆ ಬಿರುಕು ಬಿಡುಲ್ಲ, ಹಿತ್ತಿಲಲ್ಲಿ ಬೆಳೆದ ಮದ್ದನ್ನು ಮಾರಿದರೇ ಆರೋಗ್ಯ" ಎಂಬ ನೀತಿಯನ್ನೆಲ್ಲಾ ಅದು ಅನುಭವದಿಂದ ಕಲಿತಿತ್ತಂತೆ. ಅದಕ್ಕೇ ಬಿಸಿಲುಗಾಲ ಬಂದು ಬಾಯಾರಿಕೆಯಾದಾಗ, ಆ ನರಿ ದ್ರಾಕ್ಷಿತೋಟದ ದಾರಿ ಹಿಡಿಯಿತಂತೆ.

ಬೇಲಿಯನ್ನು ಹಾರಿ ಶಬ್ದವಿಲ್ಲದೆ ಒಳಗೆ ಹೋಯಿತು. ಆದರೆ ದ್ರಾಕ್ಷಿ ಹಣ್ಣುಗಳೆಲ್ಲಾ ಬಲು ಎತ್ತರದಲ್ಲಿತ್ತಂತೆ. ಎರಡು ಮೂರುಸಾರಿ ಹಾರಿ ನೋಡಿತಂತೆ, ನರಿ. ಆದರೆ ದ್ರಾಕ್ಷಿಗೊಂಚಲು ಎಟುಕಲಿಲ್ಲವಂತೆ. ಎಷ್ಟೇ ಆಗಲಿ ನರಿ, ಜಾಣತನಕ್ಕೆ ಹೆಸರುಗಳಿಸಿದ ನರಿ. ದ್ರಾಕ್ಷಿಬಳ್ಳಿಯ ಬುಡವನ್ನೇ ಜಗ್ಗಾಡಿತಂತೆ. ಆಗ ಒಂದೆರಡು ಗೊಂಚಲು ದ್ರಾಕ್ಷಿ ಕಳಚಿಕೊಂಡು ಬಿತ್ತಂತೆ. ಒಂದೋ ಎರಡೋ ದ್ರಾಕ್ಷೀನ ಚಪ್ಪರಿಸಿತಂತೆ. ಬಲು ಹುಳಿಯಾಗಿತ್ತಂತೆ. ಇದನ್ನು ತಿನ್ನಬಾರದು, ತಿಂದರೆ ಶೀತ ಆಗುತ್ತೆ. ಗಂಟಲು ಕಟ್ಟಿಕೊಳ್ಳುತ್ತೆ. ಮುಂದೆ ನ್ಯೂಮೋನಿಯಾಕ್ಕೆ ತಿರುಗಿದರೂ ಆಯಿತು. ಪ್ರಾಣಕ್ಕೇ ಅಪಾಯ ಅಂತ ಯೋಚಿಸಿ ನರಿ ಹಿಂತಿರುಗಿತಂತೆ.

ಹಿಂತಿರುಗಿ ಕಾಡಿಗೆ ಮರೆ ಮರೆಯಾಗಿ, ಹೋಗುತ್ತಿದ್ದಾಗ, ದಾರೀಲಿ ಈಸೋಪ ಸಿಕ್ಕಿದನಂತೆ. " ನನ್ನ ಹಾಗೆ ಈಸೋಪ ಕೂಡ ದ್ರಾಕ್ಷಿ ತೋಟಕ್ಕೆ ಹೋಗ್ತಿರಬಹುದು, ಅವನಿಗೂ ಬಾಯಾರಿಕೆ ಆಗಿರಬಹುದು" ಎಂದುಕೊಂಡಿತಂತೆ. ಅಯ್ಯೋ ಪಾಪ, ಸ್ವಲ್ಪ ಹುಷಾರ್ ಹೇಳೋಣ ಅಂತ " ಈಸೋಪ! ಈಸೋಪ! ದ್ರಾಕ್ಷಿತೋಟಕ್ಕೆ ಹೋಗಬೇಡ. ಅಲ್ಲಿನ ದ್ರಾಕ್ಷಿಯೆಲ್ಲಾ ಇನ್ನೂ ಮಾಗಿಲ್ಲ, ಬಲು ಹುಳಿ" ಎಂದು ಹೇಳಿತಂತೆ.

ಈಸೋಪ ನಕ್ಕನಂತೆ. ಗಹಗಹಿಸಿ ಬಿದ್ದು ಬಿದ್ದು ಎದ್ದು ಎದ್ದು ನಕ್ಕನಂತೆ. " ನಿನಗೆ ಎಟುಕಲಿಲ್ಲ ದ್ರಾಕ್ಷಿ, ಅದಕ್ಕೇ ಹುಳಿ ಅಂತ ಮನಸ್ಸಿಗೆ ಸಮಾಧಾನ ತಂದುಕೊಂಡಿದಿ, ಕುಳ್ಳ ನೀನು, ನಿನಗೆ ಎಟುಕದೆ ಇದ್ದರೆ ಕುಬ್ಜನಾದರೂ ನನಗೆ ಎಟುಕುತ್ತೆ" ಎಂದು ಹೀಯಾಳಿಸಿದನಂತೆ.

ಬುದ್ಧಿ ಹೇಳುಕ್ಕೆ ಹೋಗಿದ್ದೇ, ನನ್ನ ತಪ್ಪು. ಮಂಕರಿರೋ ಈ ಲೋಕದಲ್ಲಿ, ತಮ್ಮಪಾಡಿಗೆ ತಾವಿರದೆ ಬುದ್ಧಿ ಕಲಿಸುಕ್ಕೆ ಹೋಗೋರು ಶತಮಂಕರು. ಅಂತಹವ



ರಲ್ಲಿ ಈಸೋಪ ಒಬ್ಬ. ಅವನಿಗೂ ಬೆಸಗೆ ಬೀಳಲಿ ಎಂದುಕೊಂಡು ನರಿ ಹೊರಟು ಹೋಯಿತಂತೆ.

ಈಸೋಪ ಊರ ವಾಚನಾಲಯದ ಕಡೆಗೆ ಹೋಗ್ತಿದ್ದನಂತೆ. ನರಿ ಹುಷಾರ್ ನುಡಿ ಹೇಳಿದಾಗ, ದ್ರಾಕ್ಷಿ ತಿನ್ನಬೇಕು ಅಂತ ಆಸೆ ಹುಟ್ಟಿತಂತೆ. ದ್ರಾಕ್ಷಿ ತೋಟದ ಕಡೆಗೆ ಕಾಲು ಹಾಯಿಸಿದನಂತೆ. ಒಂದು ಹಣ್ಣನ್ನು ಕಿತ್ತು ತಿಂದನಂತೆ. ಸ್ವಲ್ಪ ಹುಳಿಯಾಗಿದೆ, ಆದರೂ ರುಚಿಯಾಗಿದೆ, ತೋಟದ ಕಾವಲುಗಾರನೂ ಇದ್ದಹಾಗಿಲ್ಲ. ಸಿಕ್ಕಿದಾಗ ತಿನ್ನೋದೇ ಚೆನ್ನು. ಹಣ್ಣಾಗಲಿ ಅಂತ ಕಾದರೆ, ಅಷ್ಟುಹೊತ್ತಿಗೆ ಕಾವಲುಗಾರ ಪಹರೆ ಹಾಕುತ್ತಾನೆ, ಎಂದೆಲ್ಲಾ ಆಲೋಚನೆ ಮಾಡಿ ಆದಷ್ಟನ್ನು ತಿಂದನಂತೆ. ಹಲ್ಲುಗಳೆಲ್ಲಾ ಹುಳಿಗೊಂಡು ಸಾಕು ಅಂತ ಮೊಂಡು ಹಿಡಿಯೋತನಕ ತಿಂದನಂತೆ. ಆಮೇಲೆ ಹಿಂತಿರುಗಿದನಂತೆ.

ಮನೆಗೆ ಹೋದಾಗ ಈಸೋಪನಿಗೆ ಹಸಿವೇ ಮುಚ್ಚಿಹೋಯ್ತುಂತೆ. ರಾತ್ರಿ ಮಲಗಿದ್ದಾಗ ನಿದ್ರೆಹತ್ತಲಿಲ್ಲವಂತೆ. ಬೆಳಗೆದ್ದಾಗ "ಎಲ್ಲೇ ಕಾಫಿ" ಅಂತ ಕೂಗಿದಾಗ ಹೆಂಡತಿ ಬರಲೇ ಇಲ್ಲವಂತೆ. ಎದ್ದು ಅಡಿಗೆ ಮನೆಗೆ ಹೋದರೆ ಅಲ್ಲೇ ಕಾಫಿ ಕುಡೀತಾ ಕೂತಿದ್ದಳಂತೆ ಹೆಂಡತಿ. "ಕೂಗಿದ್ದು ಕೇಳಿಸಲಿಲ್ವೇನೇ" ಎಂದು ಹೇಳುವುದಕ್ಕೆ ಹೋಗ್ತಾನೆ, ಧ್ವನಿಯೇ ಹೊರಬರಲಿಲ್ಲ. ಕಣ್ಣುಸನ್ನೆ ಬಾಯಿಸನ್ನೆ ಮಾಡಿದನಂತೆ. "ಏನಾಯ್ತು ಅಂದ್ರೆ! ನಿನ್ನೆ ರಾತ್ರಿ ಚೆನ್ನಾಗಿದ್ದ ರಲ್ಲಾ, ಈಗ ಮಾತೇ ನಿಂತುಹೋಗಿದೆಯಲ್ಲಾ" ಅಂತ ಕಾತರದಿಂದ ಹೆಂಡತಿ, ಬೇಗ ಕಾಫಿ ಕುಡಿದು ಮೆಣಸಿನ ಸಾರು, ಹುರಿದಕ್ಕಿ ಗಂಜಿಮಾಡಿ ಗಂಡನಿಗೆ ಕುಡಿಸಿ ಕಂಬಳಿ ಹೊದಿಸಿ ಮಲಗಿಸಿದಳಂತೆ. ಮೂರು ದಿವಸ ಕೆಂಡಾಮಂಡಲ ಜ್ವರ ಬಂತಂತೆ. ಹೆಂಡತಿ ಇಟ್ಟ ಪಥ್ಯದ ಜತೆಗೆ, ಡಾಕ್ಟರು ಕೊಟ್ಟ ಔಷಧೀನೂ ಸೇರಿ, ವಾರ ಮುಗಿಯೋದರೊಳಗೆ ಈಸೋಪ ಸನ್ನಿಬಡಿದು ಹರೋ ಹರ ಆದನಂತೆ.

ಊರಾಚೆ ಇದ್ದ ಸುಡುಗಾಡಿಗೆ ಅವನ ಹೆಣವನ್ನು ಸಾಗಿಸುವಾಗ, ಚಟ್ಟದ ಹಿಂದೆ ಬಂದಿದ್ದವರು "ಎಷ್ಟು ಬುದ್ಧಿವಂತ ಈಸೋಪ, ನಮಗೆಲ್ಲಾ ನೀತಿ ಕಲಿಸ್ತಿದ್ದ, ಪಾಪ! ಅಕಾಲ ಮರಣಕ್ಕೆ ತುತ್ತಾದ" ಅಂತ ಹೇಳಿಕೊಳ್ಳುತ್ತಿದ್ದರಂತೆ.

ಸುಡುಗಾಡಿನ ಪಕ್ಕದಲ್ಲೇ ಪೊದೆಯಲ್ಲಿ ನರಿ ಮಲಗಿತ್ತಂತೆ. ಅದಕ್ಕೆ ಈ ಭಾಷಣಗಳು ಕೇಳಿಸಿದಾಗ ಎಚ್ಚರವಾಯ್ತುಂತೆ. ಆಗ ಅದು ಹೇಳಿತಂತೆ "ನೀತಿ ಹೇಳುಕ್ಕೆ ಈಸೋಪನ್ನ ಕೇಳಿದರೆ, ಅವನ ಹೆಂಡತಿ ಮುಂಡಮೋಚಿ ಆರು ದಿನ ಗಳಾಯ್ತು." ಇದು ತಿಳಿಯಲೊಲ್ಲದು ಮನುಷ್ಯರಿಗೆ ಅಂತ ಅಂದುಕೊಂಡಿತಂತೆ.

ಎಂದು ನಮ್ಮ ಅಡುಗೂಲಜ್ಜಿ ಹುಳಿ ದ್ರಾಕ್ಷಿ ಕತೇನ ಹೇಳಿದಳಂತೆ.

ದರ್ಜಿ ಟೋಪಿ ಕತೆ

ಇಂದಾನೊಂದು ಕಾಲದಲ್ಲಿ ದರ್ಜಿಯೊಬ್ಬನಿದ್ದನಂತೆ. ಬಟ್ಟೆಗಳನ್ನು ಹೊಲಿದು ಸಿದ್ಧಮಾಡಿಕೊಂಡು ಗ್ರಾಮಗ್ರಾಮಗಳ ಸಂತೆಗೆ ಹೋಗಿ ಅಲ್ಲಿ ಮಾರಿ, ತನಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಂಡು ಬರುತ್ತಿದ್ದನಂತೆ. ಬಿಸಿಲು ಗಾಲದಲ್ಲಿ ಸಂತೇಗೆ ಬಂದಿದ್ದವರೆಲ್ಲಾ ಬರಿ ತಲೆಯಲ್ಲಿದ್ದು ಬಿಸಿಲಿನ ಝಳದಲ್ಲಿ ನರಳುತ್ತಿದ್ದುದನ್ನು ಒಂದುಸರ್ತಿ ಕಂಡನಂತೆ. ಅಯ್ಯೋ ಪಾಪ! ಇವರ ತಲೆಗೆ ತಂಪು ಮಾಡಬೇಕು. ಮುಂದಿನ ಸಂತೆಗೆ ಟೋಪಿಗಳನ್ನು ಹೊಲಿದುಕೊಂಡು ಹೋಗಿ ಮಾರಬೇಕು ಅಂದುಕೊಂಡನಂತೆ. ಆ ವಾರದಲ್ಲಿ ಮೂವತ್ತು ಟೋಪಿ ಗಳನ್ನು ಮಾತ್ರ ಹೊಲಿಯುಕ್ಕೆ ಆಯಿತಂತೆ. ಅಷ್ಟನ್ನೂ ತೆಗೆದುಕೊಂಡು ಸಂತೆಗೆ ಹೋದನಂತೆ. ತಾನೂ ಒಂದು ಟೋಪಿ ಹಾಕಿಕೊಂಡು, "ಟೋಪಿ ತೊಗೊಳ್ಳಿ ತಲೆ ತಂಪಾಗಿರುತ್ತೆ, ಬಿಸಿಲೆಷ್ಟಿದ್ದರೂ ಝಳ ಬಡಿಯುಲ್ಲ" ಅಂತ ಪ್ರಚಾರ ನಡೆಸಿದನಂತೆ. ಅವತ್ತೂ ಬಿಸಿಲು ಹೆಚ್ಚಾಗಿದ್ದು, ಜನರೆಲ್ಲರೂ ತಪಿಸು ತ್ತಿದ್ದರಂತೆ. ಸುಲಭ ದರದಲ್ಲಿ ತಲೆ ಕಾಯುವ ಟೋಪಿಯನ್ನು ಕೊಂಡುಕೊಳ್ಳಲು ಸಂತೆಯ ಜನರೆಲ್ಲ ನಾ ಮುಂದು ತಾ ಮುಂದು ಅಂತ ನುಗ್ಗಿದರಂತೆ. ಐದು ಹತ್ತು ನಿಮಿಷದಲ್ಲಿ ತಂದಿದ್ದ ಟೋಪಿಗಳೆಲ್ಲಾ ಮಾರಾಟವಾಯ್ತಂತೆ.

ದರ್ಜಿ ಹಿಂತಿರುಗಿದಾಗ ಮುಂದಿನ ಸರ್ತಿ ಇನ್ನೂರು ಮುನ್ನೂರು ಟೋಪಿ ಗಳನ್ನಾದರೂ ಹೊಲಿದುಕೊಂಡು ಹೋಗಬೇಕು. ಸಂತೆಗೆ ಬಂದವರಿಗೆಲ್ಲಾ ಒದಗಿಸುವ ಹಾಗಿರಬೇಕು ಎಂದು ಯೋಚಿಸಿದನಂತೆ. ಹಗಲೂ ರಾತ್ರಿ ದಣಿವೂ ಹಸಿವನ್ನೂ ಲೆಕ್ಕಿಸದೆ, ಟೋಪಿ ಹೊಲಿದನಂತೆ. ಸಂತೆ ಹೊತ್ತಿಗೆ ಮೂರು ನೂರು ಟೋಪಿಗಳು ಸಿದ್ಧವಾದುವಂತೆ. ಅವನ್ನೆಲ್ಲಾ ಬುಟ್ಟೀಲಿ ಹಾಕಿಕೊಂಡು ಸಂತೆಗೆ ಹೊರಟನಂತೆ. ದಾರಿಯಲ್ಲಿ ಹೊಂಗೆಮರ ಒಂದು ಸಿಕ್ಕಾಗ, ಅದರ ನೆರಳನ್ನು ಕಂಡಾಗ, ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಹೋಗೋಣ ಅಂತ ಹಾಗೇ ಮರದ ಬುಡವನ್ನು ಒರಗಿಕೊಂಡು ಹುಶ್ಯಪ್ಪಾ ಅಂತ ಕುಳಿತನಂತೆ. ವಾರವೆಲ್ಲಾ ದುಡಿದಿದ್ದ. ನಿದ್ರೆ ಅಮರಿಕೊಂಡು ಬಂತಂತೆ. ಹತ್ತು ನಿಮಿಷ ಆಯ್ತಂತೆ, ಏನೋ ಕೆಟ್ಟ ಕನಸು ಬಿದ್ದಹಾಗೆ ಆಯಿತಂತೆ. ಜಟ್ಟಂತ ಎದ್ದನಂತೆ. ಎಷ್ಟು ಹೊತ್ತು ಮಲಗಿ

ಕೊಂಡೆನೋ, ಸಂತೆಗೆ ಹೋಗುವ ಹೊತ್ತಿಗೆ ವಿಳಂಬವಾಗಿ ಹೋಯಿತೇನೋ ಎಂದು ಕಾತರದಿಂದ ಎದ್ದು ಬುಟ್ಟೀನ ತೆಗೆದುಕೊಂಡನಂತೆ.

ಬುಟ್ಟೇಲಿ ಏನಿದೆ? ಬುಟ್ಟಿಯೆಲ್ಲಾ ಖಾಲಿಯಾಗಿತ್ತಂತೆ. ಇಲ್ಲಿಗೆ ಯಾವ ಕಳ್ಳರು ಬಂದರು? ಬಂದವರು ಟೋಪೀನ ಯಾಕೆ ಕದ್ದರು? ಎಂದು ತಲೆ ಕೆರೆದುಕೊಂಡನಂತೆ.

ಮರದಮೇಲೆ ಏನೋ ಕಿಚಿ ಕಿಚಿ ಶಬ್ದ ಆಯಿತಂತೆ. ತಲೆ ಎತ್ತಿ ನೋಡಿದ ನಂತೆ. ಮರದಮೇಲೆ ಕೋತಿಗಳ ಗುಂಪೇ ಇತ್ತಂತೆ. ಒಂದೊಂದರ ಕೈಯಲ್ಲೂ ಒಂದೊಂದು ಟೋಪಿ. ಈಗೇನಪ್ಪಾ ಮಾಡೋದು ಎಂದು ಯೋಚಿಸಿದನಂತೆ. ಹಳೆ ಕತೇಲಿ ಹೇಳಿದ ಹಾಗೆ ತನ್ನ ತಲೇಮೇಲಿರುವ ಟೋಪಿಯನ್ನು ಎಸೆಯೋಣ ಅಂದರೆ, ವಿಶ್ರಮಿಸಿಕೊಳ್ಳಲು ಅವನು ಕುಳಿತಾಗ ಟೋಪಿಯನ್ನು ತೆಗೆದಿಟ್ಟು ಬಿಟ್ಟಿದ್ದ. ಅದನ್ನೂ ಕೋತಿಗಳ ತಂಡ ಎತ್ತಿಕೊಂಡು ಹೋಗಿಬಿಟ್ಟಿತ್ತು.

ಮುಂದಿನ ಸರ್ತಿ ಹುಷಾರಾಗಿರಬೇಕು. ಈ ವಾರ ದುಡಿದಿದ್ದೆಲ್ಲಾ ದಂಡ ಅಂತ ಪೆಚ್ಚುಮೋರೆ ಹಾಕಿಕೊಂಡು ತನ್ನ ಗ್ರಾಮಕ್ಕೆ ಹಿಂತಿರುಗಿದನಂತೆ.

ಟೋಪಿ ಗಿಟ್ಟಿಸಿದ ಕೋತಿಗಳೆಲ್ಲವೂ ಸಂತೆಗೆ ಹೋದುವಂತೆ. "ಈ ಪ್ರಾಣಿಗಳು ತಲೆಯನ್ನ ತಂಪಾಗಿರಿಸಿಕೊಂಡಿವೆ. ಇವುಗಳನ್ನೇ ನಮ್ಮ ಗ್ರಾಮ ಪಂಚಾಯಿತಿ ನಡೆಸಿಕೊಡಿ ಅಂತ ಕೇಳೋಣ" ಎಂದು ಸಂತೆಮಂದಿಗೆ ಅನ್ನಿಸಿ ತಂತೆ. "ಅದಕ್ಕೇನು ಆಗಲಿ, ನಿಮ್ಮ ಮಾತಿಗೆ ಎದುರು ಹೇಳಬಾರದು" ಅಂತ ಹೇಳಿ ಟೋಪಿಹೊತ್ತ ಕೋತಿಗಳೆಲ್ಲಾ ಆಡಳಿತವನ್ನು ವಹಿಸಿಕೊಂಡುವಂತೆ.

ಅದಾದಮೇಲೆ ಕೋತಿಚೇಷ್ಟೆ ಶುರುವಾಯ್ತಂತೆ. ಉಡೋ ಬಟ್ಟೆ, ಉಣ್ಣೋ ಊಟ, ಆಡೋ ಮಾತು, ಹೂಡಿದ ಆಟ, ಎಲ್ಲದರಲ್ಲೂ ಚೇಷ್ಟೆಯ ಕೈ ಆಡಿಸಿದ ರಂತೆ. ಓದು ಬರಹದಲ್ಲೂ ಪ್ರಗತಿ ತೋರಿಸ್ತೀವಿ ಅಂತ ಎಗರಾಡಿದುವಂತೆ. ಕೋತಿಗಳ ಚೇಷ್ಟೆ; ಕೇಳಬೇಕೆ? ಬಾಳವನವನ್ನೆಲ್ಲಾ ಕೆಡಿಸಿದುವಂತೆ. ಒಂದು ಹಣ್ಣು ತಿನ್ನಬೇಕು ಅಂದಾಗ ಮರವನ್ನೇ ಕೆಡಿಸುತ್ತಿದ್ದುವಂತೆ. ಹೀಗಾಗಿ ಸಂತೆ ಮಂದಿಗೆ ಈ ಕೋತಿಗಳ ಕೈಲಿ ಯಾಕಾರೂ ಆಳುವ ಮಾಣಿಕ್ಯವನ್ನಿಟ್ಟೆವಪ್ಪಾ ಅನ್ನಿಸಿ, ಟೋಪಿ ಕಂಡರೆ ರೇಗುವ ಹಾಗಾಯ್ತಂತೆ.

ಪಾಪ! ದರ್ಜಿಗೆ ಇದೊಂದೂ ಗೊತ್ತಿಲ್ಲ. ಮುಂದಿನ ಸಂತೆ ಹೊತ್ತಿಗೆ ಟೋಪಿಗಳನ್ನು ಹೊಲಿದು ಸಿದ್ಧಮಾಡಿಕೊಂಡು ಹುಷಾರಾಗಿ ಹೋದನಂತೆ.

ಸಂತೆಮಾಳದಲ್ಲಿ ಕೂತನಂತೆ. ಹತ್ತಿರ ಟೋಪಿಗಳಿದ್ದುದನ್ನು ನೋಡಿ ಸಂತೆಗೆ ಬಂದಿದ್ದ ಮಂದಿಯೆಲ್ಲಾ ಆಳಿಗೊಂದು ಕಲ್ಲು ಎಸೆದು ತಮ್ಮ ಸೇಡು ತೀರಿಸಿ ಕೊಂಡರಂತೆ.

ಅದಕ್ಕೇ ಮಗು, ತಲೆ ತಂಪಾಗಿರಬೇಕು ಅಂದರೆ ಎಣ್ಣೆ ಒತ್ತಿ ನೀರುಹಾಕಿ ಕೊಳ್ಳಬೇಕೇ ವಿನಹಾ ಟೋಪಿ ಹಾಕ್ಕೋಬಾರದು.

ಎಂದು ನನ್ನ ಅಡುಗೂಲಜ್ಜಿ ದರ್ಜಿ ಟೋಪಿಗಳ ಕತೆ ಹೇಳಿದಳಂತೆ.

ಕಾಗೆ ನಾಗರ ಹಾವಿನ ಕತೆ

ಒಂದೂರಿನಲ್ಲಿ ಒಬ್ಬ ಬಡವ ಮೂರನೆ ಮಹಡಿ ಮೇಲಿನ ಕೊಠಡಿಯೊಂದನ್ನು ಬಾಡಿಗೆಗೆ ತಗೆದುಕೊಂಡು, ಮರಗಳ ತುದೀಲಿ ಕಾಗೆ ಗೂಡು ಕಟ್ಟಿಕೊಂಡು ಸಂಸಾರ ಮಾಡುವುದಿಲ್ಲವೇ ಹಾಗೆ ಮಾಡಿಕೊಂಡಿದ್ದನಂತೆ. ಬಡವ, ಅಂದಮೇಲೆ ಕೇಳಬೇಕೆ, ಮೂರು ಜನ ಹೆಣ್ಣುಮಕ್ಕಳು ಸಾಲು ಸಾಲಾಗಿ ಹುಟ್ಟಿದರಂತೆ. ಈ ಕತೆ ಹೇಳುವ ಹೊತ್ತಿಗೆ ಹೆಣ್ಣು ಮಕ್ಕಳೆಲ್ಲಾ ಕಾಲೇಜಿಗೆ ಹೋಗುವ ಹಾಗಾಗಿದ್ದರಂತೆ.

ಆ ಕಾಲಕ್ಕೆ ಸರಿಯಾಗಿ ಆ ಮನೆಯ ನೆಲದ ಅಂತಸ್ತಿನ ವಠಾರದಲ್ಲಿ ಬಾಡಿಗೆಗೆ ಇರಲು ಒಬ್ಬ ಶಿಸ್ತುಗಾರ ಪುಟ್ಟುಸ್ವಾಮಿ ಬಂದು ಸೇರಿಕೊಂಡನಂತೆ, ನಾಗಯ್ಯ ಅಂತ ಹೆಸರಂತೆ. ಹೆಸರಿಗೆ ತಕ್ಕ ಹಾಗೆ ಬುಸು ಬುಸು ಗುಟ್ಟುವ ಸ್ವಭಾವವಂತೆ. ಕಾಲೇಜಿಗೆ ಹೋಗಿ ಬರುವಾಗ ಬಡವನ ಹೆಣ್ಣುಮಕ್ಕಳನ್ನು ಪೀಡಿಸಿ ಕಾಡಿಸುತ್ತಿದ್ದನಂತೆ.

ಬಡವ ಏನು ತಾನೆ ಮಾಡಾನು? ಪೋಲೀಸಿನವರಿಗೆ ದೂರು ಕೊಟ್ಟರೆ ನಾಗಯ್ಯನ ಕಾಟ ಹೋಗಿ ಅವರ ಕಾಟ ಶುರುವಾಗುತ್ತೆ ಅಂತ ತಿಳಿದಿತ್ತಂತೆ. ಅದಕ್ಕೋಸ್ಕರ ಉಪಾಯಾನ ಹುಡುಕ್ತಾ ಇದ್ದನಂತೆ.

* * * *

ಹತ್ತಿರದಲ್ಲೇ ಇದ್ದ ಬ್ಯಾಡ್‌ಮಿಂಟನ್ ಕೋರ್ಟಿನಲ್ಲಿ ಆಟ ಆಡುಕ್ಕೆ ಅಂತ ಊರ ರಾಜನ ಮಗಳು ಸಂಜೆ ಹೊತ್ತಿನಲ್ಲಿ ಬರೋದನ್ನ ನೋಡಿದನಂತೆ, ಬಡವ. ಕಾಗೆ ಸರ್ಪದ ಕತೇನೂ ಜ್ಞಾಪಕಕ್ಕೆ ಬಂತಂತೆ. ತಡಿ, ಈ ನಾಗಯ್ಯನಿಗೂ ಶಾಸ್ತಿ ಮಾಡ್ತೀನಿ ಅಂತ ನಿರ್ಧರಿಸಿದನಂತೆ. ಮೊದಲ ಮಗಳಿಗೆ ಏನೇನೋ ಹೇಳಿ ಕೊಟ್ಟು, “ನೀನೂ ಮಹಿಳಾ ಬ್ಯಾಡ್‌ಮಿಂಟನ್ನಿಗೆ ಸೇರಿಕೊ. ಒಂದು ತಿಂಗಳು ಚಂದಾ ಕೊಡು, ಕದ್ದೋ ಕೇಳಿಕೊಂಡೋ ಅಷ್ಟು ಹಣವನ್ನ ತಂದು ಕೊಡ್ತೀನಿ ಎಂದು ಒಪ್ಪಿಸಿದನಂತೆ. ಇದಾದ ಎಂಟು ಹತ್ತು ದಿವಸದಲ್ಲೇ ಬಡವನ ಮೊದಲ ಮಗಳು ಬ್ಯಾಡ್‌ಮಿಂಟನ್ನಿಗೆ ಹೋದವಳು ಆಟ ಆಡದೆ ಮೈ ಯಾಕೋ ಬಿಗಡಾಯಿಸುತ್ತಿದೆ ಎಂದು ನೆಪ ಹೇಳಿ ಬೇಗ ಮನೆಗೆ ಬಂದಳಂತೆ.

ಮಡಿಲಲ್ಲಿ ಮುಚ್ಚಿಟ್ಟುಕೊಂಡು ತಂದಿದ್ದ ಏನೇನನ್ನೋ ಅಪ್ಪನ ಕೈಗೆ ಕೊಟ್ಟಳಂತೆ. ಬಡವ ಅದನ್ನೆಲ್ಲಾ ತೆಗೆದುಕೊಂಡು ಹೋಗಿ ನೆಲದ ಅಂತಸ್ತಿನ ಹತ್ತಿರ ಮೆಟ್ಟಿಲುಗಳ ಕೆಳಗೆ ಅವಿತುಕೊಂಡನಂತೆ. ಕತ್ತಲು ಸ್ವಲ್ಪ ಹೆಚ್ಚಾದಾಗ ಶೃಂಗಾರ ಮಾಡಿಕೊಂಡು ಮೈಗೆಲ್ಲಾ ಗಂಧ ಬಳಿದುಕೊಂಡು ನಾಗಯ್ಯ ತನ್ನ ಕೋಣೆಯಿಂದ ಹೊರ ಬಿದ್ದನಂತೆ. ಅವನು ಗಲ್ಲಿ ವಿಹಾರಕ್ಕೆ ಹೊರಟದ್ದನ್ನು ಕಂಡು ಬಡವ, ತಾನು ತಂದಿದ್ದ ಗಂಟನ್ನೆಲ್ಲಾ, ಕಿಟಕಿ ಮೂಲಕ ನಾಗಯ್ಯನ ಮಂಚದ ಕೆಳಕ್ಕೆ, ಎಸೆದನಂತೆ. ಕೈ ಕೊಡವಿಕೊಂಡು ಎರಡು ಮಹಡಿ ಹತ್ತಿ ತನ್ನ ಬಿಡಾರಕ್ಕೆ ಹೋದನಂತೆ.

* * * *

ಇತ್ತ ಆಟ ಮುಗಿಸಿ ರಾಜಕುಮಾರಿ ತನ್ನ ಉಡುಪು ಬದಲಾಯಿಸಲು ತನ್ನ ಸೂಟ್‌ಕೇಸ್ ತೆಗಿಯುತ್ತಾಳೆ; ಮಡಿ ಉಡುಪು ತೆಗೆದು ಧರಿಸುತ್ತಾಳೆ. ಆಗ ನೋಡುತ್ತಾಳೆ, ಸೂಟ್‌ಕೇಸಿನಲ್ಲಿ ತನ್ನ ಕಾಗದ, ಒಡವೆಗಳನ್ನು, ಇಡುತ್ತಿದ್ದ ಸಣ್ಣ ಚೀಲ ನಾಪತ್ತೆ! ಆಗ ಗುಲ್ಲೆಬ್ಬಿಸಿದಳು ರಾಜಕುಮಾರಿ. ಕಳುವಾಯಿತು ನನ್ನ ಒಡವೆ ಅಂತ.

ಬ್ಯಾಡ್‌ಮಿಂಟನ್ ಕ್ಲಬ್ಬಿಗೆ ಪೋಲೀಸ್ ಐ. ಜಿ. ಅವರ ಹೆಂಡತಿಯೇ ಅಧ್ಯಕ್ಷಿಣಿ. ಗಂಡನಿಗೆ ಫೋನ್‌ಮಾಡಿಸಿ ತತ್‌ಕ್ಷಣ ಪೋಲೀಸರನ್ನು ಕರೆಸಿದಳು. ಪೋಲೀಸ್ ಐ. ಜಿ. ಒಬ್ಬರೇ ಬಂದು ಏನು ತಾನೆ ಮಾಡ್ತಾರೆ? ಅದಕ್ಕೇ ಅವರು ಗುಪ್ತ ಇನಸ್ಪೆಕ್ಟರನ್ನೂ ಜತೇಲಿ ಕರಕೊಂಡು ಬಂದರು. ಗುಪ್ತ ಪೋಲೀಸ್ ಇನಸ್ಪೆಕ್ಟರು ತಾನೆ ಒಬ್ಬರೇ ಏನು ಮಾಡ್ತಾರೆ? ಅವರು ಎರಡು ಸೀಳು ನಾಯಿಗಳನ್ನು ಹಿಡಿದುಕೊಂಡು ಬಂದರು.

ರಾಜಕುಮಾರಿಯ ಸೂಟ್‌ಕೇಸಿನಿಂದ ಒಡವೆ ಚೀಲವನ್ನು ಯಾರೋ ಕಳುವುಮಾಡಿದ್ದಾರೆ, ಒಂದು ಅರ್ಧಗಂಟೇಲಿ ಹೀಗೆ ಆಗಿರಬೇಕು, ಎಂದು ಅಧ್ಯಕ್ಷಿಣಿ ವಿವರಗಳನ್ನು ಕೊಟ್ಟಳು. ಯಾರ ಯಾರ ಮೇಲೆ ಗುಮಾನಿ ಎಂದು ಐ. ಜಿ. ಪಿ. ಯವರು ಕೇಳಿದಾಗ ಇನ್ಸ್ಪೆಕ್ಟರು "ಸ್ವಾಮಿ, ಸೀಳು ನಾಯಿಗಳನ್ನು ತಂದಿದ್ದೀನಿ. ಅವು ವಾಸನೆ ಹಿಡಿದು ಕಳ್ಳನನ್ನು ಪತ್ತೆ ಹಚ್ಚುತ್ತೆ" ಎಂದು ಬಿನ್ನವಿಸಿಕೊಂಡರು. "ಹಾಗೆ ಮಾಡಿ, ಕಳ್ಳ ಸಿಗದೆ ಇದ್ದರೆ ಆಮೇಲೆ ತನಿಖೆ ನಡೆಸೋಣ" ಎಂದು ಅಂದರು ಐ. ಜಿ. ಪಿ. ಯವರು.

ಸೀಳು ನಾಯಿಗಳು ರಾಜಕುಮಾರಿಯ ತೆರೆದ ಸೂಟ್‌ಕೇಸ್ ಮೂಸಿದುವು. ಸೀಳುಮಿಂಚು ಹರಿದಂತೆ ಓಡುಕ್ಕೆ ಶುರು ಮಾಡಿದುವು. ಇನ್ಸ್ಪೆಕ್ಟರೂ ಧಪ ಧಪ ಅಂತ ಅವುಗಳ ಹಿಂದೆ ಓಡಿದರು. ಬಡವನ ಮನೆ ವಠಾರವನ್ನು ಸೇರಿದಾಗ ಸೀಳುನಾಯಿಗಳು ಮಹಡಿ ಮೆಟ್ಟಲುಗಳ ಕೆಳಗೆ ಮೂಸಿ ನೋಡಿದುವು. ಆಮೇಲೆ ಕಿಟಕಿ ಹತ್ತಿರ ನಿಂತು ಬೊಗಳುಕ್ಕೇ ಶುರುಮಾಡಿದುವು. ಇನ್ಸ್ಪೆಕ್ಟರು ದಾರಿಯಲ್ಲಿ ಸಿಕ್ಕ ಸಿಬ್ಬಂದಿಯೊಡನೆ ಅಲ್ಲಿಗೆ ಬಂದಾಗ, ಕೋಣೆಗೆ ಹಿಂತಿರುಗಿದ್ದ ನಾಗಯ್ಯ ಕಿಟಕಿಯಿಂದ ಕೋಲನ್ನು ದೂಡಿ ನಾಯಿಗಳನ್ನು ಓಡಿಸಲು ಯತ್ನಿಸುತ್ತಿದ್ದ.

ಇನ್ಸ್ಪೆಕ್ಟರು ನಾಗಯ್ಯನ ಕೋಣೆ ಬಾಗಿಲು ತಟ್ಟಿದರು. ಬಾಗಿಲು ತೆಗೆದಾಗ ನಾಯಿಗಳು ನಾಗಯ್ಯನ ಮಂಚದ ಕೆಳಕ್ಕೆ ಓಡಿ, ಚೀಲವನ್ನು ಕಚ್ಚಿಕೊಂಡು ಬಂದು ಇನ್ಸ್ಪೆಕ್ಟರ ಹತ್ತಿರ ನಿಂತವು.

ಅಷ್ಟು ಹೊತ್ತಿಗೆ, ಐ. ಜಿ. ಪಿ. ಅವರ ಧರ್ಮಪತ್ನಿ, ರಾಜಕುಮಾರಿ ಅವಳ ದಾದಿ ಎಲ್ಲರೂ ರಾಜಕುಮಾರಿಯ ಮೋಟಾರಿನಲ್ಲಿ ಅಲ್ಲಿಗೆ ಬಂದರು.

ರಾಜಕುಮಾರಿಯ ದಾದಿ ನಾಗಯ್ಯನನ್ನು ನೋಡಿದಳು. ದಾದಿ ಆಗುವುದಕ್ಕೆ ಮೊದಲು ಆಕೆ ಹಾಸ್ಟೆಲಿನ ಜವಾನಿಯಾಗಿದ್ದಳು. ಆಗ ನಾಗಯ್ಯ ಅವಳಿಗೆ ಏನೆಲ್ಲಾ ಆಸೆ ತೋರಿಸಿ ಎಷ್ಟೆಲ್ಲಾ ರೋಗಗಳನ್ನು ಬರಸಿದ್ದನೋ, ಅದು ಅವಳಿಗೇ ಗೊತ್ತು. ಅದೆಲ್ಲಾ ನೆನಪಾಗಿ ದಾದಿ ಹೇಳಿದಳು, "ಇವರೇನ್ಮ್ಮ ಬ್ಯಾಡ್‌ಮಿಂಟನ್ ಕ್ಲಬ್ಬಿನ ಹತ್ತಿರ ಸುಳಿದಾಡ್ತಾ ಇದ್ದರು, ಇವತ್ತು ಸಂಜೆ." ಎಂದು.

ಮಾಲು ಸಹಿತ ಕಳ್ಳ ಸಿಕ್ಕ. ಸಾಕಷ್ಟು ಸಾಕ್ಷಿಗಳೂ ದೊರಕಿತ್ತು. ಒಡವೆಗಳೆಲ್ಲಾ ಸರಿಯಾಗಿದೆಯೇ ನೋಡಮ್ಮಾ ಅಂತ ಅಧ್ಯಕ್ಷಿಣಿ ರಾಜಕುಮಾರಿಗೆ ಹೇಳಿದಳು. ಚೀಲ ತೆಗೆದು ನೋಡಿ, ರಹಸ್ಯ ಪದರದಲ್ಲಿ ಜತೆ ಹುಡುಗರು ಬರೆದ ಗುಪ್ತ ಪತ್ರಗಳು ಇದ್ದುದನ್ನು ಕಂಡು, ಎಲ್ಲಾ ಸರಿಯಾಗಿದೆಯಮ್ಮಾ ಎಂದು ರಾಜಕುಮಾರಿ ಹೇಳಿದಳು.

ನಾಗಯ್ಯನಿಗೆ ಮೂರು ವರ್ಷ ಸಜಾ ಹಾಕಿದರು. ದಾದಿ ಸೇಡುತೀರಿಸಿಕೊಂಡ ಹಾಗಾಯ್ತು. ಬಡವನ ಮಕ್ಕಳು ಕಾಟವಿಲ್ಲದೆ ಓದು ಮುಗಿಸುವಂತಾಯ್ತು.

ಅದಕ್ಕೇ ಮಗು! ಶ್ರೀಮಂತರು ಎದುರು ಬಿದ್ದರು ಅಂದರೆ ಹೆದರಬೇಕಾಗಿಲ್ಲ. ಉಪಾಯವಾಗಿ ಅವರ ಆಟಗಳಿಂದಲೇ ಅವರ ಬುಡವನ್ನು ಕತ್ತರಿಸಬಹುದು

ಎಂದು ನಮ್ಮ ಅಡುಗೂಲಜ್ಜಿ ಮೊಮ್ಮಕ್ಕಳಿಗೆ ಕಾಗೆ ನಾಗರ ಹಾವಿನ ಕತೆ ಹೇಳಿದಳಂತೆ.

ಕಾಗಕ್ಕ ಗುಬ್ಬಣ್ಣನ ಕತೆ

ಬಾಳಪೇಟೆಯ ಅಂಚಿನಲ್ಲಿ ಅಶ್ವತ್ಥಮರ ಒಂದಿತ್ತಂತೆ. ಆ ಮರದ ಪಕ್ಕದಲ್ಲೇ ಬೇವಿನಮರ ಒಂದಿತ್ತಂತೆ. ಅಶ್ವತ್ಥಮರದ ಮೇಲೆ ಕಾಗಕ್ಕ ಗೂಡು ಕಟ್ಟಿಕೊಂಡು ಗಂಡ, ಮಕ್ಕಳ, ಜತೆ ವಾಸಮಾಡಿಕೊಂಡಿತ್ತಂತೆ. ಓದಿದ ಹುಡುಗಿ ಕಾಗಕ್ಕ. ಬೆಡಗಿನ ಹೆಣ್ಣು ಕಾಗಕ್ಕ. ಹೀಗಾಗಿ ಸಂಸಾರವನ್ನು ನಿಭಾಯಿಸ್ತಾ ಇದ್ದರೂ, ಸಿನೀಮಾಗೆ ಹೋಗುವುದನ್ನಾಗಲೀ, ನಾಟಕ ನೋಡುವುದನ್ನಾಗಲೀ, ಸಂತೋಷ ಕೂಟಗಳಿಗೆ ಹೋಗುವುದನ್ನಾಗಲೀ ಯಾವುದನ್ನೂ ಬಿಟ್ಟಿರಲಿಲ್ಲವಂತೆ.

ಅವತ್ತು ಭಾನುವಾರ. ಕಾಗಕ್ಕ ಗಂಡನಿಗೆ ಹೇಳಿದಳಂತೆ, "ಇವತ್ತು ಎಲ್ಲರೂ ಹೋಟಲಿಗೆ ಹೋಗಿ ಊಟಮಾಡೋಣ ಅಂದ್ರೆ. ಕಡುಬು ತಿಂದು ತುಂಬಾ ದಿವಸಗಳಾಯ್ತು. ಮಧ್ಯಾಹ್ನ ಮ್ಯಾಟನಿ ಷೋ ನೋಡಿಕೊಂಡು ಸಂಜೆ ಮುಂದೆ ಹಿಂತಿರುಗೋಣ, ಇವತ್ತು ರಜಾ ಅಲ್ಲವೇ" ಅಂತ.

"ನನಗೆ ರಜಾ ಎಲ್ಲಿ ಬಂತೆ! ಇವತ್ತು ಸಜಾ. ನಮ್ಮ ಆಫೀಸರು ಮನೆಗೆ ಬಾ ಅಂತ ಹೇಳಿದ್ದಾರೆ, 'ಸರ್ಕಾರಕ್ಕೆ ವರದಿ ಒಪ್ಪಿಸಬೇಕು. ವಿಷಯಗಳನ್ನೆಲ್ಲಾ ಇವತ್ತು ರಜಾದಿನ ಕೂತುಕೊಂಡು ಸರಿಮಾಡಿ ಬಿಡೋಣ. ಆಫೀಸಿನಲ್ಲಿ ಬರೋರು ಹೋಗೋರು, ಇವರ ಕಾಟದಲ್ಲಿ ಕೆಲಸಮಾಡುಕ್ಕೆ ಆಗುಲ್ಲ' ಅಂತ ಹೇಳಿದ್ದಾರೆ. ಮಧ್ಯಾಹ್ನ ಊಟ ಮಾಡಿಕೊಂಡು ಹೊರಡಬೇಕು" ಅಂತ ಹೇಳಿದನಂತೆ.

"ಹಾಗೇ ಅಂದ್ರೆ! ಹಾಗಾದ್ರೆ ಮಕ್ಕಳಿಗೆಲ್ಲಾ ಎರದು ಬಿಡ್ತೀನಿ. ಒಂದು ಸಾರು, ಒಂದು ಹುಳಿ, ಒಂದ ಅನ್ನ ಬೇಯಿಸಿ ಬಿಡಿ. ಹನ್ನೊಂದಕ್ಕೆ ಊಟ ಮಾಡ್ಕೊಂಡು ಹೋಗೋರಂತೆ" ಅಂತ ಕಾಗಕ್ಕ ಕೊಕ್ಕಿಗೆ ಕೊಕ್ಕು ತಾಕಿಸಿ ಲೊಚಗುಟ್ಟಿದಳಂತೆ.

ಗಂಡ ಅಡಿಗೆ ಮನೇಲಿ ಒಲೆ ಹತ್ತಿಸ್ತಾ ಇದಾನೆ. ಕಾಗಕ್ಕ ಮಕ್ಕಳಿಗೆ ಎಣ್ಣೆ ಒತ್ತುತ್ತಾ ಇದ್ದಳಂತೆ. ಬಾಗಿಲಲ್ಲಿ ಯಾರೋ ಕಾಗಕ್ಕ ಕಾಗಕ್ಕ ಅಂತ ಕೂಗಿದ ಹಾಗಾಯ್ತಂತೆ. ಎಣ್ಣೆ ಒತ್ತುತ್ತಾ ಇದ್ದ ಕಾಗಕ್ಕ ಅಲ್ಲಿಂದಲೇ "ಮಕ್ಕ

ಳಿಗೆ ಎರೀತಾ ಇದೀನಿ, ಆಮೇಲೆ ಬಾಪ್ಪ" ಅಂತ ಕೂಗು ಹಾಕಿದಳಂತೆ. ಅಡಿಗೆ ಮನೆಗೆ ಕೇಳಿಸೋಹಾಗೆ ದೋಬಿ ಬರೋದಕ್ಕೆ ಈ ಮುಹೂರ್ತವನ್ನೇ ಕಾಯ್ತಾ ಇರ್ತಾನೆ, ಬೇಗ ಬೆಳಿಗ್ಗೆ ಬರಬಾರದೆ" ಎಂದು ಲೊಟಕಿದಳಂತೆ.



ಮಕ್ಕಳಿಗೆಲ್ಲಾ ಎರೆದಳಂತೆ. ಅಷ್ಟು ಹೊತ್ತಿಗೆ ಗಂಡ ಅಡಿಗೆ ಮಾಡಿ ಮುಗಿಸಿದ್ದನಂತೆ. ಗಂಡ ಮಕ್ಕಳನ್ನು ಎಲೆ ಹಾಕಿ ಕೂರಿಸಿ, ಕಾಗಕ್ಕ ಬಡಿಸುಕ್ಕೆ ಶುರು ಮಾಡಿದಳಂತೆ. ಆಗ ತಿರುಗಿ ಕಾಗಕ್ಕ ಕಾಗಕ್ಕ ಅಂತ ಯಾರೋ ಬಾಗಿಲು ತಟ್ಟುತ್ತಾ ಕೂಗಿದರಂತೆ. "ಮಕ್ಕಳಿಗೆ ಬಡಿಸುತ್ತಾ ಇದೀನಿ, ಆಮೇಲೆ ಬಾಪ್ಪ" ಅಂತ ಕಾಗಕ್ಕ ಉತ್ತರಿಸಿದಳಂತೆ. "ಬೆಣ್ಣೆ ಮಾರೋನು ಅಂತ ಕಾಣುತ್ತೆ.

ಬೆಳಿಗ್ಗೆ ಬಾಪ್ಪ ಅಂತ ಎಷ್ಟುಸರ್ತಿ ಹೇಳಿದ್ದೀನಿ, ಊಟದ ಹೊತ್ತಿಗೇ ಬರ್ತಾನೆ" ಅಂತ ಗಂಡ ಮಕ್ಕಳೆದುರಿಗೆ ಟೀಕೆ ಮಾಡಿದಳಂತೆ.

ಊಟಮಾಡಿಕೊಂಡು ಗಂಡ ಅಧಿಕಾರಿಗಳ ಮನೆಯತ್ತ ತಲೆಗೆ ಗುಡ್ಡೆ ಹಾಕಿಕೊಂಡು ಹೊರಟು ಹೋದನಂತೆ. ಎರಸಿಕೊಂಡಿದ್ದ ಮಕ್ಕಳೆಲ್ಲಾ ಹೊಟ್ಟೆ ತುಂಬಾ ಊಟಮಾಡಿದ್ದರಿಂದ ಮಲಗಿಕೊಳ್ಳಲು ಹೋದುವಂತೆ.

ಆಮೇಲೆ ಕಾಗಕ್ಕ ಅಡಿಗೆ ಮನೆಗೆ ಹೋಗಿ ಎರಡು ತುತ್ತು ಬಾಯಿಗೆ ಬೇಗ ಹಾಕಿಕೊಂಡು, ತನ್ನ ಕೊಠಡಿಗೆ ಹೋದಳಂತೆ. ಅಲ್ಲಿ ಬೇರೆ ಸೀರೆ ಉಟ್ಟು ಹೊಸ ರವಿಕೆ ತೊಟ್ಟುಕೊಂಡು ಶೃಂಗಾರ ಮಾಡಿಕೊಂಡಳಂತೆ.

ಅಷ್ಟು ಹೊತ್ತಿಗೆ ಪುನಃ ಕಾಗಕ್ಕ ಕಾಗಕ್ಕ ಅಂತ ಬಾಗಿಲು ಬಳಿ ಯಾರೋ ಕೂಗಿದರಂತೆ.

ಕಾಗಕ್ಕನ ಶೃಂಗಾರ ಮುಗಿದಿತ್ತಂತೆ. ಬಾಗಿಲು ತೆಗೆದಳಂತೆ. ಹೊರಗೆ ಪಕ್ಕದ ಬೇವಿನ ಮರದಲ್ಲಿ ಗೂಡು ಕಟ್ಟಿಕೊಂಡಿದ್ದ ಗುಬ್ಬಣ್ಣ ನಿಂತಿದ್ದನಂತೆ. "ಬಾ! ಗುಬ್ಬಣ್ಣ, ಈಗ ಮ್ಯಾಟನೀಗೆ ಹೋಗೋಣ. ಸಂಜೆ ಐದರ ಹೊತ್ತಿಗೆ ತಿರುಗಿ ಗೂಡು ಸೇರಿಕೋಬೇಕು. ಮಕ್ಕಳು ಏಳುವ ಹೊತ್ತು. ಅವರಿಗೆ ಕಾಫಿ ಕಾಯಿಸಿ ಕೊಡಬೇಕು" ಎಂದು ಹೇಳುತ್ತಾ, ರೆಕ್ಕೆಯ ಸೆರಗನ್ನು ಹಾರಿಸಿ ಪುರ್ರಂತ ಗುಬ್ಬಣ್ಣನ ಜತೆ ಮ್ಯಾಟನಿ ಸಿನಿಮಾಕ್ಕೆ ಹೋದಳಂತೆ.

ಕೇಳಿಸಿತೇ ಮಗು! ಕಾಗಕ್ಕ ಜಾಣ ಹೆಣ್ಣು. ಸಂಸಾರಾನೂ ನಿಭಾಯಿಸಿಕೊಂಡು ತನ್ನ ಮಜದ ಜೀವನಾನೂ ನಡೆಸಿಕೊಂಡಳು. ಅದಕ್ಕೇ ಮಗು! ಏನು ತೆಗೆದುಕೊಂಡರೂ, ಬದಲೀಗೆ ಅಂತ ಒಂದನ್ನು ಇಟ್ಟುಕೊಂಡಿರಬೇಕು

ಎಂದು ನನ್ನ ಅಡುಗೂಲಜ್ಜಿ ಕಾಗಕ್ಕ ಗುಬ್ಬಣ್ಣನ ಕತೆಯನ್ನು ಹೇಳಿದಳಂತೆ.

ಸಿಂಹ ಇಲಿಯ ಕತೆ

ಇಂದಾನೊಂದು ಕಾಲದಲ್ಲಿ ಒಂದು ಸಿಂಹ ಇತ್ತಂತೆ. ಕಾಡಿನಲ್ಲಿ ರಾಜ ಅಂತ ಹೆಸರಿಟ್ಟುಕೊಂಡು ನಾಡಿನ ರಾಜ್ಯಪಾಲರಂತೆ, ಶಿಖಂಡಿಯಾಗಿರುವ ಬದಲು, ಮುಖ್ಯ ಮಂತ್ರಿ ಅಂತ ಹೆಸರಿಟ್ಟುಕೊಂಡು ರಾಜ್ಯಭಾರ ಮಾಡೋದು ಲೇಸು ಎಂದು ಯೋಚಿಸಿತಂತೆ. ಘರ್ಜಿಸಿ, ಹೆದರಿಸಿ, ಬೆದರಿಸಿ, ಚುನಾವಣೇಲಿ ಗೆದ್ದು ಮುಖ್ಯ ಮಂತ್ರಿ ಅಂತ ಪದವಿ ಗಿಟ್ಟಿಸಿಕೊಂಡಿತಂತೆ. ಬೆಂಬಲಕ್ಕೆಂದು ತೋಳಗಳನ್ನೂ ಪುಢಾರಿ ನರಿಗಳನ್ನೂ ಫೌಜು ಕಟ್ಟಿಕೊಂಡು ಮಜದ ಬಾಳು ನಡಸುತ್ತಾ ಇತ್ತಂತೆ.

ಒಂದು ರಾತ್ರಿ ಏನಾಯ್ತಂತೆ ಅಂತ? ಯಾವುದೋ ಸಂತೋಷ ಕೂಟಕ್ಕೆ ಹೋಗಿ ಗಡದ್ದು ಮೆದ್ದು, ಯಾರ ಜತೆಯೋ ಹೋಗಿ ಲಲ್ಲೆಯಾಡಿ ಬೆಳಗಿನ ಝಾವದ ಹೊತ್ತಿಗೆ ತನ್ನ ಗುಹೆಗೆ ಬಂದು ಮಲಗಿತಂತೆ. ಎಂತೆಂತದೋ ಕೆಟ್ಟ ಕೆಟ್ಟ ಕನಸು. ಯಾವುದೋ ಹೊಸ ಸಿಂಹವೊಂದು ಬಂದು ಗುದ್ದಿದಂತೆ ಕನಸು. ಕನವರಿಸಿಕೊಂಡಿತಂತೆ ಸಿಂಹ.

ಅಷ್ಟು ಹೊತ್ತಿಗೆ ಬಾಗಿಲ ಹತ್ತಿರ "ಧಣಿಗಳೇ ಧಣಿಗಳೇ" ಎಂದು ಯಾರೋ ಕೂಗಿದ ಹಾಗಾಯಿತಂತೆ. ಈ ಹೊತ್ತಿನಲ್ಲಿ ಯಾರು ಬಂದು ಕರೆಯೋರು ಅಂತ ರೇಗಿಕೊಂಡೇ ಸಿಂಹ ಎದ್ದುಹೋಗಿ ಬಾಗಿಲು ತೆಗೆಯಿತಂತೆ. ಹೊರಗೆ ಒಂದು ಇಲಿ ನಿಂತಿತ್ತಂತೆ. "ಬುದ್ಧಿಯಿಲ್ಲದ ಅಲ್ಪ ಪ್ರಾಣಿಯೇ! ನನ್ನ ನಿದ್ದೆ ಕೆಡಿಸುಕ್ಕೆ ಯಾಕೆ ಬಂದೆ? ನನ್ನ ಕಾರ್ಯದರ್ಶೀನ ಹೋಗಿ ನೋಡಬೇಕಾಗಿತ್ತು; ಮೊದಲು, ಈ ಅಪರಾಧಕ್ಕೆ ಶಿಕ್ಷೆಮಾಡಲೇಬೇಕು. ಬಡಿದು ಅಪ್ಪಚ್ಚಿ ಮಾಡ್ತೀನಿ ಎಂದು ಪಂಜವನ್ನು ಎತ್ತಿತಂತೆ.

ಆಗ ಇಲಿ ಅಡ್ಡಬಿದ್ದು ದೈನ್ಯದಿಂದ ಹೇಳಿತಂತೆ. "ಮಹಾ ಮುಖ್ಯಮಂತ್ರಿಗಳೇ! ಹಸಿವಾಗಿತ್ತು. ಈ ಕಡೆ ಹೋಗುತ್ತಿದ್ದೆ, ಗವಿಯ ಬಾಗಿಲ ಕಂಡಿಯಲ್ಲಿ ನೋಡಿದೆ, ಗಡ್ಡ ಕಾಣಿಸಿತು. ಇಲ್ಲಿ ಯಾರೋ ಋಷಿ, ತನ್ನ ಪತ್ನಿಯೊಂದಿಗೆ ವಾನಪ್ರಸ್ಥಮಾಡ್ತಾ ಇದಾನೆ. ಏನಾದರೂ ಭಿಕ್ಷೆ ಸಿಗಬಹುದು ಅಂತ ಬಾಗಿಲ ಬಳಿ ಕೂಗಿದೆ. ತಾವು ಇಲ್ಲಿ ಪವಡಿಸಿದ್ದೀರಿ ಅಂತ ತಿಳಿಯಲಿಲ್ಲ. ಗವಿಯ ಮೇಲೆ

ತನ್ನ ಧ್ವಜ ಹಾರುತ್ತಾ ಇರಲಿಲ್ಲ. ಆದುದರಿಂದ ತಪ್ಪೆಸಗಿದೆ. ಕ್ಷಮಾಪಣೆ ಕೇಳಿ ಕೊಳ್ಳುತ್ತೇನೆ. ಪ್ರಾಣಭಿಕ್ಷೆ ನೀಡಬೇಕು" ಎಂದು ಇಲಿ ಹೇಳಿ, ಬಾಲವನ್ನು ಮುದುರಿಕೊಂಡು ಸಾಷ್ಟಾಂಗ ಎರಗಿತಂತೆ.

ಇಲಿಯ ದೈನ್ಯತೆಯನ್ನು ನೋಡಿ ಸಿಂಹಕ್ಕೆ ಜುಗುಪ್ಸೆ ಬಂದಿತಂತೆ. ಕೈ ಎತ್ತಿತಂತೆ, ಅಭಯ ನೀಡುಕ್ಕಲ್ಲ, ಅಪ್ಪಳಿಸುಕ್ಕೆ. ಅರೆ ಅಮಲಿನ ನಿದ್ರೆಯಿಂದ ಎಚ್ಚರವಾದರೆ ಅತಿ ಕೋಪ ಇರುತ್ತಲ್ಲವೇ?

ಸಾಯುವ ಕಾಲ ಸನ್ನಿಹಿತವಾಯಿತು ಎಂದು ಇಲಿಗೆ ತಿಳಿಯಿತಂತೆ. "ಕಡೇ ಪಟ್ಟು ಹಾಕೋಣ, ತುರಫ್ ಆಡಿ ನೋಡೋಣ" ಎಂದು ಇಲಿ "ಮುಖ್ಯಮಂತ್ರಿ ಮಹಾಶಯರೆ, ಹಾಗೂ ಮೃಗರಾಜರೇ! ನನ್ನನ್ನು ಉಳಿಸಿದರೆ ಮುಂದೆ ನಿಮಗೆ ಕಷ್ಟಕಾಲ ಬಂದಾಗ ಸಹಾಯ ಮಾಡ್ತೀನಿ. ಇನ್ನೆರಡು ವರ್ಷ ಗಳಲ್ಲೇ ಚುನಾವಣೆಯಾಗಲಿದೆ. ಇಲಿಯ ಸೇವೆ, ಮಳಲ ಭಕ್ತಿ ತೋರಿಸ್ತೀನಿ" ಎಂದಿತಂತೆ.

ತಟಕ್ಕನೆ ನಗು ಬಂದರೂ ಸಿಂಹ, ಚುನಾವಣೆಯ ಮಾತು ಬಂದಾಗ ವಿನಯ ಮುಖವಾಯ್ತಂತೆ. ಆದರೂ ತನ್ನ ದರ್ಪವನ್ನು ಬಿಟ್ಟು ಕೊಡಬಾರದಲ್ಲ, ಅದಕ್ಕೇ "ನಿನ್ನಂತಹ ಪುಟಾಣಿ ಇಲಿ ನನಗೇನು ಸಹಾಯ ಮಾಡಲು ಸಾಧ್ಯ. ತೋಳಗಳು, ಕತ್ತೆಕಿರುಬಗಳೂ, ನರಿಗಳೂ ನನ್ನ ನೆರಳಿನಂತೆ ಹಿಂಡು ಕಟ್ಟಿ ಕೊಂಡು ನನ್ನ ಬೆಂಬಲಕ್ಕೆ ಇದೆ. ಆದರೂ ನಿನ್ನ ಧೈರ್ಯಕ್ಕೆ ಮೆಚ್ಚಿದ್ದೇನೆ. ನಿನಗೆ ಪ್ರಾಣದಾನ ನೀಡಿದ್ದೇನೆ. ಇನ್ನುಮೇಲೆ ನನ್ನ ರಾಜ್ಯದಲ್ಲಿ ಭಿಕ್ಷೆಗೆ ಬರ ಬೇಡ. ಯಾವುದಾದರೂ ಸರಕಾರಿ ಮಂಡಿಯಲ್ಲಿ ಸೇರಿಕೊಂಡು, ಯಾರ ಕಣ್ಣಿಗೂ ಬೀಳದಂತೆ ಸುಖಬಾಳು ನಡಸಿಕೋ" ಎಂದು ಹೇಳಿತಂತೆ.

ಅನಂತ ಧನ್ಯವಾದಗಳನ್ನು ಅರ್ಪಿಸಿ ಇಲಿ ಹಿಂತಿರುಗಿತಂತೆ. ಧಣಿ ಅಂದರೆ ಹೀಗಿರಬೇಕು. ಇವರ ಕರುಣೆಯ ಋಣವನ್ನು ಅವಕಾಶ ಸಿಕ್ಕಾಗ ತೀರಿಸಲೇ ಬೇಕು ಎಂದು ಶಪಥ ಮಾಡಿಕೊಂಡಿತಂತೆ.

* * *

ಗಾಂಧಿನಗರದ, ನೆಹ್ರೂ ರಸ್ತೆಯ, ವಿನೋಬಾ ಗೃಹದಲ್ಲಿ ಏರ್ಪಡಿಸಲಾಗಿದ್ದ ಹೊಸಾ ಹೊಸ ಸರ್ಕಾರಿ ಮಳಿಗೆಯಲ್ಲಿ ಇಲಿ ಬಂದು ಸೇರಿಕೊಂಡಿತಂತೆ. ಕಂಡೂ ಕಾಣದಹಾಗೆ ತಿಂದೂ ತಿಂದೂ ಹೆಗ್ಗಣವಾಯಿತಂತೆ. ಊರ ಇಲಿಗಳಿಗೆಲ್ಲಾ

ನಾಯಕನಾಯಿತಂತೆ. ಸಮಾಜದ ಸುದ್ದಿಯೆಲ್ಲಾ ಅದಕ್ಕೆ, ಪತ್ರಿಕೆಗಳಲ್ಲಿ ಬರುವ ಮೊದಲೇ, ತಿಳಿಯುತ್ತಿತ್ತಂತೆ.

ಒಂದು ದಿನ ಇಲಿ ಮೀಸೆಯನ್ನು ತಿಕ್ಕಿಸಿಕೊಳ್ಳುತ್ತಾ ಕುಳಿತಿದ್ದಾಗ ಗಾಳಿ ಸುದ್ದಿ ಕೇಳಿಸಿತಂತೆ. "ಮುಖ್ಯಮಂತ್ರಿಗಳು ಬರೆದ ಪತ್ರಗಳು ಕೆಲವು, ಹಣ ತೆಗೆದುಕೊಂಡ ದಾಖಲೆಗಳು ಕೆಲವು, ಎಲ್ಲವೂ ಒಂದು ಹುಲಿಯ ಕೈಗೆ ಸಿಕ್ಕಿ ಬಿದ್ದಿವೆ. ಆ ಹುಲಿ ಈ ದಾಖಲೆಗಳನ್ನು ಪ್ರಕಟಿಸಿ, ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿಗಳ ಮುಖಕ್ಕೆ ಮಂಗಳಾರತಿ ಎತ್ತುತ್ತೆ" ಅಂತ.

ಇಲಿ ಮುಖ್ಯಮಂತ್ರಿಗಳ ಗುಹೆಗೆ ಹೋಯಿತಂತೆ. "ಮಹಾ ಸಚಿವರೇ! ಹೀಗೆ ಸುದ್ದಿ ಕೇಳಿಬಂತು. ದಿಟವೇ? ಇದರಲ್ಲಿ ಏನಾದರೂ ಸತ್ಯಾಂಶವಿದೆಯೇ? ಪತ್ರಿಕಾ ಹದ್ದುಗಳಿಗೆ ಈ ಸುದ್ದಿ ತಿಳಿಯುವ ಮೊದಲು ಏನಾದರೂ ಉಪಾಯ ಹೂಡಲೇಬೇಕು" ಎಂದು ಕೇಳಿತಂತೆ.

ಸಿಂಹದ ಗಡ್ಡ ಜೋತುಬಿತ್ತಂತೆ. "ದಿಟ, ಇಲಿರಾಯ, ಹುಲಿಯ ಕಡೆಯ ಹಲವರು ಸುತ್ತಲೂ ಬಲೆ ಬೀಸಿದ್ದಾರೆ. ಯಾವುದೋ ತೋಳದ ಸ್ನೇಹಿತನಿಗೆ ಪರ್ಮಿಟ್ ಕೊಡಿ ಎಂದು ಬರೆದಿದ್ದ ಗುಟ್ಟು ಕಾಗದವನ್ನು ಲಪಟಾಯಿಸಿದ್ದಾರೆ. ಯಾರು ಯಾರೋ ತಾವು ಪಡೆದ ಲಾಭಕ್ಕೆ, ಕಾಣಿಕೆಯಾಗಿ ಇಲ್ಲೊಂದು ಲಕ್ಷ ಅಲ್ಲೊಂದು ಕೋಟಿ ಕೊಟ್ಟಿದ್ದರು. ಅದಕ್ಕೆ ರಸೀತಿ ಇಲ್ಲ, ದಾಖಲೆ ಇಲ್ಲ ಎಂದಿದ್ದೆ. ಆದರೆ ಆ ಕೃತಘ್ನರು ತಮ್ಮ ಪುಸ್ತಕಗಳಲ್ಲಿ ಷರಾ ಹಾಕಿ ಖರ್ಚು ತೋರಿಸಿದ್ದಾರೆ. ಅವೆಲ್ಲವನ್ನೂ ಆ ಘಾತುಕ ಹುಲಿ ಗಿಟ್ಟಿಸಿಕೊಂಡಿದೆ. ಇದು ಪ್ರಕಟವಾದರೆ ಬಲೆಯಲ್ಲಿ ಪೂರ್ಣವಾಗಿ ಸಿಕ್ಕಿ ಬಿದ್ದಂತೆಯೇ ಆಗುತ್ತೆ. ಆಗ ರಾಜಕೀಯವಾಗಿ ನಾನು ಸತ್ತಂತೆಯೇ" ಎಂದು ಒಪ್ಪಿಕೊಂಡಿತಂತೆ.

"ಹೆದರಬೇಡ, ಸಿಂಹ, ನನಗೆ ಜೀವದಾನ ಮಾಡಿದ್ದಿ ನೀನು. ಕೃತಘ್ನ ಮನುಷ್ಯರಂತಲ್ಲ ನಾನು, ಅದಕ್ಕೇ ವಿಘ್ನೇಶ್ವರ ನನ್ನನ್ನೇ ಪಟ್ಟದ ವಾಹನವನ್ನಾಗಿ ಗೌರವಿಸಿದ್ದಾನೆ. ನನ್ನ ಕೈಲಾದ ಸಹಾಯ ಮಾಡ್ತೀನಿ. ಹೆದರಬೇಡ, ಕುಗ್ಗ ಬೇಡ" ಎಂದು ಹೇಳಿ ಹಿಂತಿರುಗಿತಂತೆ.

ತನ್ನ ಆಪ್ತರಿಗೆ ಹೇಳಿ ಹುಲಿರಾಯನ ಮನೆಯನ್ನು ಕಳ್ಳತನದಲ್ಲಿ ಆಕ್ರಮಿಸಿ ಕೊಂಡಿತಂತೆ. ಹಾಸಿಗೆಯ ತಲೆದಸಿಯಲ್ಲಿ ಹುಲಿರಾಯ ಇಟ್ಟಿದ್ದ ಕಾಗದಪತ್ರ ದಾಖಲೆಗಳನ್ನು ಉಪಾಯವಾಗಿ ಕಡಿದು ಕಡಿದು ಚಿಂದಿಮಾಡಿತಂತೆ. ಆನಂತರ

ಹಿಂತಿರುಗಿ ಬಂದು ಸಿಂಹಕ್ಕೆ ಹೇಳಿತಂತೆ. "ಹೀಗೆ ಮಾಡಿದ್ದೀನಿ; ಹುಲಿರಾಯ ಪ್ರಕಟಣೆ ಹೊಡಿಸಲಿ. ಅಸೆಂಬ್ಲಿಯಲ್ಲಿ ಆಪಾದಿಸಲಿ. ಆಗ ನೀವು ತಿರುಗಿ ಬೀಳಿ. ಸುಳ್ಳು ಸುಳ್ಳು ಆಪಾದನೆಗಳನ್ನು ಮಾಡಿ, ಮರ್ಯಾದೆಯ ಛಿದ್ರಮಾಡುವ ಹುಲಿರಾಯನ ಹವ್ಯಾಸ ಬಲು ಕೆಟ್ಟದು. ಮಾಡಿದ ಆಪಾದನೆಗಳನ್ನು ಅವ ಕಾಗದ, ದಾಖಲೆಗಳಿಂದ ಧೃಡೀಕರಿಸಿದರೆ, ಗಡ್ಡ ಬೋಳಿಸಿ, ಉಗುರು ಕತ್ತರಿಸಿ, ಹಲ್ಲು ಕೀಳಿಸಿಕೊಂಡು, ಅಧಿಕಾರದ ಜತೆಗೆ ಸಹಗಮನ ಮಾಡುತ್ತೇನೆ. ಹುಲಿರಾಯ ಧೃಡೀಕರಿಸಲಾಗದಿದ್ದರೆ, ಅವ ಇದೆಲ್ಲಾ ಮಾಡಬೇಕು ಎಂದು ಸವಾಲ್ ಹಾಕಿ" ಎಂದು ಹೇಳಿತಂತೆ.

ಇಲಿಯನ್ನು ತಬ್ಬಿಕೊಂಡು ಸಿಂಹ "ನಿನ್ನ ಸಹಾಯವನ್ನು ಎಂದೆಂದಿಗೂ ಮರೆಯುಲ್ಲ. ಸರಕಾರಿ ಮಳಿಗೆಯಲ್ಲಿ ನಿನ್ನದೇ ಪಾರುಪತ್ಯ, ಎಂದೆಂದಿಗೂ ಇರುವಂತೆ ಫರ್ಮಾನ್ ಹೊರಡಿಸುತ್ತೇನೆ" ಎಂದು ಹೇಳಿತಂತೆ.

ಹುಲಿರಾಯ ಪತ್ರಿಕೆಗಳಲ್ಲಿ ಸಿಂಹದ ಮೇಲಿನ ಆಪಾದನೆಗಳನ್ನು ಪ್ರಕಟಿಸಿತಂತೆ. ಅಸೆಂಬ್ಲಿಯಲ್ಲಿ ಮಾರನೆ ದಿನ ಈ ವಿಷಯ ಎತ್ತಬೇಕು ಅನ್ನುವಾಗ ತಲೆದಿಂಬಿನ ಕೆಳಗೆ ಹುಡುಕಿತಂತೆ. ಅಲ್ಲಿ ಇಲಿಯ ಹೊಲಸುಮಾತ್ರ ಚಿಂದಿ ಕಾಗದಗಳ ಜತೆ ಇದ್ದುದನ್ನು ಕಂಡು ಅಯ್ಯೋ ಕೆಟ್ಟೆ ಎಂದು ಅತ್ತಿತಂತೆ. ಅಸೆಂಬ್ಲಿಯಲ್ಲಿ ಆ ಮಾತನ್ನು ಹುಲಿರಾಯ ಎತ್ತಲೇ ಇಲ್ಲ.

ಪತ್ರಿಕೆಗಳಲ್ಲಿ ಬಂದ ಪ್ರಕಟಣೆಗೆ ಸಿಂಹ ಬಿಸಿ ಬಿಸಿ ಉತ್ತರವನ್ನು ಹುಲಿರಾಯನಿಗೆ ಬರೆ ಹಾಕಿದಂತೆ ಬರೆಯಿತಂತೆ.

ಅದಕ್ಕೇ ಮೊಮ್ಮಕ್ಕಳಿರಾ! ಪ್ರಜಾರಾಜ್ಯದ ಈ ದಿನಗಳಲ್ಲಿ ಹುಳುಹುಪ್ಪಟೆ, ಜಿರಳೆ, ಸೊಳ್ಳೆ ಅಂತ ಅಲಕ್ಷ್ಯಮಾಡಬೇಡಿ. ಎಲ್ಲರಿಗೂ ಒಳ್ಳೆಯವರಂತೆ ನಟಿಸಿ ಎಲ್ಲರ ತಲೆಯನ್ನೂ ನುಣ್ಣಗೆ ಮಾಡಿ.

ಎಂದು ನವ್ಯ ಅಡುಗೂಲಜ್ಜಿ ಸಿಂಹ ಇಲಿಯ ಕತೆಯನ್ನು ಹೇಳಿದಳಂತೆ.

ತೋಳ ಬಂತು ತೋಳ

ಇಂದಾನೊಂದು ಕಾಲದಲ್ಲಿ ಬಿನ್ನಾಣ ಮಂಗಲ, ಬಿನ್ನಾಣ ಮಂಗಲ, ಅಂತ ಒಂದು ಊರಿದೆಯಂತೆ. ಆ ಊರಿನಲ್ಲಿ ರಾಮಾಚಾರಿ ಅಂತ ಒಬ್ಬ ಸಂಸಾರ ಮಾಡಿಕೊಂಡಿದ್ದನಂತೆ. ಮೂರು ಮೈಲಿ ದೂರದಲ್ಲಿದ್ದ ಬಸವನಪುರದಲ್ಲಿ ಕಳ್ಳೆ ಕಾಯಿ ಪರಸೆಗೆ ಅಂತ ಅವನು ಹೊರಡಲು ಅಣಿಮಾಡಿಕೊಂಡಾಗ ಅವನ ದೊಡ್ಡ ಮಗಳು ಚಿನ್ನಕ್ಕ, "ನಾನೂ ಬರ್ತೀನಿ" ಅಂತ ಹಠ ಹಿಡಿದು ಗೋಗರೆದಳಂತೆ. ಸಾಮಾನು ಹೊತ್ತುಕೊಂಡು ಬರುಕ್ಕೆ ಹದಿನೆಂಟರ ಪ್ರಾಯದ ಹೆಣ್ಣಾಳು ಪುಕ್ಕಟೆ ಸಿಕ್ಕಿದ ಹಾಗಾಯ್ತು ಅಂತ ರಾಮಾಚಾರಿ ಯೋಚಿಸಿ "ಆಗಲಿ, ಬಾ, ಚಿನ್ನ; ಸಂಜೆ ಮುಂದೆ ಹಿಂತಿರುಗಿ ಬರೋಣ" ಎಂದು ಒಪ್ಪಿದನಂತೆ. ಮಾರನೆ ದಿನ ಬೆಳಗಿನ ಝಾಮು ತಂದೆ ಮಗಳು ಇಬ್ಬರೂ ಹೊರಟರು.

ಬಿನ್ನಾಣ ಮಂಗಲದಿಂದ ಬಸವನಪುರಕ್ಕೆ ಹೋಗೋ ರಸ್ತೇಲಿ ಮೊದಲು ಸಿದ್ದಿಹಳ್ಳಿ ಸಿಗುತ್ತೆ. ಅಲ್ಲೇ ಪಾಪಾಸ್ ಕಳ್ಳಿ ಹೊರವಾಗಿ ಬೆಳೆದಿರೋದು. ಇನ್ನೂ ಸ್ವಲ್ಪ ದೂರದಲ್ಲಿ ಕೊಕ್ಕರೆ ಕೊಳ ಸಿಗುತ್ತೆ. ಅಲ್ಲೇ ತಾಳೆಗಿಡ ಪಸಂದಾಗಿ ಬೆಳೆದಿರೋದು. ತಾಳೆ ಪೊದೇಲಿ ನಾಗರಹಾವು ಹಾಗಿರಲಿ, ತೋಳ, ಚಿರತೆ ಕೂಡ ಹುದುಗಿರಬಹುದು, ಅಷ್ಟು ದಟ್ಟವಾಗಿ ಬೆಳೆದಿತ್ತು. ಇನ್ನೂ ಸ್ವಲ್ಪ ಮುಂದೆ ಹೋದರೆ, ಈಚಲ ತೋಪು ಸಿಗುತ್ತೆ, ಈ ತೋಪಿನಲ್ಲಿ ಹುಲಿ ಕೂಡ ಹುದುಗಿರುತ್ತೆ ಅಂತ ಪ್ರತೀತಿ. ಅದಕ್ಕೇ ರಾಮಾಚಾರಿ ಹೇಳಿದ, ಹೊರಡುವಾಗ "ಚಿನ್ನಿ: ನನ್ನ ಹಿಂದೇನೆ ಬರ್ತಾ ಇರು ದಾರಿಂದುದ್ದಕ್ಕೂ ಪೊದೆ ತೋಪುಗಳಿವೆ. ಹಾವು ಹಲ್ಲಿ; ಹುಲಿ ತೋಳ, ಎಲ್ಲವೂ ಇರಬಹುದು. ಹುಷಾರಾಗಿ ಕಣ್ಣಲ್ಲಿ ಕಣ್ಣಿಟ್ಟುಕೊಂಡು ಬಾ" ಅಂತ.

ಸರಿ, ಇಬ್ಬರೂ ಹೊರಟರು. ರಾಮಾಚಾರಿ ಮುಂದೆ ಮುಂದಕ್ಕೆ ಹೋಗ್ತಾ ಇದಾನೆ. ಅಕ್ಕಪಕ್ಕದಲ್ಲಿರೋ ಗಿಡಗಳ ಹೂವು, ಹಾಡೋ ಹಕ್ಕಿಗಳು ಇವು ಗಳನ್ನೆಲ್ಲಾ ನೋಡ್ತಾ ನೋಡ್ತಾ ಚಿನ್ನೀನೂ ಹಿಂಬಾಲಿಸುತ್ತಾ ಇದಾಳೆ. ಪಾಪಾಸ್ ಕಳ್ಳಿ ಪೊದೆ ಹತ್ತಿರ ಏನೋ ಸರ ಸರ ಅಂದಹಾಗೆ ಆಯ್ತು. ಅಷ್ಟು ಹೊತ್ತಿಗೆ ಅಪ್ಪ ತುಂಬಾ ದೂರದಲ್ಲಿ ಹೋಗ್ತಿದ್ದ. ತೋಳ ತೋಳ ಅಂತ

ಕೂಗಿಕೊಂಡಳು. ಗಟ್ಟಿಯಾಗಿ ಕೂಗಿದಳು. ರಾಮಾಚಾರಿಗೆ ಕೂಗು ಕೇಳಿಸಿತು. ದೌಡೋಡಿ ಹಿಂದಕ್ಕೆ ಬಂದ. "ಎಲ್ಲೇ! ತೋಳ!" ಎಂದು ದೊಣ್ಣೆ ಎತ್ತಿಕೊಂಡೇ ಕೇಳಿದ. ಪಾಪಾಸ್ ಕಳ್ಳಿ ಪೊದೆಗೆ ಕಲ್ಲು ಬೀರಿದ. ಅಲ್ಲಿ ಏನೂ ಇತ್ತಿಲ್ಲ. "ಸುಮ್ಮ ಸುಮ್ಮನೆ ಹೆದರಿಕೊಂಡು ಕೂಗಬೇಡ, ಚಿನ್ನಿ" ಅಂತ ಹೇಳಿ ರಾಮಾಚಾರಿ ಮುಂದಕ್ಕೆ ಪಾದ ಬೆಳೆಸಿದ.

ತಾಳೆ ಪೊದೆಯ ಹತ್ತಿರ ಕೂಡ ಏನೋ ಸರಸರ ಅಂದ ಹಾಗೆ ಆಯ್ತು. ಯಾರೋ ಕೆಮ್ಮಿದ ಹಾಗೆ ಆಯಿತು. ಚಿನ್ನಿ ನೋಡ್ತಾಳೆ, ಅಲ್ಲಿ ಯಾವ ನರ ಪಿಳ್ಳೆಯೂ ಇರಲಿಲ್ಲ. ಯಾವನಾದರೂ ಚೆಂದುಳ್ಳಿ ಹುಡುಗ ಇಲ್ಲಿದ್ದಿದ್ದರೆ, ಅವನೆರಡು ತಾಳೆ ಬೊಂತೆಗಳನ್ನಾದರೂ ಕಿತ್ತುಕೊಡ್ತಿದ್ದ ಅಂತ ಅನ್ನಿಸ್ತು, ಪ್ರಾಯದ ವಯಸ್ಸಿನ ಚಿನ್ನಿಗೆ. ಅಲ್ಲಿ ಯಾವ ಹುಡುಗನೂ ಇಲ್ಲದೆ ಇದ್ದರೂ ಕೆಮ್ಮಿದ ಶಬ್ದ ಕೇಳಿಸುತ್ತಲೆ ಇತ್ತು.

ತೋಳ ಬಂತು ತೋಳ ಅಂತ ಕೆಟ್ಟದಾಗಿ ಕಿರಿಚಿಕೊಂಡಳು. ಓಡೋಡಿ ಬಂದ ರಾಮಾಚಾರಿ. ಎಲ್ಲಿ ಚಿನ್ನಿ, ತೋಳ ಅಂದ. ತಾಳೆಪೊದೆ ತೋರಿಸಿದಳು. ಇಲ್ಲಿ ಯಾವ ತೋಳ ಇರುತ್ತೈ, ಇಲ್ಲಿ ಹಾವಿನ ಕಾಟ ಹೆಚ್ಚು. ನನ್ನ ಹಿಂದೇನೇ ಬಾ ಅಂತ ರಾಮಾಚಾರಿ ಮುಂದೆ ಹೊರಟ.

ಕಳ್ಳಿಕಾಯಿ ಪರಸೇಗೆ ಹೋಗೋ ಹೊತ್ತಿಗೆ ದೇವರ ಮಂಗಳಾರತಿ ಆಗೇ ಬಿಟ್ಟಿರುತ್ತೇನೋ. ಬಂದವರೆಲ್ಲ ಹಿಂತಿರುಗಿ ಬಿಟ್ಟಿರುತ್ತಾರೇನೋ; ಹಾಗಾದರೆ ತನ್ನ ಹಳೇ ಸ್ನೇಹಿತೆಯರೆಲ್ಲಾ ತಂತಮ್ಮ ಹಳ್ಳಿಗೆ ಹೋಗಿಬಿಟ್ಟಿರುತ್ತಾರೇನೋ? ಈ ಚಿನ್ನೀನ ಕರಕೊಂಡು ಬರಲೇ ಬಾರದಾಗಿತ್ತು. ತೋಳ ಬಂತು ಅಂತ ಆಗಲೇ ಎರಡು ಸರ್ತಿ ಕೂಗಿ ಅಷ್ಟು ಹೊತ್ತು ಕಳೆಸಿದಳು ಅಂತ ರೇಗ್ತಾನೇ ರಾಮಾಚಾರಿ ಉದ್ದಾನೆ ಹೆಜ್ಜೆಗಳನ್ನು ಹಾಕುಕ್ಕೆ ಶುರುಮಾಡಿದ.

ಈಚಲ ತೋಪು ಸಿಕ್ಕಿತು. ಚಿನ್ನೀ ತೋಪಿನ ಹತ್ತಿರ ಬಂದಾಗ ರಾಮಾಚಾರಿ ಕೂಗು ದೂರ ಮುಂದಿದ್ದ. ಈಚಲ ಮರದಿಂದ ಕಿರುಮೀಸೆ ಕುಣಿಸುತ್ತ ಒಬ್ಬ ಯುವಕ ದುಮುಕಿದ. ಚೆಂದುಳ್ಳಿ ಚಿನ್ನಿಯ ಹತ್ತಿರಕ್ಕೆ ಓಡಿ ಬಂದ. ಅವನ ಬಂದ ರಭಸ, ಕೆಂಪೇರಿದ್ದ ಕಣ್ಣು, ಇಳಿದು ಬಂದ ಮರ ಎಲ್ಲವನ್ನೂ ನೋಡಿದ ಚಿನ್ನಿಗೆ ಬಲು ಭಯವಾಯಿತು.

ತೋಳ ಬಂತು ತೋಳ ಅಂತ ಕೂಗಿಕೊಂಡಳು. ಆಗಲೇ ಹೊತ್ತಾಗಿ

ಹೋಯ್ತು, ಈ ಹೆಣ್ಣು ಕಾರಣವಿಲ್ಲದೆ ಬೆದರಿ ಕೂಗುತ್ತೆ. ಈಚಲ ಮರದ ತೋಪಿನಲ್ಲಿ ತೋಳ ಎಲ್ಲಿರುತ್ತೆ ಅಂತ ರಾಮಾಚಾರಿ ಮುಂದಕ್ಕೆ ನಡದೇ ಬಿಟ್ಟ.

ಕೆಂಗಣ್ಣಿನ ಯುವಕ ಚಿನ್ನೀನ ಹಿಡಿದುಕೊಂಡು, ಹೆದರಬೇಡ ಚಿನ್ನಿ, ನಾನೇನು ತೋಳ ಅಲ್ಲ. ನಿನ್ನ ಜತೆ ಎರಡು ಮಾತಾಡೋಣ, ಎರಡು ಎಲೆ ಅಗಿಯೋಣ ಅನ್ನಿಸಿತು. ನಿಮ್ಮಪ್ಪ ಜತೇಲಿ ಇದ್ದ. ಅದಕ್ಕೇ ಈ ಉಪಾಯ ಹೂಡಿದೆ. ಪಾಪಾಸ್ ಕಳ್ಳಿ ಪೊದೇಲಿ ಹುದುಗಿಕೊಂಡು ಸರಸರ ಶಬ್ದ ಮಾಡಿದೆ. ಅಲ್ಲಿಂದ ಅಡ್ಡ ದಾರೀಲಿ ಓಡಿ ಬಂದು, ತಾಳೆ ತೋಪಿನಲ್ಲಿ ಮರೇಲಿದ್ದು ಕೆಮ್ಮಿದ ಹಾಗೆ ಮಾಡಿದೆ. ಹಳೆ ಕತೇಲಿ ಹೇಳಿದ ಹಾಗೆ ತೋಳ ಬಂತು ತೋಳ ಅಂತ ನೀನು ಕೂಗಿದೆ. ನಿಮ್ಮಪ್ಪ ದೊಣ್ಣೆ ತೊಗೊಂಡು ಓಡಿ ಬಂದ. ಈಚಲ ತೋಪಿನಲ್ಲಿ ಅವಿತುಕೊಂಡು, ನೀನು ಬಂದಾಗ ದುಮುಕಿದೆ. ತೋಳ ಬಂತು ಅಂತ ನೀ ಕೂಗ್ತಿ ಅಂತ ಗೊತ್ತಿತ್ತು. ಆದರೆ ಹಳೆ ಕತೇಲಿ ಹೇಳಿದ ಹಾಗೆ, ನಿಮ್ಮಪ್ಪ ಮುಂದಕ್ಕೆ ಹೊರಟು ಹೋಗ್ತಾನೆ ಅಂತಲೂ ಗೊತ್ತಿತ್ತು ನನಗೆ.

ತೊಗೋ ಎರಡು ದಿವನಾದ ತಾಳೆ ಬೊಂತೆ ತಂದಿದೀನಿ ಅಂತ ಎರಡು ಹೊಂಬಣ್ಣದ ಬೊಂತೇನ ಅವಳ ಮುಂದೆ ನೀಡಿದ. ಅವಳ ಮುಖಾನೂ ಹೊಂಬಣ್ಣವಾಗಿತ್ತು, ಯುವಕ ತೋಳ ಮೇಲೆ ಕೈಯ್ಯಾಡಿಸಿ ಅವಳನ್ನು ನಿಲ್ಲಿಸಿದಾಗ. ಅವಳು ಕೂಗಿಕೊಂಡಿದ್ದೇನೋ ದಿಟ. ಆದರೆ ಕೂಗಿಕೊಂಡಾಗ ಮೊಗ್ಗು ಅರಳಿದಂತೆ, ಮೈಯಲ್ಲಾ ಅರಳಿದಂತೆ ಆಯಿತು.

ಚಿನ್ನಿ ಹುಡುಗ ತೋಪಿಗೆ ಹೋದರು, ರಾಮಾಚಾರಿ ಪರಸೆಗೆ ಹೋದ.

ಎಂದು ನಮ್ಮ ಅಡುಗೂಲಜ್ಜಿ ತೋಳ ಬಂತು ತೋಳದ ಕತೆ ಹೇಳಿದಳು.

ಆನೆ ಚಿಪ್ಪಿಗನ ಕತೆ

ಇಂದಾನೊಂದು ಊರಿನಲ್ಲಿ ಒಂದು ಆನೆ ಇತ್ತಂತೆ. ಆ ಊರಿನ ದೇವಸ್ಥಾನದ ಆನೆಯಂತೆ ಅದು. ದಿನಾಗಲೂ ಬೆಳಿಗ್ಗೆ ದೇವಸ್ಥಾನದಿಂದ ಹೊರಟು ಊರ ಕೆರೆಗೆ ಹೋಗಿ ಅಲ್ಲಿ ಸ್ನಾನಮಾಡಿಕೊಂಡು ಎರಡು ಕೊಡಗಳಲ್ಲಿ ನೀರನ್ನು ದೇವರ ಅಭಿಷೇಕಕ್ಕೆ ತರುವ ವಾಡಿಕೆಯಂತೆ. ಅದಕ್ಕೆ ಕೆರೆಗೆ ಹೋಗುವಾಗ ತಿಳಿದವರ ಮನೆಬಾಗಿಲಲ್ಲಿ ನಿಂತು, ಮನೆಯವರು ಕೊಟ್ಟ ಬೆಲ್ಲ, ಬೇಲದಹಣ್ಣು, ಅಕ್ಕಿ ಇತ್ಯಾದಿಗಳನ್ನು ತಿಂದು, ಮುಂದೆ ನಡೆಯುವ ವಾಡಿಕೆ. ದೇವಸ್ಥಾನದ ಸಿಬ್ಬಂದಿ ಯವರು ಮನೆ ಮನೆಗೂ ಹೋಗಿ ಹೆದರಿಸಿ ಬೆದರಿಸಿ ಕಾಣಿಕೆಗಳನ್ನು ಪಡೆಯುವು ದಿಲ್ಲವೇ, ಅದೇ ಪಾಠವನ್ನು ದೇವಸ್ಥಾನದ ಆನೆಯೂ ಅನುಸರಿಸಿದ್ದರಲ್ಲಿ ಆಶ್ಚರ್ಯವೇನು ?

ಆ ಊರಿನಲ್ಲಿ ಒಬ್ಬ ಚಿಪ್ಪಿಗ ಕೆರೆ ಬೀದೀಲಿ ಮನೆ ಮತ್ತು ಅಂಗಡಿಯನ್ನು ಮಾಡಿಕೊಂಡಿದ್ದನಂತೆ. ಚಿಪ್ಪಿಗ ಅಂದರೆ ದರ್ಜಿ ಮಾತ್ರ ಅಲ್ಲ ಅವನು. ತಯಾರಾದ ಉಡುಪುಗಳನ್ನು ಹೊಲಿದು, ಊರಿನ ಪೋಲೀಸ್ ಇಲಾಖೆಗೆ ಸರಬರಾಜು ಮಾಡುವ ಭಾರೀ ಚಿಪ್ಪಿಗನಂತೆ. ತುಂಬಾ ಮೋಸಮಾಡಿ, ಹೇರಳ ಹಣ ಸಂಪಾದಿಸುತ್ತಿದ್ದ ಅವನಿಗೆ ದೇವರು ಅಂದರೆ ಬಲು ಭಯವಂತೆ. ಭಯ ಇರಬೇಕಾದ್ದೇ !! ಅಷ್ಟು ಅನ್ಯಾಯ ಮಾಡಿದವನಿಗೆ ಮನಸ್ಸು ಹುಳ್ಳ ಹುಳ್ಳಗೆ ಇರುವುದು ನ್ಯಾಯವೇ ! ಅದಕ್ಕೇ ಚಿಪ್ಪಿಗನು ದೇವಸ್ಥಾನದ ಆನೆಗೆ ದಿನಾಗಲೂ ಒಂದಚ್ಚು ಬೆಲ್ಲವನ್ನು ಬೆಳಿಗ್ಗೆ ಕೊಟ್ಟು, ತನ್ನ ಪಾಪ ಪರಿಹಾರವನ್ನು ಮಾಡಿ ಕೊಳ್ಳುತ್ತಿದ್ದನಂತೆ.

ಒಂದು ಸಾರಿ ಪೋಲೀಸ್ ಇಲಾಖೆಗೆ ಹೊಸ ಅಧಿಕಾರಿ ಬಂದನಂತೆ. ಅವ ಬಲು ಕರಾಚೂರಿ ಮನುಷ್ಯನಂತೆ. ಸಣ್ಣ ಪುಟ್ಟ ಲಂಚಕ್ಕೆ ಎಂದೂ ಕೈ ಹಾಕಿ ದವನಲ್ಲವಂತೆ. ಹಾಗಾಗಿ ಚಿಪ್ಪಿಗ ಸಮವಸ್ತ್ರಗಳನ್ನು ಸರಬರಾಜು ಮಾಡಿದಾಗ ಅರ್ಧಕ್ಕರ್ಧದಷ್ಟು ಸರಿಯಾಗಿಲ್ಲ ಎಂದು ವಾಪಸು ಮಾಡಿದನಂತೆ. ಅಲ್ಲಿ ಇಲ್ಲಿ ಚಿಪ್ಪಿಗ ವಿಚಾರಿಸಿ, ಅಧಿಕಾರಿಯ ಮನವೊಪ್ಪಿಸಬೇಕಾದರೆ, ತನಗೆ ಬರುವ ಲಾಭ ಕ್ಕಿಂತ ಹೆಚ್ಚಾಗಿ ಖರ್ಚುಮಾಡಬೇಕು ಎಂದು ಅರಿತನಂತೆ. ನವಾಜು

ಮಾಡೋ ರಭಸದಲ್ಲಿ ಮಸೀದಿಯನ್ನೇ ತಲೇಮೇಲೆ ಕೆಡವಿಕೊಂಡ ಹಾಗೆ, ಚಿಪ್ಪಿಗ ತನ್ನ ವ್ಯಾಪಾರದಿಂದಲೇ ತಲೆ ಕಳೆದುಕೊಳ್ಳುವ ಹಾಗೆ ಆಯಿತು.

ಚಿಪ್ಪಿಗನಿಗೆ ಕೋಪಬಂತು. ಯಾರ ಮೇಲೆ ಕೋಪಿಸಿಕೊಳ್ಳುವುದು? ಹೆಂಡತಿ ಮೇಲೇ? ಹೆಂಡತಿ, ಬಡವನ ಮಗಳಾಗಿ ಹುಟ್ಟಿದ್ದರೂ, ಈಗ ಐಶ್ವರ್ಯವಂತನ ಹೆಂಡತಿ. ಗಂಡ ಸರಿಯಾಗಿ ಪಂಚೆ ಉಟ್ಟಿದ್ದಾನೆಯೇ, ಅಥವಾ ಸಡಿಲ ಕಚ್ಚೆಹಾಕಿದ್ದಾನೆಯೇ ಎನ್ನುವುದನ್ನು ಆಕೆ ಕಂಡರೂ ಕಾಣದಂತೆ ಬಾಳಿದವಳು. ಅವಳ ಮೇಲೆ ರೇಗಿದರೆ ಅವಳು ಹಳೇ ಕಷ್ಟಕಾಲಗಳ ನೆನಪುಮಾಡಿಕೊಟ್ಟು, ಚುಟುಕಾ ಹಾಕಿದರೆ? ಹಾಗಾಗಿ ಹೆಂಡತಿ ಮೇಲೆ ಕೋಪ ಮಾಡೋಹಾಗಿಲ್ಲ.

ಮಕ್ಕಳಮೇಲೆ ರೇಗೋಣ ಅಂದರೆ, ಬೆಳೆದ ಮಕ್ಕಳು. ರಟ್ಟೆ ದಪ್ಪದ ಮಿಾಸೆ ಹೊತ್ತ ಗಂಡು ಮಕ್ಕಳು. ಅವರು ತಿರುಗಿಬಿದ್ದರೆ? ಅವರ ಮೇಲೆ ಕೋಪ ತೀಡುವಹಾಗಿಲ್ಲ.

ಅಂಗಡಿ ಸಿಬ್ಬಂದಿ ಮೇಲೆ ರೇಗಿಬೀಳೋಣ ಅಂದರೆ, ಅವರೆಲ್ಲಾ ಸಂಘ ಕಟ್ಟಿಕೊಂಡು, ಸರಕಾರದ ಬೆಂಬಲ ಪಡೆದು, ಆಡಿದ್ದೆ ಆಟವಾಗಿದೆ. ಅವರ ಮೇಲೆ ರೇಗಿದರೆ ಅವರು ಒಳಗುಟ್ಟನ್ನೆಲ್ಲಾ ಬಹಿರಂಗ ಪಡೆಸಿದರೆ? ಗತಿ? ಅದಕ್ಕೇ ಅವರ ಹತ್ತಿರ ನಾಯಿಯಂತೆ ನಡಕೋಬೇಕಾಗಿದೆ.

ಮತ್ತೆ ಯಾರ ಮೇಲೆ ರೇಗಬೇಕು? ದೇವರ ಮೇಲೆ. "ನಿನಗೆ ಅಷ್ಟೆಲ್ಲಾ ಲಂಚ ಕೊಟ್ಟೆ, ನಿನ್ನ ಸಿಬ್ಬಂದೀಗೆ ಅಷ್ಟೆಲ್ಲಾ ತಿನ್ನಿಸಿದೆ, ನಿನ್ನ ಆನೆಗೆ ಕೂಡ ದಿನಾಗಲೂ ಬಾಯಿ ಸಿಹಿಮಾಡಿದೆ. ಇಷ್ಟೆಲ್ಲಾ ಮಾಡಿದ್ದಕ್ಕೆ, ನೀನು ಕೊಟ್ಟ ವರ, ಈ ಹೊಸ ಪೋಲೀಸ್ ಅಧಿಕಾರಿ! ನಿನ್ನ ಮನೆ ಹಾಳಾಗ" ಎಂದು ಮನಸ್ಸಿನಲ್ಲಿ ಅಂದುಕೊಂಡರೂ ಬಾಯಿಬಿಟ್ಟು ಹೇಳುಕ್ಕೆ ಹೆದರಿದ್ದಾನೆ.

ಆ ರಾತ್ರಿಯೆಲ್ಲಾ ನಿದ್ರೆ ಬಂದಿಲ್ಲ. ಭವಿಷ್ಯದ ಚಿಂತೆಯೇ ತಿನ್ನುತ್ತಿದೆ. ಬೆಳಗಿನ ಝಾವದ ಹೊತ್ತಿಗೆ ತಲೆ ಸಿಡಿಯುತ್ತಿದೆ. ಆದರೂ ಬೆಳಿಗ್ಗೆ ವಾಡಿಕೆಯಂತೆ ಅಂಗಡಿ ಬಾಗಿಲು ತೆಗೆದು ಕೂತುಕೊಳ್ಳಬೇಕಲ್ಲ! ಅಭ್ಯಾಸ ಬಲ. ಕೂತುಕೊಂಡ.

ದೇವಸ್ಥಾನದ ಆನೆಗೆ ಇದೆಲ್ಲಾ ಏನು ಗೊತ್ತು? ಮಾಮೂಲಿನಂತೆ ಬಂತು. ಸೊಂಡಿಲನ್ನು ಯಥಾಪ್ರಕಾರ ನೀಡಿತು, ಚಿಪ್ಪಿಗನ ಪೀಠದ ಬಳಿಗೆ.

ದೇವರ ಮೇಲೆ ರೇಗುತ್ತಾ ಇರೋವಾಗಲೇ, ಆನೆಯ ಸೊಂಡಿಲು ಕಾಣಿಸಿತು,

ಚಿಪ್ಪಿಗನಿಗೆ. ಓಹೋ! ದೇವಸ್ಥಾನದ ಆನೆ ಅಲ್ಲವೇ? ದೇವರಿಗೆ ಮಾಡಬೇಕಾದ ಶಾಸ್ತಿಯನ್ನು ಇದಕ್ಕೆ ಮಾಡೋಣ ಅನ್ನಿಸಿತು. ಹತ್ತಿರ ಇದ್ದ ದಬ್ಬಳ ತೊಗೊಂಡು ಅದರ ಸೊಂಡಿಲಿಗೆ ತಿವಿದ.

ಆನೆ ಚರ್ಮ ಕೇಳಬೇಕೆ? ಬಲು ದಪ್ಪನಾಗಿತ್ತು. ದಬ್ಬಳ ಚರ್ಮವನ್ನು ತೂರಲೇ ಇಲ್ಲ. ಆದರೂ ಆನೆಗೆ ಅವಮಾನ ಆಗಿತ್ತಲ್ಲ! ತನ್ನ ಮಾಮೂಲು ಸಿಗಲಿಲ್ಲ ಅಂತ. ಅದಕ್ಕೇ ಆನೆ ಆ ದಬ್ಬಳವನ್ನು ಸೊಂಡಿಲಲ್ಲಿ ಕಸಿದುಕೊಂಡು ಅಯ್ಯಯ್ಯೋ ಅಂತ ಬೊಬ್ಬೆ ಹೊಡೆಯುತ್ತ ರಸ್ತೆಲಿ ಲಬೋ ಲಬೋ ಶುರು ಮಾಡಿತು.

ಅಲ್ಲಿ ದೇವಸ್ಥಾನದ ಆಗಮಿಾಕರು ಅಭಿಷೇಕಕ್ಕೆ, ಕೆರೆ ನೀರು ಯಾಕೆ ಇನ್ನೂ ಬಂದಿಲ್ಲ ಅಂತ ತವಕಿಸುತ್ತಿದ್ದಾರೆ. ಅವತ್ತೇ ಪೋಲೀಸ್ ಅಧಿಕಾರಿಯ ಕೈಂಕರ್ಯ. ನೀರು ತರದೆ ಬೊಬ್ಬೆ ಇಡುತ್ತ ದಬ್ಬಳವನ್ನು ಸೊಂಡಿಲಲ್ಲಿ ಮೆರೆಸುತ್ತ, ಆನೆ ದೇವಸ್ಥಾನದ ಬಳಿಗೆ ಬಂತು.

ದೇವಸ್ಥಾನದ ಸಿಬ್ಬಂದಿಯವರು, ಮತ್ತು ಪೋಲೀಸ್ ಅಧಿಕಾರಿಯು ಆನೆಯ ಬಳಿಗೆ ಹೋದರು. ಆನೆಯು ಗುಡು ಗುಡು ನಡೆಯಿತು. ಏನಿರಬಹುದು, ವಿಚಾರಿಸೋಣ ಎಂದು ಎಲ್ಲರೂ ಆನೆಯ ಹಿಂದೆಯೇ ನಡೆದರು. ಚಿಪ್ಪಿಗನ ಮನೆಯ ಹತ್ತಿರ ಆನೆ ನಿಂತು ಲಬೋ ಲಬೋ ಆರಂಭಿಸಿತು.

ಒಳಗಡೆಯಿಂದ ಚಿಪ್ಪಿಗ ಆನೆಯನ್ನು ನೋಡಿದ. ಅದರ ಸೊಂಡಿಲಿನಲ್ಲಿದ್ದ ತನ್ನ ದಬ್ಬಳವನ್ನು ಕಂಡ. ಹಿಂದೆ ದೇವಸ್ಥಾನದ ಸಿಬ್ಬಂದಿಯನ್ನು, ಪೋಲೀಸ್ ಅಧಿಕಾರಿಯನ್ನೂ ಕಂಡ. ಅವನ ಝುಂಗಾಬಲ ಉಡುಗಿಹೋಯಿತು.

ಆಗ ಅವನ ಹೆಂಡತಿ ಮನೆ ಒಳಗಿಂದ ಬಂದಳು. ಮೊರದ ತುಂಬ ಅಕ್ಕಿ ಬೆಲ್ಲ ತಂದಳು. ಅದನ್ನು ಕಂಡು ಆನೆ ಅಳು ನಿಲ್ಲಿಸಿ, ತಂದಿದ್ದನ್ನು ತಿಂದು ಕೆರೆ ಕಡೆಗೆ ಬಾಲಮುದುರಿಕೊಂಡು ಓಡಿಹೋಯಿತು.

ಆಗ ಚಿಪ್ಪಿಗನ ಹೆಂಡತಿ ಹೇಳಿದಳು "ಅಯ್ಯಗಳಿರಾ! ಬೆಳಗ್ಗೆ ಆನೆ ಬಂದಾಗ ನಾನು ಮೊರ ತುಂಬಿಕೊಂಡು ಬರಲು ಉಗ್ರಾಣಕ್ಕೆ ಹೋದಾಗ ಆನೆ ಸೊಂಡಿಲನ್ನು ಬಾಗಿಲೊಳಗೆ ಅವಸರದಲ್ಲಿ ಚಾಚಿತು. ಆಗ ಅಲ್ಲಿ ಬಿದ್ದಿದ್ದ ದಬ್ಬಳ ಅದಕ್ಕೆ ಚುಚ್ಚಿತು. ಪಾಪ! ಎಷ್ಟು ನೋವಾಯಿತೋ ಅದಕ್ಕೆ! ಅಂತ ಸಮಜಾಯಿಷಿ ವಿವರಿಸಿದಳು.

ಎಲ್ಲರೂ ಹಿಂದಕ್ಕೆ ಹೊರಟು ಹೋದರು.

ಅದಕ್ಕೇ ಮಕ್ಕಳಾ! ಕಾಣಿಕೆ, ಕಂದಾಯ, ಸುಂಕ, ತೆರಿಗೆ ಇತ್ಯಾದಿಗಳನ್ನು ವಸೂಲ್ಮಾಡುವ ಯಾವುದೇ ಸಂಸ್ಥೆಯಾದರೂ, ದೇವಸ್ಥಾನವೇ ಆಗಲಿ ದೈವ್ವದ ಸರಕಾರವೇ ಆಗಲಿ, ಅವುಗಳ ಸಿಬ್ಬಂದಿಗಳಮೇಲೆ ಕೂಡ ನಮ್ಮ ಕೋಪಾನ ತೋರಿಸಬಾರದು.

ಎಂದು ನಮ್ಮ ಅಡುಗೂಲಜ್ಜಿ ಆನೆ ಚಿಪ್ಪಿಗನ ಕತೆ ಹೇಳಿದಳು.

ಆನೆ ನೊಲದ ಕತೆ

ಇಂದಾನೊಂದು ಕಾಲದಲ್ಲಿ ಒಂದೂರಿನಲ್ಲಿ ಒಂದು ಆನೆ ಇತ್ತಂತೆ. ಭಾರವಾದ ಅದರ ದೊಡ್ಡ ಹೊಟ್ಟೆಯನ್ನು ಹೊರುಕ್ಕೆ ಪುಟಾಣಿ ನಾಲ್ಕು ಕಾಲುಗಳು ಇತ್ತಂತೆ. ನಮ್ಮೂರ ಪುರೋಹಿತರ ತರಹಾನೆ. ಅವರ ಹಾಗೇ ಆ ಆನೆಯು ಕೂಡ ದೊಡ್ಡ ದೊಡ್ಡ ಮಾತುಗಳನ್ನು ಬಿರುಸಾಗಿ ಆಡೋದಂತೆ. ಆದರೆ ಏನು ಕೆಲಸ ಮಾಡಬೇಕಾದರೂ ಬಲು ಚಾಣಸವಂತೆ. ಬೆಳಿಗ್ಗೆ ಎದ್ದು ಬೈಲಿಗೆ ಹೋಗಿ ಬರೋದರಲ್ಲಿ ಬ್ರಹ್ಮ ಕೂಡ ಹಿಂತಿರುಗಿ ಬಂದುಬಿಟ್ಟಿರುತ್ತಿದ್ದನಂತೆ. ಪಾಠ ಓದುಕ್ಕೆ ಕುಳಿತುಕೊಂಡರೆ ಹಾಳೆ ತಿರುವುದಕ್ಕೆ ಒಂದು ನಿಮಿಷ ಆಗ್ತಿತ್ತಂತೆ. ಕಾಲೇಜಿಗೆ ಹೋದಾಗ, ಅಟೆಂಡೆನ್ಸ್ ತೆಗೆದುಕೊಳ್ಳುವುದಕ್ಕೆ ಮಾಸ್ತರು ಇವನ ಹೆಸರು ಕೂಗಿದರೆ, ಇವ ಎದ್ದು ನಿಂತುಕೊಂಡು ಪ್ರೆಸೆಂಟ್ ಅನ್ನೋ ಹೊತ್ತಿನಲ್ಲಿ ಪಕ್ಕದ ಬೆಂಚಿನಲ್ಲಿ ಕೂತಿದ್ದ ಹುಡುಗಿಯರು ಒಂದು ಹುಲಿ ಕುರಿ ಆಟವನ್ನು ಮುಗಿಸುತ್ತಿದ್ದರಂತೆ.

ಕಾಲೇಜಿನ ಹುಡುಗ ಹುಡುಗಿಯರೆಲ್ಲಾ ಇವನನ್ನು ಅಪಹಾಸ್ಯಮಾಡಿ ನಗುತ್ತಿದ್ದರಂತೆ. ಇವನ ಬಡಾಯಿ ಬಾಯಿ ಬಲು ಬಿರುಸಾಗಿದ್ದುದರಿಂದ ಎದುರಿಗೆ ನಿಂತು ಕೀಟಲೆಮಾಡುವ ಧೈರ್ಯ ಹೆಚ್ಚುಮಂದಿಗಿತ್ತಿಲ್ಲವಂತೆ. ಆದರೆ ಅದೇ ಕಾಲೇಜಿನ ಹಾಸ್ಟೆಲಿನಲ್ಲಿದ್ದ ಮೊಲ ಮಾತ್ರ ಹೆದರುತ್ತಾ ಇರಲಿಲ್ಲವಂತೆ. "ಏನಯ್ಯಾ ಆನೆರಾಯ! ನೀನು ಮದುವೆಯಲ್ಲಿ ತಾಳಿ ಕಟ್ಟಿದಮೇಲೆ, ಮನೆಗೆ ಹೆಂಡತೀನ ಕರಕೊಂಡು ಬರೋ ಹೊತ್ತಿಗೆ, ಪಾಪ! ಆಕೆ ಮುದುಕಿ ಆಗಿ ಬಿಟ್ಟಿರ್ತಾಳಲ್ಲಯ್ಯಾ? ಮನೆಗೆ ಬಂದಮೇಲೆ ಋಷಿ ಪಂಚಮಿ ವ್ರತವನ್ನೇ ಮಾಡಬೇಕಾಗುತ್ತಲ್ಲಯ್ಯಾ?" ಎಂದು ಹುಡುಗಿಯರಿಗೆ ಕೇಳಿಸೋಹಾಗೆ ಛುಡಾಯಿಸುತ್ತಾ ಇದ್ದನಂತೆ. ಒದ್ದುಬಿಟ್ಟು ನಿನ್ನ ಹಲ್ಲು ಮುರಿದು ಕೈಗೆ ಕೊಡ್ತೀನಿ ನೋಡು ಎಂದು ಆನೆ ರೇಗಿ ಹೊಡೆಯುಕ್ಕೆ ಎಂದು ಸಿದ್ಧಮಾಡಿಕೊಳ್ಳುವ ಹೊತ್ತಿಗೆ, ಮೊಲ ನೂರಡಿ ದೂರಕ್ಕೆ ಜಿಗಿದು ಹೋಗಿ, ಅಲ್ಲಿ ನಗ್ತಾ ನಿಂತಿರುತ್ತಿತ್ತಂತೆ. ಕೋಪ ಉಕ್ಕಿಬಂದಿದ್ದ ಆನೆ, ಹತ್ತಿರದಲ್ಲೇ ಹುಡುಗಿಯರು

ಇರೋದನ್ನು ಕಂಡು, ಬಾಯಿತುಂಬ ನಗ್ನ ಬೈಗಳ ಸುರಿಮಳೆಯನ್ನು ಸುರಿಸಲೂ ಆಗುತ್ತಿತ್ತಿಲ್ಲವಂತೆ.

ಕಾಲೇಜ್ 'ಡೆ' ಗೋಸ್ಕರ ಆಟ ಪಾಟಗಳನ್ನು ಏರ್ಪಡಿಸಿದ್ದರಂತೆ. ಮೊದಲದಿನ ಹೆಣ್ಣುಮಕ್ಕಳ ಸ್ಪರ್ಧೆಗಳಂತೆ. ಕುಮಾರಿ ಹರಿಣಿ ಮೂರು ಪಂದ್ಯಗಳಲ್ಲಿ ಮೊದಲಿಗಳಾದಾಗ, ಮೊಲ ಹೋಗಿ ಅಭಿನಂದನೆಗಳನ್ನು ಕಣ್ಣು ಕಣ್ಣು ಮಿಟಕಿಸುತ್ತಾ ಸಲ್ಲಿಸಿತಂತೆ. "ನಾನೂ ನೀನೂ ಜೋಡಿ, ಕೆರ ಬಿಚ್ಕೊಂಡೋಡಿ; ಎಂದು ಬಾಲ್ಯದಲ್ಲಿ ಹಾಡುತ್ತಿದ್ದ ಹಾಡಿನ ಪೂರ್ಣ ಅರ್ಥ ಈಗ ಆಯಿತು ನೋಡಿ ಹರಿಣಿ" ಎಂದು ಒಂದು ಶೇಕಾನೂ ಹಾಕ್ತಂತೆ. ಬಿರುಗಣ್ಣಿನ ಹರಿಣಿ, ತಲೆ ತಗ್ಗಿಸಿ, ಹುಲ್ಲು ಕಡ್ಡೀನ ಬಾಯಲ್ಲಿ ಕಚ್ಚಿಕೊಂಡು, ಬೆರಗು ಬೆರಗಾಗಿ ತನ್ನ ಉಂಗುಷ್ಠವನ್ನೇ ನೋಡುತ್ತ "ಏನೆಲ್ಲಾ ಚೆಂದಾಗಿ ಮಾತಾಡ್ತೀರ್ರೀ, ಮಿಸ್ಟರ್ ಮೊಲ! ನಿಮ್ಮ ಕಾಲಿಗಿಂತ ನಾಲಿಗೆ ವೇಗವಾಗಿ ಓಡುತ್ತೆ ಅಲ್ಲವೇ" ಎಂದು ಹೇಳಿ ಅರಳಿದಳಂತೆ. ಅರಳುವುದನ್ನು ಕಂಡ ಮೊಲ "ಹಾಗಾದರೆ ನಾಡಿದ್ದು ಸಂಜೆ ಸಿನಿಮಾಕ್ಕೆ ಹೋಗೋಣ ಬರ್ತೀರಾ, ಎರಡು ಟಿಕೆಟ್ಟು ಬಿಟ್ಟಿ ಸಿಕ್ಕಿದೆ" ಎಂದು ಗಾಳ ಎಸೆಯಿತಂತೆ. ಗಾಳ ಕಚ್ಚಿದಳಂತೆ ಹರಿಣಿ. ಅದಕ್ಕೇನು ಮಿಸ್ಟರ್ ಮೊಲ, ಯಾವ ಪಿಕ್ಚರ್ ಹೌಸಿನಲ್ಲಿ ಟಿಕೆಟ್ ದೊರಕಿದೆ ಎಂದು ಕೇಳಿದಳಂತೆ ಹರಿಣಿ. ಗಾಂಧಿ ಟಾಕೀಸ್‌ನಲ್ಲಿ ಮಾರಿಲಿನ್‌ಮನ್ರೊ ಚಿತ್ರಕ್ಕೆ ಟಿಕೇಟ್ ಸಿಕ್ಕಿದೆ. ಪಟೇಲ್ ಪಾರ್ಕ್ ಮುಂದೆ ಹೋಗುತ್ತಲ್ಲಾ ನೆಹ್ರೂ ರಸ್ತೆ. ಆ ರಸ್ತೆಯಲ್ಲೇ ಆ ಟಾಕೀಸ್ ಇರೋದು. ನಾನು ಒಂದು ಮಾತು ಹೇಳ್ತೀನಿ, ಕೇಳ್ತೀರಾ, ಅಂದನಂತೆ ಮೊಲ.

ಸುಮ್ಮಗೆ ಇದ್ದಳಂತೆ ಹರಿಣಿ, ಸುಮ್ಮಗೆ ಇದ್ದರೆ ಸಮ್ಮತ ಅಲ್ಲವೇ?

"ನೋಡಿ ಹರಿಣಿ, ಮಧ್ಯಾಹ್ನ ಕಾಲೇಜಿಂದ ಎರಡು ಗಂಟೆ ಹೊತ್ತಿಗೆ ಪಟೇಲ್ ಪಾರ್ಕಿಗೆ ಹೋಗಿರ್‍ತೀನಿ, ನೀವೂ ಬಂದುಬಿಡಿ. ಅಲ್ಲೇ ಕಾಫಿ ತಿಂಡಿ ತಿಂದು ಹರಟೆ ಹೊಡೆಯೋಣ. ಸಂಜೆ ಸಿನಿಮಾಕ್ಕೆ ಹೋಗೋಣ, ಏನಂತೀರಿ" ಅಂದನಂತೆ ಮೊಲ.

ಸುಮ್ಮಗೆ ಇದ್ದಳು ಹರಿಣಿ; ಕಣ್ಣುಗಳು ಮಾತ್ರ ಹ್ಞೂ ಅಂದಿತ್ತು.

ಆಟದ ಮೈದಾನದ ಪೆವಿಲಿಯನ್ ಹತ್ತಿರಲೇ ಇವರುಗಳು ಮಾತಾಡ್ತಾ ಇದ್ದಿದ್ದು. ಆ ಹೊತ್ತಿನಲ್ಲೇ ಪೆವಿಲಿಯನ್ ಒಳಗೆ ಆಮೆ ಕೈ ಕಾಲು ತೊಳೆದು

ಕೊಳ್ಳುತ್ತಾ ಇತ್ತು. ಇವರುಗಳು ಆಡಿದ ಮಾತು, ಹೂಡಿದ ಯೋಜನೆ ಎಲ್ಲಾ ಕೇಳಿಸಿತ್ತು. ಮೊಲದ ಮೇಲೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿತು ಎಂದು ಆಮೆ, ತುಟಿಯ ಮೇಲೆ ನಾಲಿಗೇನ ಹೊರಳಿಸಿತು.

ಮಾರನೆದಿನ ಮಧ್ಯಾಹ್ನ ೧ ಗಂಟೆ ಸಮಯಕ್ಕೆ ಆಮೆ ತಮ್ಮ ಪುಟ್ಟಾಮೆ, ಮೊಲಕ್ಕೆ ಗಂಟುಬಿದ್ದ. ಇವತ್ತು ನಮ್ಮ ಮೆಸ್ಸಿನಲ್ಲಿ ಬಾದಾಮಿಹಾಲು ಮಾಡಿದ್ದಾರೆ ಕಣೋ ಬಲು ಮಜವಾಗಿರುತ್ತೆ. ಎರಡು ಲೋಟಾ ಕುಡಿಯೋ ಕುಮ್ಮಕ್ಕು ಬರುತ್ತೆ ಅಂತ ಆಸೆ ತೋರಿಸಿದ. ಎರಡು ನಿಮಿಷದಲ್ಲಿ ಪಟೇಲ್ ಪಾರ್ಕಿಗೆ ಓಡಬಹುದು ಎಂದು ಮೊಲ ಯೋಚಿಸಿ ಒಪ್ಪಿಕೊಂಡಿತಂತೆ. ಎರಡು ಲೋಟಾ ಬಾದಾಮಿ ಹಾಲು ಕುಡೀತು, ಮೊಲ. "ಏನೋ! ಬಾದಾಮಿ ಹಾಲಿಗೆ ಗಸಗಸೆ ಹುರಿದು ಅರೆದು ಜಡಿದ ಹಾಗಿದೆ" ಎಂದು ಆಕಳಿಸುತ್ತಾ ಮೊಲ ಹೇಳಿತಂತೆ. ಸ್ವಲ್ಪ ಹೊತ್ತು ನನ್ನ ರೂಮಿನಲ್ಲಿ ಮಲಗಿರೋ. ಆಮೇಲೆ ಎದ್ದು ಹೋದರಾಯಿತು ಎಂದಿತಂತೆ ಪುಟ್ಟಾಮೆ. ಅದೇ ಸರಿ ಕಣೋ ಅಂತ ಮೊಲ ಪುಟ್ಟಾಮೆ ಹಾಸಿಗೆಮೇಲೆ ಮಲಗಿ, ಶಾಲು ಎಳೆದುಕೊಂಡಿತಂತೆ, ಮೂಗಿನ ಮೇಲೆ. ಮೊಲಗಳ ಮೂಗು ಬಲು ಥಂಡಿ ಇರುತ್ತೆ ನೋಡಿ, ಅದಕ್ಕೆ. ಎರಡು ಗಂಟೆ ಅಂತ ಹೇಳಿದರೆ ಹರಿಣಿ ಬರೋದು ನಾಲ್ಕಕ್ಕೇನೇ. ಅಷ್ಟು ಹೊತ್ತಿಗೆ ಇದ್ದೇ ಇರ್ತೀನಲ್ಲಾ ಅಂತ ಧೈರ್ಯ ಮೊಲಕ್ಕೆ.

ಇತ್ತ ಆಮೆ ಮಧ್ಯಾಹ್ನ ಹನ್ನೆರಡಕ್ಕೇ ಪಟೇಲ್ ಪಾರ್ಕಿಗೆ ನಡೆಯಿತಂತೆ. ಎರಡು ಗಂಟೆಗೆ ಪಟೇಲ್ ಪಾರ್ಕ್ ಸೇರಿತಂತೆ. ಅಲ್ಲೇ ಕಾರಂಜಿ ಹತ್ತಿರ ಕಾಯುತ್ತಾ ಕುಳಿತುಕೊಂಡಿತಂತೆ. ಹತ್ತು ನಿಮಿಷ ಆಯಿತು. ಇಪ್ಪತ್ತು ಆಯಿತು. ಮೂವತ್ತು ಮುಗಿಯಿತು. ದೂರದ ಪೋಲೀಸ್ ಠಾಣೆಯಲ್ಲಿ ಮೂರು ಬಾರಿ ತಾಸು ಬಾರಿಸಿದರು. ಆಗ ಹರಿಣಿ ಬಂದಳು. ಬೆದರಿದ ಹರಿಣಿ ಸುತ್ತಲೂ ನೋಡುತ್ತ, ಪುಸ್ತಕ ಒಂದನ್ನು ಹಿಡಿದುಕೊಂಡು ಮಾವಿನ ಮರದ ಕೆಳಗೆ ಕುಳಿತಳು. ಎರಡೆರಡು ನಿಮಿಷಕ್ಕೆ ಕೈಗಡಿಯಾರ ನೋಡಿಕೊಂಡು ಸುತ್ತಲೂ ನೋಡುವಳು, ಹಣೆಯನ್ನು ಸೆರಗಿನಲ್ಲಿ ಒರೆಸಿಕೊಂಡು ತಿರುಗಿ ಪುಸ್ತಕ ಬಿಚ್ಚುವಳು. ಹೀಗೆ ಹದಿನೈದು ನಿಮಿಷಗಳಾಗಿರಬಹುದು. ಎದ್ದಳು ಹರಣಿ. ರೇಗಿದ್ದಳು ಹರಿಣಿ. ಕೆಂಪೇರಿದ್ದಳು ಹರಿಣಿ. ಗರಿಕೆಹುಲ್ಲನ್ನು ಹಲ್ಲಿನಿಂದ ತುಂಡು ತುಂಡಾಗಿ ಕಡಿಯುತ್ತಿದ್ದಳು ಹರಿಣಿ.

ಕಾರಂಜಿ ಹತ್ತಿರ ಮರೆಯಲ್ಲಿ ಕುಳಿತಿದ್ದ ಆಮೆ ಇದೆಲ್ಲವನ್ನೂ ನೋಡುತ್ತಿದ್ದ. ದಡಬಡ ಗುಟ್ಟಿಕೊಂಡು ಹರಿಣಿ ಕೂತಿದ್ದಲ್ಲಿಗೆ ನಡೆದ. ಹೊಸ ಸೂಟು ಹಾಕಿಕೊಂಡು, ಸೆಂಟ್ ಹಚ್ಚಿಕೊಂಡು ತಕ್ಕಮಟ್ಟಿಗೆ ಸುವಾಸನೆಯಾಗಿಯೇ ಇದ್ದ.

" ಇದೇನು ಇಲ್ಲಿ! ಕುಮಾರಿ ಹರಿಣಿ. ಎಸ್‌ಪ್ರೆಸ್ಸೋಗೆ ಕಾಫಿಗೆ ಹೋಗ್ತಾ ಇದ್ದೆ. ನಿಮ್ಮನ್ನ ಕಂಡೆ. ಬಂದೆ; ಏನು ಮಾಡ್ತಾ ಇದ್ದಿರಿ! ಓಹೋ! ಗೊತ್ತಾಯ್ತು, ವ್ಯಾಸಂಗ ಮಾಡುಕ್ಕೆ ಇದು ಸರಿಯಾದ ಶಾಂತಿ ವಾತಾವರಣ ಅಂತ ಬಂದಿರಬೇಕು. ತುಂಬಾ ಹೊತ್ತು ಓದಿದ ಹಾಗಿದೆ, ಬೆವತಿದ್ದೀರಿ, ಬನ್ನಿ ನನ್ನ ಜತೆಗೆ, ಒಂದು ಬಟ್ಟಲು ಕಾಫಿ ಕುಡಿಯೋಣ" ಅಂತ ಆದರದಿಂದ ಕರೆದನಂತೆ.

ಮೊಲದ ಮೇಲೆ ಹರಿಣಿಗೆ ಕೋಪ ಬಂದಿತ್ತು. ಅವನಿಗೆ ಬುದ್ಧಿ ಕಲಿಸ್ತೀನಿ ಅಂತ ಆಮೆ ಜತೆಗೆ ಎಸ್‌ಪ್ರೆಸ್ಸೋಗೆ ಹೋದಳಂತೆ. ಅಲ್ಲಿ ಗೋಡಂಬಿ ಕುರುಕುತ್ತಾ, ಕಾಫಿ ಕುಡಿಯುತ್ತಾ, ಆಮೆ ಆಡಿದ ಅಲಂಕಾರದ, ಮಾತುಗಳಿಗೆ ತಲೆದೂಗಿದಳಂತೆ, ಹರಿಣಿ. ತಲೆದೂಗಿ ಬಾಯಿಯನ್ನು ಕಿರಿದಾಗಿ ಬಿರಿದಳಂತೆ.

ಆಮೆಗೆ ಅರ್ಥವಾಯಿತು. ನನಗೂ ಬೇಜಾರಾಗಿದೆ, ಸಿನಿಮಾಗೆ ಹೋಗೋಣ ಅಂತಿದ್ದೆ. ನೀವೂ ಬಂದರೆ.... ಎಂದು ರಾಗ ಎಳೆಯಿತಂತೆ. ಅದಕ್ಕೇನು ಹೋಗೋಣ ಬನ್ನಿ. ಹಾಸ್ಟೆಲ್ ಮೇಟಿಗೆ ಹೊತ್ತಾಗಬಹುದು ಅಂತ ಹೇಳಿಬಿಟ್ಟು ಬಂದಿದ್ದೀನಿ, ಅಂತ ಹರಿಣಿ ಹೇಳಿದಳಂತೆ.

ಇಬ್ಬರೂ ಗಜಗಮನೆಯರಂತೆ, ಸಾಲು ಹೆಜ್ಜೆ ಹಾಕುತ್ತಾ ಸಿನಿಮಾ ಮಂದಿರವನ್ನು ಸೇರಿ ಟಿಕೆಟ್ ತೆಗೆದುಕೊಂಡು ಒಳಕ್ಕೆ ಹೋಗುತ್ತಿದ್ದಾರೆ.........

* * * *

ಮೊಲಕ್ಕೆ ಎಚ್ಚರವಾದಾಗ ನಾಲ್ಕು ಗಂಟೆ ಆಗಿತ್ತಂತೆ. ಕ್ರಾಪೆಲ್ಲಾ ಕೆದರಿ ಹೋಗಿತ್ತಂತೆ. ಮುಖ ತೊಳೆದುಕೊಂಡು ತಲೆ ಬಾಚಿಕೊಂಡು, ಕಾಡಿಗೆ ಹಚ್ಚಿಕೊಂಡು ನಾಲ್ಕುವರೆಗೆ ಝುಂ ಅಂತ ಪಟೇಲ್ ಪಾರ್ಕಿಗೆ ಓಡಿದನಂತೆ. ಪಾರ್ಕ್‌ನೆಲ್ಲಾ ಹುಡುಕಿದನಂತೆ. ಮಾವಿನ ಮರದ ಕೆಳಗೆ ಹರಿಣಿಯು ಕೂತಿದ್ದ ಕಡೆ ಹುಲ್ಲು ಹಸೆಮಣೆಯಂತೆ ಅದುಮಲ್ಪಟ್ಟಿದುದನ್ನು ಕಂಡು ಅದರ ಅಳತೆಯನ್ನೂ ನೋಡಿ, ಇಲ್ಲೇ ಹರಿಣಿಯು ಕಾದಿದ್ದಿರಬೇಕು. ಹೆಚ್ಚು ಹೊತ್ತು ಕೂತಿರಲಾರಳು, ಎಂದು ಊಹಿಸಿ, ಇಲ್ಲೇ ಎಲ್ಲೋ ಕಾಫಿಗೆ ಹೋಗಿರಬಹುದು

ಎಂದು ಕಾಫಿ ಮಂದಿರಗಳನ್ನು ಹುಡುಕಲು ಶುರುಮಾಡಿತಂತೆ. ಪಟೇಲ್ ಪಾರ್ಕಿನ ಸುತ್ತ ಕಾಫಿ ಹೋಟಲುಗಳು, ಮುಸುಕಿನ ಜೋಳದಲ್ಲಿ ಕಾಳುಗಳಿದ್ದ ಹಾಗೆ ಇರುವುದು, ಎಲ್ಲರಿಗೂ ತಿಳಿದ ವಿಷಯ. ಅವನ್ನೆಲ್ಲಾ ಹುಡುಕಿ, ಆರೂವರೆ ಆಯಿತು ಅಂತ ಸಿನಿಮಾ ಮಂದಿರದ ಕಡೆ ಸಿಳ್ಳುಹಾಕುತ್ತಾ ಓಡಿದನಂತೆ.

ಚಿತ್ರಮಂದಿರದ ಹೊಸಿಲನ್ನು ದಾಟುತ್ತಿದ್ದ ಹರಿಣಿಯನ್ನೂ ಆನೆಯನ್ನೂ ಕಂಡಾಗ, ಸೀಟಿ ಹಾಕುವುದು ನಿಲ್ಲಿಸಿ, ನಿಟ್ಟುಸಿರು ಬಿಟ್ಟನಂತೆ.

ಇದರ ನೀತಿ "ತಾಳಿದವ ತಾಳಿ ಕಟ್ಟ್ಯಾನು" ಎಂದು ನನ್ನ ಅಡುಗೂಲಜ್ಜಿ ಆನೆ ನೊಲದ ಕತೆಯನ್ನು ಹೇಳಿದಳಂತೆ.

ಬಾಲ ಕತ್ತರಿಸಿಕೊಂಡ ನರಿ ಕತೆ

ಒಂದೂರಿನಲ್ಲಿ ಒಂದು ನರಿ ಇತ್ತಂತೆ. ಅದಕ್ಕೆ ಸೊಗಸಾದ ಬಾಲ ಇತ್ತಂತೆ. ಬಾಲದ ತುಂಬ ನುಣುಪಾದ ಹೊರವಾದ ಗೊಂಚಲು ಗೊಂಚಲಾದ ಕೂದಲು ಮನೋಹರವಾಗಿ ಬೆಳೆದಿತ್ತಂತೆ. ಅದು ಹೆಣ್ಣು ನರಿಯಂತೆ. ಅಂದಮೇಲೆ ಕೇಳಬೇಕೇ? ಹಸನಾಗಿ ಕೂದಲನ್ನೆಲ್ಲಾ ಸುಗಂಧದ ಎಣ್ಣೆ ಹಾಕಿ ಬಾಚಿ, ಅಂದ ವಾಗಿ ಏಳೆಲೆ ಜಡೆಹಾಕಿ ರಂಗು ರಂಗಿನ ರಿಬ್ಬನ್ ಕಟ್ಟಿ ಮುಗಿಸೋ ಹೊತ್ತಿಗೆ ಒಂದು ತಾಸು ಮುಗಿದುಹೋಗುತ್ತಿತ್ತಂತೆ. ಹತ್ತಿರದಲ್ಲೇ ಇದ್ದ ಪುಷ್ಕರಿಣಿಯ ಬಳಿಗೆ ಹೋಗಿ, ಮುಖ ತೊಳೆದುಕೊಂಡು, ಸೋಪಾನದ ಮೇಲೆ ನಿಂತು ಬಾಲವನ್ನಲ್ಲಾಡಿಸಿ, ನೀರಿನಲ್ಲಿ ಬಾಲದ ಪ್ರತಿಬಿಂಬವನ್ನು ಕಂಡು ಹಿಗ್ಗಿ ಹೀರೆ ಕಾಯಿ ಆಗುತ್ತಿತ್ತಂತೆ. ಇವತ್ತು ಸಂಜೆ ಈ ತೋಕೇನ ಆಡಿಸಿಕೊಂಡು ವನದಲ್ಲಿ ಅಡ್ಡಾಡಿದರೆ, ಗಂಡು ನರಿಗಳೆಲ್ಲಾ ನನ್ನ ಹಿಂದೆಯೇ ಸೀಟಿ ಹಾಕಿಕೊಂಡು ಬರುತ್ತೆ ಎಂದು ಒಳಮನಸ್ಸಿನಲ್ಲಿ ಅದಕ್ಕೆ ಆಸೆಯಂತೆ.

ಶೃಂಗಾರ ಮುಗಿದ ಮೇಲೆ ನರಿ ಮಹಿಳಾ ಕ್ಲಬ್ಬಿಗೆ ಹೊರಟಿತಂತೆ. ವನದಲ್ಲಿ ಕ್ಲಬ್ಬಿನತ್ತ ನಡೆಯುವಾಗ, ಬೈಸಿಕಲ್ ನಡೆಸುತಿದ್ದ ಗಂಡುನರಿಗಳು ಗಂಟೆ ಬಾರಿ ಸಿದ್ದೂ ಬಾರಿಸಿದ್ದೇ! ಆಟೋರಿಕ್ಷಾದಲ್ಲಿ ಹೋಗುತ್ತಿದ್ದ ಮುದಿಗಂಡುಗಳು ಕೂಡ, ನರಿಯ ಭರ್ಜರಿ ಅಂದದ ಬಾಲವನ್ನು ಕಂಡು ಸೀಟಿ ಹಾಕಿದುವಂತೆ. ಹೆಂಡತಿ ಜತೆ ವಾಕಿಂಗ್ ಹೋಗುತ್ತಿದ್ದ ಗೃಹಸ್ಥನರಿಗಳು ಕೂಡ, ಚಕಿತಗೊಂಡು, "ಲೇ! ನಮ್ಮ ಮೂರನೆ ಮನೆ ಮಾಚಕ್ಕನ ಮಗಳಿದ್ದಹಾಗೇ ಇದಾಳಲ್ಲೇ! ಮಾತ ನಾಡಿಸಬಾರದೇನೇ" ಅಂತ ಹೆಂಡತಿಯರಿಗೆ ಹೇಳಲಾರಂಭಿಸಿದುವಂತೆ. "ಬಿಡಿ ಅಂದ್ರೆ, ನಿಮ್ಮ ಗಂಡಸರ ಗುಣ ಗೊತ್ತಿಲ್ಲವೇ? ತೋಕೆ ನೋಡಿ ಬಾಯಿ ಬಾಯಿ ಬಿಡ್ತೀರಿ, ಅವಳ ಶೃಂಗಾರ ನೋಡಿದರೆ ಗೊತ್ತಾಗುಲ್ವೆ! ತಾಫೆ ಗಲ್ಲಿ ತೋಕೆ ಅಂತ. ಅವಳ್ಯಾಕಾದರೂ ಗೃಹಸ್ಥರ ಬೀದಿಯಲ್ಲಿ ಇರ್ತಾಳೆ, ಅಂತಹವರ ಪರಿ ಚಯ ನನಗ್ಯಾಕಾದರೂ ಆಗುತ್ತೆ ನಿಮ್ಮ ಜಾಯಮಾನ ನೋಡಿದರೆ ನಿಮಗೆ ಎಂದಾದರೂ ಪರಿಚಯ ಇದ್ದಿರಬಹುದು" ಎಂದು ಹೆಂಡತಿಯರ ಕೈಲಿ ಬೈಯಿಸಿ ಕೊಳ್ಳುತ್ತಿದ್ದುವಂತೆ.

ಮಹಿಳಾ ಕ್ಲಬ್ಬಿಗೆ ನರಿ ಹೋಗಿ, "ಹುಷ್ಷಪ್ಪಾ, ಎಷ್ಟು ಸೆಕೆ ಅಂತೀನಿ," ಅಂತ ಹೇಳಿ ತೋಕೆ ಬೀಸುಕ್ಕೆ ಶುರುಮಾಡಿತಂತೆ. ಕ್ಲಬ್ಬಿಗೆ ಬಂದಿದ್ದ ಇತರ ಸದಸ್ಯೆ ನರಿಗಳೆಲ್ಲಾ ಹತ್ತಿರ ಬಂದು "ಈ ರಿಬ್ಬನ್ ಎಲ್ಲಿ ಕೊಂಡುಕೊಂಡೆ, ಜರ್ಮನಿಯಿಂದ ಬಂದವರು ಯಾರಾದರೂ ತಂದು ಕೊಟ್ಟರಾ? ಅಮೆರಿಕಾದ ಮಾಲು ಇದ್ದ ಹಾಗೆ ಇದೆ, ನುಣುಪು ಹೊಳಪು ನೋಡಿದರೆ ಜಪಾನಿನದೋ ಅನ್ನಿಸುತ್ತೆ. ಮೂಲಚಂದ್ ಅಂಗಡಿ ಸುಗಂಧದೆಣ್ಣೆ ಇದ್ದ ಹಾಗಿದೆ ಕಣೆ" ಎಂದೆಲ್ಲಾ ಟೀಕೆಗಳನ್ನು ಮಾಡಿ ಮತ್ಸರದ ಮೆಚ್ಚಿಗೆ ಸೂಸಿದರಂತೆ.

ನಮ್ಮ ನರಿಯ ಜಂಭ, ತೋಕೆ ಜತೆಗೆ, ಅಟ್ಟಕ್ಕೆ ಹೋಯಿತಂತೆ. ಹೇಗೂ ಹೆಂಗಸು ಜಾತಿಗೆ, ಗಂಡಸಿನ ಒಲವಿನ ಮೆಚ್ಚಿಗೆಗಿಂತ, ಹೆಂಗಸಿನ ಮತ್ಸರದ ಚುಚ್ಚಿವಿಕೆಯೇ ಬಲು ಹಿತ ಅಲ್ಲವೇ? ಜತೆಯವರ ಮತ್ಸರದ ಬಿಸಿಲಿನಲ್ಲಿ ಹಿತವಾಗಿ ಮನಸ್ಸುಕಾಯಿಸಿಕೊಳ್ಳುತ್ತ ನಮ್ಮ ನರಿ ಹೇಳಿತಂತೆ, "ಮಧ್ಯಾಹ್ನ ಮನೆ ಕೆಲಸ ಹೆಚ್ಚಾಗಿತ್ತು. ಅದು ಮುಗಿಸೋ ಹೊತ್ತಿಗೆ ಸಂಜೆ ಆಗಿಬಿಟ್ಟಿತು. ಬೇಗ ಜಡೆ ಹಾಕಿಕೊಂಡು, ಮುಖ ತೊಳೆದುಕೊಂಡು ಓಡಿಬಂದೆ. ಅಷ್ಟಕ್ಕೇ ಇಷ್ಟು ಮೆಚ್ಚಿಗೆಯಲ್ಲ್ರೀ, ನಾಳೆದಿನ ದಿಟವಾಗಲೂ ತೋಕೆಗೆ ಶೃಂಗಾರ ಮಾಡಿಕೊಂಡು, ಮಲಯಾಳಿ ಹೆರಳು ಕಟ್ಟಿಕೊಂಡು ಬರ್ತೀನಿ, ಆಗ ನೀವೆಲ್ಲಾ ಏನಂತೀರೋ" ಎಂದು ವಾಲಾಡಿತಂತೆ.

ಕಾಡು ಹರಟೆ ಮುಗಿಸಿದಮೇಲೆ, ಅಲ್ಲಿಗೆ ಬಾರದೆ ಇದ್ದ ಹೆಂಗಸರನ್ನೂ ಅವರ ಗಂಡಂದಿರನ್ನೂ ಮಕ್ಕಳನ್ನೂ ಹೀಯಾಳಿಸಿದ ಮೇಲೆ, ಹೊತ್ತಾಯ್ತುಕಣ್ರೀ ಮನೇಲಿ ಇವರು ಕಾದಿರ್ತಾರೆ, ಬೈ ಬೈ ಅಂತ ಹೇಳಿ ಮನೆಗೆ ಹಿಂತಿರುಗಿತಂತೆ. "ಇಷ್ಟು ಅಂದದ ಬಾಲ, ಅಷ್ಟು ಹೊಗಳಿಸಿಕೊಂಡ ತೋಕೆ, ಗಂಡನೂ ನೋಡಿ ಸಂತೋಷ ಪಡಲಿ" ಅಂತ ಅನ್ನಿಸಿತಂತೆ ನಮ್ಮ ನರೀಗೆ. ಉದ್ದಾನೆ ಬಾಲ, ನಡೆಯುವಾಗ ನೆಲ ಗುಡಿಸೋ ಹಾಗಿದೆ, ಹುಷಾರಾಗಿರಬೇಕು, ಅಂತ ಅಂದುಕೊಂಡು, ಬಾಲವನ್ನು ಮೇಲಕ್ಕೆತ್ತಿಕೊಂಡು, ಮನೆಗೆ ಹೋಯಿತಂತೆ.

ಬಾಗಿಲಲ್ಲೇ ಗಂಡ ಕಾದಿದ್ದ. "ದುಡಿದುಕೊಂಡು ಬಂದಿದ್ದೀನಿ, ಒಂದು ಬಟ್ಟಲು ಕಾಫಿ ಮಾಡಿಟ್ಟಿಲ್ಲ, ಎಲ್ಲೋ ಮಿಟಕಲಾಡ್ತಾ ಹೋಗಿದ್ದಾಳೆ," ಅಂತ ರೇಗ್ತಾ ಕಾದಿದ್ದನಂತೆ. ಬಾಲ ಎತ್ತಿಕೊಂಡು ಹೆಂಡತಿ ಬಂದಿದ್ದನ್ನು ನೋಡಿದನಂತೆ. ಬಾಲದ ಶೃಂಗಾರ ನೋಡಿ "ಆಹಾ" ಅನ್ನೋದು ಹಾಗಿರಲಿ; ಆಹಾ

ಅಂದು ಕಣ್ಣು ಕಣ್ಣು ಮಿಟಕಿಸೋದು ಹಾಗಿರಲಿ; "ನಾಚಿಕೆ ಆಗುಲ್ಲವೇನೇ, ಮೂರು ಮಕ್ಕಳತಾಯಿ ಬಾಲ ಎತ್ಕೊಂಡು ಬೀದೀಲಿ ಬೆತ್ತಲೆ ಬರ್ತ್ತೀಯಲ್ಲೇ! ನೋಡಿದವರು ಏನಂದುಕೊಂಡಾರು? ಮುಖ್ಯ ನನ್ನ ಮಾನ ಹೋಗುತ್ತೆ. ನಮ್ಮ ಶಾರದೆಗೆ ಮದುವೆ ಮಾಡಬೇಕಾದಾಗ, ಇಂಥವಳ ಮಗಳು ಅಂತ ಯಾರ್ಯಾದರೂ ಆಡಿದರೆ? ಎಂದೆಲ್ಲಾ ಬೈಯ್ಯುವುದಕ್ಕೆ ಶುರುಮಾಡಿದನಂತೆ.

ನಮ್ಮ ನರೀಗೆ ಬಲು ಕೋಪ ಬಂತಂತೆ. ವನದವರೆಲ್ಲಾ ಹೊಗಳಿದ್ದಾರೆ, ಹೊಟ್ಟೆ ಉರಿ ಪಟ್ಟಿದ್ದಾರೆ, ಈ ಗಂಡಿಗೆ ಸ್ವಲ್ಪವೂ ಸಂಸ್ಕೃತಿ ಇಲ್ಲವಲ್ಲ! ಸುಮ್ಮನೆ ಬೈದು ಮೇಲೆಬೀಳುತ್ತೆ ಎಂದು ಕೋಪ ಬಂತಂತೆ. ಮನಸ್ಸಿನ ಒಳಗೊಳಗೇ ಸ್ವಲ್ಪ ಹುಳಿ ಹುಳಿಯಾಗೂ ಇತ್ತಂತೆ. ಆ ಕಾರಣದಿಂದಲೇ ಕೋಪ ಇನ್ನೂ ಹೆಚ್ಚಾಯಿತಂತೆ. "ಬಿಡಿ ಅಂದ್ರೆ, ಹೆಂಗಸು ಶೃಂಗಾರ ಪ್ರಿಯಳು, ಗಂಡಸನ್ನು ಮೆಚ್ಚಿಸುವುದಕ್ಕೇ ಅಂತ ಈ ನಾಟ ಹೂಡೋದು. ಕಂಡ ಸೊಬಗನ್ನು ಗುರ್ತಿಸದೆ ಸುಮ್ಮಗೆ ಗೂಳಿ ತರಹ ಗುಟುರಿ ಮೇಲೆ ಬಿದ್ದರೆ ಬಂತೆ ಭಾಗ್ಯ" ಎಂದು ಹೇಳೇ ಬಿಟ್ಟಿತಂತೆ.

ಗಂಡನಿಗೆ ಬಲು ಕೋಪ ಬಂತಂತೆ. "ತಡಿ! ಚಿನಾಲಿ, ನಿನಗೆ ಮಾಡ್ತೀನಿ ಶಾಸ್ತಿ" ಎಂದು ಹೆದರಿಸುತ್ತಾ ಓಡಿ ಬಂದು, ಕೃಷ್ಣಾರ್ಪಣಮಸ್ತು ಅನ್ನೋ ಅಷ್ಟು ಕ್ಷಣಾರ್ಧದಲ್ಲಿ, ಅವಳ ಬಾಲಾನ ಬುಡದಲ್ಲೇ ಕಡಿದು ಬಿಟ್ಟಿತಂತೆ.

ಬಾಲ ಕತ್ತರಿಸಿಕೊಂಡ ನೋವು, ಅದಕ್ಕಿಂತ ಮನಸ್ಸಿಗೆ ಆದ ಅವಮಾನ, ಎಲ್ಲವೂ ಸೇರಿ ನಮ್ಮ ನರಿಗೆ ಅಯ್ಯಯ್ಯೋ ಎಂದು ಬಡಕೊಳ್ಳುವುದಕ್ಕೂ ಆಗಲಿಲ್ಲವಂತೆ. ನೆಟ್ಟಗೆ ಗುಹೆಗೆ ಹೋಗಿ ಒಂದು ಮೂಲೇಲಿ ಮುನಿಸಿಕೊಂಡು ಬಿದ್ದುಕೊಂಡಿತಂತೆ.

ಗಂಡನಿಗೆ ತುಂಬಾ ಪಶ್ಚಾತ್ತಾಪ ಆಯಿತಂತೆ. "ಅಯ್ಯೋ! ಅರಿಯದ ಹುಡುಗಿಯ ಬಾಲ ಕತ್ತರಿಸಿದೆನಲ್ಲಾ ಅಂತ. ಬೇಗ ಓಡಿಹೋಗಿ ಡಾಕ್ಟರ್ ಷಾಪಿನಿಂದ ಮುಲಾಮು, ಬ್ಯಾಂಡೇಜು ತಂದನಂತೆ. ಹಾಗೆಯೇ ಸಿಂಧಿ ಹೋಟಲಿಂದ ತಿಂಡಿ ಪೊಟ್ಟಣಗಳನ್ನು ಕಟ್ಟಿಸಿಕೊಂಡು ಬಂದನಂತೆ. ಬರುವಾಗ ಎರಡು ಕುಚ್ಚು ಹೂವನ್ನೂ ತಂದನಂತೆ. ಬಲು ಆದರದಿಂದ ಗಾಯಕ್ಕೆ ಔಷಧಿಹಾಕಿ ಬ್ಯಾಂಡೇಜ್ ಕಟ್ಟಿ, ತಾನೇ ಕುಚ್ಚು ಹೂವು ಮುಡಿಸಿ, ತಿಂಡಿಯನ್ನು ತಾನೇ ತಿನ್ನಿಸಿ, ನೀನು ಮಲಗಿರು, ಚಿನ್ನಾ, ಮಕ್ಕಳಿಗೆಲ್ಲಾ ಬಡಿಸಿ ಮಲಗಿಸಿ ಬರ್ತೀನಿ ಅಂತ ಹೇಳಿ, ಎಲ್ಲ ಮನೆಗೆಲಸವನ್ನೂ ತಾನೇ ಮಾಡಿತಂತೆ.

ಹಿಂತಿರುಗಿ ಬಂದು ಬೂಚಿ ಬೂಚಿ ಮಾತನಾಡುತ್ತಾ, ಜೋಗುಳ ಹೇಳಿ ಹೆಂಡತೀನ ಮಲಗಿಸಿದನಂತೆ. ಗಾಯ ಮಾಯುವತನಕ ಬಲು ಪ್ರೀತಿಯಿಂದ ಉಪಚರಿಸಿದನಂತೆ. "ಲೇ! ದಿಟ ಹೇಳಿದರೂ ನಂಬ್ತಿ, ಸುಳ್ಳು ಹೇಳಿದರೂ ನಂಬ್ತಿ. ಈ ಮೊಂಡುಬಾಲಕ್ಕೆ ಅಗಲದ ಕೆಂಪು ರಿಬ್ಬನ್ ಕಟ್ಟಿದರೆ ಬಲು ಚೆಂದ ಕಾಣಿಸ್ತಿ" ಎಂದು ಮೇಲೆ ಮೇಲೆ ಹೇಳಿದನಂತೆ.



ನಮ್ಮ ನರಿ ಗಂಡ ಹೇಳಿದ್ದನ್ನು ನಂಬಿತಂತೆ. ಗಾಯ ವಾಸಿಯಾದಮೇಲೆ ಅಗಲದ ಕೆಂಪು ರಿಬ್ಬನ್ ತುಂಡು, ಬಾಲಕ್ಕೆ ಕಟ್ಟಿಕೊಂಡು, ಮಹಿಳಾ ಕ್ಲಬ್ಬಿಗೆ ಹೋಯಿತಂತೆ.

"ಎಲ್ಲಿ ಹೋಗಿದ್ದೆಯೇ, ಇಷ್ಟು ದಿನ, ಒಳಗಿತ್ತಿಲ್ಲವೇನೇ"

"ಏನಾದರೂ ಮೈಗಿಯ್ ಇಳಿದು ಹೋಗಿತ್ತೇನೇ"

"ಯಾತ್ರೆ ತೀರ್ಥ ಅಂತ ಎಲ್ಲಾದರೂ ಹೋಗಿದ್ದೆಯೇನೇ"

"ಟೂರಿಸ್ಟ್ ಬಸ್ಸಿನಲ್ಲಿ ಪ್ರವಾಸ ಹೋಗಿದ್ದಿರಾ"

ಎಂದು ಒಬ್ಬೊಬ್ಬರು ಒಂದೊಂದು ಪ್ರಶ್ನೆಯಂತೆ ಒಟ್ಟಿಗೇ ಕೇಳಿದರಂತೆ.

" ನಮ್ಮ ಸೋದರ ಮಾವನ ಮಗ, ಪ್ಯಾರಿಸ್ಸಿನಲ್ಲಿದ್ದಾನಲ್ಲಾ, ಅವ ಬಂದಿದ್ದ. ಒಂದೆರಡು ದಿನ ನಮ್ಮೂರಿಗೆ ಬಾ ಅಂತ ಕರೆದ, ಇವರೂ ಕಳಿಸಿಕೊಟ್ಟರು. ಅಲ್ಲಿ ಇದೇ ಲೇಟೆಸ್ಟ್ ಫ್ಯಾಷನ್. ಅಲ್ಲಿನ ಅಪ್ಸರೆಯರು ಕೂಡ ಬಾಲ ಕತ್ತರಿಸಿಕೊಂಡು ನಿಸೂರಾಗಿ ಓಡಾಡ್ತಾರೆ" ಅಂತ ಮೂಗೆತ್ತಿ ಜಂಭ ಕೊಚ್ಚಿತಂತೆ.

ಆದರೂ ಅಲ್ಲಿದ್ದ ಹಿರಿಯ ಮುತ್ತೈದೆಯರು, ಹೊರವಾಗಿ ಬೆಳೆಸಿದ್ದ ಬಾಲದ ಮುತ್ತೈದೆಯರು ' ಬಾಲ ಕತ್ತರಿಸಿಕೊಂಡ ನರಿ ' ಅಂತ ಹೀಯಾಳಿಸಿದರಂತೆ.

ಎಂದು ನನ್ನ ಅಡುಗೂಲಜ್ಜಿ ಬಾಲ ಕತ್ತರಿಸಿಕೊಂಡ ನರಿಯ ಕತೆಯನ್ನು ಚಾಕಲೇಟ್ ಚಪ್ಪರಿಸುತ್ತಾ ಮೊಮ್ಮಕ್ಕಳಿಗೆ ಹೇಳಿದಳಂತೆ.

ಹೋತ ಹುಲಿಯ ಕತೆ

ಇಂದಾನೊಂದು ಕಾಲದಲ್ಲಿ ಒಂದೂರಿನಲ್ಲಿ ಒಂದು ಹೋತ ಇತ್ತಂತೆ. ಊರಿನವರೆಲ್ಲಾ ಅದನ್ನು ಮಾರೀಗೆ ಮಿಾಸಲಾಗಿ ಬಿಟ್ಟಿದ್ದರಂತೆ. "ಮಾರೀ ಹೋತ" ಅಂತ ಎಲ್ಲರಿಗೂ ತಿಳಿಯಲಿ ಅಂತ ಅದಕ್ಕೆ ಖಾದಿ ಮಾಲೆ ಹಾಕಿ ಒಂದು ಪುಟಾಣಿ ಗಂಟೇನ ಕಟ್ಟಿದ್ದರಂತೆ. ಖಾದಿ ಮಾಲೆ ಹಾಕಿಕೊಂಡು ಆ ಹೋತ ಕಂಡದ್ದನ್ನೆಲ್ಲಾ ಕಂಡಲ್ಲಿ ತಿಂದು, ಯಾರ ಅಂಕೆಯೂ ಇಲ್ಲದೆ, ಯಾವ ಶಿಕ್ಷೆಯನ್ನೂ ಅನುಭವಿಸದೆ, ಮಾವನ ಮನೆಗೆ ಮೊದಲ ಸಲ ಬಂದ ಅಳಿಯನ ತರಹ ಕೊಬ್ಬಿ ಬೆಳೆದಿತ್ತಂತೆ.

ಒಂದು ದಿವಸ ಮಾರಿಗುಡಿ ಆಚೆ ಇದ್ದ ಹುಲ್ಲು ಗಾವಲಿನಲ್ಲಿ ಹಸಿರಾದ ಗರಿಕೆ ಹುಲ್ಲು ಪುರುಚಲುಗಿಡ ಇದ್ದಿದ್ದನ್ನು ಕಂಡು ಅದೆಲ್ಲವನ್ನು ಚಪ್ಪರಿಸಿಕೊಂಡು ತಿನ್ನುತ್ತಾ ಇತ್ತಂತೆ. ಹಠಾತ್ತಾಗಿ ಭಾರಿ ಮಳೆ ಬಂತಂತೆ. ಈಗ ಏನು ಮಾಡೋದಪ್ಪಾ? ಛತ್ರಿ ಕೂಡ ಇಲ್ಲ, ಮಳೆಅಂಗಿ ಮೊದಲೇ ಇಲ್ಲ, ಎಂದು ಯೋಚನೆ ಮಾಡಿತಂತೆ. ಹತ್ತಿರಲೇ ಮಾರಿಗುಡಿ ಕಾಣಿಸಿತಂತೆ. ಝುಟ್ಟಂತ ಗುಡಿ ಒಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಿತಂತೆ.

ಆ ಊರ ಮಾರಿಗುಡಿ ಎಲ್ಲಾ ಊರಿನ ಮಾರಿ ಗುಡಿಗಳ ತರಹ ಊರ ಅಂಚಿನಲ್ಲಿತ್ತಂತೆ. ಒಂದಂಕಣದ ಗಿಡ್ಡಾನೆ ಗುಡಿ. ಕಾಡುಮರದ ಬಿರುಕುಬಿಟ್ಟ ಬಾಗಿಲು. ಹಿಂದಿನ ಗೋಡೆಯ ಹತ್ತಿರ ಒಂದು ಕಲ್ಲುಗುಂಡು ದೇವತೆ. ಎದುರಿಗೆ ಒಂದು ಹಣತೆ. ಬಲಿಕೊಡುಕ್ಕೆ ಅಂತ ದೇವತೆ ಮುಂದೆ ಒಂದು ಭರ್ಜರಿ ಕವೆಗೋಲು.

ಹೋತ ಸುತ್ತಲೂ ನೋಡಿತು. ಪಾಪ! ಅದಕ್ಕೇನು ಗೊತ್ತು? ಮುಂದೆ ಮಾಲೆ ಹಾಕಿದ ಅದರ ಕುತ್ತಿಗೇನ ಆ ಕವೆಗೋಲಿನಲ್ಲಿ ಇರಿಸಿ ಬಲಿ ಕೊಡ್ತಾರೆ ಅಂತ! ಮಳೆ ಬಂದಾಗ ನೆರವಾಯಿತು ಈ ಗುಡಿ ಅಂತ ಸಂತೋಷಪಟ್ಟುಕೊಂಡು ಮೆಲ್ಲಗೆ ಗಡ್ಡವನ್ನು ನೀವಿಕೊಂಡಿತಂತೆ. ಮೈಯ್ಯನ್ನೆಲ್ಲಾ ಒಂದು ಸರ್ತಿ ಝಾಡಿಸಿ ಬೆಚ್ಚಗೆ ಆಗಲು ಪ್ರಯತ್ನಿಸಿತಂತೆ.

ಹೋತದ ಮೈವಾಸನೆ ಹೇಗಿರುತ್ತೆ, ಎಷ್ಟುದೂರ ಪಸರಿಸುತ್ತೆ ಎನ್ನುವುದು

ಎಲ್ಲರಿಗೂ ತಿಳಿದ ವಿಷಯಾನೇ. ಹಳೇ ದೇವಸ್ಥಾನಗಳ ಗಬುಟು ವಾಸನೆಯನ್ನು ತೀವ್ರವಾಗಿ ಮೀರಿದ ಆ ಹೋತದ ವಾಸನೆ ಗುಡಿಯ ಬಾಗಿಲ ಕಂಡಿಯಿಂದ ಬಲು ದೂರ ಕಾಡಿನಲ್ಲಿ, ಮಳೆ ಗಾಳಿಯ ಜತೆಗೆ ಹರಡಿತಂತೆ.

ಕಾಡಿನಲ್ಲಿ ಹಸಿದು ನಡುಗುತ್ತಾ, ಒಂದು ಹುಲಿ ಪೊದೆಯಲ್ಲಿ ಬಿದ್ದುಕೊಂಡಿತ್ತಂತೆ. ವಾಸನೆ ಅದರ ಮೂಗಿಗೆ ಬಡಿದಾಗ "ಇದೇನು? ಅಡಿಗೆ ಮನೆ ವಾಸನೆ ಬರ್ತಾ ಇದೆ" ಎಂದು ಎದ್ದು ವಾಸನೆಯ ಜಾಡನ್ನೇ ಹಿಡಿದು ಮಾರಿಗುಡಿಯ ಹತ್ತಿರಕ್ಕೆ ಬಂದಿತಂತೆ.

ಮಾರಿಗುಡಿಯ ಬಾಗಿಲು ಹಾಕಿದೆ! ಒಳಗಿಂದ ಘಮಘಮ ಊಟದ ವಾಸನೆ ಬರುತ್ತಿದೆ. ಹಸಿವೂ ಆಗಿದೆ ಹುಲಿಗೆ. ಬಾಗಿಲು ತಟ್ಟಿತಂತೆ.

"ಯಾರು ಒಳಗೆ? ಬಾಗಿಲು ತೆಗೀರಿ" ಎಂದು ಘರ್ಜಿಸಿತಂತೆ.

ಬೇಕಾಬಿಟ್ಟಿ ಬೆಳೆದ ಹೋತ. ಪೇಟೇಲಿ ಬೆಳೆದ ಹೋತ. ಬುದ್ಧಿ ಉಪಯೋಗಿಸಿತು. "ಅಮ್ಮಾ ಮಾರೀದೇವಿ! ಬುದ್ಧಿ ಕೊಡು" ಅಂತ ಬೇಡಿಕೊಂಡಿತು. ನಂತರ ಬಾಗಿಲ ಕಂಡಿ ಹತ್ತಿರ ಬಂದು,

"ಯಾರಾದರೇನು ನಾನು? ಏನು ಬೇಕಾಗಿತ್ತು" ಎಂದಿತು. ಕೊಬ್ಬಿದ ಹೋತ; ಗಂಟಲು ದೊಡ್ಡದು. ಸ್ವಲ್ಪ ಬಿರುಸಾಗಿಯೂ ಇತ್ತು.

ಹುಲಿಗೆ ಪರಿಚಯವಿದ್ದ ಯಾವ ಪ್ರಾಣಿಗೂ ಈ ತರಹ ಗಂಟಲಿತ್ತಿಲ್ಲ ಸ್ವಲ್ಪ ತಬ್ಬಿಬ್ಬಾಯಿತು. ವಿನಯದಿಂದ ಆಮೇಲೆ ಕೇಳಿತು,

"ಯಾರಯ್ಯಾ? ಮಾರಾಯ, ಒಳಗಿರೋದು" ಎಂದು.

"ಯಾರಾದರೇನಯ್ಯ, ನಾನೊಂದು ಬಡ ಜಂತು. ನನ್ನ ಜತೆಯವರ ಕೂಡ ಹಣದ ವಿಷಯದಲ್ಲಿ ಮನಸ್ತಾಪ ಬಂದಾಗ ಇಲ್ಲಿಗೆ ತಲೆಮರೆಸಿಕೊಂಡು ಓಡಿ ಬಂದೆ. ಅಟ್ಟಿಸಿಕೊಂಡು ಅವರು ಬಂದರೋ ಎನ್ನಿಸಿತು". ಎಂದಿತಂತೆ ಹೋತ.

ಹಣ ಛಪಾವಣೆಮಾಡಿ ಬಂದ ಜಂತು ಜಾಣನಿರಬೇಕು, ನಾನು ಹುಷಾರಾಗಿರೋದು ವಾಸಿ ಅಂತ ಹುಲಿ ಮರ್ಯಾದೆಯಿಂದ,

"ವಂದನೆಗಳು, ಮಹಾಸ್ವಾಮಿ. ತಮ್ಮ ಪರಿಚಯ?" ಎಂದು ಕೇಳಿತಂತೆ. "ಬಡವನ ಪರಿಚಯ ಯಾಕಪ್ಪಾ! ಎಂಟು ತೋಳಗಳನ್ನು ತಿಂದ ನನ್ನ ಹಲ್ಲುಗಳನ್ನು ನೋಡು ಎಂದಿತಂತೆ. ಬಾಗಿಲ ಕಂಡಿಯಲ್ಲಿ ತನ್ನ ಗೊರಸುಗಳನ್ನು ತೋರಿಸಿತಂತೆ.

ಇಷ್ಟು ದೊಡ್ಡ ಹಲ್ಲುಗಳಿರುವ ಈ ಘೋರ ಜಂತು ಯಾವುದಪ್ಪಾ ಎಂದು ಹುಲಿ ಆಶ್ಚರ್ಯಗೊಂಡು ನೋಡುತ್ತಾ ಇತ್ತಂತೆ.

" ನನ್ನ ಮೀಸೆಯನ್ನು ನೋಡಪ್ಪಾ " ಎಂದು ಗಡ್ಡವನ್ನು ಬಾಗಿಲ ಕಂಡಿಯಲ್ಲಿ ತೋರಿಸಿತಂತೆ.

ಇಷ್ಟು ಭಾರಿ ಮೀಸೆ ಇರುವ ರೌಡಿ ಗಂಡುಜಂತುವನ್ನು ಕಂಡಿದ್ದೇ ಇಲ್ಲವಲ್ಲ ಅಂತ ಹುಲಿ ಬೆದರಿತಂತೆ.

" ಎಂಟು ಹುಲಿಗಳನ್ನು ಕಿತ್ತುತಿಂದ ಈ ಉಗುರುಗಳನ್ನು ನೋಡು " ಎಂದು ತನ್ನ ಕೊಂಬುಗಳನ್ನು ಬಾಗಿಲ ಕಂಡಿಯಲ್ಲಿ ತೋರಿಸಿತಂತೆ.

" ಈ ಉಗುರುಗಳಿಗೆ ನನ್ನ ಮೈ ಸಿಕ್ಕಿದರೆ ಹೇಗಪ್ಪಾ " ಎಂದು ಹುಲಿ ಚಕಿತಗೊಂಡಿತಂತೆ.

ಈ ರೀತಿ ಪ್ರಸಾರ ಭಾಷಣವನ್ನು ಮಾಡಿದಮೇಲೆ ಹೋತ ನನ್ನ ಪರಿಚಯ ಸಾಕಷ್ಟು ಆಯಿತೇ ! ಈಗ ಸುತ್ತಲೂ ನೋಡು, ನನ್ನ ದಾಯಾದಿಗಳ್ಯಾರಾದರೂ ಇತ್ತ ಬರುತ್ತಿದ್ದಾರೆಯೇ ಎಂದು ಒಗ್ಗರಣೆ ಹಾಕಿತಂತೆ.

ನಂತರ ಕತ್ತನ್ನು ಆಡಿಸಿತಂತೆ. ಆಗ ಗಂಟೆಯು ಬಡಿದು ಠಣ ಠಣ ಅಂತ ಕಂಚಿನ ಶಬ್ದವಾಯಿತಂತೆ.

ಹೆದರಿತು ಹುಲಿ. ಹೆದರಿ ಓಡಿ ಹೋಯಿತು ಹುಲಿ. ಮಳೆ ನಿಂತಿತು. ಆಗ ಹೋತ ಬಾಗಿಲನ್ನು ಕೊಂಬಿನಿಂದ ತೆಗೆದು ಊರಿಗೆ ಓಡಿ ಹೋಯಿತು.

* * * * *

ಮಾರಮ್ಮ ಆಗ ಗುಡಿಯಲ್ಲಿ ಗುಂಡಕಲ್ಲು ನಕ್ಕ ಹಾಗೆ ನಕ್ಕಳಂತೆ. " ಈ ಹೋತದ ಸಂತೋಷ ನೋಡು, ಹುಲಿ ಬಾಯಿಂದ ತಪ್ಪಿಸಿಕೊಂಡೆ ಎಂದು ಹಿಗ್ಗಿತು. ಮುಂದೆ ನನ್ನ ಬಾಯಿಗೆ ಬೀಳುತ್ತೆ ಅನ್ನೋ ಸತ್ಯದ ಅರಿವೇ ಇಲ್ಲ " ಎಂದು ನಕ್ಕಳಂತೆ.

ಎಂದು ನಮ್ಮ ಅಡುಗೂಲಜ್ಜಿ ಹೋತ ಹುಲಿಯ ಕತೆಯನ್ನು ಹೇಳಿದಳಂತೆ.

ನವಿಲು ಮತ್ತು ಕಾಕರಾಜನ ಕತೆ

ಇಂದಾನೊಂದು ಊರಿನಲ್ಲಿ ದೊಡ್ಡ ಬಂಗಲೆಯ ಹಿಂದೆ ಇದ್ದ ಹಲಸಿನ ಮರದ ಮೇಲೆ ಎಲೆಗಳ ಮರೆಯಲ್ಲಿ ಪುಟಾಣಿ ಗೂಡನ್ನು ಕಟ್ಟಿಕೊಂಡು ಹೊಸ ಸಂಸಾರವನ್ನು ಶುರುಮಾಡಿದನಂತೆ, ಕಾಕರಾಜ. ಹೊಸ ಹೆಂಡತಿ, ಮೆಚ್ಚುವ ಪ್ರಾಯ, ಅದರ ಮೇಲೆ ಕಾಕದೃಷ್ಟಿ, ಕೇಳಬೇಕೇ ಕಾಕರಾಜನ ಸಂಭ್ರಮ!

ಮಳೆ ಬೀಳುಕ್ಕೆ ಶುರುವಾಯಿತು. ಮಳೆ ಬಂದೇ ಬಂತು, ತಿರುಗಿ ಬಂತು. ಕೆಮ್ಮಣ್ಣು ಧೂಳನ್ನು ಅಡಗಿಸುತ್ತಾ ಬಂತು ಮಳೆ. ಕಾಕರಾಜನಿಗೆ ಬಲು ಉತ್ಸಾಹ ಏರಿತು, ಜಡಿ ಮಳೆ ಬೀಳುತ್ತಿತ್ತು. ಹೊರಗೆ ಹೋಗುವಂತಿರಲಿಲ್ಲ.

ಎರಡು ವಾರಗಳಾಗಿರಬಹುದು. ಕಾಕಾ ವೈದ್ಯರ ಬಳಿ ಹೋಗಿ, ಔಷಧಿ ತಂದು "ಇದನ್ನು ತೆಗೆದುಕೊ, ನನ್ನ ಚಿನ್ನ! ವಾಂತಿ ಕಡಿಮೆ ಆಗುತ್ತೆ, ಸಂಕಟ ಇಳಿಯುತ್ತೆ. ಆಗ ತಿನ್ನುಕ್ಕೆ ಆಗುತ್ತೆ, ತಿಂದದ್ದು ಮೈ ಹತ್ತುತ್ತೆ. ಹುಳಿ ದಾಳಿಂಬ್ರೆ ತಂದು ಕೊಡ್ತೀನಿ, ಕಾಗೆ ಕಡುಬು ತರ್ತೀನಿ," ಎಂದು ಪ್ರೀತಿಯ ಮಾತಾಡುತ್ತ, ಕಾಕರಸಿಯನ್ನು ಉಪಚರಿಸುತ್ತಿತ್ತಂತೆ. ಪ್ರೇಯಸಿಗೆ ನಿದ್ರೆ ಬರದೆ ಇದ್ದರೆ, ಕಾಕರಾಜ ಲಾವಣಿ ಕಟ್ಟಿ ಹಾಡ್ತಾ ಇದ್ದನಂತೆ. ಜಾನಪದ ಗೀತಗಳನ್ನು ಪಲುಕ್ತಾ ಇದ್ದನಂತೆ, ನನ್ಚಿನ್ನ, ನನ್'ರನ್ನ, ಇಷ್ಟನ್ನಾದರೂ ತಿಂದು ಬಿಡು, ಎಂದು ಬೂಚಿ ಬೂಚಿ ಮಾತಾಡ್ತಾ ಇತ್ತಂತೆ.

ಇನ್ನೆರಡು ವಾರಗಳಾಯಿತು. "ಅದು ಬೇಕು ಅಂದ್ರೆ! ಇದು ಬೇಕು ಅಂದ್ರೆ!" ಅಂತ ಕ್ಯಾಕರಿಸಿ ಅಡ್ಡಡ್ಡಲಾಗಿ ನಡೆಯುತ್ತ ಕೇಳುಕ್ಕೆ ಪ್ರಾರಂಭಿಸಿದ ಳಂತೆ. "ಲೇ! ಎಷ್ಟು ಚೆನ್ನಾಗಿ ಕಾಣಿಸ್ತಾ ಇದೀಯೆ! ಮನುಷ್ಯರು ಇಷ್ಟು ಚೆಂದ ಕಾಣಿಸುವುದಕ್ಕೆ, ನಾಲ್ಕು ತಿಂಗಳು ಕಾಯ್ತಾರೆ" ಎಂದು ಕಾಕರಾಜ, ಕೊಕ್ಕಿಗೆ ಕೊಕ್ಕನ್ನು ಹಿತವಾಗಿ ಮಸೆಯಿತಂತೆ.

* * * * *

ದೊಡ್ಡ ಬಂಗಲೆಯ ಹಿತ್ತಲಿನಲ್ಲಿ ಗುಡಿಸಿಲು ಹಾಕಿಕೊಂಡು ಮಾಲಿ ರಂಗ ವಾಸವಾಗಿದ್ದನಂತೆ. ಹಿತ್ತಲು ದೊಡ್ಡದು, ಮರ ಗಿಡ ಬಳ್ಳಿ ಹೆಚ್ಚು, ಹಾಗಾಗಿ ಹಾವು ಹುಳು ಸೇರಿಕೊಂಡಿತ್ತು. ಅದಕ್ಕೇ ಮಾಲಿ ನಾಲ್ಕು ನವಿಲುಗಳನ್ನು

ಸಾಕಿಕೊಂಡಿದ್ದನಂತೆ. ರಂಗನಿಗೆ ಇಪ್ಪತ್ತರ ಪ್ರಾಯ. ಓದುಬರಹ ತಿಳಿದವನಲ್ಲ. ದುಡಿದು ಕೆಲಸಮಾಡುತ್ತಿದ್ದ. ಕಾಕರಾಜನ ಆಲಾಪ ಪ್ರಲಾಪಗಳು ರಂಗನ ಕಿವಿಗೆ ಬಡಿಯುತ್ತಿತ್ತು. "ಈ ಕಾಗೆ ಮುಂಡೇದು, ಹಂಗ್ಯಾಕೆ ಒದರಾಡ್ತಿದೆ. ಕಾ ಕಾ ಎಂದು ಎಲ್ಲರ ಹಾಗೆ ಕೂಗದೆ ಎಂಗೆಂಗೊ ನರಳುತ್ತಲ್ಲ! ಇದಕ್ಕೇನು ಬೇನೆ ಇರಬೋದು?" ಎಂದು ರಂಗ ಯೋಚಿಸಿದ. ನಿದ್ರೆಗೆ ಭಂಗ ಆದರೆ, ರಂಗ ಯೋಚಿಸದೆ ಏನುಮಾಡಾನು? ಇಪ್ಪತ್ತರ ಪ್ರಾಯ. ಏನೋ ತೊಂಚಾವಂಚ, ಎಂಥದೋ ಮುಲಮುಲ. ಯಾವುದೂ ಸರಿಯಾಗಿ ತಿಳಿಯಲೊಲ್ಲದು. ಮರೆಯಾಗಿರೋದು ಏನಿದ್ದರೂ ಪರದೆ ಸರಿಸಿ ತಿಳಿದುಕೋಬೇಕು ಎನ್ನುವ ಕುತೂಹಲ.

ಒಂದು ರಾತ್ರಿ ಕಾಕರಾಜನ ಲಾವಣಿ ಹಾಡುವಿಕೆಯು ಅತಿಯಾಯ್ತು. ಬೆಳಿಗ್ಗೆ ಎದ್ದು ರಂಗ "ಕಾಕರಾಜನ ಮನೆಯನ್ನು ಇವತ್ತು ತಪಾಸ್ ಮಾಡಬೇಕು" ಎಂದುಕೊಂಡ. ಬೆಳಗಿನ ಕೆಲಸ ಮುಗಿದ ಮೇಲೆ ಹಲಸಿನ ಮರ ಹತ್ತಿದ. ಕಾಕರಾಜನ ಮನೆಯಲ್ಲಿ ಔಷಧಿ ಶೀಷೆಗಳಿದ್ದರೆ, ಪಾಪ! ಇಂತಹ ಬೇನೆ ಬಂದಿದೆ, ಎಂದು ತಿಳಿಯಬಹುದು ಎಂದುಕೊಂಡು ಮರ ಹತ್ತಿ ಕಾಕರಾಜನ ಗೂಡನ್ನು ನೋಡಿದ. ಅಲ್ಲೇನಿತ್ತು? ನಾಲ್ಕು ಮಂಕು ಮಂಕಾದ ಮೊಟ್ಟೆಗಳು! "ಓಹೋ! ಮೊಟ್ಟೆ ಮಡುಗುಕ್ಕೋಸ್ಕರ ಹಂಗೆಲ್ಲಾ ಹೊಡುಕೊಂತಿತ್ತು" ಎಂದು ರಂಗ ಅಂದುಕೊಂಡ. ಕೆಳಗಿಳಿದು ಬಂದ ರಂಗ. ಅವನ ಗುಡಿಸಿಲಿನ ಹತ್ತಿರ ನವಿಲುಗಳು ಆಡುತ್ತಿದ್ದುವು. ಅವುಗಳ ರೆಕ್ಕೆ ಪುಕ್ಕಗಳ ರಂಗು ನೋಡಿದ. ಆಗ ಅವನಿಗೆ ಒಂದು ಆಲೋಚನೆ ಹೊಳೆಯಿತು.

"ಮಸಲ! ಕಾಕರಾಜನ ಮಂಕು ಮಂಕು ಮೊಟ್ಟೆಗಳಿಗೆ, ನಾನು, ರಂಗು ರಂಗಿನ ಬಣ್ಣ ಹಚ್ಚಿಬಿಟ್ಟರೆ! ಕಾಕರಾಜ, ಕಾಕರಿಸಿ, ಮಧ್ಯಾಹ್ನದ ಊಟಕ್ಕೆ ಹಿಂತಿರುಗಿದಾಗ, ಬಣ್ಣ ಬಣ್ಣದ ಮೊಟ್ಟೆಗಳನ್ನು ನೋಡಿ ಸಂತೋಷಪಟ್ಟುಕೊಂಡಾನು! ಆಮೇಲಾದರೂ ಕಾ ಕಾ ಅಂತ ಸಹಜವಾಗಿ ಹಾಡಿಯಾನು!" ಎಂಬ ಯೋಚನೆ.

ಯೋಚನೆಯನ್ನು ಕಾರ್ಯಗತಮಾಡಬೇಕು ಎಂದು ನಿರ್ಧರಿಸಿದ. ಬುಡಾನ್‌ಸಾಬಿ ಅಖಾಡಾಕ್ಕೆ ಹೋಗಿ, ಮೊಹರಂ ಹಬ್ಬಕ್ಕೆ ಹಚ್ಚುವ ಬಣ್ಣಗಳನ್ನು ತೆಗೆದುಕೊಂಡು ಬಂದ. ಮರ ಹತ್ತಿದ, ಕಾಕರಾಜನ ಮೊಟ್ಟೆಗಳಿಗೆ

ರಂಗು ರಂಗಿನ ಬಣ್ಣ ಹಚ್ಚಿದ. ಕಾಮನಬಿಲ್ಲಿನ ಹಾಗೆ ಆ ಮೊಟ್ಟೆಗಳು ಕಂಡಾಗ ಹಿಗ್ಗಿದ. ಕೆಳಗಿಳಿದು ಬಂದು ಗುಡಿಸಿಲ ಮುಂದೆ ಕುಳಿತ.

* * * * *

ಎದುರಿನಲ್ಲಿ ನವಿಲುಗಳು ಆಡುತ್ತಿದ್ದುವು. ಮೂರು ಹೆಣ್ಣುಗಳು, ಒಂದೇ ಗಂಡು. ಅಂದಮೇಲೆ ಗಂಡಿನ ಜಂಭ ಕೇಳಬೇಕೇ? ರೆಕ್ಕೆ ತೆರೆದು ಅಂತಃಪುರದ ಅರಸಿಯರನ್ನು ನೋಡುತ್ತಾ ಕೇಕೆ ಹಾಕಿ ಕುಣಿಯುತ್ತಿತ್ತು. ತಾನೂ ಹಾಗೆಯೇ ಕುಣಿಯಬೇಕು ಎಂದು ರಂಗನಿಗೆ ಅನ್ನಿಸಿತು.

ಮಧ್ಯಾಹ್ನದ ಊಟದ ಹೊತ್ತು. ಕಾಕರಸಿ ಹಿಂತಿರುಗಿ ಮೊದಲು ಬಂದಳು. ಊಟವನ್ನು ಸಿದ್ಧಮಾಡುಕ್ಕೆ ಶುರುಮಾಡಿದಳು. ಆ ಗಲಾಟೆಯಲ್ಲಿ ಮೊಟ್ಟೆಗಳತ್ತ ದೃಷ್ಟಿ ಆಕೆ ಹಾಯಿಸಿಲೇ ಇಲ್ಲ. ಸ್ವಲ್ಪ ಹೊತ್ತಿನಲ್ಲೇ ಕಾಕರಾಜ ಹಿಂತಿರುಗಿದ. ಗೂಡಿಗೆ ಹೋದ. ಮೊಟ್ಟೆಗಳನ್ನು ನೋಡಿದ. ಅವುಗಳನ್ನು ನೋಡಿದ ಕೂಡಲೇ ನೆಲದ ಮೇಲಕ್ಕೆ ದೃಷ್ಟಿ ಹರಿಸಿದ. ನವಿಲನ್ನು ಕಂಡ.

ಕೋಪ ಉಕ್ಕಿಬಂತು. ಸರ್ರಂತ ಮಿಂಚಿನಂತೆ ಹಾರಿಬಂದು ಗಂಡು ನವಿಲನ್ನು ಕುಕ್ಕಿ ಕುಕ್ಕಿ ಗಾಯಮಾಡಿದ. ಆಮೇಲೆ ಜುಟ್ಟು ಜನಿವಾರ ಕಿತ್ತು ಹಾಕಿ, ಸಂನ್ಯಾಸಾಶ್ರಮ ತೊಗೊಂಡು ಹಿಮಾಲಯದ ತಪ್ಪಲಿಗೆ ತಪಸ್ಸಿಗೆ ಅಂತ ಹೊರಟು ಹೋದ. ಹೋಗುವ ಮೊದಲು ಸಂನ್ಯಾಸಿಯ ದಂಡದಿಂದ ಕಾಕರಸಿಯನ್ನು ಚೆನ್ನಾಗಿ ಥಳಿಸಿ "ನಿನ್ನ ಮಿಂಡ ಸತ್ತು ಹೋದ, ನಿನ್ನ ಗಂಡ ತಲೆ ಬೋಳಿಸಿಕೊಂಡು ಹಾಳಾಗಿ ಹೋದ. ಈ ಅಡ್ಡಕಸಬಿ ಮಕ್ಕಳನ್ನು ಹೇಗಾದರೂ ಕಾಪಾಡಿಕೊ" ಎಂದು ಕೊಕ್ಕು ತುಂಬಾ ಬೈದು ಹಾರಿಹೋದ.

ಎಂದು ನಮ್ಮ ಅಡುಗೂಲಜ್ಜಿ ಕಾಕರಾಜ, ನವಿಲಿನ ಕತೆಯನ್ನು ಮೊಮ್ಮಕ್ಕಳಿಗೆ ಹೇಳಿದಳು.

ಕೋವಿ ಹಿಡಿದ ಕನ್ಯೆಯ ಕತೆ

ಇಂದಾನೊಂದು ಕಾಲದಲ್ಲಿ ಷಹರಿನ ಬಡಾವಣೆಯಲ್ಲಿ ಮುದುಕಿಯೊಬ್ಬಳು ಒಂಟಿಯಾಗಿ ವಾಸಮಾಡಿಕೊಂಡಿದ್ದಳಂತೆ. ಈಗಿನ ಕಾಲದ ಮುದುಕಿ, ಅಂದ ಮೇಲೆ ತನ್ನ ಯೋಗಕ್ಷೇಮವನ್ನು ತಾನು ನೋಡಿಕೊಳ್ಳುವ ಶಕ್ತಿ ಮತ್ತು ಜಾಣ್ಮೆ ಇತ್ತಂತೆ. ಅದೇ ಷಹರಿನ ಕಾಲೇಜಿನಲ್ಲಿ ಅವಳ ಮೊಮ್ಮಗಳು ಓದುತ್ತಿದ್ದ ಳಂತೆ. "ಕಾಲೇಜಿಗೆ ಹೋಗಿ ಬರುಕ್ಕೆ ತುಂಬಾ ದೂರ, ಅದಕ್ಕೋಸ್ಕರ ಕಾಲೇಜು ಹಾಸ್ಟಲಲ್ಲಿ ಇರ್ತೀನಿ ಅಜ್ಜಿ ! ರಜ ಬಂದಾಗ ನಿಮ್ಮನೆಗೂ ಬರ್ತೀನಿ" ಎಂದು ಮೊಮ್ಮಗಳು ಅಜ್ಜೀಗೆ ಹೇಳಿದಳಂತೆ. "ಹಾಗೆ ಮಾಡಿದರೆ ನನಗೆ ತುಂಬಾ ಅನುಕೂಲ ಅಜ್ಜಿ" ಎಂದೂ ಸೇರಿಸಿದಳಂತೆ. "ಹ್ದೌ ಕಣೆ? ಅದೇ ವಾಶಿ; ನನಗೂ ಅನುಕೂಲ" ಎಂದಿತಂತೆ ಅಜ್ಜಿ. "ಆದರೆ ರಜ ಗಿಜ ಸಿಕ್ಕಾಗ ಇಲ್ಲಿಗೇ ಒಪ್ಪತ್ತು ಬಂದು ಊಟ ಮಾಡಿಕೊಂಡು ಹೋಗು" ಎಂದೂ ಅಜ್ಜಿ ಒತ್ತಾಯಮಾಡಿ ಹೇಳಿದಳಂತೆ. ಅದಕ್ಕೆ ಒಪ್ಪಿಕೊಂಡು ಮೊಮ್ಮಗಳು ಕಾಲೇಜ್ ಹಾಸ್ಟಲಿನಲ್ಲಿದ್ದಳಂತೆ.

* * * * *

"ನಾಳೆ ನಿನ್ನ ಜತೆಗೆ ಬರುಕ್ಕಾಗುಲ್ಲ, ಶಾರಿ, ನಮ್ಮ ಅಜ್ಜಿ ಮನೆಗೆ ಹೋಗ ಬೇಕು. ಯಾವುದೋ ವ್ರತ ಮಾಡ್ತಾರಂತೆ. ಸಹಾಯಮಾಡಿದ ಹಾಗೂ ಆಗುತ್ತೆ, ಹಾಗೂ ದೇವರ ಪ್ರಸಾದಾನ ತೆಗೆದುಕೋಬಹುದು. ಬಂದು ಹೋಗು ಅಂತ ಕಾಗದ ಕಳಿಸಿದ್ದಾರೆ. ಮಧ್ಯಾಹ್ನ ಲಂಚ್ ಇಂಟರವಲ್‌ನಲ್ಲಿ ಅಜ್ಜಿಮನೆ ಕಡೆಗೆ ಹೋಗ್ತೀನಿ" ಎಂದು ಲೀಲ ಕಾಲೇಜ್ ಕ್ಯಾಂಟೀನಿನಲ್ಲಿ ಸ್ನೇಹಿತೆ ಶಾರದೆಗೆ ಮಂಗಳವಾರದ ಮಧ್ಯಾಹ್ನ ಹೇಳಿದಳಂತೆ.

ಕಾಲೇಜ್ ಕ್ಯಾಂಟೀನಿನ ಕಂಬದ ಆಚೆಕಡೆ ಕೂತು ತಿಂಡಿ ತಿನ್ನುತ್ತಿದ್ದ ಬಾಲಗೋಪಾಲನಿಗೆ ಇದು ಕೇಳಿಸಿತಂತೆ. ಲೀಲನ್ನ ಕಂಡಾಗಲೆಲ್ಲಾ ಅವನ ಎದೆ ಬಡಿತವು ಅಸ್ತವ್ಯಸ್ತವಾಗುತ್ತಿತ್ತಂತೆ. ಮುಖ ಕೆಂಪೇರುತ್ತಿತ್ತಂತೆ. ನಿಟ್ಟುಸಿರು ಬಿಡೋಹಾಗೆ ಆಗ್ತಾಇತ್ತಂತೆ. ಯಾಕೆ ಹೀಗೆ ಆಗುತ್ತೆ ಅಂತ ಅವನಿಗೆ ತಿಳಿಯ ದಂತೆ. ಆದರೆ ಲೀಲನ ಹತ್ತಿರ ಮಾತಾಡುತ್ತಿದ್ದರೆ ತುಂಬಾ ಸಮಾಧಾನ

ವಾಗುತ್ತಿತ್ತಂತೆ". ಆದರೆ ಇವನ ಜತೆ ಮಾತನಾಡುಕ್ಕೆ ಲೀಲನಿಗೆ ಸ್ವಲ್ಪವೂ ಇಷ್ಟವಿಲ್ಲವಂತೆ. ಕಾರಣ, ಅಂತಹ ಅವಕಾಶಗಳು ಕಡಿಮೆಯಾಗಿತ್ತಂತೆ, ಬಾಲ ಗೋಪಾಲನಿಗೆ.

ಶಾರದೆಗೆ ಮಾರನೆಯ ದಿನದ ಪ್ರೋಗ್ರಾಂಅನ್ನು ಲೀಲ ಹೇಳಿದಾಗ ಕಂಬದ ಹಿಂದೆ ಕೂತು ಅಕಸ್ಮಾತ್ ಕೇಳಿಸಿಕೊಂಡ ಬಾಲಗೋಪಾಲನಿಗೆ ಸ್ಫೂರ್ತಿ ಉದಯಿಸಿತಂತೆ.

ಬುಧವಾರದ ಮಧ್ಯಾಹ್ನ ೩ ಗಂಟೆಯ ಹೊತ್ತಿಗೆ, ಬಡಾವಣೆಯಲ್ಲಿರುವ ಅಜ್ಜಿ ಮನೆಗೆ ಬಾಲಗೋಪಾಲ ಹೋದ. "ಅಜ್ಜೀ! ನೀವು ಲೀಲಮ್ಮನ ಅಜ್ಜೀನಾ" ಎಂದು ಕೇಳಿದ. "ಹೌದಪ್ಪ! ಏನು ಸಮಾಚಾರ ತಂದಿದಿ" ಎಂದು ಅಜ್ಜಿ ಕೇಳಿದಳಂತೆ.

"ಲೀಲನಿಗೆ ಹಠಾತ್ತನೆ ಹೊಟ್ಟೆ ಶೂಲೆ ಬಂತು. ಆಸ್ಪತ್ರೆಗೆ ತತ್‌ಕ್ಷಣ ಕಳಿಸಿದರು. ಆಸ್ಪತ್ರೆಗೆ ಹೋಗುವ ಮೊದಲು ಲೀಲ ನನ್ನನ್ನು ಕರೆದು "ಬಾಲು, ಬಡಾವಣೇಲಿ ನನ್ನ ಅಜ್ಜಿ ಇದ್ದಾರೆ. ಅವರಿಗೆ ಈ ಸುದ್ದಿ ತಿಳಿಸಿ, ಆಸ್ಪತ್ರೆಯ ಹತ್ತಿರಕ್ಕೆ ಕಳಿಸು ಎಂದು ಹೇಳಿದಳು. ಅಪಾಯವೇನೂ ಇಲ್ಲ. ಆದರೆ ಬಹಳ ನರಳುತ್ತ ಇದಾಳೆ" ಎಂದು ಬಾಲಗೋಪಾಲ ಸಾವ್‌ಸೀದ ಹೇಳಿದ.

"ಮನೆ ಬಿಟ್ಟು ಹ್ಯಾಗಪ್ಪ ಹೋಗೋದು, ಪೂಜೇಗೆ ಬೇರೆ ಅಣಿಮಾಡ ಬೇಕು" ಎಂದು ಅಜ್ಜಿ ಸ್ವಲ್ಪ ಭಾಣಸ ತೋರಿಸಿದಳು.

"ಇಲ್ಲಮ್ಮಾ! ತಡ ಮಾಡಬೇಡಿ. ನಾನು ಬಂದ ಆಟೋರಿಕ್ಷಾ ಇಲ್ಲೇ ಇದೆ. ಅದರಲ್ಲೇ ಹೋಗಿ. ನಾನು ಬೇಕಾದರೆ ಮನೆ ಕಾದುಕೊಂಡಿರ್ತೀನಿ" ಎಂದ ಬಾಲು.

"ಆಗಲಪ್ಪ, ಆದಷ್ಟು ಬೇಗ ಬಂದು ಬಿಡ್ತೀನಿ. ಸ್ವಲ್ಪ ಗುಣವಾಗಿದ್ದರೆ ಲೀಲನ್ನೂ ಕರಕೊಂಡು ಬರ್‍ತೀನಿ. ನಾನು ಬರೋತನಕ ಇಲ್ಲೇ ಇರಪ್ಪಾ!" ಎಂದು ಅಜ್ಜಿ ಹೇಳಿ, ಆಟೋದಲ್ಲಿ ಕುಳಿತು ಹೊರಟಳಂತೆ.

ಅಜ್ಜಿ ಆ ಕಡೆ ಹೋಗುತ್ತಿದ್ದ ಹಾಗೇ, ಬಾಲಗೋಪಾಲ ಮನೆಯೊಳಕ್ಕೆ ಹೋಗಿ, ಅಜ್ಜಿಯ ಕೆಂಪು ಸೀರೆಯೊಂದನ್ನು ಉಟ್ಟುಕೊಂಡನಂತೆ. ವಾರಣ ವಾಗಿ ಮುಸುಕು ಹಾಕಿಕೊಂಡು ಅಡಿಗೆ ಮನೆಯಲ್ಲಿ ತುಪ್ಪಾಳೆ ಮಾಡುವವಳಂತೆ ಕೂತನಂತೆ. ಸುತ್ತಲೂ ಬಾಳೇಹಣ್ಣು, ಕರ್ಜೂರ, ಗೋಡಂಬಿ, ದ್ರಾಕ್ಷಿ,

ಜೇನು ತುಪ್ಪ ಎಲ್ಲವನ್ನೂ ಹರವಿಕೊಂಡಿದ್ದನಂತೆ. ಮಣೆಮೇಲೆ ಕುಕ್ಕುರು ಗಾಲಿನಲ್ಲಿ ಕೂತಿದ್ದನಂತೆ.

"ಅಜ್ಜೀ! ಚೆನ್ನಾಗಿದೀಯಾ? ಎಷ್ಟೋ ಬೇಗ ಬರೋಣ ಅಂತ ಹೊರಟೆ. ಆದರೆ ಆ ಹಾಳು ಬಸ್ಸು ಕೊಂಕಣ ಸುತ್ತಿ ಮೈಲಾರ ಬಳಸಿ ಇಲ್ಲಿಗೆ ಬರೋ ಹೊತ್ತಿಗೆ ಇಷ್ಟು ಹೊತ್ತಾಯ್ತು" ಅಂತ ಹೇಳುತ್ತಾ ಲೀಲ ಮನೆಯೊಳಕ್ಕೆ ಬಂದಳಂತೆ. ಬಂದು ಅಡಿಗೆ ಮನೆ ಬಾಗಿಲಲ್ಲಿ ನಿಂತುಕೊಂಡಳಂತೆ.

ಲೀಲನ ಧ್ವನಿ ಕೇಳುತ್ತಿದ್ದ ಹಾಗೇ ಬಾಲಗೋಪಾಲನ ಎದೆ ಡವಡವ ಅಂತ ತವುಟೆ ಬಾರಿಸಿತಂತೆ. ಹಣೆಯಮೇಲೆ ಕಿರುಬೆವರಿಟ್ಟಿತಂತೆ. ಮುಸುಕಿನಿಂದಲೇ ಆ ಬೆವರನ್ನು ಒರೆಸಿಕೊಂಡು, "ಹೊತ್ತಾದರೇನಂತೆ ಲೀಲ, ಅಷ್ಟು ವಿಶ್ವಾಸವಿಟ್ಟು ಬಂದೆಯಲ್ಲಾ! ಬಚ್ಚಲಮನೆಗೆ ಹೋಗಿ ಕೈಕಾಲು ತೊಳೆದು ಕೊಂಡು ಬಾಮ್ಮ. ಪಾನಕ ಮಾಡಿಟ್ಟಿದೀನಿ. ಕುಡಿಯೋವಂತೆ" ಎಂದು ಮುಖ ಆ ಕಡೆಗೆ ಪೂರ್ತಿ ತಿರುಗಿಸದೆಯೇ ಬಾಲು ಹೇಳಿದನಂತೆ.

ಬಚ್ಚಲ ಮನೆಯ ಕಡೆಗೆ ಲೀಲ ಹೋದಳು. ಅವಳನ್ನೂ ಯೋಚನೆಯು ಕಾಡುತ್ತಿತ್ತು. ಯಾವಾಗ ಬಂದರೂ ಅಜ್ಜಿ ಓಡಿ ಬಂದು ಬಾಚಿ ತಬ್ಬಿಕೊಳ್ಳುತ್ತಿದ್ದಳು. ಕೆನ್ನೆ ಚಿವುಟುತ್ತಿದ್ದಳು. ನೆಟ್ಟಿಗೆ ಮುರಿದು ದೃಷ್ಟಿ ತೆಗೆಯುತ್ತಿದ್ದಳು. ಇವತ್ತು ಯಾಕೆ ಹೀಗೆ ಮಾಡಿದಳು ಎಂದು ಅನುಮಾನ ಕಾಡ ಹತ್ತಿತಂತೆ.

ಬಾಲ್ಯದಲ್ಲಿ "ಲಿಟಲ್ ರೆಡ್ ರೈಡಿಂಗ್ ಹುಡ್" ಅನ್ನು ಅವಳು ಓದಿದ್ದಳು. ಕಾಲೇಜಿನ ಗಂಡು ಸಹಪಾಠಿಗಳ ತೋಳ ಸ್ವಭಾವವೂ ಅವಳಿಗೆ ಗೊತ್ತಿತ್ತು. N.C.C. ನಲ್ಲಿ ತರಪೇತು ಪಡೆದಮೇಲೆ ಕಾಲೇಜು ತೋಳಗಳಿಗೆ ಸ್ವಲ್ಪವೂ ಹೆದರುತ್ತಿರಲಿಲ್ಲ. ಆದರೆ N.C.C. ಗುಂಡು ಹಾರಿಸುವ ಸ್ಪರ್ಧೆಯಲ್ಲಿ ಲೀಲನಿಗೆ ಮೊದಲು ಸ್ಥಾನ ಬಂದಿದ್ದು, ಬಾಲುವಿಗೆ ತಿಳಿಯದು. ಅಲ್ಲದೆ ಲೀಲನ ತಂದೆ ಫಾರೆಸ್ಟ್ ಕನ್ಸರ್‌ವೇಟರು ಎಂಬುವುದೂ ಅವನಿಗೆ ತಿಳಿಯದು.

ಬಚ್ಚಲಮನೆಯಿಂದ ಕೈಕಾಲು ತೊಳೆದುಕೊಂಡು ಹಿಂತಿರುಗುವಾಗ, ತನ್ನ ಕೈಚೀಲದಿಂದ, ಅಪ್ಪ ಕೊಟ್ಟಿದ್ದ ಪಿಸ್ತೂಲನ್ನು ಬಲಗೈಯಲ್ಲಿ ಹಿಡಿದುಕೊಂಡು ಲೀಲ ಅಡಿಗೆಮನೆಯ ಬಾಗಿಲಹತ್ತಿರ ಬಂದು ನಿಂತುಕೊಂಡಳಂತೆ.

ಆ ವೇಳೆಗೆ ಬಾಲಗೋಪಾಲ ಸ್ವಲ್ಪ ಧೈರ್ಯವನ್ನು ತಂದುಕೊಂಡಿದ್ದ. ಇಷ್ಟೆಲ್ಲಾ ಸಾಧಿಸಿದವನು ಈಗ ಬೆಚ್ಚಿದರೆ ಮಾಡಿದ್ದೆಲ್ಲ ಮಣ್ಣುಪಾಲಾಗುತ್ತಲ್ಲ

ಎಂದು ತನ್ನನ್ನು ತಾನೇ ಹುರಿದುಂಬಿಸಿಕೊಂಡಿದ್ದ. ಆದುದರಿಂದ ಲೀಲ ಬಂದಾಗ ಎದ್ದು ನಿಂತು ಬಲಗಡೆ ಇದ್ದ ಬಡುವಿನ ಕಡೆಗೆ ಹೋಗಿ, ಅಲ್ಲಿದ್ದ ಪಾನಕದ ಬಟ್ಟಲನ್ನು ಕೈಗೆ ತೆಗೆದುಕೊಂಡ.

ಅಜ್ಜಿ ಎದ್ದು ನಿಂತ ರೀತಿಯಿಂದಲೇ ಲೀಲಳ ಅನುಮಾನ ಹೆಚ್ಚಾಯಿತು. ಯಾವಾಗ ಅಜ್ಜಿ ಎದ್ದುನಿಂತರೂ ಟಕ್ ಅಂತ ನಿಲ್ಲುತ್ತಿದ್ದಳು. ಮುದುಕಿಯ ಸೊಂಟ ಅಷ್ಟು ಬಿಗಿಯಾಗಿತ್ತು. ಆದರೆ ಬಾಲಗೋಪಾಲ ಎದ್ದಾಗ, ಸೊಂಟ ಸಡಿಲವಾದವರು ಮಂಡಿ ಮೇಲೆ ಕೈ ಇರಿಸಿಕೊಂಡು ಏಳುವುದಿಲ್ಲವೇ ಹಾಗೆ ಎದ್ದು ನಿಂತಿದ್ದ. ಕೆಂಪು ಸೀರೆ ಉಟ್ಟ ಮುಖವನ್ನು ದಿಟ್ಟಿಸಿ ನೋಡಿದಳು. ಅಜ್ಜಿಯ ಮೇಲ್ತುಟಿಯ ಮೇಲೆ ಸ್ವಲ್ಪವಾದರೂ ಗುರುತಿಸಬಹುದಾದ ಮೀಸೆ ಇತ್ತು. ಈ ವ್ಯಕ್ತಿಯ ಮುಖ ಕೇವಲ ಮೀಸೆಗಾಣದ ಹೆಣ್ಣು ಹೆಣ್ಣು ಮುಖ. ತಲೆಯ ಮುಸುಕನ್ನು ಅಜ್ಜಿ ಕಿವಿಹಿಂದೆ ಲಕ್ಷಣವಾಗಿ ಸಿಕ್ಕಿಸಿಕೊಳ್ಳುತ್ತಿದ್ದಳು. ಇಂದು ಕಿವಿಗಳನ್ನು ಮುಸುಕಿನಿಂದ ಪೂರ್ತಿ ಮುಚ್ಚಿಕೊಂಡಿತ್ತು.

ಇದರಲ್ಲೇನೋ ಮೋಸ ಇದೆ. ಯಾವುದೋ ತೋಳ ಬಂದು ಅಜ್ಜಿಯ ಸೀರೆಯನ್ನು ಉಟ್ಟುಕೊಂಡು ನನಗೆ ಕಾದಿರುವ ಹಾಗಿದೆ. ಇದನ್ನು ಧೃಡ ಪಡಿಸಬೇಕು ಎಂದು ನಿರ್ಧರಿಸಿದಳು. ಮರೆಯದಹಾಗೆ ಬುದ್ಧಿ ಕಲಿಸಬೇಕು ಎಂದು ಕೊಂಡಳು.

"ಬಟ್ಟಲು ಅಲ್ಲೇ ಇಡು. ಸೀರೆಯನ್ನು ಕಳಚು" ಎಂದು ಅಧಿಕಾರವಾಣಿ ಯಲ್ಲಿ ಹೇಳಿದಳು. ಹೇಳುತ್ತಾ ಪಿಸ್ತೂಲನ್ನು ವ್ಯಕ್ತಿಯ ಎದೆಯತ್ತ ಗುರಿ ಹಿಡಿದಳು.

ಬಾಲಗೋಪಾಲ ಒಂದು ಕ್ಷಣ ಸುಮ್ಮನೇ ಇದ್ದ. ಈ ಹೆಣ್ಣಿನ ಬೆದರಿಕೆಗೆ ಯಾರು ಸೊಪ್ಪುಹಾಕುತ್ತಾರೆ? ನೆಟ್ಟನೆ ಛಂಗಿಹೋಗಿ ಅವಳ ಕೈ ಹಿಡಿದು ಕೊಳ್ಳಲೇ ಎಂದು ಯೋಚಿಸಿದ.

ಪಿಸ್ತೂಲನ್ನು ಲೀಲ ಬಾರಿಸಿದಳು. ಎಂತಹ ಗುರಿ ಅಂತ? ಕೈಯ್ಯಲ್ಲಿದ್ದ ಬಟ್ಟಲಿಗೆ ಗುಂಡು ತಾಕಿತು. ಬಟ್ಟಲು ಕೆಳಕ್ಕೆ ಬಿತ್ತು. "ಈ ಹೆಣ್ಣು ಚಾಮುಂಡಿಯ ಗೋತ್ರದ್ದಿರಬೇಕು. ಇದು ಹೇಳಿದ ಹಾಗೆ ಕೇಳಬೇಕು. ಇಲ್ಲದೆ ಇದ್ದರೆ ಕೈಯೋ ಕಾಲೋ ಊನವಾಗುತ್ತೆ" ಎಂದು ಬಾಲುವಿಗೆ ಅರ್ಥ ವಾಯಿತು. ಸೀರೆಯ ಉಡಿಯನ್ನು ಬಿಚ್ಚಿದ. ಸೀರೆ ಕಳಚಿ ಬಿತ್ತು. ಚಡ್ಡಿ

ಧಾರಿ ಬಾಲು, ಕೆಂಪು ಮುಸುಕನ್ನು ಹಾಕಿಕೊಂಡು ನಿಂತಿದ್ದ ಚಿತ್ರವನ್ನು ಲೀಲ ಕಂಡಳು.

ಆ ವೇಳೆಗೆ ಅಜ್ಜಿ ಹಿಂತಿರುಗಿದಳು. "ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ಶಾರದೆ ಸಿಕ್ಕಿದಳು. ಮ್ಯಾಟನೀಗೆ ಹೋಗ್ತಾ ಇದ್ದಳು. ಲೀಲ ಎಲ್ಲೇ ಎಂದು



ಕೇಳಿದೆ. ನಿಮ್ಮನೆಗೆ ಆಗಲೇ ಹೋದಳಲ್ಲ ಅಜ್ಜೀ! ಅಂತ ಅಂದಳು. ಅದಕ್ಕೇ ಬೇಗ ಬೇಗ ಆಟೋದವನನ್ನು ಓಡಿಸಿಕೊಂಡು ಬಂದೆ" ಎಂದು ಹೇಳಿದಳು ಅಜ್ಜಿ, ಅಡಿಗೆ ಮನೆಯ ಹೊಸಿಲಿನ ಮೇಲೆ ಪಿಸ್ತೂಲು ಹಿಡಿದು ನಿಂತಿದ್ದ ಲೀಲಳಿಗೆ. ನಂತರ "ಇದೇನೇ? ಅವತಾರ?" ಎನ್ನುತ್ತಾ ಅಡಿಗೆ ಮನೆಯೊಳಗೆ

ನೋಡಿದಳು. ಚಡ್ಡಿಧಾರಿ ಯುವಕ, ತನಗೆ ಸುದ್ದಿ ತಿಳಿಸಿ; ಮನೆಕಾಯುತ್ತಿದ್ದ ಯುವಕ, ಕೆಂಪು ಮುಸುಕನ್ನು ಹಾಕಿಕೊಂಡು, ಸೀರೆಯನ್ನು ಸುತ್ತಲೂ ಗ್ರೀಕ್ ಪ್ರತಿಮೆಗಳ ತರಹ ಇಳಿಬಿಟ್ಟುಕೊಂಡು, ಥರ ಥರ ನಡುಗುತ್ತ ನಿಂತಿದ್ದಾನೆ?

ನಂತರ ಅಜ್ಜಿಯು ಕಾರ್ಯೋನ್ಮುಖಳಾದಳು. ಅವನ ಚಡ್ಡಿ ಜುಬ್ಬಾಗಳನ್ನು ಗಂಟುಕಟ್ಟಿ ಕಾಲೇಜಿನ ಪ್ರಿನ್ಸಿಪಾಲರಿಗೆ ತಲಪಿಸುವಂತೆ ಆಟೋ ಡ್ರೈವರಿಗೆ ಹೇಳಿದಳು. ಕೆಂಪು ಸೀರೆಯನ್ನೇ ಉಡಿಸಿ, ಕೈಕಾಲುಗಳನ್ನು ಹಳೆ ರವಿಕೆಯಲ್ಲಿ ಬಿಗಿದು, ಬಾಲುವನ್ನು ಹಾಸ್ಟೆಲಿನಲ್ಲಿ ಬಿಡು ಎಂದೂ ಹೇಳಿದಳು. ವಿಷಯ ತಿಳಿದ ಆಟೋ ಡ್ರೈವರಿಗೆ ಹೀಗೆ ಮಾಡಲು ಬಲು ಖುಷಿ. ಅಲ್ಲದೆ ಅಜ್ಜಿ ಹತ್ತು ರೂಪಾಯಿಗಳನ್ನೂ ಕೊಟ್ಟಳು. ನಂತರ ಅಜ್ಜಿ ವ್ರತವನ್ನು ಸಾಂಗವಾಗಿ ನೆರವೇರಿಸಿದಳು.

"ಅದಕ್ಕೇ! ಮೊಮ್ಮಕ್ಕಳಿರಾ! ಕನ್ಯೆ ಕೋವಿ ಹಿಡಿಯುವುದನ್ನು ಚೆನ್ನಾಗಿ ಕಲಿತಿರಬೇಕು. ಆಮೇಲೆ ಗಂಡು, ಕೆಂಪು ಸೀರೇನ ಉಟ್ಟು ಮುಸುಕು ಎಳೆದು ಕೊಳ್ಳುತ್ತೆ."

ಎಂದು ನಮ್ಮ ಅಡುಗೂಲಜ್ಜಿ ಕೋವಿ ಹಿಡಿದ ಕನ್ಯೆಯ ಕತೆಯನ್ನು ಹೇಳಿದಳು.

ಕೋತಿ ಅಳಿಯ - ದಿಮ್ಮಿಯ ಬೆಣೆ

ಇಂದಾನೊಂದು ಕಾಲದಲ್ಲಿ ಗಡವಾ ಕೋತಿ ಒಂದು ಅಣ್ಣಮ್ಮನ ಗುಡಿ ಹತ್ತಿರ ಇದ್ದ ಆಲದ ಮರದ ಬಳಿ ಸಂಸಾರ ಮಾಡಿಕೊಂಡಿತ್ತಂತೆ. ಪಟ್ಟಣದಲ್ಲಿ ಹುಟ್ಟಿ ಬೆಳೆದ ಕೋತಿ. ಹಣ್ಣು ಅಂಗಡಿಗಳಿಂದ ಹಣ್ಣು ಲಪಟಾಯಿಸುವುದು, ದೇವಸ್ಥಾನಕ್ಕೆ ಬಂದ ಹೆಣ್ಣುಮಕ್ಕಳ ಕೈ ತಟ್ಟೆಯಿಂದ ತೆಂಗಿನಕಾಯಿ ಬಾಳೆ ಹಣ್ಣು ಲಪಟಾಯಿಸುವುದು, ಯಾರ ಬೆದರಿಕೆಗೂ ಬೆದರದೆ, ತಾನೇ ಗುರ್ ಗುರ್ ಅಂತ ಹೆದರಿಸುವುದು, ಇವೆಲ್ಲವನ್ನೂ ಲೀಲಾಜಾಲವಾಗಿ ಕಲಿತುಕೊಂಡಿತ್ತಂತೆ. ಹಾಗೆ ಬಾಳಿಕೊಂಡು ದೊಡ್ಡ ಜನಾನ ಇದ್ದ ಸಂಸಾರವಾಗಿದ್ದರೂ, ಸುಲಭ ವಾಗಿ ನಿಭಾಯಿಸಿಕೊಂಡು ಹೋಗುತ್ತಿತ್ತಂತೆ.

ಒಂದು ಸಂಜೆ ಕಿರಿಯ ಹೆಂಡತಿ ಗಡವಾ ಕೋತಿಗೆ ಹೇಳಿತಂತೆ "ನೋಡಿ ಅಂದ್ರೆ, ನಿನ್ನೆ ನಮ್ಮ ಚೊಚ್ಚಲು ಮಗಳು ಕಾಲೇಜ್ ಲೈಬ್ರೆರಿಯಿಂದ ಕತೆ ಪುಸ್ತಕ ತಂದಿದ್ದಳು. ಅದನ್ನ ನಾನೂ ಓದಿದೆ. ಓದುವಾಗಲೇ ನನಗೆ ಹೇಗೆ ಹೇಗೋ ಆಯಿತು. ಮೈಯೆಲ್ಲಾ ಮುಲ ಮುಲ ಗುಟ್ಟಿತು. ಅಂದಮೇಲೆ ಮಗಳಿಗೆ ಹೇಗಾಗಿರಬೇಕು? ಯಾಕೆ ಹೇಳುಕ್ಕೆ ಬಂದೆ ಅಂದರೆ, ಅವಳಿಗೊಂದು ಮದುವೆ ಮಾಡಿಬಿಟ್ಟು ನಮ್ಮ ಸೆರೆ ಬಿಡಿಸಿಕೊಳ್ಳಬೇಕು; ಆದಷ್ಟು ಬೇಗ" ಎಂದು.

"ಎಲ್ಲಿ ಆ ಪುಸ್ತಕ ತಾ" ಎಂದು ಗಡವಾ ಕೋತಿ ಕೇಳಿತು. ಕಿರಿ ಹೆಂಡತಿ ತಂದು ಕೊಟ್ಟಳು. "ಇದನ್ನು ಓದುಕ್ಕೆ ಶುರು ಮಾಡಿದಳೇ, ಮಗಳು! ಪ್ರಾಯ ದಲ್ಲಿದ್ದಾಗ ನಾನು ಓದಿದ್ದೆ. ಅಸಾಧ್ಯ ಪುಸ್ತಕ. ನೀನು ಹೇಳಿದ್ದು ದಿಟ. ಆದರೆ ಅಳಿಯನನ್ನ ಹುಡುಕೋದು ಅಷ್ಟು ಸುಲಭವಲ್ಲ. ಈ ಪೇಟೇಲಿರೋ ಗಂಡುಗಳಿಗೆಲ್ಲಾ, ಇವಳ ವಿಷಯ ತಿಳಿದಿರುತ್ತೆ. ಯಾವುದಾದರೂ ಹಳ್ಳಿಕಡೆ ಹೋಗಿ, ಚೆಂದುಳ್ಳ ಗಂಡನ್ನು ತಲಾಷ್‌ಮಾಡಿ, ಪೇಟೆ ಕಾಲೇಜಲ್ಲಿ ನಿನ್ನ ಓದಿಸ್ತೀನಿ, ದೊಡ್ಡ ಕೆಲಸ ಕೊಡಿಸ್ತೀನಿ ಅಂತ ಆಸೆ ತೋರಿಸಿ, ಕರಕೊಂಡು ಬಂದು, ತಾಳಿ ಕಟ್ಟಿಸಿ ಬಿಡಬೇಕು. ನಾಳೇನೇ ಅಳಿಯನ ಬೇಟೆಗೆ ಹೊರಡ್ತೀನಿ. ಇವತ್ತು ಆ ಪುಸ್ತಕಾನ ಇನ್ನೊಂದು ಸರ್ತಿ ಓದುತ್ತೀನಿ, ಇಲ್ಲೇ ಇರಿಸು."

ಎಂದು ಗಡವಾ ಕೋತಿ ಹೇಳಿತಂತೆ. "ನೀನೂ ಇಲ್ಲೇ ಇರು" ಎಂದೂ ಅಂದಿತಂತೆ.

* * * * *

ಮಾರನೆ ದಿನವೇ ಗಡವಾ ಕೋತಿ ಮಗಳ ಹತ್ತೂ ಜಾತಕಗಳನ್ನು ಹಿಡಿದು ಕೊಂಡು ತನ್ನ ಬುಡಕಟ್ಟಿನವರಿದ್ದ ಹಳ್ಳಿಗಳತ್ತ ಪ್ರವಾಸ ಹೊರಟಿತಂತೆ. ಹೋದ ಮೂರನೆ ಹಳ್ಳೀಲಿ ಲಕ್ಷಣವಾಗಿದ್ದ ಹುಡುಗ ಒಬ್ಬ ಕಣ್ಣಿಗೆ ಬಿತ್ತಂತೆ. ಅದರ ಅಪ್ಪ ಅಮ್ಮನ್ನು ಕಂಡು, ಅನುಕೂಲವಾದ ಜಾತಕಕೊಟ್ಟು, ನಮ್ಮನೆ ಹೆಣ್ಣನ್ನು ನಿಮ್ಮನೆ ಅಂಗಳಕ್ಕೆ ಕರೆದುಕೋಬೇಕು ಎಂದು ಬಿನ್ನವಿಸಿಕೊಂಡಿತಂತೆ. ಹಾಗೂ ಪಟ್ಟಣದ ವೈಭವವನ್ನೂ ಸೂಕ್ಷ್ಮವಾಗಿ ತಿಳಿಸಿತಂತೆ. "ಷಹರಿನ ಅಣ್ಣಮ್ಮನ ಗುಡಿ ಜಾಗೀರ್‌ದಾರರೇ ನೀವು! ನಿಮ್ಮನೆ ಹೆಣ್ಣನ್ನು ಒಪ್ಪಿಕೊಳ್ಳಲು ನಮಗೆ ಯಾವ ಅಭ್ಯಂತರವೂ ಇಲ್ಲ. ಆದರೂ ಹುಡಗನ್ನ ಒಂದು ಮಾತು ಕೇಳಬೇಕು" ಎಂದರಂತೆ ಭಾವೀ ಬೀಗರು.

ಸರಿ! ಹುಡುಗನ್ನ ಕೇಳುವ ಶಾಸ್ತ್ರವೂ ಮುಗಿಯಿತು. ಮದುವೇನೂ ಸಾಂಗವಾಗಿ ನೆರವೇರಿತು. ಬೀಗರೂ ದಿಬ್ಬಣ ತೆರಳಿದರು. ಅಳಿಯನನ್ನೂ ಕಾಲೇಜಿಗೆ ಸೇರಿಸಿದರು. ಅತ್ತೆ ಮನೆಯಲ್ಲೇ ಅಳಿಯನ ಠಿಕಾಣಿ.

"ಸೆರೆಯನ್ನು ಅಪ್ಪ ಅಮ್ಮ ಬಿಡಿಸಿಕೊಂಡರು, ದಿಟ. ಆದರೆ ನನಗೆ ಸೆರೆ ಹಾಕಿದರಲ್ಲ; ಈ ಹಳ್ಳಿ ಮುರುವನ ಜತೆಗೆ. ಸಿನಿಮಾಕ್ಕೆ ಕರೆದುಕೊಂಡು ಹೋದರೆ ಬೆರಗು ಬೆರಗಾಗಿ ಚಿತ್ರವನ್ನೇ ನೋಡ್ತಾ ಇರುತ್ತೆ. ಪಕ್ಕದ ಕುರ್ಚಿ ಹತ್ತಿರ ಕೈಯನ್ನೂ ಆಡಿಸುವುದಿಲ್ಲ. ಹೋಟಲಿಗೆ ಹೋದರೆ ಚಮಚದಿಂದ ತಿಂಡಿ ತಿನ್ನುಕ್ಕೂ ಬರುಲ್ಲ. ಪಾರ್ಕ್‌ಕಡೆ ವಾಕಿಂಗ್ ಹೋಗೋಣ ಬಟ್ಟೆ ಹಾಕ್ಕೊಳ್ಳಿ ವ್ಯಾಯಾಮ ಆಗುತ್ತೆ ಅಂದರೆ, ಬೇಡ, ಊರಾಚೆ ಹೋಗಿ ಓಡೋಣ, ದಿವನಾಗಿ ವ್ಯಾಯಾಮ ಆಗುತ್ತೆ ಅಂತ ಚಡ್ಡಿ ಹಾಕ್ಕೊಂಡು ಸಿದ್ಧವಾಗುತ್ತೆ. ಇದರ ಜತೇಲಿ ಪ್ರಾಯಾನ ಹೇಗೆ ಕಳೆಯೋದಪ್ಪಾ, ದೇವರೇ" ಅಂತ ಮಗಳು ಕೊರಗುಕ್ಕೆ ಶುರುಮಾಡಿದಳಂತೆ.

ಕಡೆಗೊಮ್ಮೆ ಅವಳಿಗೆ ಒಂದು ಯೋಚನೆ ಹೊಳೆಯಿತಂತೆ. ಮುಂದಿನ ಭಾನು ವಾರ, ರಜೆ ಬಂದಾಗ, ಆ ಯೋಚನೆಯನ್ನು ಕಾರ್ಯರೂಪಕ್ಕೆ ಇಳಿಸಿದಳಂತೆ.

ಶನಿವಾರವೆಲ್ಲಾ ಗಂಡನ್ನ ಪುಸಲಾಯಿಸಿದಳಂತೆ. ಭಾನುವಾರ ಬೆಳಿಗ್ಗೆ

ಪಿಕ್‌ನಿಕ್ ಹೋಗ್ತ್ರೀವಿ, ಅಂತ ತಂದೆ ತಾಯಿಯರಿಗೆ ಹೇಳಿ ಗಂಡನ ಜತೆ ತಿಂಡಿ ಕಟ್ಟಿಕೊಂಡು ಹೊರಕ್ಕೆ ಹೊರಟಳಂತೆ. ಪೇಟೆ ಅಂಚಿನಲ್ಲಿದ್ದ ಮರದ ಅಂಗಡಿಗಳ ಹತ್ತಿರಕ್ಕೆ ಹೋಯ್ತುಂತೆ.

" ಭಾನುವಾರ ರಜ, ಯಾರೂ ಈ ಸಾಗುವಾನಿ ಅಂಗಡಿಗೆ ಬರುಲ್ಲ. ವಿಶಾಲ ವಾದ ಸ್ಥಳ. ಬನ್ನಿ ಅಂದ್ರೆ, ಇಲ್ಲೇ ಕೂತು ಪಿಕ್‌ನಿಕ್ ನಡೆಸೋಣ. ಮರದ ಹೊಟ್ಟು ಬಿದ್ದಿರುತ್ತೆ. ಎಷ್ಟು ಬೇಕಾದರೂ ಅಪಾಯವಿಲ್ಲದೆ ಕುಣಿದಾಡಬಹುದು" ಎಂದು ಗಂಡನಿಗೆ ಹೇಳಿತಂತೆ. ಹಳ್ಳೀಗಂಡು, ಆಗಲಿ ಕಣೆ ಅಂತ ಒಪ್ಪಿತಂತೆ.

ಇಬ್ಬರೂ ಛಂಗುತ್ತಾ ಸಾಗುವಾನಿ ಅಂಗಡಿಗೆ ಬೇಲಿದಾಟಿ ಹಾರಿ ಹೋದರು. ದಿಮ್ಮಿಗಳನ್ನು ಕುಯ್ಯುಕ್ಕೆ ತೋಡಿದ್ದ ಗುಂಡಿಯ ಬಳಿ ಇಬ್ಬರೂ ಕುಳಿತರು. ಇಲ್ಲಿ ಹಾಯಾಗಿರುತ್ತೆ ಅಂದ್ರೆ, ದೊಡ್ಡ ರಸ್ತೆಗೆ ದೂರ, ಯಾರಿಗೂ ಕಾಣಿಸುಲ್ಲ ಅಂತ ಹೆಂಡತಿ ಹೇಳಿದಾಗ, ಹೌದು ಕಣೆ! ಬಿಸಿಲು ಹೆಚ್ಚಾದರೆ ಗುಂಡಿಯಲ್ಲಿ ಮರದ ಹೊಟ್ಟಿನ ಮೇಲೆ ಸುಖವಾಗಿ ನಿದ್ರೆ ಮಾಡಬಹುದು ಎಂದು ಗಂಡು ಒಪ್ಪಿತಂತೆ.

ತಂದಿದ್ದ ತಿಂಡಿಯನ್ನು ಇಬ್ಬರೂ ತಿಂದರು. ಸಿನಿಮಾದ ಎರಡು ಹಾಡುಗಳ ಮೊದಲ ಮಟ್ಟುಗಳನ್ನು ಹೆಂಡತಿ ಹಾಡಿದಾಗ, ಗಂಡು ತಪ್ಪು ತಪ್ಪಾಗಿ ತಾಳ ಹಾಕಿತು. ಬೇಸರವಾದರೂ ತೋರಿಸಿಕೊಳ್ಳದೇ ಹೆಂಡತಿ ಕುಣಿದಾಡೋಣ ಅಂದ್ರೆ! ಯಾಕೋ ಬಲು ಖುಷಿಯಾಗ್ತಾ ಇದೆ ಎಂದಳು. ಗಂಡು ಕುಣಿ ದಾಡುಕ್ಕೆ ಶುರುಮಾಡಿತು. ದಿಮ್ಮಿ ಮೇಲೆ ಹತ್ತಿ ಕುಣಿದಾಡಿತು. ಆ ದಿಮ್ಮಿ ಪಾಡು ಏನು ಅಂತ. ಹಿಂದಿನ ದಿವಸ ಅರ್ಧ ಕುಯ್ದಿದ್ದರು. ಸೋಮವಾರ ಪೂರ್ತಿ ಕುಯ್ಯಬೇಕು. ಪಟ್ಟಿಗಳು ಬೇರೆ ಇರಲಿ ಅಂತ ಬೆಣೆ ಹೊಡೆದು ಮರ ಗೆಲಸದವರು ಹೋಗಿದ್ದರು.

ಗಂಡು ದಿಮ್ಮಿ ಹತ್ತಿತು, ನೆಗೆದಾಡಿತು. ಹೆಣ್ಣು ರೇಗಿಸುತ್ತಾ ಇದ್ದರೆ ಗಂಡಿನ ಜಂಭ ಬಾವುಟ ಹಾರಿದಹಾಗೆ ಹಾರುತ್ತೆ ಅಲ್ಲವೇ? ಬೆಣೆ ಹತ್ತಿರ ಗಂಡು ಕೂತಿತು. ಹುಷಾರು ಅಂದ್ರೆ, ಬೆಣೇನ ಮಾತ್ರ ಮುಟ್ಟಬೇಡಿ, ಅಪಾಯ ಎಂದಿತು ಹೆಣ್ಣು, " ನನಗೆಂತದ್ದೇ ಅಪಾಯ! ಬೇಕಾದರೆ ಕಿತ್ತು ನಿನ್ನ ಕೈಗೆ ಕೊಡ್ತೀನಿ " ಎಂದು ಗಂಡು ಯಥಾಪ್ರಕಾರ ವಕ್ರತನದ ಜಂಭ ಕೊಚ್ಚಿತು. " ಬೇಡ ಅಂದ್ರೆ! ನಿಮ್ಮ ಬಾಲ ಪಟ್ಟಿಗಳ ಮಧ್ಯೆ ಇಳಿದಿದೆ. ದಮ್ಮಯ್ಯ ಅಂತೀನಿ, ಬೆಣೆ ಮಾತ್ರ ಮುಟ್ಟಬೇಡಿ " ಎಂದು ಅಂಗಲಾಚಿತು, ಹೆಣ್ಣು.

ಹೆಣ್ಣು ಹೆದರಿದಷ್ಟೂ ಗಂಡಿಗೆ ಜಂಭ ಉಕ್ಕುತ್ತೆ ಅಲ್ಲವೇ? ಶೌರ್ಯ ಪ್ರದರ್ಶನಕ್ಕೆ ಅವಕಾಶ ಸಿಕ್ಕಿದಹಾಗೆ ಅಲ್ಲವೇ? ಅದರಿಂದಲೇ ಗಂಡು "ಯಾಕೆ ಹೆದರ್ತೀ! ನನ್ನ ಮೋಹನಾಂಗಿ, ಈ ಬೆಣೆಯನ್ನು ಕಿತ್ತು ಹಾಕುಕ್ಕೆ ನನ್ನ ಕೈಲಿ ಸಾಧ್ಯವಿಲ್ಲ ಅಂತೀಯಾ! ಅಥವಾ ಕಿತ್ತಮೇಲೆ ತಿರುಗಿ ನೆಡುಕ್ಕೆ ಆಗುಲ್ಲವೇ?" ಎಂದು ಜಂಭ ಕೊಚ್ಚುತ್ತ, ಬೆಣೆಯಮೇಲೆ ಕೈಯಾಡಿಸಿತು. ಅದೋ! ಭದ್ರ ವಾಗಿ ಬಿಗಿಯಲ್ಪಟ್ಟಿತ್ತು. ಕೋತಿ ಗಂಡಿಗೂ ಛಟ. ಬಲವೆಲ್ಲಾ ಬಿಟ್ಟು ಕಿತ್ತಿತು. ಹಲ್ಲುಕಚ್ಚಿಕೊಂಡು ಉಸಿರು ಹಿಡಿದು ಕಿತ್ತಿತು. ಬೆಣೆ ಛಕ್ಕಂತ ಹೊರಕ್ಕೆ ಬಂತು. ದಿಮ್ಮಿ ಮರದ ಪಟ್ಟಿಗಳು ಲಪ್ಪಂತ ಅಪ್ಪಳಿಸಿಕೊಂಡುವು. ಕೋತಿಯ ಬಾಲ ಪೂರ್ಣವಾಗಿ ಅಪ್ಪಚ್ಚಿಯಾಗಿ, ಕೋತಿ ಗಂಡು, ಲಬೋ ಲಬೋಕ್ಕೆ ಶುರುಮಾಡಿತು. ದಿಮ್ಮಿಯ ಬಿಗಿತದಿಂದ ಬಾಲ ಬಿಡಿಸಿಕೊಳ್ಳ ಲಾರದೆ ವದ್ದಾಡ ಹತ್ತಿತು.

ಮನೆಗೆ ಹೋಗಿ ಯಾರನ್ನಾದರೂ ಕರಕೊಂಡು ಬರ್ತೀನಿ ಅಂದ್ರೆ ಅಂತ ಹೇಳಿ ಹೆಂಡತಿ ಹೊರಟು ಹೋದಳು. ಎಲ್ಲಿಗೆ ಅಂತ? ಮ್ಯಾಟನಿ ನೋಡುಕ್ಕೆ. ರಾತ್ರಿ ಮನೆಗೆ ಹಿಂತಿರುಗಿ, ಇವರೆಲ್ಲೋ ಹೋದರು, ಆಮೇಲೆ ಬಂದಾರು ಎಂದು ಹೇಳಿ ತಾನುಂಡು ಮಲಗಿದಳು.

* * * * *

ಇತ್ತ ಸೋಮವಾರ ಬೆಳಿಗ್ಗೆ ಮರಗೆಲಸದವರು ಬಂದಾಗ ದಿಮ್ಮಿ ಮೇಲೆ ಜ್ಞಾನ ತಪ್ಪಿ ಬಿದ್ದಿದ್ದ ಕೋತಿಯನ್ನು ಕಂಡು, ದಿಮ್ಮಿಯ ಪಟ್ಟಿಗಳನ್ನು ಬೆಣೆ ಹಾಕಿ ಬಿಡಿಸಿದರು. ಕೋತಿಯ ಮುಖದಮೇಲೆ ತಣ್ಣೀರೆರೆಚಿದರು. ಸ್ವಲ್ಪ ಜ್ಞಾನ ಬಂತು ಕೋತಿಗೆ. ಆಗ ಕೆಲಸದವರು "ಇನ್ನುಮೇಲೆ ಈ ಕಡೆ ಬಂದು ಕೋತಿ ಚೇಷ್ಟೆ ಮಾಡಿದರೆ, ಮುಖಕ್ಕೆ ಮಂಗಳಾರತಿ ಹಚ್ಚಿಸುತ್ತೇವೆ" ಎಂದು ಹೆದರಿಸಿದರು. ಕೋತಿ ಎದ್ದು ಈ ಊರೂ ಬೇಡ, ಈ ಹೆಂಡತೀನೂ ಬೇಡ, ಆರಾಮವಾಗಿ ಹಳ್ಳಿ ಮರಗಳ ಮೇಲೆ ಆಟ ಆಡ್ತಾ ಇರಬಹುದು ಎಂದು ತೀರ್ಮಾನಿಸಿ, ಹಳ್ಳಿ ಕಡೆಗೆ ಓಡಿ ಹೋಯಿತು.

ಎಂದು ನಮ್ಮ ಅಡುಗೂಲಜ್ಜಿ ಕೋತಿ ಅಳಿಯ–ದಿಮ್ಮಿಯ ಬೆಣೆಯ ಕತೆ ಯನ್ನು ಹೇಳಿದಳು.

ಗೆದ್ದು ಬಿದ್ದ ಹುಂಜದ ಕತೆ

ಇಂದಾನೊಂದು ಕಾಲದಲ್ಲಿ ಊರಿನ ಅಂಚಿನಲ್ಲಿ ಕೆಲವು ಬಡವರ ಗುಡಿಸಿಲುಗಳು ಇದ್ದುವಂತೆ. ಗುಡಿಸಿಲುಗಳ ದೂರದ ಹಿತ್ತಲಿನಲ್ಲಿ ಒಂದು ತಿಪ್ಪೆಗುಂಡಿ ಭರ್ಜರಿಯಾಗಿ ಬೆಳೆದಿತ್ತಂತೆ. ಕೇರಿ ಕೇರಿಯ, ಊರು ಊರಿನ ತಿಪ್ಪೆಯನ್ನೆಲ್ಲಾ ಮುನಿಸಿಪಾಲಿಟಿಯವರು ಗಾಡಿಯಲ್ಲಿ ಹೊಡೆದುಕೊಂಡು ಬಂದು ಆ ತಿಪ್ಪೆ ಗುಂಡಿಯ ಬಳಿ ಹಾಕುತ್ತಿದ್ದರಂತೆ. ಹಾಗಾಗಿ ಆ ತಿಪ್ಪೆಗುಂಡಿ ಭರ್ಜರಿಯಾಗಿ ಸರ್ಕಾರದ ಸಾಲದಂತೆ ಮೇಲಕ್ಕೇರಿತ್ತಂತೆ.

ಆ ತಿಪ್ಪೆಗುಂಡಿಯ ಬಳಿ ಒಂದು ಹುಂಜ ವಾಸವಾಗಿತ್ತಂತೆ. ಹಳ್ಳಿ ಸ್ಕೂಲಿಗೆ ಹೋಗಿ ಓದುವಾಗ ಇತರ ಹುಡುಗರ ಜತೆ ಕಾದಾಡಿ, ಗುದ್ದಾಡಿ, ಬಲಾಢ್ಯ ವಾಯಿತಂತೆ. ಹಾಯ್‌ಸ್ಕೂಲಿಗೆ ಹೋಗಿ ಓದುವಾಗ ಅಲ್ಲಿಗೆ ಬರುತ್ತಿದ್ದ ಹೆಣ್ಣು ಮಕ್ಕಳನ್ನು ಕೀಟಲೆ ಮಾಡುವುದು, ಸೀಟಿ ಹೊಡೆಯುವುದು, ಹೀಗೆ ಬಾಳ ರೀತಿ ನೀತಿಗಳನ್ನು ಕಲಿತುಕೊಂಡಿತಂತೆ. ಆದರೆ ಓದಿನಲ್ಲಿ ಯಶಸ್ವಿಯಾಗಲಿಲ್ಲ. ಕಾಲೇಜಿಗೆ ಹೋಗಲು ಅವಕಾಶವಾಗಲಿ ಅರ್ಹತೆಯಾಗಲಿ ದೊರೆಯಲೇ ಇಲ್ಲ ವಂತೆ.

ಓದಿ ತಲೆಗೆ ಕಿರೀಟ ಹಾಕುವುದೇನು? ದೇವರು ಕೊಟ್ಟ ಕುಚ್ಚಿನ ಕಿರೀಟವೇ ಸಾಕು, ಎಂದುಕೊಂಡು ಆ ಹುಂಜ ತಿಪ್ಪೆಗುಂಡಿಯ ಬಳಿಯಲ್ಲೇ ತನ್ನ ಬಿಡಾರ ವನ್ನು ಕಟ್ಟಿಕೊಂಡಿತಂತೆ. ಕಳ್ಳತನದಲ್ಲಿ ಅಲ್ಲಿ ಇಲ್ಲಿ ಹೋಗಿ ಕೆಲವು ಹೇಂಟಿ ಗಳನ್ನೂ ಲಪಟಾಯಿಸಿಕೊಂಡು ಬಂದು, ಅರಬ್‌ಷೇಕರ ತರಹ ಮೋಜಿನ ಜೀವನ ನಡಸುತ್ತಿತ್ತಂತೆ. ಊರಿನ ಮೂಲೆ ಮೂಲೆಗಳಿಂದಲೂ ಬಂದು ಬೀಳುತ್ತಿದ್ದ ತಿಪ್ಪೆಗುಂಡಿಯಲ್ಲಿ, ಹುಂಜಕ್ಕೂ ಅದರ ಜನಾನಾಕ್ಕೂ ಸಾಕಷ್ಟು ಪುಷ್ಟಿಯಾದ ಆಹಾರ ಸಿಗುತ್ತಿತ್ತಂತೆ. ಚೆನ್ನಾಗಿ ತಿಂದಮೇಲೆ ಮೆಚ್ಚಿದ ಹೇಂಟಿಯನ್ನು ಅಟ್ಟಿಸಿ ಕೊಂಡು ಹೋಗಿ, ಅದರ ಕಿವಿಯಲ್ಲಿ ಕುಕ್ಕುಟೇಕುರ್‌ರ್ ಅಂತ ಪ್ರೇಮದಿಂದ ಕೂಗಿ, ಅಪ್ಪಿ ಆಲಿಂಗಿಸಿ ಅಮರು ಶತಕವನ್ನು ಹೇಳುತ್ತಿತ್ತಂತೆ. ತಿಪ್ಪೆಗುಂಡಿ ಯಲ್ಲಿ ಅದಕ್ಕೆ ಬಾದಾಮಿ ಸಿಕ್ಕುತ್ತಿತ್ತೋ ಅಥವಾ ಬಹುಬೀಜ ಫಲವೇ ದೊರೆ ಯುತ್ತಿತ್ತೋ, ಕುಕ್ಕುಟವಾಹನನೇ ಬಲ್ಲ. ಆದರೆ ಇದು ಮಾತ್ರ ಖಂಡಿತ. ದಿನ

ಬೆಳಗಾದರೆ ೨೦-೩೦ ಮೊಟ್ಟೆಗಳನ್ನು ಹುಂಜ ಗೂಡುಗಳಲ್ಲಿ ಎಣಿಸುತ್ತಿತ್ತಂತೆ. ಸೊರುಬಿಡುಕ್ಕೆ ಕರುವನ್ನು ಹಸುವಿನ ಬಳಿಬಿಟ್ಟು ನಂತರ ಹಾಲುಕರೆದು ಕೊಳ್ಳುಲ್ಲವೇ ಮನುಷ್ಯರು; ಅದೇ ರೀತಿ ಈ ಹುಂಜ ಕೂಡ, ಹೇಂಟೆಗೆ ಒಂದ ರಂತೆ ತಿಂಗಳಿಗೆ ಒಂದೊಂದು ಮೊಟ್ಟೆಯನ್ನು ಬಿಟ್ಟು ಮಿಕ್ಕವನ್ನೆಲ್ಲಾ ಮಾರು ಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಿ, ಲಾಭ ಪಡೆಯುತ್ತಿತ್ತಂತೆ. ಕೆಲವೇ ದಿನಗಳಲ್ಲಿ ಆ ಹುಂಜನ ಕೈಯಲ್ಲಿ ಹಣ ಕುಣಿದಾಡುಕ್ಕೆ ಶುರುವಾಯ್ತಂತೆ. ಆಮೇಲೆ ಕೇಳಬೇಕೆ? ಈಚಲ ಮರದ ಕೆಳಗಿನ ಕ್ಲಬ್ಬಿಗೆ ಹೋಗಿ ಸೋಮರಸ ಕುಡಿದ ಋತ್ವಿಕ್ಕುಗಳ ತರಹ ಸಾಮಗಾನವನ್ನು ಹಾಡಲು ಶುರುಮಾಡಲಾರಂಭಿಸಿ ತಂತೆ. ಜನಾನಾನ ದೊಡ್ಡದು ಮಾಡಿಕೊಳ್ಳಬೇಕು. ಆಗ ಬಾಳಿನಲ್ಲಿ ವೈವಿಧ್ಯತೆ ದೊರಕಿದಂತೆ, ಸಂಪಾದನೆಯೂ ಹೆಚ್ಚಾಗುತ್ತದೆ. ಮುಪ್ಪಿನ ಕಾಲ ಬಂದಾಗ ಸಂಪಾದನೆ ಕಡಿಮೆಯಾಗಿ ಖೋತಾ ಬಿದ್ದಾಗ, ನೆರವಾಗಲಿ ಅಂತ ಸ್ವಲ್ಪ ಹಣ ವನ್ನು ಬ್ಯಾಂಕಿನಲ್ಲಿಡಬೇಕು ಎಂದು ಯೋಚಿಸಿತಂತೆ: ಸರಿ! ಇದಕ್ಕೆ ಏನಾದರೂ ಮಾರ್ಗವನ್ನು ಹುಡುಕಬೇಕು ಎಂದು ಯೋಚನೆ ಮಾಡುತ್ತಾ, ಒಂದು ತರಹ ಗುಂಗಿನಲ್ಲೇ ತಿಪ್ಪೆಗುಂಡಿಯ ಬಳಿಯ ತನ್ನ ಮಹಲಿಗೆ ನಡೆಯಿತಂತೆ ಒಂದು ಬೆಳಗಿನ ಝಾವ.

ಇನ್ನೇನು ತಿಪ್ಪೆಗುಂಡಿ ಕಾಣಿಸಿತು. ನಾಲ್ಕು ಬಾರಿ ಕುಪ್ಪಳಿಸಿದರೆ ಮಹಲು ಸಿಗುತ್ತೆ, ಅಷ್ಟರಲ್ಲೇ ಅವನ ಹೇಂಟೆಯೊಂದು ಕೆಟ್ಟ ಕೆಟ್ಟದಾಗಿ ಕೂಗುತ್ತ ಸರ್ ಪರ್ ಅಂತ ಓಡಿ ಬಂತು. ಅದರ ಹಿಂದೆಯೇ ಒಂದು ಅಪರಿಚಿತ ಹುಂಜ ಅಟ್ಟಿಸಿ ಕೊಂಡು ಬರುತ್ತಿದೆ.

ನಮ್ಮ ಹುಂಜನಿಗೆ ತತ್‌ಕ್ಷಣ ಈಚಲ ಅಮಲೆಲ್ಲಾ ಇಳಿಯಲಾರಂಭಿಸಿತು. ಜನಾನವನ್ನು ಬಡಾಯಿಸಿ, ಐದು ಚೈತ್ರಗಳ ಪ್ಲಾನು ನಾನು ಹಾಕುತ್ತಾ ಬಂದರೆ, ನನ್ನ ಜನಾನಾದಿಂದಲೇ, ಹಕ್ಕಿಯನ್ನು ಹಾರಿಸಿಕೊಂಡು ಹೋಗಲು ಈ ಹುಂಜ ಬಂದಿದೆಯಲ್ಲಾ! ಇದಕ್ಕೆ ತಕ್ಕ ಶಾಸ್ತಿ ಮಾಡಬೇಕು.! ನಾನಿಲ್ಲದೆ ವೇಳೆಯಲ್ಲಿ ಎಷ್ಟು ದಿವಸಗಳಿಂದ ಈ ಹುಂಜ ಹೀಗೆ ಬರುತ್ತಿದೆಯೋ ಏನೋ? ನನಗೆ ಕಾಣದಹಾಗೆ ಇನ್ನು ಯಾವ ಯಾವ ಪಡ್ಡೆಹುಂಜಗಳು ಬಂದು ಹೋಗುತ್ತಿ ವೆಯೋ ಏನೋ? ಎಂದು ರೇಗಿತಂತೆ ನಮ್ಮ ಹುಂಜ. ಈಚಲ ಅಮಲು ಪೂರ್ತಿ ಇಳಿದುಹೋಯಿತು. ಛಲದ ಅಮಲು ಏರಿತು.

ಅಪರಿಚಿತ ಹುಂಜವನ್ನು ಕಾಳಗಕ್ಕೆ ಕರೆಯಿತು, ನಮ್ಮ ಹುಂಜ. ಆ ಹುಂಜ ಮಾತ್ರ ತೆಪ್ಪಗಿರುತ್ತ್ಯೇ? "ಕೆರೆ ನೀರಿಗೆ ದೊಣ್ಣೆನಾಯಕನ ಅಪ್ಪಣೆಯೇನೋ? ನೀನು ಯಾರೋ ಕೇಳುಕ್ಕೆ! ನಮ್ಮದು ಸೋಷಿಯಲಿಸ್ಟಿಕ್ ಪ್ಯಾಟರ್ನ್, ಎಲ್ಲವೂ ಎಲ್ಲರಿಗೂ ಸಿಕ್ಕಬೇಕು, ನಿನ್ನ ಪುಕ್ಕ ಹರೀತೀನಿ, ಹತ್ತಿರ ಬಂದರೆ, ನಿನ್ನ ಕುಚ್ಚು ಕೀಳುತ್ತೀನಿ, ಕಾಲು ಮುರಿದು ಕೊಕ್ಕಿಗೆ ತೂರುತ್ತೀನಿ" ಎಂದು ರಣ ಕಹಳೆಯನ್ನು ಬಾರಿಸಿತಂತೆ.

ನಮ್ಮ ಹುಂಜ ಸುಮ್ಮನಿರುತ್ತ್ಯೇ? ಅದೂ ರಣ ಕಹಳೆ ಬಾರಿಸಿತು. ಶಂಖ ವನ್ನು ಊದಿತು. ತೊಡೆ ತಟ್ಟಿಕೊಂಡಿತು.

ಈ ಸಮರ ಕಹಳೆಯನ್ನು ಕೇಳಿ ಮಹಲಿನಲ್ಲಿದ್ದ ಹೇಂಟೆಗಳೆಲ್ಲವೂ ದೂರ ದಲ್ಲಿ ನಿಂತು ಕಣ್ಣು ಹಾರಿಸದೆ ನೋಡತೊಡಗಿದುವು. ಆ ಕಹಳೆಯು ಆಕಾಶ ವಾಣಿಯಲ್ಲಿ ಪ್ರಸಾರವಾದ ಕಾರಣ, ಕೇರಿಯ ಎಲ್ಲೆಲ್ಲಿನ ಹಿತ್ತಿಲುಗಳಿಂದಲೂ ಹೇಂಟೆಗಳು ಶೃಂಗಾರ ಮಾಡಿಕೊಂಡು, ನೈಲಾನ್ ಪುಕ್ಕಗಳನ್ನು ತೊಟ್ಟು ಕೊಂಡು ಅಖಾಡಾದ ಸುತ್ತಲೂ ಬಂದು ನಿಂತವು.

ಹುಂಜಗಳ ಕಾಳಗ ಶುರುವಾಯಿತು. ಕೊಕ್ಕಾ ಕೊಕ್ಕು, ಕುಚ್ಚಾ ಕುಚ್ಚು, ಪುಕ್ಕಾ ಪುಕ್ಕಗಳ ಜಿದ್ದಾಜಿದ್ದಿ ಕುಸ್ತಿ ಪ್ರಾರಂಭವಾಯಿತು. ನಭೂತೋ ನ ಭವಿಷ್ಯತಿ, ಆ ತರಹ ಕಾಳಗ ನಡೆಯಿತು. ಅಖಾಡಾದಲ್ಲೆಲ್ಲ ಸಣ್ಣ ಪುಟ್ಟ ಪುಕ್ಕಗಳು ಹಾರಿಸಲ್ಪಟ್ಟಂತಾಯಿತು. ಅಲ್ಲಿಲ್ಲಾ ರಕ್ತದ ಹನಿಗಳು ಬಿದ್ದು ರಂಗೆರಚಿದಂತೆ ಕಾಣಿಸಿತು. ತಿಪ್ಪೆಗುಂಡಿಯ ಧೂಳು ಹಾರಿ, ಮಂಜು ಬಿದ್ದಂತೆ ಕಾಣಿಸತೊಡಗಿತು. ಅತ್ತೆ ಸೊಸೆಯರ ಕಾಳಗದಷ್ಟೇ ಭೀಕರವಾಗಿತ್ತು.

ಕಡೆಗೊಮ್ಮೆ ಎಲ್ಲ ಹೇಂಟೆಗಳೂ ನೋಡುತ್ತಲೇ ಇವೆ, ಆದರೆ ಯಾವ ಮಾಯದಲ್ಲೋ ಅಪರಿಚಿತ ಹುಂಜ ಕುಚ್ಚು ಬಗ್ಗಿಸಿಕೊಂಡು, ಓಡಿ ಹೋಗಿ ಬಿಟ್ಟಿತು. ವೀರೋಚಿತ ಜಯಕಾರವನ್ನು ಎಲ್ಲಾ ಹೇಂಟೆಗಳೂ ಮಾಡಿದುವು. ನಮ್ಮ ಹುಂಜನ ಬಳಿಗೆ ಬಂದು, ಬಿಸಿನೀರನ್ನು ಕಾಲು ತೊಳೆಯಲು ಕೊಟ್ಟು, ಕೆನೆವಾಲಂ ಕುಡಿಯಲೀಯಲು ಮುಂದಾದುವು.

ಆದರೆ ನಮ್ಮ ಹುಂಜನಿಗೆ ಎದುರಾಳಿಯನ್ನು ಉರುಳಿಸಿ ಗೆದ್ದ ಅಮಲು ಏರಿತ್ತು. ಆಗ ಹೆಣ್ಣುಗಳ ಉಪಚಾರ ಮುಖ್ಯವಲ್ಲ. ಆಗ ಲೋಕಕ್ಕೇ ತನ್ನ ಜಯವನ್ನು ಪ್ರಚಾರಮಾಡುವ ತೀವ್ರ ಆಸೆ. ಕಾರಣ, ಮೈ ಕೊಡವಿಕೊಂಡು,

ಉಳಿದಿದ್ದ ರೆಕ್ಕೆ ಪುಕ್ಕಗಳನ್ನು ಬಿಚ್ಚಿ ಹಾರಿ, ತಿಪ್ಪೆಗುಂಡಿಯ ಮೇಲಕ್ಕೆ ಏರಿ ಹೋಯಿತು. ಅಲ್ಲಿ ತುಟ್ಟ ತುದಿಯಲ್ಲಿ ನಿಂತು ಜಯಘೋಷಮಾಡಿತು. "ಕೊ ಕ್ಕೊ ಕೋ" ಅಂತ.

ಕಹಳೆ ಬಾಯಿಗೆ ಮುತ್ತು ಕೊಟ್ಟಹಾಗಾಯಿತು, ನಮ್ಮ ಹುಂಜ ಹಾಕಿದ ಠೇಂಕಾರ. ಆ ಠೇಂಕಾರ ಕೇರಿ ಕೇರಿಗಳಿಗೆಲ್ಲಾ ಕೇಳಿಸಿತು. ಊರಿಗೂ ಕೇಳಿಸಿತು. ಊರಿನಲ್ಲಿದ್ದ ವರಮಾನ ತೆರಿಗೆ ಇಲಾಖೆಗೂ ಕೇಳಿಸಿತು. ಅಲ್ಲಿದ್ದ ಅಧಿಕಾರಿ ಕಿವಿ ಬಿಚ್ಚಿಕೇಳಿದ. ನಂತರ ಧ್ವನಿ ಬಂದ ದಿಕ್ಕಿಗೆ ಸಿಬ್ಬಂದಿಯೊಡನೆ ಓಡೋಡಿ ಬಂದ.

ತಿಪ್ಪೆಗುಂಡಿಯ ಶಿಖರದಲ್ಲಿ ತಲೆಯೆತ್ತಿ ಕುಚ್ಚು ಆಡಿಸುತ್ತಾ ನಿಂತಿದ್ದ ಹುಂಜನನ್ನು ನೋಡಿದ. ಇಷ್ಟು ಮಸ್ತು ಇರಬೇಕಾದರೆ ಈ ಹುಂಜನ ವರ ಮಾನ ಭರ್ಜರಿ ಇರಬೇಕು. ಇವ ತೆರಿಗೆಯ ಪಟ್ಟಿಯಲ್ಲೇ ಇಲ್ಲ. ಈಗ ಹಿಡಿದು ಇವನ ತೌಡು ಹರಿಯಬೇಕು, ಎಂದು ಅವ ತನ್ನ ಆಯುಧಗಳನ್ನು ಹರಿತ ಮಾಡಿಕೊಂಡು ಸಿಬ್ಬಂದಿಯೊಡನೆ ಹುಂಜವನ್ನು ಘೇರೋಮಾಡಿದ.

ಮೊಟ್ಟೆಗಳ ಲೆಕ್ಕ ಇಟ್ಟಿಲ್ಲ. ಖರ್ಚಿನ ತಪಶೀಲು ತಿಳಿಯದು, ಬಂದ ವರಮಾನದ ವಿವರ ಗೊತ್ತಿಲ್ಲ, ಇತ್ಯಾದಿ ಹುಂಜ ಏನೇನೋ ನೆಪ ಹೂಡಿತು. ಆದರೆ ಆ ಕಟುಕ ಅಧಿಕಾರಿ ಕೇಳಬೇಕಲ್ಲ!

ಬ್ಯಾಂಕಿನ ಚೆಕ್ ಬುಕ್ ಸಿಕ್ಕಿತು. ಹುಂಜನ ಬ್ಯಾಂಕ್ ಹಣವನ್ನೆಲ್ಲಾ ಮುಟ್ಟುಗೋಲು ಹಾಕಿಕೊಂಡರು. ಇನ್ನುಮೇಲೆ ಕಳೆದ ಎಂಟೂ ವರ್ಷಗಳ ಲೆಕ್ಕವನ್ನೆಲ್ಲ ತಿಳಿಸು, ಇಲ್ಲದೆ ಇದ್ದರೆ ಅಂದಾಜು ಮೇಲೆ ನಾವೇ ತೆರಿಗೆ ಹಾಕು ತ್ತೇವೆ; ಎಂದ ಆ ಅಧಿಕಾರಿ.

ಹುಂಜದ ಕುಚ್ಚು ಈ ವೇಳೆಗೆ ಕಳಚಿ ಬಿದ್ದಿತ್ತು. ಕ್ಲೈಬ್ಯ ಅವನನ್ನು ಮುತ್ತಿತ್ತು. ಆದ ಕಾರಣ ಸುತ್ತಲೂ ಕಂಡ ಹೇಂಟೆಗಳೆಲ್ಲಾ ಅವನ ಮನಸ್ಸಿನ ಮೇಲೆ ಯಾವ ಪ್ರತಿಕ್ರಿಯೆಯನ್ನೂ ಮಾಡಲಿಲ್ಲ. ಹೀಗಾಯಿತಲ್ಲ ಎಂದು ಎದೆ ಒಡೆದು ಹುಂಜ ತೀರಿಕೊಂಡನಂತೆ.

ಅದಕ್ಕೇ ಮೊಮ್ಮಕ್ಕಳಿರಾ! ಜಯಗಳಿಸಿದಾಗ ಕೊ ಕ್ಕೊ ಕ್ಕೊ ಮಾಡ ಬೇಡಿ, ಹಣಬಂದಾಗ ಎಲ್ಲರಿಗೂ ಕಾಣುವಂತೆ ದಾನ ಧರ್ಮ ಮಾಡಬೇಡಿ, ಇಲ್ಲದೆ ಇದ್ದರೆ ತೆರಿಗೆ ಮಾವ ಬಂದು ಸುಲಿದುಬಿಡುತ್ತಾನೆ,

ಎಂದು ನನ್ನ ಅಡುಗೂಲಜ್ಜಿ ಗೆದ್ದು ಬಿದ್ದ ಹುಂಜದ ಕತೆಯನ್ನು ಹೇಳಿದಳು.

ಕುದುರೆ-ಕತ್ತೆ ಕತೆ

ಇಂದಾನೊಂದು ಕಾಲದಲ್ಲಿ ಕತ್ತೆ ಮತ್ತು ಒಂದು ಕುದುರೆ, ಇವೆರಡೂ ಒಂದೇ ಕಚೇರಿಯಲ್ಲಿ ಕೆಲಸ ಮಾಡಿಕೊಂಡಿದ್ದುವಂತೆ. ಕಚೇರಿಯಲ್ಲಿ ಇಂದಾ-ಗೆ ಕೆಲಸ, ಶೇಕದಾರರ ಮನೆಗೆ ನೀರು ಹೊರುವ ಕೆಲಸ, ಜಮಾಬಂದೀಗೆ ಬಂದ ಅಧಿಕಾರಿಗಳ ಸ್ವಂತ ಕೆಲಸ, ಇವೆಲ್ಲವನ್ನೂ ಕತ್ತೆ ತಲೆ ತಗ್ಗಿಸಿಕೊಂಡು ಮಾಡುತ್ತಾ ಇತ್ತಂತೆ. ಬೆಳಗಿನ ಝಾಮು ನಾಲ್ಕು ಗಂಟೆಗೆ ಎದ್ದು, ತನ್ನ ಅಡಿಗೆಯನ್ನು ಮನೆಯಲ್ಲಿ ಮಾಡಿಟ್ಟು, ಶೇಕ್‌ದಾರರ ಮನೆಗೆ ಹೋಗಿ ಬಾವಿ ನೀರನ್ನು ಸೇದಿ ಬಚ್ಚಲ ಮನೆ ಹಂಡೆಯನ್ನು ತುಂಬಿಸಿ, ನಂತರ ಬಚ್ಚಲ ಮನೆ ಒಲೆಗೆ ಬೆಂಕಿ ಹಾಕಿ, ಹಿತ್ತಿಲಕಡೆ ಕಾಯುತ್ತಿತ್ತಂತೆ.

ಮನೆಯವರೆಲ್ಲ ಎದ್ದು, ಯಜಮಾನತಿ ಹಿತ್ತಿಲಕಡೆಗೆ ಹೋಗಿ, "ಎಲ್ಲಿ ಕೆಲಸ ಆಯ್ತೇನೋ, ಆಗಿದ್ದರೆ ಹೋಗು, ಏನಾದರೂ ಕೆಲಸ ಬಿದ್ದರೆ, ಕಚೇರಿಗೆ ಹೇಳಿ ಕಳಿಸ್ತೀನಿ" ಅಂತ ಹೇಳುವತನಕ ಅಲ್ಲೇ ಹಿತ್ತಿಲ ಪಾಳುಗೋಡೆಯ ಹತ್ತಿರವೇ ನಿಂತಿರುತ್ತಿದ್ದನಂತೆ.

ಅವನ ಸಹೋದ್ಯೋಗಿ ಕುದುರೆಯಾದರೋ ಮೆಟ್ರಿಕ್ ಪ್ಯಾಸುಮಾಡಿದ್ದ ನಂತೆ. ಆದುದರಿಂದ ಕಚೇರಿಯಲ್ಲಿ ಅರ್ಜಿಗಳನ್ನು ನೋಡಿ ಅದರ ಸಂಬಂಧದ ಕಾಗದ ಪತ್ರಗಳನ್ನು ತೆಗೆದಿಡುವುದು, ಕಂದಾಯ ಸಂದಿದ ವಿವರಗಳನ್ನು ಇಡು ವುದು, ಇದೇ ಕೆಲಸವಂತೆ. ಆದರೂ ಕುದುರೆಗೆ ಇಷ್ಟನ್ನು ಮಾಡಲೂ ಬೇಸರ ವಂತೆ. ತನ್ನ ಹಿಂಗೈಯ್ಯಿಗೆ ಯಾರು ಬೆಣ್ಣೆಯನ್ನು ಝುಣ ಮಿಣ ಅಂತ ತೀಡು ತ್ತಾರೋ ಅವರ ಅರ್ಜಿಗಳನ್ನು ಮಾತ್ರ ಅವ ನೋಡುತ್ತಿದ್ದನಂತೆ. ಮಿಕ್ಕ ವನ್ನೆಲ್ಲಾ, "ಕತ್ತೆರಾಯ! ಇವನ್ನೂ ಒಂದಿಷ್ಟು ನೋಡಿಬಿಡು" ಎಂದು ಕತ್ತೆ ಯನ್ನು ಪುಸಲಾಯಿಸುತ್ತಿದ್ದನಂತೆ. ಕತ್ತೆ ಕೇಳಬೇಕೇ? ಹ್ಞೂ ಅಂತ ಅದನ್ನೂ ಮಾಡುತ್ತ ಇತ್ತಂತೆ. ಆದುದರಿಂದಲೇ ಕತ್ತೆಯನ್ನು ಕಂಡರೆ ಕುದುರೆಗೆ ತುಂಬಾ ಪ್ರೇಮವಂತೆ. ಬಲು ಪ್ರೀತಿಯಂತೆ.

ಹೀಗೆ ಶೇಕದಾರರು ತಮ್ಮ ಒಡ್ಡೋಲಗದಲ್ಲಿ ರಾಜ್ಯಭಾರವನ್ನು ಆಳುತ್ತಿದ್ದ ರಂತೆ. ವರ್ಷ ಮುಗಿಯುವ ಮೊದಲು ಇತರ ಹೋಬಳಿಗಳಿಗೂ ಹೋಗಿ

ಜಮಾಬಂದಿಮಾಡಿ, ಬರಬೇಕಲ್ಲ! ಪ್ರವಾಸಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿ, ನಾಡಿದ್ದು ಹೋಗೋಣ ಎಂದು ಶೇಕದಾರರು ಕಚೇರಿಯಲ್ಲಿ ಇಬ್ಬರಿಗೂ ಹೇಳಿದರು.

ಸರಿ! ಶೇಕದಾರರ ತಟ್ಟಿಗೆ ಮಾಲೀಷುಮಾಡಿ, ಜಂಖಾನವನ್ನು ಕತ್ತೆ ಕಟ್ಟಿತು. ಕ್ಯಾಂಪ್ ಹೋಗುವಾಗ, ಅಡಿಗೆಗೆ ಬೇಕಾದ ಸಾಮಾನುಗಳೆಲ್ಲವನ್ನೂ ಕಟ್ಟಿಕೊಂಡಿತು. ಹೋದಕಡೆ ದಿನಸಿ ಪುಕಟ್ಟೆ ಸಿಗುವಕಾರಣ, ದಿನಸಿ ಪಟ್ಟಿ ಮಾಡಿ ಕಟ್ಟಬೇಕಾಗಿರಲಿಲ್ಲ. ಶೇಕದಾರರ ಸ್ವಂತ ಉಪಯೋಗಕ್ಕೆ ಅಗತ್ಯವಾದ ಮೈಳೂರು ಉಂಡೆ ನಶ್ಯ, ಬಣ್ಣಕಟ್ಟಿದ ಅಡಿಕೆ; ಎರಡು ಚಕ್ರದಿಂಬು ಎಲ್ಲವನ್ನೂ ಸಿದ್ಧಪಡಿಸಿದ.

ಜಮಾಬಂದಿಗೆ ಬೇಕಾದ ಕಾಗದ ಪತ್ರಗಳು, ರೆಜಿಸ್ಟರುಗಳು, ಇತ್ಯಾದಿಗಳನ್ನು ಕುದುರೆ ಸಿದ್ಧಪಡಿಸಿದ. ಒಂಟೆತ್ತಿನ ಗಾಡಿಯಲ್ಲಿ ಹೊರಟ; ಕತ್ತೆಯಜತೆ.

ಶೇಕ್‌ದಾರರ ವಾರ್ಷಿಕ ದಿಗ್ವಿಜಯ ಹೊರಟಿತು.

ಮೊದಲ ಕ್ಯಾಂಪು, ತಾಯಲೂರಿನ ಹೋಬಳಿ. ಮುಸಾಫರ್‌ಖಾನೆಯಲ್ಲಿ ಎಲ್ಲರೂ ಇಳಿದುಕೊಂಡರು. ಆ ದಿನವೆಲ್ಲ ಕತ್ತೆ, ಹಳ್ಳಿಗೆ ಹೋಗಿ ದಿನಸಿಗಳನ್ನು ಗ್ರಾಮಸ್ಥರಿಂದ ಪಡೆದು, ಮುಸಾಫರ್‌ಖಾನೆಗೆ ಬಂದು, ಅಡಿಗೆ ತಿಂಡಿ ಮಾಡಿ, ಸ್ನಾನಕ್ಕೆ ನೀರು ಕಾಯಿಸಿ, ಶೇಕ್‌ದಾರರ ಬಟ್ಟೆಗಳನ್ನೆಲ್ಲಾ ಒಗೆದು, ಹರವು ಹಾಕಿ, ತಾನು ಉಣ್ಣುವ ವೇಳೆಗೆ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಇನ್ನೂ ಇಂದಾ-ಗೆ ರೆಜಿಸ್ಟರನ್ನು ತಹಲ್‌ವರೆಗೆ ಬರೆದಿರಲಿಲ್ಲ. ತುಂಬಾ ಸುಸ್ತಾಗಿತ್ತು. ಕಾರಣ "ಕುದುರೆ; ಕುದುರೆ! ಈ ರೆಜಿಸ್ಟರನ್ನು ಬರೆದಿಡು. ಸ್ವಲ್ಪ ವಿಶ್ರಾಂತಿ ತೊಗೋತೀನಿ, ಯಾಕೋ ತಲೆ ಸುತ್ತುತ್ತಾ ಇದೆ" ಎಂದು ಕೇಳಿಕೊಂಡ. ಆದರೆ ಕುದುರೆ ಪ್ಯಾಸು ಮಾಡಿದ್ದನಲ್ಲ? ಅವನಿಗೆ ಜಂಭ ಹೆಚ್ಚಲ್ಲ. ಕಾನೂನು ಗೊತ್ತಿತ್ತಲ್ಲ. ಅವನೆಂದ "ಕತ್ತೆ! ಅದು ನಿನ್ನ ನಿಗದಿಯಾದ ಕೆಲಸ, ನಾನು ಮಾಡುವುದುಂಟೇ" ಎಂದು.

ಬುದ್ಧಿಯಿಲ್ಲ, ಶುದ್ಧ ಕತ್ತೆರಾಯ. "ಆಗಲಪ್ಪ" ಎಂದು ಇಂದಾ-ಗೆ ರೆಜಿಸ್ಟರನ್ನು ಬರೆದಿಡಲು ಹೋದ.

ಅಷ್ಟು ಹೊತ್ತಿಗೆ ಶೇಕದಾರರ ಮಧ್ಯಾಹ್ನದ ಊಟಾನಂತರದ ಸಕ್ಕರೆ ನಿದ್ರೆ ಮುಗಿದಿತ್ತು. ತಮ್ಮ ಕೋಣೆಯಿಂದ ಆಕಳಿಸುತ್ತ ಜಗುಲಿಯ ಬಳಿಗೆ ಬಂದರು.

ಶೇಕ್‌ದಾರರನ್ನು ನೋಡಿದ ಕತ್ತೆರಾಯ. ತನ್ನ ನಿಗದಿಯಾದ ಕೆಲಸ ಮುಗಿದಿಲ್ಲ ಎನ್ನುವುದನ್ನೂ ಅರಿತಿದ್ದ. ಕಾರಣ ಗಾಭರಿಯಾಗಿಹೋದ. ಮೊದಲೇ ದುಡಿದು ಸುಸ್ತಾಗಿದ್ದ. ತಲೆ ಬೇರೆ ಸುತ್ತುತ್ತಿತ್ತು. ಈ ಗಾಭರಿಯೂ ಸೇರಿಕೊಂಡು ಕತ್ತೆರಾಯನಿಗೆ ಮೂರ್ಛೆ ಬಡಿಯಿತು. ಬಾಯಲ್ಲಿ ನೊರೆಯಾಡ ಹತ್ತಿತು. ಕೈಕಾಲು ಬಡಿದುಕೊಂಡು ಬಿದ್ದ.

ಇದನ್ನು ಕಂಡು ಶೇಕ್‌ದಾರರು ಬೆದರಿದರು. ಬಾಲ್ಯದಲ್ಲಿ ಅವರಿಗೆ ಯಾವುದೋ ಅಡುಗೂಲಜ್ಜಿ ಹೇಳಿದ್ದಳು—ಮೂರ್ಛೆರೋಗ ಬಂದವರ ಸಂಪರ್ಕ ಇತರರಿಗೆ ಆದರೆ, ಅವರಿಗೂ ಮೂರ್ಛೆ ಬರಬಹುದು ಅಂತ. ಶೇಕ್‌ದಾರರು ಓದಿದವರು. ಅಡುಗೂಲಜ್ಜಿ ಹೇಳಿದುದರಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಆದರೂ ಯಾಕೆ ಇಂತಹ ವಿಷಯಗಳನ್ನು ಪರೀಕ್ಷೆಮಾಡಿ ನೋಡಬೇಕು ? ಅದರ ಬದಲು ದೂರವಿದ್ದರೇ ಲೇಸು ಎಂದನ್ನುವ ಮನೋಭಾವ. ಕುದುರೆ ಬಾಬುವನ್ನು ಕರೆದರು. ಹಳ್ಳಿಯವರೂ ಬಂದರು. ಎಲ್ಲರೂ ಕತ್ತೆರಾಯನ ಆರೈಕೆಗೆ ಶುರು ಮಾಡಿದರು. ಒಬ್ಬಾತ ಕತ್ತೆರಾಯನ ದವಡೆಗೆ ಬೀಗದ ಕೈ ತುರುಕಿದ. ಇನ್ನೊಬ್ಬ ತಣ್ಣೀರೆರಚಿದ. ಕತ್ತೆರಾಯ ಸ್ವಲ್ಪ ಹೊತ್ತಿನಲ್ಲೇ ಎದ್ದು ಕುಳಿತ. ಸುಸ್ತಾಗಿ ಕಾಣುತ್ತಿದ್ದ.

"ಕುದುರೆ ಬಾಬು, ಇವ ತುಂಬಾ ನಿಶ್ಯಕ್ತನಾಗಿದ್ದಾನೆ. ಇವನಿಂದ ಮುಂದೆ ಕ್ಯಾಂಪಿನ ಕೆಲಸ ಆಗುವಂತಿಲ್ಲ. ಆದುದರಿಂದ, ಇವನನ್ನು ಗಾಡಿಯಲ್ಲಿ ಊರಿಗೆ ಕಳಿಸಿಬಿಡೋಣ. ಇವನ ಕೆಲಸವನ್ನೆಲ್ಲಾ ನೀನೇ ಮಾಡಿದರಾಯಿತು. ನೀನು ಓದಿದವ, ಸುಲಭವಾಗಿ ನಿಭಾಯಿಸಿಕೊಂಡು ಹೋಗುತ್ತೀ" ಎಂದು ಶೇಕ ದಾರರು ಆಣತಿ ಇತ್ತರು.

ಕತ್ತೆರಾಯನಿಗೆ ಸ್ವಲ್ಪ ಸಹಾಯಮಾಡಿದ್ದರೆ, ಈ ಹೆಣಭಾರ ನನ್ನ ಮೇಲೆ ಬೀಳುತ್ತಿರಲಿಲ್ಲ, ಎಂದು ಕುದುರೆ ಬಾಬು ಪಶ್ಚಾತ್ತಾಪ ಪಟ್ಟುಕೊಂಡನಂತೆ.

ಎಂದು ನನ್ನ ಅಡುಗೂಲಜ್ಜಿ, ಕುದುರೆ ಮತ್ತು ಕತ್ತೆರಾಯನ ಕತೆಯನ್ನು ಹೇಳುತ್ತಾ, ಅದಕ್ಕೇ ಮೊಮ್ಮಕ್ಕಳಿರಾ! ಕಡೇ ಅಂತಸ್ತಿನಲ್ಲಿರುವವರು ಒಬ್ಬರಿಗೆ ಒಬ್ಬರು ಆಗಬೇಕು, ಅವರ ಸಹಾಯಕ್ಕೆ ಮೇಲಂತಸ್ತಿನವರು ಎಂದೂ ಇಳಿದು ಬರುಲ್ಲ, ಎಂದು ನೀತಿ ಹೇಳಿ ಮುಕ್ತಾಯ ಮಾಡಿದಳು.

ಸಿಂಹ-ನರಿಯ ಕತೆ

ಇಂದಾನೊಂದು ಕಾಲದಲ್ಲಿ ಮೃಗರಾಜನಾದ ಒಂದು ಸಿಂಹವು ರಾಜ್ಯಭಾರ ಮಾಡುತ್ತಿತ್ತಂತೆ. ಜಂಭ ಅಂದರೆ ಜಂಭವಂತೆ ಅದಕ್ಕೆ. ಕಾರಣ, ವಯಸ್ಕರಾದ ಮೃಗಗಳೆಲ್ಲಾ ಒಮ್ಮತದಿಂದ ಓಟು ಕೊಟ್ಟು ಅದನ್ನೇ ರಾಷ್ಟ್ರಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದುವಂತೆ.

ಅದರ ಡೌಲೇ ಡೌಲು, ಮೋಜೇ ಮೋಜು. ಅದರ ಅರಗುಹೆಯ ಮುಂದೆ ಸ್ವಂತ ಸಿಬ್ಬಂದಿಗಾಗಿ ಹತ್ತಿಪ್ಪತ್ತು ಪುಟ್ಟ ಸಣ್ಣ ಗುಹೆಗಳಿದ್ದುವಂತೆ. ರಾತ್ರಿ ಹಗಲೂ ಸ್ವಂತ ಕಾರಕೂನರು ಅಲ್ಲಿರುತ್ತಿದ್ದು ಸಿಂಹರಾಜ ಕೂಗಿದಾಗ, " ಹೋ ಮಹಾಪ್ರಭೋ " " ಏನಪ್ಪಣೆ " ಎಂದು ಮಾರ್ದನಿ ಕೊಟ್ಟು, ಸೊಂಟ ಬಗ್ಗಿಸಿ ನಿಲ್ಲುತ್ತಿದ್ದುವಂತೆ. ಯಾರಾದರೂ ಅಹವಾಲು ಹೇಳಿಕೊಳ್ಳಲು ಸಿಂಹಾಧ್ಯಕ್ಷನ ಬಳಿಗೆ ಬಂದರೆ, ಮೊದಲು ಈ ಸಿಬ್ಬಂದಿ ವರ್ಗದವರನ್ನು ಶಾಮಿಾಲು ಮಾಡಿಕೊಂಡು, ಅವರ ಗೊರಸು ಉಗುರುಗಳಿಗೆ ಬೆಣ್ಣೆ ಗೋರಂಟಿ ಹಚ್ಚಿದರೇನೇ, ಮುಂದೆ ಭೇಟಿ ದೊರೆಯುತ್ತಿತ್ತಂತೆ. ಸಣ್ಣ ಪುಟ್ಟ ಗುಹೆಗಳ ಮುಂದೆ " ಒಳಗಿ.... ದ್ದಾರೆ........ಇಲ್ಲ " ಎನ್ನುವ ಬೋರ್ಡುಗಳನ್ನು ತೂಗ ಹಾಕಿದ್ದರಂತೆ. ಹೆಬ್ಬಾಗಿಲಮೇಲೆ ಝೂಂಡಾಗಳ ತೋರಣವನ್ನು ಕಟ್ಟಿದ್ದರಂತೆ. ಗುಹೆಗಳೆಲ್ಲೆಲ್ಲ ಹಗಲು ಹೊತ್ತಿನಲ್ಲಿ ಕೂಡ ಭರ್ಜರಿ ದೀಪಗಳನ್ನು ಹಚ್ಚಿಕೊಂಡೇ ಇರುತ್ತಿದ್ದರಂತೆ, ಅಂತಹ ಡೌಲು.

ಆ ರಾಜ್ಯದಲ್ಲಿ ಡೆಪ್ಯುಟಿ ಕಮಿಾಷನರ್ ತರಹ ಒಂದು ಹುಲಿ ಇತ್ತಂತೆ. ಅದನ್ನು ಹಿಂಬಾಲಿಸಿಕೊಂಡು, ಅದು ಉಂಡು ಬಿಟ್ಟದ್ದನ್ನು ತಿಂದುಕೊಂಡು, ಒಂದು ನರಿ ಇತ್ತಂತೆ. ಸಾಮಾನ್ಯವಾಗಿ ಬೇಟೆಯಾಡಿದ ಮೇಲೆ ಹುಲಿ ಬೇಕಾದಷ್ಟನ್ನು ತಿಂದಮೇಲೆ ನರಿಗೂ ಸಾಕಾದಷ್ಟು ಉಳಿಯುತ್ತಿತ್ತಂತೆ. ಆದರೆ ಒಮ್ಮೆ ಆ ಡಿಸ್ಟ್ರಿಕ್ಟ್‌ನಲ್ಲಿ ಮೃಗಕ್ಷಾಮ ತಲೆದೋರಿತಂತೆ. ಜತೆಗೆ ಹುಲಿಯ ಹೊಟ್ಟೆಯಲ್ಲಿ ಲಾಡಿ ಹುಳು ಮನೆ ಮಾಡಿಕೊಂಡಿತ್ತಂತೆ. ಆದಕಾರಣ ಏನು ಸಿಕ್ಕಿದರೂ ಅದನ್ನು ಹುಲಿ ಪೂರ್ತಿಯಾಗಿ ತಿಂದು ಬಿಡುತ್ತಿತ್ತಂತೆ. ಮೂಳೆ

ಗಳನ್ನೆಲ್ಲ ನೆಕ್ಕಿ ನೆಕ್ಕಿ ನಂತರ ಕಟಕಾರಿಸಿ ಚೂರು ಚೂರು ಮಾಡಿಕೊಂಡು ನುಂಗಿ ಬಿಡುತ್ತಿತ್ತಂತೆ. ಹೀಗಾಗಿ ನರಿಗೆ ಉಪವಾಸವೇ ಗತಿಯಾಯ್ತಂತೆ.

ಕಡೆಗೆ ನರಿ ಬುದ್ಧಿ ಉಪಯೋಗಿಸಿತಂತೆ. ಹೊಳೆ ತನಕ ಊರು, ದೊರೆ ತನಕ ದೂರು ಅಂತ ಗಾದೆಯೇ ಇದೆಯಲ್ಲ. ಅದರಂತೆ ಮೃಗರಾಜನ ಹತ್ತಿರ ಹೋಗಿ "ಮಹಾ ಪ್ರಭೋ! ಹುಲಿ ಸಾಹೇಬರು ಹೀಗೆ ಹೀಗೆ ಸಿಕ್ಕಿದ್ದನ್ನೆಲ್ಲ ದಕ್ಕಿಸಿಕೊಂಡು ಬಿಡುತ್ತಿದ್ದಾರೆ. ನನ್ನ ಪಾಲಿಗೆ ಸೊನ್ನೆ ಬಿದ್ದಿದೆ. ಡಿಯರ್ ನೆಸ್ ಅಲೊಯೆನ್ಸ್ ಹಾಗಿರಲಿ, ಬರಬೇಕಾದ ಸಂಬಳಕ್ಕೆ ಖೋತಾ ಬಿದ್ದಿದೆ. ಆದಕಾರಣ ತಾವು ದಯಮಾಡಿ ಫರ್ಮಾನ್ ಹೊರಡಿಸಿ, ನನ್ನ ಮಾಸಾಶನ ದೊರೆಯುವಂತೆ ಮಾಡಬೇಕು," ಎಂದು ಅರ್ಜಿ ಕೊಟ್ಟುಬಿಡಬೇಕು ಎಂದು ತೀರ್ಮಾನಿಸಿತಂತೆ. ಅದೇ ಪ್ರಕಾರ ರಾಜಧಾನಿಗೆ ಹೋಯಿತಂತೆ; ಸ್ವತಃ ಅರ್ಜಿಕೊಡಲು.

* * * * *

ಆ ದಿನ ಮೃಗರಾಜನ ಹುಟ್ಟಿದ ಹಬ್ಬವಂತೆ. ಆದುದರಿಂದ ದಿನವೆಲ್ಲ ಸಿಬ್ಬಂದಿಯವರು ತಂದಿತ್ತ ಭಕ್ಷ್ಯ ಭೋಜ್ಯಗಳನ್ನು ಕಂಠ ಪೂರ್ತಿ ತಿಂದು, ಗಡ್ಡವನ್ನು ನೀವಿಕೊಳ್ಳುತ್ತ, ಅಮಲಿನಲ್ಲಿದ್ದಾಗ "ನಾಳೆ ನಿಮಗೆಲ್ಲ ರಜಾ, ವಿಶ್ರಾಂತಿ ತೆಗೆದುಕೊಳ್ಳಿ" ಎಂದು ಸಿಂಹ ಘೋಷಿಸಿತಂತೆ. ನಂತರ ಇದ್ದಲ್ಲೇ ಬಿದ್ದುಕೊಂಡಿತಂತೆ.

ಮಾರನೆಯ ದಿನವೇ ನರಿ ತನ್ನ ಅರ್ಜಿಯನ್ನು ಖುದ್ದಾಗಿ ಕೊಡಲು ಅರ ಗುಹೆಯ ಬಳಿಗೆ ಹೋಯಿತಂತೆ. ಸಿಬ್ಬಂದಿ ಗುಹೆಗಳ ಮುಂದಿದ್ದ ಬೋರ್ಡು ಗಳಲ್ಲಿ "ಒಳಗಿ . . . ಲ್ಲ" ಕಾಣಿಸಿತಂತೆ. ಇದೇನು ಮೋಜು! ಎಲ್ಲರೂ ರಜ ತೆಗೆದುಕೊಳ್ಳುವುದು ಸಾಧ್ಯವೇ! ಎಂದು ಯೋಚಿಸಿತಂತೆ. ಇಲ್ಲಿ ಅಲ್ಲಿ ಸ್ವಲ್ಪ ತಟಾಯಿಸಿತಂತೆ. ಎಲ್ಲೆಲ್ಲೂ ಮೌನ. ಯಾರೂ ಎಲ್ಲೂ ಇಲ್ಲ. ಬಂದ ದಾರಿಗೆ ಸುಂಕವಿಲ್ಲ. ನಾಳೆ ತಿರುಗಿ ಬಂದರೆ ಒಳ್ಳೆಯದೇನೋ? ಎಂದು ಆಲೋಚನೆ ಮಾಡುತ್ತಿರುವಾಗಲೇ ಒಳಗಿನ ಗರ್ಭಗುಹೆಯಿಂದ ಸಣ್ಣ ಘರ್ಜನೆಯೊಂದು ಕೇಳಿಸಿತಂತೆ.

ನಿಂತಲ್ಲೇ ಬೆದರಿ ನರಿ ಕಲ್ಲು ಪ್ರತಿಮೆಯಂತೆ ನಿಂತುಕೊಂಡಿತಂತೆ.

ಒಳಗುಹೆಯಲ್ಲಿ ಏನಾಗಿತ್ತು ಅಂತ. ಸಿಂಹಕ್ಕೆ ಎಚ್ಚರವಾಗಿತ್ತು. ಅಸಾಧ್ಯ

ಬಾಯಾರಿಕೆಯಾಗಿತ್ತು, ತಲೆ ಶೂಲೆ ಬಂದಿತ್ತು. ನೀರು ಕುಡಿದರೆ ನಾಲಿಗೆ ಅಂಗಳದಿಂದ ಬಿಡುತ್ತೇನೋ ಎಂದು ಅನ್ನಿಸಿತ್ತು. ಅದಕ್ಕೇ "ದಫೇದಾರ್" —"ಜಮೇದಾರ್"—ಯಾರಲ್ಲಿ ಎಂದು ಕೂಗಿತಂತೆ; ಎಂದು ಘರ್ಜಿಸಿತಂತೆ. ಸಣ್ಣ ಪುಟ್ಟ ಸಿಬ್ಬಂದಿ ಗುಹೆಗಳಿಂದ "ದಫೇದಾರ್" "ಜಮೇದಾರ್" "ಯಾರಲ್ಲಿ" ಎಂದು ಮಾರ್ದನಿ ಕಿರುಸೂಸಿತಂತೆ. ಕೋಪ ಬಂತಂತೆ ಸಿಂಹಕ್ಕೆ. ಹಿಂದಿನ ದಿವಸದ ಔತಣ ಮರತೇಹೋಗಿತ್ತಂತೆ. ದಾಪುಗಾಲು ಹಾಕಿಕೊಂಡು ಸಿಂಹ ಒಳಗಿನಿಂದ ಹೊರಕ್ಕೆ ಆಕಳಿಸುತ್ತಾ ಬಂತಂತೆ. ಬಂದು ನೋಡಿತಂತೆ ಗರ ಬಡಿದವರ ಹಾಗೆ ನಿಂತಿದ್ದ ನರಿಯನ್ನು. ಕೂಗಿದಾಗ ಯಾಕೆ ಜವಾಬು ಕೊಡಲಿಲ್ಲ ಎಂದು ಸಿಂಹಕ್ಕೆ ಅಸಾಧ್ಯ ಕೋಪ ಬಂದಿತಂತೆ. ಎದುರಿಗಿರುವವ ಯಾರು? ಸ್ವಂತ ಸಿಬ್ಬಂದಿಯವನೇ? ಇನ್ನು ಯಾರಾದರೂನೇ? ಎಂದು ಯೋಚನೆಯೂ ಬರಲಿಲ್ಲವಂತೆ. ಬಂದು ಅಪ್ಪಳಿಸಿತಂತೆ.

ನರಿ ಕೆಳಗೆ ಬಿದ್ದು ಪ್ರಾಣ ಬಿಟ್ಟಿತಂತೆ.

ಹಿಂಗಾಲಿನಿಂದ ನರಿಯ ಕಳೇಬರವನ್ನು ಮೃಗರಾಜ ಪಕ್ಕಕ್ಕೆ ಚಿಮ್ಮಿ, ತನ್ನ ರಾಣೀವಾಸದ ಕಡೆಗೆ ಹೊರಟು ಹೋಯಿತಂತೆ.

ಅದಕ್ಕೇ ಮೊಮ್ಮಕ್ಕಳಿರಾ! ಕ್ಲಾರ್ಕುಗಳು ರಜಾ ತೆಗೆದುಕೊಂಡಿದ್ದರೆ ಅಧಿಕಾರಿಯತ್ತ ಸುಳಿಯಲೇ ಬಾರದು ಎಂದು ನನ್ನ ಅಡುಗೂಲಜ್ಜಿ ಸಿಂಹ ನರಿಯ ಕತೆ ಹೇಳಿದಳಂತೆ.

ಗುಬ್ಬಚ್ಚಿ - ಫೋಟೋ ಕತೆ

ಇಂದಾನೊಂದು ಕಾಲದಲ್ಲಿ ಕೇರಿಯ ಅಂಚಿನಲ್ಲಿ ದೊಡ್ಡದೊಂದು ಆಲದ ಮರವಿತ್ತಂತೆ. ಅದರ ಮೇಲೆ ಗುಬ್ಬಚ್ಚಿ ದಂಪತಿಗಳು ಗೂಡು ಕಟ್ಟಿಕೊಂಡಿದ್ದುವಂತೆ. ೨೦-೩೦ ಗುಬ್ಬಚ್ಚಿ ಗೂಡುಗಳಿಗೂ ಒಂದು ಗಡವಾ ಗುಬ್ಬಚ್ಚಿ ಯಜಮಾನ್ಯವನ್ನು ವಹಿಸಿಕೊಂಡಿತ್ತಂತೆ. ಅದರ ದೇಹ ರಚನೆಗೆ ಹೆದರಿಯೋ, ಅದರ ಕೊಕ್ಕಿನ ರಭಸಕ್ಕೆ ಬೆದರಿಯೋ ಏನೋ, ಉಳಿದ ಗಂಡು ಗುಬ್ಬಚ್ಚಿಗಳೆಲ್ಲಾ ಎಷ್ಟೇ ಅವಮಾನ ಆದರೂ, ಏನೇ ಸಂಶಯ ಬಂದರೂ ತೆಪ್ಪಗೇ ಇರುತ್ತಿದ್ದುವಂತೆ. ಅದೇ ಕಾರಣಗಳಿಂದಾಗಿ ಆ ವಠಾರದ ಸಂಸಾರವಂದಿಗ ಹೆಣ್ಣು ಗುಬ್ಬಚ್ಚಿಗಳೂ ಕೂಡ ತೋರ ನಡವಳಿಕೆಯಲ್ಲಿ ಹೆದರಿಕೊಂಡಂತೆ ಆಡುತ್ತಿದ್ದುವಂತೆ. ಆದರೆ ಆಳಮನಸ್ಸಿನ ಒಂದು ಅಂಚಿನಲ್ಲಿ ಗಡವಾ ಗುಬ್ಬಚ್ಚಿಯನ್ನು ಮೆಚ್ಚಿಕೊಂಡೂ ಇದ್ದುವಂತೆ. ಹೀಗಾಗಿ ಗಡವಾ ಗುಬ್ಬಚ್ಚಿಯು ಸಂಸಾರವಂದಿಗರ ಆ ವಠಾರದಲ್ಲಿ ಅರಬ್ಬಿದೇಶದ ಷೇಕ್‌ನ ತೆರನಾಗಿ ಕ್ಷಣಿಕವಾದರೂ ಮೋಜಿನ ಜೀವನ ನಡೆಸುತ್ತಿತ್ತಂತೆ.

ಅದೇ ಕೇರಿಯ ಹಳೆ ಪಾಳೆಯಗಾರನ ಮನೆಯ ಹೊರ ಛಾವಣಿಯಲ್ಲಿ ಕೆಲವು ಊರ ಗುಬ್ಬಚ್ಚಿಗಳು ವಾಸವಾಗಿದ್ದುವಂತೆ. ಹರಕಲು ಚಾಪೆಕಡ್ಡಿಗಳು, ಮುರುಕಲು ಕಸ ಪರಿಕೆಗಳು, ಹಳೆ ಹಾಸಿಗೆಯ ಹತ್ತಿ ತುಣುಕುಗಳು ಇವನ್ನೆಲ್ಲಾ ಶೇಖರಿಸಿಟ್ಟು ಅವುಗಳು ತಂತಮ್ಮ ಗೂಡುಗಳನ್ನು ರಚಿಸಿಕೊಂಡಿದ್ದುವಂತೆ. ಗೂಡು ಬಡವಾದರೂ ಕೇರಿ ಹಕ್ಕಿಗಳಲ್ಲವೇ? ಆದುದರಿಂದ ತಮ್ಮ ಮರಿ ಗುಬ್ಬಚ್ಚಿಗಳಿಗೆ ಆಟ ಪಾಠ, ನೃತ್ಯ ಸಂಗೀತ, ಇವೆಲ್ಲವನ್ನೂ ಕಲಿಸುತ್ತಿದ್ದುವಂತೆ. ಒಂದು ಬಡಗುಬ್ಬಚ್ಚಿ ಸಂಸಾರದಲ್ಲಿ ಒಂದೇ ಹೆಣ್ಣುಮಗಳು ಉಳಿದುಕೊಂಡಿದ್ದಳಂತೆ. ಮಿಕ್ಕವೆಲ್ಲಾ ಮೊಟ್ಟೆಯ ಹಂತದಲ್ಲೇ ಅವರಿವರ ಪಾಲಾದವಂತೆ. ಹಾಗಾಗಿ ತಾಯ್ತಂದೆ ಗುಬ್ಬಚ್ಚಿಗಳು ಹೆಣ್ಣುಮರಿಯನ್ನು ಬಲು ಅಕ್ಕರೆಯಿಂದ ಮುದ್ದುಮಾಡಿ ಮಾಡಿ ಬೆಳೆಸಿದುವಂತೆ. ಆ ಹೆಣ್ಣುಮರಿಗೆ ನೃತ್ಯ ಅಂದರೆ ಆಸೆ. ನಾಟಕ ಅಂದರೆ ಪ್ರೀತಿ. ಹೀಗಾಗಿ ಕೇರಿಯ ಕೇಂದ್ರ ಗುಬ್ಬಚ್ಚಿ ಕಾಲೇಜಿನಲ್ಲಿ ಅವಳ ಪರಿಚಯಕ್ಕಾಗಿ ಮಿಕ್ಕೆಲ್ಲ ಹುಡುಗ ಗುಬ್ಬಚ್ಚಿಗಳೂ ಹಾತೊರೆಯುತ್ತಿದ್ದು

ವಂತೆ. ಕ್ಷಣಕಾಲ ನಿನ್ನೊಡನಿದ್ದರೆ ಕೃತಾರ್ಥರು ಎಂದು ಭಾವಿಸುತ್ತೇವೆ ಎಂದು ಹೇಳುತ್ತಿದ್ದರಂತೆ.

ಕೇಂದ್ರ ಕಾಲೇಜಿನ ವಾರ್ಷಿಕೋತ್ಸವವನ್ನು ವೈಭವದಿಂದ ಆಚರಿಸಲು ಪ್ರಾಚಾರ್ಯ ಗುಬ್ಬಚ್ಚಿ ತೀರ್ಮಾನಿಸಿತಂತೆ. ಸಚಿವರನ್ನೇ ಆಹ್ವಾನಿಸಿತಂತೆ, ಅಧ್ಯಕ್ಷತೆ ವಹಿಸಲು. ಊರೂರ ಹಿರಿಯರಿಗೆಲ್ಲಾ ವಾರ್ಷಿಕೋತ್ಸವದ ಆಹ್ವಾನ ವನ್ನು ಗುಬ್ಬಚ್ಚಿವಾಣಿಯ ಮೂಲಕ ಕಳಿಸಿಕೊಡಲಾಯಿತಂತೆ.

ಗಡವಾ ಗುಬ್ಬಚ್ಚಿಗೂ ಆಹ್ವಾನ ಪತ್ರಿಕೆ ಹೋಯಿತು. ತನ್ನ ವಠಾರದ ನೋಡಿದ ಮುಖಗಳನ್ನೇ ನೋಡಿ ನೋಡಿ ಗಡವಾ ಗುಬ್ಬಚ್ಚಿಗೂ ಬೇಜಾರು ಬಂದಿತ್ತು. ಕೇರಿಯ ಕಾಲೇಜಿನ ವಾರ್ಷಿಕೋತ್ಸವಕ್ಕೆ ಹೋಗೋಣ, ಅವರೇ ನಾದರೂ ಚಂದಾ ಹಣಕ್ಕೆ ಕೈಒಡ್ಡಿದರೆ ತೆತ್ತುಬಿಡೋಣ ಎಂದು ನಿರ್ಧರಿಸಿತಂತೆ.

ಗರಿಗಳನ್ನೆಲ್ಲಾ ಪಾಲೀಷ್‌ಮಾಡಿ, ಕೊಕ್ಕನ್ನು ಚೂಪುಮಾಡಿ, ಕೊರಲನ್ನು ಸರಿಪಡಿಸಿಕೊಂಡು, ಸೀಟಿ ಹಾಕುತ್ತ ಗಡವಾ ಗುಬ್ಬಚ್ಚಿ ಕಾಲೇಜಿಗೆ ಹೋಯ್ತುಂತೆ. ಸ್ವತಃ ಪ್ರಾಚಾರ್ಯರೇ ಸ್ವಾಗತಿಸಿ ಎದುರು ಸಾಲಿನಲ್ಲಿ ಕೂರಿಸಿದರಂತೆ. ನೃತ್ಯ ಮಾಡುಕ್ಕೆ ತರುಣಿ ಗುಬ್ಬಚ್ಚಿ ಬಂದು, ಹಾಡುತ್ತಾ ಕುಣಿದಾಗ, ಇವಳೇನು ಗುಬ್ಬಚ್ಚಿಯೋ, ಕೋಗಿಲೆಯೋ ಎನ್ನುವಂತೆ ಗಡವಾ ಗುಬ್ಬಚ್ಚಿಗೆ ಅನುಮಾನ ಬಂತಂತೆ. ಗರಿಗಳ ವೈಖರಿ, ಒಡಲಿನ ಥಳಥಳಿ, ಕಂಗಳ ಸಿರಿಸಿರಿ, ಎಲ್ಲವೂ ಗಡವಾ ಗುಬ್ಬಚ್ಚಿಯ ಹೃದಯವನ್ನು ಕುಕ್ಕಿದುವಂತೆ. ಇಂತಹ ತರುಣಿ ಗುಬ್ಬಚ್ಚಿ ಕೇರಿಯಲ್ಲಿದೆ ಅಂತಲೂ ತಿಳಿಯದಲ್ಲ ನನಗೆ. ಅಪ್ಪ ಇದ್ದ ಆಲದ ಮರವನ್ನೇ ನೆಚ್ಚಿಕೊಂಡು, ಬಾಳನ್ನು ವ್ಯರ್ಥಮಾಡಿಕೊಂಡೆನಲ್ಲ, ಎಂದು ಪೇಚಾಡಿತಂತೆ.

ವಾರ್ಷಿಕೋತ್ಸವ ಮುಗಿದಮೇಲೆ ಪ್ರಾಚಾರ್ಯರನ್ನು ಗಡವಾ ಗುಬ್ಬಚ್ಚಿ ಬಲು ಹೊಗಳಿತಂತೆ. ತರುಣಿ ಗುಬ್ಬಚ್ಚಿಯ ನೃತ್ಯವನ್ನು ನೀವೇ ಕಲಿಸಿರಬೇಕು ಎಂದೂ ಹೇಳಿತಂತೆ. "ನಾನೇನೂ ನೃತ್ಯ ಕಲಿಸಲಿಲ್ಲ ಆದರೆ ಸಲಹೆಗಳನ್ನು ಕೊಟ್ಟಿದ್ದುಂಟು" ಎಂದು ಪ್ರಾಚಾರ್ಯ ಗುಬ್ಬಚ್ಚಿಯೂ ಸಂಕೋಚಪಡುತ್ತಾ ಸುಳ್ಳು ಹೇಳಿತಂತೆ. "ನಿಮ್ಮಂತಹ ಗಣ್ಯರು ಮೆಚ್ಚುಗೆಯನ್ನು ತರುಣಿ ಗುಬ್ಬಚ್ಚಿಗೇ ಹೇಳಿದರೆ ಎಷ್ಟೋ ಉತ್ತೇಜನ ಕೊಟ್ಟಹಾಗಾಗುತ್ತದೆ" ಎಂದೂ ಅಂದರಂತೆ. "ಅದಕ್ಕೇನು, ಸಿದ್ಧ" ಅಂದನಂತೆ ಗಡವಾ.

ತರುಣಿ ಗುಬ್ಬಚ್ಚಿಯನ್ನು ಬಾಯಿತುಂಬ ಹೊಗಳಿ, “ಬಾಯಿಯವರೇ! ನಮ್ಮ ಮನೆಗೆ ನಾಳೆ ಉಪಾಹಾರಕ್ಕೆ ಬನ್ನಿ ಎಂದು ಆಹ್ವಾನಿಸಿತಂತೆ ಗಡವಾ ಗುಬ್ಬಚ್ಚಿ. ತನ್ನ ಪರಿಚಯದ, ವಿಳಾಸವಿದ್ದ ಕಾರ್ಡನ್ನೂ ಕೊಟ್ಟಿತಂತೆ. ಗಡವಾ ಗುಬ್ಬಚ್ಚಿಯನ್ನು ತರುಣಿ ನೋಡಿದಾಗ

ಭಾರಿ ಜರದ ವಾರೆ ರುಮ್ಮಾಲ ಸುತ್ತೀಕೊಂಡಾವ
ತುಂಬು ಮಿಾಸಿ ತೀಡಿಕೋತ ಹುಬ್ಬುಹಾರಿಸಾಂವ

ಎಂದು ಹಾಡಿಕೊಂಡ ಮಾನವ ಹೆಣ್ಣಿಗೆ ಹೇಗಾಗುತ್ತಿತ್ತೋ ಹಾಗಾಯಿತಂತೆ.

ಮಾರನೆ ಸಂಜೆಹೊತ್ತಿಗೆ ಆಲದಮರದ ಗಡವಾ ಗುಬ್ಬಚ್ಚಿಯ ಗೂಡಿಗೆ ತರುಣಿ ಗುಬ್ಬಚ್ಚಿ ಹಾರಿ ಬಂದಳಂತೆ. ಹುರಿದ ಕಡಲೆ, ಖಾರದ ಬಟಾಣಿ, ಹಸಿ ಎರೆಹುಳು ಎಲ್ಲವನ್ನೂ ತರುಣಿಗೆಂದು ಗಡವಾ ತರಿಸಿಟ್ಟಿದ್ದನಂತೆ. ತರುಣಿ ಬುಟ್ಟಿಗೆ ಬಿದ್ದಳಂತೆ.

ತರುಣಿ ಗುಬ್ಬಚ್ಚಿಯ ತಾಯ್ತಂದೆಯರು “ಬೇಡ! ಮಗಳೇ! ಹಳ್ಳಿಗಾಡಿನ ಜನ, ಒರಟು, ನಲಿಗಿ ಹೋಗ್ತೀ ನೀನು” ಅಂತ ಎಷ್ಟೋ ಹೇಳಿದರಂತೆ. “ಅವರ ಮನೆ ಎಷ್ಟು ಪಸಂದಾಗಿದೆ. ಕಲ್ಲು ಹೊಡೆಯೋ ಹುಡುಗರಾರೂ ಅಲ್ಲಿ ಇಲ್ಲ. ಅವರನ್ನೇ ಮದುವೆಯಾಗ್ತೀನಿ” ಎಂತ ತರುಣಿ ಹಟ ಹಿಡಿದಳಂತೆ. ಮದುವೆಯಾಗಲೇಬೇಕು, ಹಾಗೆ ಮಾಡಿಕೊಂಡು ಬಂದಿದ್ದೀನಿ ಎಂದೂ ಹೆದರಿಸಿದ ಳಂತೆ.

ಮದುವೆಯಾದ ಮೇಲೆ ಎರಡು ದಿನ ಸುಖವಾಗಿದ್ದರಂತೆ, ನವದಂಪತಿಗಳು, ಆಲದಮರದಲ್ಲಿ. ವಠಾರದ ಗಂಡು ಗುಬ್ಬಚ್ಚಿಗಳೆಲ್ಲಾ ಗಡವನ ಕಾಟ ಇನ್ನು ತಪ್ಪಿತು ಎಂದು ಸಂತೋಷಪಟ್ಟುವಂತೆ. ವಠಾರದ ಹೆಣ್ಣು ಗುಬ್ಬಚ್ಚಿಗಳು, “ಕೆಮ್ಮಿದರೆ ಕೆಳಗೆ ಬೀಳೋ ಹಾಗಿದೆ ಈ ಗುಬ್ಬಿ, ಇದನ್ನ ಏನಂತ ಗಡವಾ ಮೆಚ್ಚಿಕೊಂಡಿತೋ” ಎಂದು ಅಸೂಯೆಪಡುತ್ತಾ ಮೂದಲಿಸಿ ಮಾತನಾಡಿ ಕೊಂಡುವಂತೆ.

ತರುಣಿ ಗುಬ್ಬಚ್ಚಿಗೆ ನಾಲ್ಕು ತಿಂಗಳಾದಾಗ ಬಲು ಕಾಂತಿಯುತಳಾದಳಂತೆ. ಅವಳನ್ನೇ ನೆಟ್ಟದೃಷ್ಟಿಯಲ್ಲಿ ಗಡವಾ ನೋಡುತ್ತಿದ್ದನಂತೆ. ಪುಕ್ಕಗಳನ್ನು ಸೆರಗಿನತರಹ ಸೆಳೆದುಕೊಂಡು ತರುಣಿ ಹೇಳಿದಳಂತೆ “ಅಲ್ಲಾ ಅಂದ್ರೆ! ಕಾಡು ಗುಬ್ಬಿಗಳ ತರಹ ಅಹನ್ಯಹನಿ ಕಾಲಕ್ಷೇಪ ಮಾಡುವ ಬದಲು, ಕೇರಿಯಲ್ಲಿ ಒಂದು

ಹುಲ್ಲುಕಡ್ಡಿ, ಹಿಸಿದ ಹತ್ತಿ ಗಡಂಗ್ ಇಡಬಾರದೇ? ಕೇರಿ ಗುಬ್ಬಚ್ಚಿಗಳೆಲ್ಲಾ ಗಿರಾಕಿಗಳಾಗ್ತಾರೆ. ಬೇಗ ಶ್ರೀಮಂತರಾಗಬಹುದು" ಎಂದು.

"ಸೈ" ಅಂದನಂತೆ ಗಡವಾ. ತರುಣಿ ಏನಾದರೂ ಆಗ ಬೆಂಕಿಗೆ ಬೀಳಿ ಎಂದಿದ್ದರೆ ಸಂತೋಷವಾಗಿ ಗಡವಾ ಬೀಳುತ್ತಿದ್ದ, ಹಾಗಾಗಿತ್ತು ಅವನ ಪಾಡು.

ಮಾರನೆ ದಿನವೇ ಕೇರೀಗೆ ಹೋಗಿ ಗಡಂಗನ್ನು ತೆಗೆದ. ಬೆಳಗಿನ ಝಾವ ಚಿಲಿಪಿಲಿ ಅಂತ ಹಾಡ್ತಾ ಹೋದೋನು, ಸಂಜೆ ಮುಂದೆ ಗಡಂಗಿನ ಬಾಗಿಲು ಹಾಕಿ ಸುಸ್ತಾಗಿ ಹಿಂತಿರುಗುತ್ತಿದ್ದನಂತೆ. ಗಡಂಗಿಗೆ ಬೇಕಾದ ಸಾಮಾನು ಗಳನ್ನು ಅಲ್ಲಿ ಇಲ್ಲಿ ಹುಡುಕಿ ತರೋದು, ಸಾಲ ಮಾಡೋದು, ಲೆಕ್ಕ ಬರೆಯೋದು, ಸಾಲ ವಸೂಲಿಮಾಡೋದು, ಒಂದೇ ಎರಡೇ ಕೆಲಸ!! ದಣಿದು ಬಂದು ಬಿದ್ದು ಕೊಂಡರೆ ಸಾಕಪ್ಪಾ ಅಂತ ಮಲಗುತ್ತಿದ್ದನಂತೆ.

ಹೀಗೆ ಕಾಲ ಸಾಗಿತು. ಆರು ತುಂಬಿತು ತರುಣಿ ಗುಬ್ಬಚ್ಚೀಗೆ, ಅವಳ ಲೆಕ್ಕದಲ್ಲಿ. ಧನುರ್ಮಾಸ ಬಂದಿತ್ತು. ವಾದ್ಯಾರುಗಳೆಲ್ಲಾ ಶ್ಲೋಕ ಪಠಣ ಮಾಡೋಹೊತ್ತಿಗೆ ಅಭ್ಯಾಸ ಬಲದಿಂದ ಗಡವಾ ಎದ್ದು ಗೂಡಿನಿಂದ ಹೊರ ಬಿದ್ದ. ಇನ್ನೂ ನಿದ್ರಿಸುತ್ತಿದ್ದ ಬಸುರಿ ಹೆಂಡತಿಯ ಮುಖವನ್ನು ನೋಡಿದ. ಏನು ಕನಸು ಬೀಳುತ್ತಿದ್ದಳೋ! ಮಂದಹಾಸ ಮೂಡಿತ್ತು ಅವಳ ಮುಖದಲ್ಲಿ. ಬಲು ಅಂದವಾಗಿತ್ತು ಮುಖ. ಯಾರ ಕನಸು ಬೀಳ್ತಾ ಇರಬಹುದು ಎಂಬ ಅನುಮಾನ ಹೆಡೆಯಾಡಿಸಿತು. ಗಡಂಗಿಗೆ ಹೋಗಬೇಕಲ್ಲ! ಮೃದುವಾಗಿ ಕೊಕ್ಕಿಗೆ ಕೊಕ್ಕು ತಾಕಿಸಿ ಸದ್ದಿಲ್ಲದೆ ಕೇರಿಯ ಕಡೆಗೆ ರೆಕ್ಕೆಬಿಚ್ಚಿ ಹಾರಿಹೋದ ನಂತೆ.

ಅನುಮಾನ ಕಾಡುತ್ತ್ಲೇ ಇತ್ತು. ವಠಾರದ ಗಂಡು ಗುಬ್ಬಿಗಳಿಗೆ ನಾನು ಕೋಡುಜೋಡಿ ಮೂಡಿಸಿದಂತೆ, ಅವುಗಳಲ್ಲಿ ಯಾವುದಾದರೂ ನನಗೆ ಮೂಡಿಸಿವೆಯೇ ಎಂದುಕೊಂಡನಂತೆ. ಅಷ್ಟು ಧೈರ್ಯ ಆ ಮುಂಡೇವಕ್ಕೆ ಎಲ್ಲಿ ಬರಬೇಕು ಅಂತ ಸಮಾಧಾನ ತಂದುಕೊಂಡನಂತೆ. ಧನುರ್ಮಾಸ! ಕೊಕ್ಕು ಕಟಕಟ ಮಾಡುತ್ತಿತ್ತು. ಗೂಡಿನಲ್ಲೇ ಬೆಚ್ಚಗೆ ಮಲಗಿದ್ದರೆ ಎಷ್ಟು ಹಿತವಾ ಗಿರುತ್ತಿತ್ತು. ಬೆಚ್ಚಗಿರುವ ಹಾಸಿಗೆಯಲ್ಲಿ ಬೆಚ್ಚಗೆ ತಬ್ಬಿಕೊಂಡು ಮಲಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನ್ನಿಸಿತಂತೆ. ಯಾಕಾರ ಗಡಂಗಿಟ್ಟೆ? ಯಾವ ಶ್ರೀಮಂತಿಕೆಗೆ? ಎನ್ನಿಸಿತಂತೆ. ಅವಳ ಸಲಹೆಯೇ ಇದು. ನಾನು ಗೂಡು

ಬಿಟ್ಟು ಹೋಗುವಂತೆ ಮಾಡಲು ಈ ಉಪಾಯ ಹೂಡಿದಳೋ ಎಂದು ಅನುಮಾನದ ನಾಲಿಗೆ ನುಡಿಯಿತಂತೆ. "ಛೇ! ಅಂತಹವಳಲ್ಲ! ಮೇಲೆ ಬಿದ್ದು ಮದುವೆ ಮಾಡಿಕೊಂಡಿದ್ದಾಳೆ, ಅವಳು ಯಾಕಾರೂ ಮೋಸ ಮಾಡ್ತಾಳೆ" ಎಂದು ಸಮಾಧಾನದ ನಾಲಿಗೆ ನುಡಿಯಿತಂತೆ.

ಅಂಗಡಿ ಸಾಮಾನುಗಳನ್ನು ಅಲ್ಲಿ ಇಲ್ಲಿ ಶೇಖರಿಸಿ ಗಡಂಗಿಗೆ ಹೋದ. ಅಷ್ಟು ಹೊತ್ತಿಗೆ ಸುಮಾರು ಹತ್ತರ ಸಮಯ. ಘೋಷಣೆಗಳು ಕೇಳಿ ಬಂದುವಂತೆ.

"ಗುಬ್ಬಿ ಮೇಲೆ ಮನುಷ್ಯ ಪಿಶಾಚಿಗಳು ಬ್ರಹ್ಮಾಸ್ತ್ರ ಉಪಯೋಗಿಸಿವೆ
ಗುಬ್ಬಿ ಪೇಟೆ ಬಂದ್, ಗುಬ್ಬಿ ಕೇರಿ ಬಂದ್, ಇವತ್ತು ಹರತಾಳ"

ಅಂತ ಪಿಲ್ಟು ಗುಬ್ಬಿಗಳೆಲ್ಲಾ ಘೋಷಣೆ ಮಾಡುತ್ತಾ ಬಂದುವಂತೆ. ಗಡಂಗಿನ ಬಾಗಿಲನ್ನು ಮುಚ್ಚಿಸಿದುವಂತೆ.

ಗಡವಾ ಗುಬ್ಬಚ್ಚಿಗೆ ಬೇಜಾರಾಯಿತಂತೆ. ಹುಡುಗುಪಾಳ್ಯಕ್ಕೆ ಹೆದರಿ ಗಡಂಗ್ ಮುಚ್ಕ್ಯೋ ಹಾಗಾಯಿತಲ್ಲ! ಅಂತ. ಮನೆಗೆ ಹಿಂತಿರುಗಿತಂತೆ.

ಕೊರಗುತ್ತಾ ಹಿಂತಿರುಗುತ್ತಿತ್ತಂತೆ. ಸದ್ದಿಲ್ಲ. ಗದ್ದಲವಿಲ್ಲವಂತೆ. ಆಲದ ಮರದ ತನ್ನ ಗೂಡಿನಿಂದ "ಪ್ಯಾರ್ ಕರೂಂ" ಅಂತ ಗುಬ್ಬಿ ಹಾಡು ಕೇಳಿಸಿತಂತೆ. ಗೂಡಿನ ಬಾಗಿಲು ತೆಗೆದಿತ್ತಂತೆ. ಹಜಾರದಲ್ಲೇ ಹೆಂಡತಿ ಕೂತಿದ್ದಳಂತೆ.


ಬೆನ್ನು ಬಾಗಿಲ ಕಡೆಗೆ ಇದೆ. ಅವಳೆದುರಿಗೆ ೧೮-೨೦ರ ಪ್ರಾಯದ, ಕಿರು ಮೀಸೆಯ ಯುವಕ ಗುಬ್ಬಿಯ ಫ್ಲೋಟೋ. ಫ್ಲೋಟೋ ನೋಡುತ್ತಾ ಪ್ಯಾರ್ ಕರೂಂ ಅಂತ ಕಿರು ದನಿಯಲ್ಲಿ ಹಾಡುತ್ತಿದ್ದಾಳಂತೆ. ಚಿತ್ರದ ಕೊಕ್ಕಿಗೆ ತನ್ನ ಕೊಕ್ಕನ್ನು ಹಗೂರಾಗಿ ತೀಡ್ತಾ ಇದ್ದಳಂತೆ.

ತಡೆಯುಕ್ಕಾಗಲಿಲ್ಲವಂತೆ, ಗಡವಾ ಗುಬ್ಬಿಗೆ. "ಯಾರದೇ ಚಿತ್ರ ಅದು" ಅಂತ ಕಿರುಲಿದನಂತೆ. ತರುಣಿ ಗುಬ್ಬಚ್ಚಿ ಬೆದರಿದಳಂತೆ. ತರುಣಿ ಗುಬ್ಬಚ್ಚಿಯ ಕೊಕ್ಕು ಫ್ಲೋಟೋ ಹರಿದು ಪಠದ ಆಚೆಕಡೆಗೆ ಹೋಯಿತಂತೆ. ಫ್ಲೋಟೋ ಛಿದ್ರ ಛಿದ್ರವಾಯಿತಂತೆ.

"ಯಾರದೇ ಫ್ಲೋಟೋ ಅದು! ಪ್ಯಾರ್ ಕರೂಂ ಫ್ಲೋಟೋ! ಸಂಜೆಗೆ ಗಂಡ ಬರ್ತಾನೆ ಅನ್ನೋ ಧೈರ್ಯದಿಂದ ಮೋಜುಮಾಡ್ತಾ ಇದ್ದ್ಯೇನೆ! ಬೇಗ ಬಂದಿದ್ದಕ್ಕೆ ನಿನ್ನ ಚಿಲ್ಮೇಷ ಗೊತ್ತಾಯಿತು" ಎಂದು ಗಡವಾ ಗುಬ್ಬಿ ರೇಗಿದನಂತೆ.

ಫ್ಲೋಟೋ ಕಟ್ಟನಿಂದ ತಲೆಯನ್ನು ತರುಣಿ ಗುಬ್ಬಚ್ಚಿ ಹೊರತೆಗೆದಳಂತೆ. ಕೋಕಿಲ ಕಂಠದಲ್ಲಿ ನುಡಿದಳಂತೆ.

"ನೋಡಿ ಅಂದ್ರೆ, ಬೆಳಗಾಗುವ ಮುಂಚೆ ಎದ್ದು ಹೋಗ್ತೀರಿ. ಸಂಜೆ ಮುಂದೆ ಸುಸ್ತಾಗಿ ಬರ್ತೀರಿ. ನಿಮ್ಮ ಮುಖವನ್ನು ಹಗಲಿನಲ್ಲಿ ಕಂಡು ಎಷ್ಟೋ ಯುಗಗಳಾದುವು. ನನ್ನ ಕೈಗೆ ಸಿಗೋದು ಈ ಫ್ಲೋಟೋ ಒಂದೆ. ನಿಮ್ಮ ಮದುವೇಲಿ ತೆಗೆಸಿದ ಫ್ಲೋಟೋ ಅದು. ಅಕ್ಕ ಅದನ್ನು ನನಗೆ ಕೊಟ್ಟುಹೋದಳು. ಆ ಫ್ಲೋಟೋಗೆ ಮುತ್ತು ಕೊಟ್ಟೆ. ನೀವು ಕಿರುಲಿದಾಗ ಗಾಬರಿಯಾಗಿ ಆ ಚಿತ್ರಾನೂ ಹರಿದುಹೋಯಿತು" ಎಂದು.



ಗಡವಾ ಗುಬ್ಬಚ್ಚಿಯ ಮನಸ್ಸು ತಿಳಿಯಾಯ್ತಂತೆ. "ನನ್ನ ಮೊದಲ ಹೆಂಡತಿ ದಿಟವಾಗಲೂ ನನ್ನನ್ನು ಪ್ರೀತಿಸ್ತಾ ಇದ್ದಳು. ತೌರಿನ ಮೋಹ ಹೆಚ್ಚಾಯಿತು ಅಂತ ಕಾಣುತ್ತೆ. ನೀನು ಬಂದಮೇಲೆ ತೌರಿಗೆ ಹೋಗ್ತೀನಿ ಅಂತ ಹೋದವಳು ಹಿಂತಿರುಗಿ ಬರಲೇ ಇಲ್ಲ" ಎಂದು ಹೇಳಿದನಂತೆ.

ತಿರುಗಿ ಕೊಕ್ಕಾಟ, ತಿಕ್ಕಾಟ.

ಹರಿದು ಹೋಗಿದ್ದ ಫ್ಲೋಟೋದಲ್ಲಿ ಯಾರ ಬಿಂಬ ಮೂಡಿತ್ತೋ? ಗಂಡನಿಗಂತೂ ತಿಳಿಯದು. ದೇವರಿಗೆ ಏನಾದರೂ ಗೊತ್ತೋ ಏನೋ? ಎಂದು ನಮ್ಮ ಅಡುಗೂಲಜ್ಜಿ ಗುಬ್ಬಚ್ಚಿ-ಫ್ಲೋಟೋ ಕತೆಯನ್ನು ಮೊಮ್ಮಕ್ಕಳಿಗೆ ಹೇಳಿದಳಂತೆ.

ಮುದ್ದು ಗಿಣಿಯ ಕತೆ

ಇಂದಾನೊಂದು ಕಾಲದಲ್ಲಿ ಒಂದು ಗಿಣಿ ಇತ್ತಂತೆ. ಪಂಚರಂಗುಗಳ ರೆಕ್ಕೆ ಪುಕ್ಕಗಳಿದ್ದ ಆ ಗಿಣಿ ಬಲು ಮುದ್ದಾಗಿತ್ತಂತೆ. ಮೂರು ವರ್ಷ ವಯಸ್ಸಾದಾಗ, ತಂದೆತಾಯಿಯರು ಆ ಗಿಣಿಯನ್ನು ನರ್ಸರಿ ಶಾಲೆಗೆ ಸೇರಿಸಿದರಂತೆ. ಹೊಸಬಟ್ಟೆ ಹಾಕಿಕೊಂಡು ಪುಸ್ತಕಗಳ ಚೀಲ ಹಿಡಿದುಕೊಂಡು ಗಿಣಿ ಶಾಲೆಗೆ ಹೋಗ ಲಾರಂಭಿಸಿತಂತೆ.

ಆ ಶಾಲೆಯಲ್ಲಿ ಪಾಠ ಕಲಿಸುವ ಮ್ಯಾಡಂಗಳಲ್ಲಿ ಅರ್ಧಕ್ಕರ್ಧ ಜನಕ್ಕೆ ವಯಸ್ಸು ಮೀರಿದ್ದರೂ ಮದುವೆಯೇ ಆಗಿತ್ತಿಲ್ಲವಂತೆ. ಆದಕಾರಣವೇ ಅವರಿಗೆ ಮಕ್ಕಳು ಎಂದರೆ ಬಲು ಪ್ರೀತಿಯಂತೆ. ಮುದ್ದಾಡುತ್ತಲೇ ಅವರು ಮಕ್ಕಳಿಗೆ ಮಕ್ಕಳ ಪದ್ಯಗಳನ್ನು, ಮಕ್ಕಳ ತರಹವೇ ಮುದ್ದು ಮುದ್ದು ಮಾತುಗಳಲ್ಲಿ ಹೇಳಿ ಕೊಡುತ್ತಿದ್ದರಂತೆ.

ಶಾಲೆಯಿಂದ ಗಿಣಿ ಮನೆಗೆ ಹಿಂತಿರುಗಿದಾಗ ಅಮ್ಮ ಆದರದಿಂದ ಅದಕ್ಕೆ ತಿಂಡಿ ಕಾಫಿ ಕೊಟ್ಟು ಶಾಲೆಯಲ್ಲಿ ಏನು ಹೇಳಿಕೊಟ್ಟರು ಮರೀ! ಅಂತ ಕೇಳುವ ವಾಡಿಕೆಯಂತೆ. ಶಾಲೆಯಲ್ಲಿ ಕಲಿತ ಪದ್ಯದ ನಾಲ್ಕಾರು ಸಾಲುಗಳನ್ನು ಮುದ್ದು ಮುದ್ದಾಗಿ ಗಿಣಿ ಹೇಳಿದಾಗ "ಎಷ್ಟು ಚೆನ್ನಾಗಿ ಪದ್ಯ ಹೇಳ್ತೀ ಮರೀ" ಅಂತ ಅಮ್ಮ ಉದ್ಗಾರ ತೆಗೆದು, ನಂತರ ದೃಷ್ಟಿ ತೆಗೆಯುತ್ತಿದ್ದಳಂತೆ. ರಾತ್ರಿ ಅಪ್ಪ ಮನೆಗೆ ಬಂದಾಗ ಮರಿಯ ಕೈಲಿ ಆ ಪದ್ಯವನ್ನು ಅಮ್ಮ ಹೇಳಿಸುತ್ತಿದ್ದಳಂತೆ. ಅಪ್ಪನ ತಲೆಮೇಲೆ ನೆಲ್ಲಿ ಹಾಲು ಕರೆದ ಹಾಗೆ ಆಗಿ ಅವ ತುಂಬಾ ಹಿಗ್ಗುತ್ತಿದ್ದನಂತೆ. ಹಿಗ್ಗಿ ಎಂತಹ ಜಾಣ ಮಗನ್ನ ಹೆತ್ತೆಯೇ ಎಂದು ಹೆಂಡತಿಯನ್ನೂ ಹೊಗಳಿ, ಅಟ್ಟಕ್ಕೇರಿಸುತ್ತಿದ್ದನಂತೆ. "ತಂದೆಯಂತೆ ಮಗ ಅಂದ್ರೆ" ಅಂತ ತಾಯಿ ಹೇಳಿ ಅಪ್ಪನನ್ನೂ ಅಟ್ಟಕ್ಕೆ ಎಳೆದುಕೊಳ್ಳುತ್ತಿದ್ದಳಂತೆ. ಈ ರೀತಿ ಅಟ್ಟಹಾಸದ ಸಂಸಾರವನ್ನು ನಡಸುತ್ತಾ ಇದ್ದರಂತೆ.

ಮನೆಗೆ ಯಾರಾದರೂ ಸ್ನೇಹಿತರು ಅಥವಾ ಸಂಬಂಧಿಗಳು ಬಂದರೆ ಅವರೆದುರಿಗೆ ಮುದ್ದುಗಿಣಿಯು ಮುದ್ದು ಮುದ್ದಾಗಿ ಪದ್ಯ ಹೇಳಲೇಬೇಕು

"ಮಿಲು ಮಿಲುಗುವೆ ಹಾ ಕಿಲು ತಾಲಗೆಯೇ
ಅಲಿಯೆನು ನಾನೆಲೆ ನೀನಾಲೋ"

ಎಂದು ಮುದ್ದು ಗಿಣಿ ಕೊಂಕು ಬಿಂಕಗಳಿಂದ ಹೇಳಿದಕೂಡಲೆ ಬಂದವರು ಅದನ್ನಪ್ಪಿ ಮುತ್ತುಕೊಟ್ಟು, "ಇಷ್ಟು ಚಿಕ್ಕದು ಎಷ್ಟು ಚೆನ್ನಾಗಿ ಪದ್ಯ ನುಡಿಯುತ್ತೈ ?" ಎಂದು ಪ್ರಶಂಸೆಯನ್ನು ಮಾಡುತ್ತಿದ್ದರಂತೆ.

ಒಂದು ದಿನ ಮುದ್ದು ಗಿಣಿ ಪಾಠವನ್ನು ಓದುತ್ತಾ ಇತ್ತಂತೆ, ಸಂಜೆಯಲ್ಲಿ. ಕಿಠಾರನೆ ಕಿರುಚಿಕೊಂಡಿತಂತೆ. ಅಡಿಗೆ ಮನೆಯಿಂದ ಅಮ್ಮ ಏನಾಯ್ತು ಮರೀ ಅಂತ ಕೂಗುತ್ತಾ ಓಡಿಬಂದಳಂತೆ. ತನ್ನ ಕೊಠಡಿಯಲ್ಲಿ ಬಟ್ಟೆ ಬಿಚ್ಚುತ್ತಿದ್ದ ಅಪ್ಪ ಹಾಗೆಯೇ ಓಡಿಬಂದನಂತೆ. ಇಬ್ಬರೂ ವಿಚಾರಿಸಿದಾಗ ಮುದ್ದು ಗಿಣಿ ತೊಂಡಂಗಿ ಯೊಂದನ್ನು ಕಂಡು ಕಿರುಚಿತು ಎಂದು ತಿಳಿಯಿತಂತೆ.

ತೊಂಡಂಗಿಯನ್ನು ಹೊಡೆದುಹಾಕಿ, ಮುದ್ದುಗಿಣಿಯನ್ನು ಎತ್ತಿಕೊಂಡು ಅಮ್ಮಾ ಅಡಿಗೆ ಮನೆಗೆ ಹೋದಳಂತೆ. "ಇಲ್ಲೇ ಓದುತ್ತಿರು ಮರೀ" ಅಂತ ಹೇಳುತ್ತಾ.

ಯಶಸ್ವಿಯಾಗಿ ಪ್ಯಾಸುಮಾಡಿ ಮುದ್ದು ಗಿಣಿ ಹಾಯ್‌ಸ್ಕೂಲಿಗೆ ಸೇರಿತಂತೆ. ಅಲ್ಲೂ ಮೇಷ್ಟರುಗಳು ಕಲಿಸಿದ್ದನ್ನೆಲ್ಲಾ ಗಿಣಿಪಾಠ ಮಾಡಿಕೊಂಡು ಪರೀಕ್ಷೆಗಳಲ್ಲಿ ಪ್ರಶಸ್ತಿ ಪಡೆಯುತ್ತಿತ್ತಂತೆ. "ಇಂತಹ ಪ್ರೈಸ್ ಬಂತಮ್ಮ"—"ಅಂತಹ ಬಹುಮಾನ ಕೊಟ್ಟರಪ್ಪ" ಎಂದು ಮುದ್ದು ಗಿಣಿ ವರದಿ ಹೇಳಿದಾಗ ತಂದೆ ತಾಯಿ ಗಳು ಹಿಗ್ಗಿ ಹೀರೇಕಾಯಿ ಬೋಂಡಾಮಾಡಿ ಹಬ್ಬ ನಡಸುತ್ತಿದ್ದರಂತೆ. ಮನೆಗೆ ಬಂದವರಿಗೆ ಬಹುಮಾನಗಳನ್ನು ಪ್ರದರ್ಶಿಸುವುದೇ ಮುದ್ದು ಗಿಣಿಯ ಕೆಲಸವಂತೆ.

ಕಾಲೇಜಿಗೆ ಸೇರಿತು ಮುದ್ದು ಗಿಣಿ. ಅಲ್ಲೂ ಪ್ರೊಫೆಸರುಗಳು ಕಲಿಸಿದ್ದನ್ನು ಗಿಣಿಪಾಠ ಮಾಡಿ ಕಲಿತುಕೊಂಡಿತು. ಆದರೆ ಪರೀಕ್ಷೆಗಳಲ್ಲಿ ಕಲಿಸಿದ್ದನ್ನು ಕಲಿ ಸಿದ ರೀತಿಯಲ್ಲೇ ಪ್ರಶ್ನೆಗಳನ್ನು ಕೇಳುವುದಿಲ್ಲವಲ್ಲ! ವಿದ್ಯಾರ್ಥಿಯು ಸ್ವಂತ ಬುದ್ಧಿ ಉಪಯೋಗಿಸಿ ಬರೆಯಲಿ ಅಂತ ಎಳ್ಳಂ ಬಳಸೆ ಪ್ರಶ್ನೆಗಳನ್ನು ಕೇಳುತ್ತಾರಲ್ಲ! ಕಾರಣ ಕಾಲೇಜು ಪರೀಕ್ಷೆಗಳಲ್ಲಿ ಮುದ್ದು ಗಿಣಿ ತೇರ್ಗಡೆಯಾಗುವುದೇ ಮಹಾ ಪ್ರಯಾಸವಾಯಿತಂತೆ.

"ಇನ್ನುಮುಂದೆ ಇವನನ್ನೇನು ಮಾಡುವುದೇ ? ರಾಯರ ಕುದುರೆ ಕತ್ತೆ ಯಾಯ್ತಲ್ಲೇ ?" ಎಂದು ಅಪ್ಪ ಅಟ್ಟದಮೇಲೆ ಹೆಂಡತಿಯನ್ನು ಕೇಳಿದನಂತೆ.

"ನಮ್ಮ ಮರಿ ಬಲು ಜಾಣ ಅಂದ್ರೆ, ಈ ಪರೀಕ್ಷೇಲಿ ಈ ಸರ್ತಿ ಹೀಗಾದರೆ ಅವನನ್ನು ತೆಗಳಬೇಕಾಗಿಲ್ಲ. ಡಾಕ್ಟರ್ ಓದಿಗೆ ಸೇರಿಸೋಣ" ಎಂದಳಂತೆ ಆಕೆ.

"ಸರಿ! ನಿನ್ನ ಬುದ್ಧೀನೋ? ಜಿರಳೆ ಕಂಡರೆ ಈಗಲೂ ಬೆಚ್ಚಿಬೀಳುತ್ತಾನೆ, ಇವ ಡಾಕ್ಟರಾಗಿ ಹೆಣ ಹಾಕಿದ ಹಾಗೇ ಆಯಿತು" ಎಂದು ಅಪ್ಪ ವ್ಯಂಗ್ಯವಾಡಿದ ನಂತೆ.

"ಲಾಯರ್ ಪರೀಕ್ಷೆಗೆ ಓದಲಿ ಅಂದ್ರೆ" ಎಂದಳಂತೆ.

"ಕೋರ್ಟುಗಳಲ್ಲಿ ಜಿರಳೆಗಳಿರುಲ್ಲ ಕಣೆ! ಅಲ್ಲಿ ತೋಳಗಳು ಕಿರುಬಗಳು ಇರುತ್ತವೆ. ಅಲ್ಲಿ ಇವ ತಲೆಯೆತ್ತಿ ಬಾಳುಕ್ಕೆ ಆಗುತ್ತೆಯೇನೇ" ಎಂದು ಗಂಡ ಮೂದಲಿಸಿದನಂತೆ.

"ಮತ್ತೇನು ಮಾಡಬೇಕು ಅಂತ" ಎಂದು ಕೋಪದಿಂದ ಹೆಂಡತಿ ಕೇಳಿದ ಳಂತೆ.

"ಮತ್ತೇನು ಮಾಡೋದು? ಎಲ್ಲಾದರೂ ನಗದಿ ಗುಮಾಸ್ತೆಕೆಲಸಕ್ಕೆ ಸೇರಿ ಕೊಳ್ಳೋದು. ಅಂಬಲಿಯೋ ತುಂಬೆ ಸೊಪ್ಪೋ ತಿನ್ನೋದು" ಎಂದನಂತೆ ಗಂಡ. ಮುದ್ದು ಗಿಣಿಗೆ ರ್‍ಯಾಂಕ್ ಬರದೇ ಇದ್ದುದು ಅವನಿಗೆ ತುಂಬಾ ಬೇಸರ ತಂದಿತ್ತು. ರ್‍ಯಾಂಕ್ ಬಂದಿದ್ದರೆ, ಅಥವಾ ಫಸ್ಟ್‌ಕ್ಲಾಸ್ ಆದರೂ ಬಂದಿದ್ದರೆ ಐ.ಎ.ಎಸ್. ಇಗೆ ಕೂರಿಸಬಹುದಾಗಿತ್ತು. ಶ್ರೀಮಂತರು ಯಾರಾದರೂ ಹೆಣ್ಣು ಕೊಡುಕ್ಕೆ ಬರುವರು ಎಂದು ಆಸೆ ಇಟ್ಟುಕೊಂಡಿದ್ದ, ಅಪ್ಪ.

"ಮರಿಯನ್ನೇ ನಾಳೆ ಕೇಳೋಣ" ಎಂದಳು ಹೆಂಡತಿ.

ಮಾರನೆಯ ದಿನ ಮರಿಯನ್ನು ಕೇಳಬೇಕು. ನಂತರ ಅವನ ಭವಿಷ್ಯವನ್ನು ನಿರ್ಧರಿಸಬೇಕು. ಮುದ್ದು ಗಿಣಿಗೆ ಇಷ್ಟವಾಗಿದ್ದ ಕಡಲೆಕಾಳು ಉಸಲಿಮಾಡಿ ಅದನ್ನು ಬೆಳಿಗ್ಗೆ ತಿಂಡಿಗೆ ಕೊಟ್ಟು, ಅಪ್ಪ ಅಮ್ಮ ಇಬ್ಬರೂ ಮುಂದೇನ್ಮಾಡ್ತಿ ಮರಿ ಎಂದು ಕೇಳಿದರು.

"ಹೇಳಿಕೊಟ್ಟ ಪಾಠವನ್ನು ಕಲಿತುಕೊಳ್ಳುಕ್ಕೆ ನನಗೆ ತುಂಬಾ ಇಷ್ಟವಮ್ಮಾ! ಅದೇರೀತಿ ಇತರರಿಗೆ ಕಲಿಸಲಿಕ್ಕೂ ತುಂಬಾ ಇಷ್ಟ ಅಪ್ಪ, ಅದಕ್ಕೇ ಸ್ಕೂಲ್ ಮಾಸ್ತರ ಕೆಲಸಕ್ಕೆ ಸೇರಿಕೋತೀನಿ" ಎಂದ ಮುದ್ದು ಗಿಣಿ.

"ನಿನ್ನ ಹಣೆಬರಹ ಇದ್ದ ಹಾಗಾಗಲಿ, ಸ್ಕೂಲ್‌ಮಾಸ್ತರ್ ಆದರೆ ಯಾರೂ ನಿನಗೆ ಹೆಣ್ಣು ಕೊಡುಕ್ಕೆ ಬರುಲ್ಲವಲ್ಲೋ" ಎಂದಳು ಅಮ್ಮ.

"ಒಪ್ಪತ್ತು ಊಟದಲ್ಲೇ ಜೀವನ ನಡಸಬೇಕಾಗುತ್ತಲ್ಲೋ, ಮಾಸ್ತರಿಗೆ ಸಿಗೋ ಸಂಬಳದಲ್ಲಿ. ಅದರ ಬದಲು ಎಲ್ಲಾದರೂ ನಗದಿ ಗುಮಾಸ್ತೆಯಾದರೂ ಶಾಖಾಯ ಲವಣಾಯ ಸಿಗುತ್ತಲ್ಲೋ" ಎಂದರು ಅಪ್ಪ.

ಹಠ ಹಿಡಿದು ಮುದ್ದು ಗಿಣಿ ಮಾಸ್ತರ ಕೆಲಸಕ್ಕೆ ಅರ್ಜಿಹಾಕಿದ. ಹಾಯ್ ಸ್ಕೂಲಿನಲ್ಲಿ ಕೆಲಸವೂ ಸಿಕ್ಕಿತು. ಮಲೆನಾಡಿನ ಜೋಡಿದಾಳ್ ಹಾಯ್‌ಸ್ಕೂಲಿಗೆ ಹೋಗಿ ಸೇರಿಕೊಂಡ ಮುದ್ದುಮಣಿ.

"ಆ ಮಲೆನಾಡ ಕೊಂಪೇಲಿ ಹೋಗಿ ಸೇರಿಕೊಂಡ. ಇನ್ನು ಅವನಿಗೆ ಹೆಣ್ಣುಕೊಡುಕ್ಕೆ ಯಾರೂ ಬರುಲ್ಲವಲ್ಲ" ಅಂತ ಅಮ್ಮ ಅತ್ತಳು.

"ಸಾಲ ಮಾಡಿಯಾದರೂ ಓದಿಸೋಣ ಅಂತಿದ್ದೆ. ಹೋಗಲಿ ಬಿಡು, ಎಲ್ಲ ಒಳ್ಳೆಯದಕ್ಕೇ ಅಂದುಕೊಳ್ಳೋಣ, ನಮ್ಮ ಕೈಲೇನಿದೆ, ಎಲ್ಲ ದೇವರ ಕೃಪೆ" ಎಂದು ಅಪ್ಪ ಕೈಲಿದ್ದ ನಶ್ಯವನ್ನು ಏರಿಸಿ, ಕೈ ಕೊಡವಿಕೊಂಡು ವೇದಾಂತದ ಕಡೆಗೆ ಮಾತಿನಲ್ಲಿ ವಾಲಿದರು.

ಒಂದು ದಿನ ಬೆಳಿಗ್ಗೆ ಹದಿನಾರಡಿ ಮೋಟಾರು ಕಾರು ಮನೆಯ ಮುಂದೆ ಬಂದು ನಿಂತಿತು. ಸಮವಸ್ತ್ರ ಧರಿಸಿದ ಜವಾನ ಮೋಟಾರು ಬಾಗಿಲನ್ನು ತೆಗೆದ. ಭರ್ಜರಿ ಆಸಾಮಿ ಇಳಿದುಬಂದ. ಮೋಟಾರು ಶಬ್ದ ಕೇಳಿ, ಈ ಸಂದಿಯಲ್ಲಿ ಯಾರು ಬರ್ರಾರೆ ಎಂದು ಅಪ್ಪ ಬಾಗಿಲು ತೆಗೆದುನೋಡಲು ಹಣಕಿದ್ದ. ಬಂದವರು "ಮುದ್ದು ಗಿಣಿಯ ತಂದೆಯಲ್ಲವೇ ನೀವು" ಎಂದರು.

"ಹೌದು, ಬನ್ನಿ, ಏನು ಬೇಕಾಗಿತ್ತು. ಮುದ್ದು ಗಿಣಿಯ ಪರಿಚಯ ತಮಗೆ ಹೇಗಾಯ್ತು. ತಮ್ಮ ಪವಿತ್ರ ನಾಮಧೇಯ?" ಎಂದು ಬಡವನಿಗೆ ಸಹಜವಾದ ಮರ್ಯಾದೆಯಿಂದ ಅಪ್ಪ ಕೇಳಿದ, ಅಭ್ಯಾಗತರನ್ನು ಬೈಠಕು ಖಾನೆಯಲ್ಲಿ ಕೂರಿಸಿ.

"ಶಿವಮೊಗ್ಗ ಜಿಲ್ಲೆಯ ಎಂ.ಎಲ್.ಎ. ನಾನು. ರೂಪ, ನನ್ನ ಎರಡನೆ ಮಗಳು ಜೋಡಿದಾಳ್ ಹಾಯ್‌ಸ್ಕೂಲಿಗೆ ಹೋಗುತ್ತಿದ್ದಾಳೆ. ಅವಳಿಗೆ ಮನೆ ಪಾಠ ಹೇಳಿಕೊಡಲು ಮುದ್ದುಗಿಣಿಯನ್ನು ಗೊತ್ತುಮಾಡಿದ್ದೆ. ನಿಮ್ಮ ಮಗ ವಿನಯವಂತ, ಸ್ಫುರದ್ರೂಪಿ, ಚೆನ್ನಾಗಿ ಪಾಠ ಹೇಳಿಕೊಡುತ್ತಾನೆ ಅಂತ ನೇಮಿಸಿದೆ.

ಈಗ ಪರಿಸ್ಥಿತಿ ಬಿಗಡಾಯಿಸಿದೆ. ಬೇರೆ ಮಾರ್ಗವೇ ಇಲ್ಲ. ನಿಮ್ಮ ಹುಡುಗನಿಗೆ ರೂಪಳನ್ನು ಕಟ್ಟಿ ಮದುವೆ ಮಾಡಲೇಬೇಕು. ಹಾಗಾಗಿಬಿಟ್ಟಿದೆ.

ಮುದ್ದು ಗಿಣಿಯೂ ಮದುವೆಗೆ ಒಪ್ಪಿದ್ದಾನೆ. ಎಲ್ಲ ಏರ್ಪಾಡುಗಳನ್ನೂ ಮಾಡಿಯಾಗಿದೆ. ಮುಖ್ಯಮಂತ್ರಿಗಳೂ, ವಿದ್ಯಾಸಚಿವರೂ ಮದುವೆಗೆ ಬರುತ್ತೇವೆ ಎಂದು ಭರವಸೆ ನೀಡಿದ್ದಾರೆ. ಈಗ ತಾನೆ ಅವರುಗಳನ್ನು ಕಂಡು ಮಾತನಾಡಿ ಬಂದೆ.

ಮದುವೆಯ ಎರಡೂ ಕಡೆಯ ಏರ್ಪಾಡನ್ನು ಮಾಡಿದ್ದೇನೆ. ನಿಮ್ಮನ್ನೆಲ್ಲ ಕರಕೊಂಡು ಹೋಗುಕ್ಕೆ ಎರಡು ಕಾರ್ ತಂದಿದ್ದೇನೆ" ಎಂದರು.

ಅಪ್ಪ ಅಮ್ಮ ಒಂದು ನಿಮಿಷ ಗುಸು ಗುಸು ಮಾತನಾಡಿಕೊಂಡರು. ನಾವು ಹೋಗಲಿ ಬಿಡಲಿ ಮದುವೆಯೇನೋ ಆಗಿಯೇ ಹೋಗುತ್ತೆ. ಕಾರಣ ನಗುತ್ತಾ ಹೋಗೋಣ ಎಂದು ತೀರ್ಮಾನಿಸಿದರು.

ವಿಜೃಂಭಣೆಯಿಂದ ಮದುವೆ ಆಯಿತು. ಮುಖ್ಯಮಂತ್ರಿಗಳು ತಮ್ಮ ಅಮೃತ ಹಸ್ತದಿಂದ ಅಕ್ಕಿಕಾಳು ಹಾಕಿದರು. ವಿದ್ಯಾಮಂತ್ರಿಗಳು ವರನ ವಿವರಗಳನ್ನು ಕೇಳಿ ತಿಳಿದುಕೊಂಡರು.

ಈಗ ಮುದ್ದು ಗಿಣಿ ಕಾಲೇಜಲ್ಲಿ ಪ್ರೊಫೆಸರ್ ಆಗಿದ್ದಾನೆ. ಇಂಗ್ಲೆಂಡಿನ ದಿಕ್ಕಿನಲ್ಲಿ ಪ್ರಯಾಣಮಾಡಿ ಆರು ತಿಂಗಳಲ್ಲೇ ಮೆಹನತ್ತು ಪಡೆದು ಬಂದಮೇಲೆ.

ಅದಕ್ಕೇ ನೊಮ್ಮಕ್ಕಳಿರಾ! ಮುದ್ದು ಮುದ್ದಾಗಿದ್ದರೆ ಸಾಕು, ಗಿಣಿಪಾಠವನ್ನು ಸಂಸಾರದಲ್ಲಿ ಮಾಡಿಕೊಂಡಿದ್ದರೆ, ಹೇಗೋ ಬಾಳಿಕೋಬಹುದು. ಅವಕಾಶ ಸಿಕ್ಕಿದಾಗ ಬಾವುಟ ಏರಿಸಬೇಕು. ಪಾಠ ಪ್ರವಚನ ಅಂತ ಕೂಡ ಬಾರದು ಎಂದು ನನ್ನ ಅಡುಗೂಲಜ್ಜಿ ಮುದ್ದು ಗಿಣಿಯ ಕತೆಯನ್ನು ಹೇಳಿದಳು.

ಕೋತಿ ಕಜ್ಜಾಯ ಹಂಚಿದ ಕತೆ

ಇಂದಾನೊಂದು ಊರಿನಲ್ಲಿ ಅನಿಲ್ ಕುಮಾರ ಎಂದೊಬ್ಬ ಗೃಹಸ್ಥನಿದ್ದನಂತೆ. ಅನಿಲ್ ಎಂದರೆ ಗೊತ್ತಲ್ಲ! ವಾಯು ದೇವರು ಅಂತ. ಅವನ ಮಗ ತಿಳಿದೇ ಇದೆಯಲ್ಲ; ಹನುಮಂತ, ಕಪಿಶ್ರೇಷ್ಠ. ಅನಿಲ್ ಕುಮಾರನು ಸದ್ಗೃಹಸ್ಥನಂತೆ ತೋರುಗಣ್ಣಿಗೆ ಕಾಣಿಸುತ್ತ ಇದ್ದರೂ, ಒಳಮನಸ್ಸಿನಲ್ಲಿ ಕಪಿಚೇಷ್ಟೆ ಆಡುತ್ತಾ, ಮುಸುಕಿನಲ್ಲೇ ಮೋಸ ಮಾಡುತ್ತ ಹಿಗ್ಗುತ್ತಿದ್ದನಂತೆ. ಹೆಸರಿಗೆ ತಕ್ಕಂತೆ ಒಳ ಮನಸ್ಸಿನಲ್ಲಿ ನಡೆದುಕೊಳ್ಳುತ್ತಿದ್ದನಂತೆ.

ಸದ್ಗೃಹಸ್ಥನಂತೆ ಬಾಳಲು ಹೇಗೆ ಸಾಧ್ಯವಾಗಿತ್ತು, ಈಗಿನ ಕಾಲದಲ್ಲಿ, ಎಂದು ನೀವು ಕೇಳಬಹುದು. ಅದಕ್ಕೆ ಕಾರಣ ಇಷ್ಟೇ! ಅವರ ಅಪ್ಪನ ಅಪ್ಪ ಹಾಕಿದ ಆಲದ ಮರದ ಸುತ್ತ ಇದ್ದ ನೂರೆಕರೆ ಜಮೀನು, ಮಾವ ಕೊಟ್ಟಿದ್ದ ಮಾವಿನ ತೋಪು, ಇವೆರಡೂ ಸಾಕಷ್ಟು ಸಂಪಾದನೆ ಕೊಡುತ್ತಿತ್ತು. ಆದರೆ ಸ್ವಾತಂತ್ರ್ಯ ಬಂತಲ್ಲ ನಮ್ಮ ದೇಶಕ್ಕೆ, ಆಗ ನಮ್ಮ ಸರಕಾರ ಚೂರುಚೂರಾಗಿ ಅನಿಲ್ ಕುಮಾರನ ಆಸ್ತಿಯನ್ನೆಲ್ಲಾ ಕಸಿದುಕೊಂಡಿತಂತೆ. ಆಗ ಅನಿಲ್ ಕುಮಾರ ಸದ್ಗೃಹಸ್ಥನಂತೆ ಬಾಳಲು ಅಸಾಧ್ಯವಾಯಿತಂತೆ. ಆಲದ ಮರದ ಕೆಳಗೆ ಒಂದು ಮೂರುಗುಪ್ಪೆ ದೇವರ ಸಣ್ಣ ಗುಡಿ ಇತ್ತಲ್ಲ, ಅಲ್ಲಿ ಪೂಜಾರಿಯಾಗಿ ಕುಳಿತನಂತೆ. ಗಡ್ಡ ಮೀಸೆ ಬೆಳೆಸಿ, ಡಿಖಾವು ಕುಂಕುಮ ವಿಭೂತಿಗಳನ್ನು ಹಣೆಗೆ ಬಳಿದು, ಜಪ ಮಾಡ್ತಾ ಕೂತರೆ, ಸಾಕ್ಷಾತ್ ಸ್ಮಶಾನ ರುದ್ರನೇ ಕೂತಂತೆ ಕಾಣಿಸುತ್ತಿತ್ತಂತೆ. ಹಾಗಾಗಿ ಕೇರಿಯಲ್ಲೆಲ್ಲಾ ದೇವರಂತಹಾ ಮನುಷ್ಯ; ಸತ್ಯಸಂಧ, ಎಂಬ ಹೆಸರು ಪಡೆದನಂತೆ. ಪೂರ್ವಾಶ್ರಮದಲ್ಲಿ ನಮ್ಮ ಜನ ನಾಯಕರು ಹೆಸರುಗಳಿಸಿದಂತೆ.

ಹೆಸರು ಬಂತು, ಯಶಸ್ಸು ಹರಡಿತು. ಅಧಿಕಾರ ದಕ್ಕಿತು. ಅಂದಮೇಲೆ ಹೊಸ ಆಶ್ರಮ ಶುರುವಾಯಿತಲ್ಲ.

ಮಲ್ಲಪ್ಪ ಒಂದು ಬೆಳಿಗ್ಗೆ ಬಂದ. "ಗುರುಗಳೇ" ಅಂದ. ತಲೆ ಬಾಗಿಸಿ ಎದುರಿನಲ್ಲಿ ಕುಳಿತ. ಗುರು ಎನ್ನಿಸಿಕೊಂಡ ಅನಿಲ್‌ಕುಮಾರ ಮಲ್ಲಪ್ಪನ ತಲೆ ತಡವರಿಸಿ ಆಶೀರ್ವಾದ ಮಾಡಿದ. ಅವನ ಬೆರಳುಗಳು ಕತ್ತಿಯಾಗಿದ್ದರೆ,

ಮಲ್ಲಪ್ಪನ ತಲೆಯು ನುಣ್ಣಗೆ ಬೋಳಾಗುತ್ತಿತ್ತು. ಆದರೆ ಮಲ್ಲಪ್ಪನಿಗೆ ಗುರುಗಳ ಕೈ ಹಿತವಾಗೇ ಇತ್ತು.

“ಗುರುಗಳೇ! ನನ್ನ ದಾಯಾದಿ ಎಲ್ಲಪ್ಪನ್ನ ಕಂಡಿದ್ದೀರಲ್ಲ. ಅವನಿಗೂ ನನಗೂ ಜಮೀನು ಹಂಚಿಕೆಯ ವಿಷಯದಲ್ಲಿ ಸ್ವಲ್ಪ ಜಗಳ ಬಿದ್ದಿದೆ. ಇಬ್ಬರಿಗೂ ಸರಿಯಾಗಿ ಹಂಚಿಲ್ಲ ಅಂತಾನೆ. ಪಂಚಾಯಿತರ ಎದುರಿಗೇ ನಮ್ಮಪ್ಪನ ಕಾಲ ದಲ್ಲೇ ಹಂಚಿಕೆ ಆಗಿತ್ತು. ಆದರೂ ತಕರಾರು ತೆಗೆದಿದ್ದಾನೆ. ಏನು ಮಾಡಲಿ, ನೀವಾದರೂ ಎಲ್ಲಪ್ಪನಿಗೆ ಬುದ್ಧಿ ಹೇಳಬಾರದಾ? ಇನ್ನು ಕೋರ್ಟು ಕಚೇರಿ ಹತ್ತಿದರೆ, ಇದ್ದ ಬದ್ದ ಆಸ್ತಿಯೆಲ್ಲಾ ಲಾಯರ ಪಾಲಾಗುತ್ತೆ” ಎಂದು ಹೇಳಿ ಕೊಂಡನಂತೆ.

“ಆಗಲಿ ನೋಡೋಣ” ಎಂದರಂತೆ ಗುರು ಅನಿಲ್ ಕುಮಾರರು.

ಮಲ್ಲಪ್ಪ ಇತ್ತಕಡೆ ಹೊರಟುಹೋದ ಕೂಡಲೆ, ಅತ್ತಕಡೆಯಿಂದ ಎಲ್ಲಪ್ಪ ಬಂದನಂತೆ. “ಗುರುಗಳೇ, ಹೀಗೆ ಮಲ್ಲಪ್ಪ ನನಗೆ ಮೋಸ ಮಾಡಿದ್ದಾನೆ. ನೀವು ಬುದ್ಧಿಹೇಳಿ ಅವನನ್ನು ಸರಿಯಾದ ಮಾರ್ಗಕ್ಕೆ ತರಬೇಕು” ಎಂದು ಕೇಳಿ ಕೊಂಡನಂತೆ.

ಸರಿ! ಇಬ್ಬರು ಕಕ್ಷಿಗಾರರೂ ಒಪ್ಪಿಕೊಂಡಮೇಲೆ ಗುರುಗಳ ಕೆಲಸ ಹಗೂ ರಾಯಿತು.

ಜಮೀನಿನ ಬಳಿಗೆ ಮಲ್ಲಪ್ಪ ಎಲ್ಲಪ್ಪ ಇಬ್ಬರನ್ನೂ ಕರಕೊಂಡು ಗುರುಗಳು ಹೋದರು.

ಜಮೀನನ್ನು ನೋಡಿದರು. ಬಾರುಗಾಲನ್ನು ಹಾಕಿಕೊಂಡು ಈ ತುದಿ ಯಿಂದ ಆ ತುದಿ ತನಕ ನಡೆದರು. ನೂರಾಇಪ್ಪತ್ತು ಹೆಜ್ಜೆ ಆಯಿತು. ಅರವತ್ತು ಹೆಜ್ಜೆ ಹಾಕ್ತೀನಿ. ಅಲ್ಲಿ, ಜಮೀನನ್ನು ಎರಡುಭಾಗ ಮಾಡೋಣ ಎಂದರು. ಹಾಗೇ ಮಾಡಿದರು.

ಎಲ್ಲಪ್ಪ ಬೊಬ್ಬೆ ಇಟ್ಟ, “ಗುರುಗಳೇ, ಎರಡು ಹೆಜ್ಜೆ ಅಗಲ, ಇಡೀ ಉದ್ದಕ್ಕೂ ಹೆಚ್ಚು ಜಮೀನು ಮಲ್ಲಪ್ಪನಿಗೆ ದಕ್ಕಿತಲ್ಲಾ” ಎಂದು.

“ಹಾಗಾದರೆ ಹೆಚ್ಚಾದ ಆ ಎರಡು ಹೆಜ್ಜೆ ಅಗಲದ, ಇಡೀ ಉದ್ದಕ್ಕೂ ಇರುವ ಜಮೀನನ್ನು ಮಲ್ಲಪ್ಪನಿಗೆ ಕೊಡೋದು ಬೇಡ. ಅದನ್ನು ಆಲದ ಮರದಡಿಯ ನಮ್ಮ ಗುಡಿಗೆ ಕೊಟ್ಟುಬಿಡಿ” ಎಂದರು ಗುರುಗಳು. ಮಲ್ಲಪ್ಪನಿಗೆ

ದೇವರ ಭಯ, ಗುರುಗಳಲ್ಲಿ ನಂಬಿಕೆ. ಆಗಲಿ ಎಂದ. ಎರಡು ಹೆಜ್ಜೆ ಅಗಲ, ಇಡೀ ಉದ್ದಕ್ಕೂ ಗುರುಗಳು ಇನ್ನೊಂದು ಗುರ್ತು ಹಾಕಿದರು. ಆಗ ಮಲ್ಲಪ್ಪ ಬೊಡಕೊಂಡ "ಗುರುಗಳೇ! ಎಲ್ಲಪ್ಪನ ಭಾಗ, ನನ್ನ ಭಾಗಕ್ಕಿಂತ ಹೆಚ್ಚಾಯ್ತು" ಅಂತ.

ಸರಿ! ಅನಿಲ್ ಕುಮಾರರು, ತಮ್ಮ ಹೆಸರಿನ ಮೂಲ ಪುರುಷನಾದ ಕೋತಿ, ಕಜ್ಜಾಯವನ್ನು ಕಾದಾಡುತ್ತಿದ್ದ ಬೆಕ್ಕುಗಳಿಗೆ ಹಂಚಿಕೊಟ್ಟ ತರಹಾನೇ, ಜಮೀನನ್ನು ಹಂಚಲು ಹೋಗಿ, ಇದು ಸ್ವಲ್ಪ ಹೆಚ್ಚಾಯಿತು, ಗುಡಿಗೆ ಕೊಡಿ, ಅದು ಹೆಚ್ಚಾಯ್ತು, ಅದನ್ನು ಗುಡಿಗೆ ಕೊಡಿ ಎಂದು ಹಂಚಿದರಂತೆ.

ಕಡೆಗೆ ಜಮೀನೆಲ್ಲಾ ಗುಡಿಗೆ ಮೀಸಲಾಯಿತು.

"ಶಿಷ್ಯಂದಿರಾ! ನಿಮ್ಮ ಗುರುಭಕ್ತಿಗೆ ಮೆಚ್ಚಿದೆ, ದೇವರ ಸೇವೆಗೆ ತಲೆದೂಗುವೆ, ಇನ್ನುಮೇಲೆ ಹಳೇ ಕತೆಯಲ್ಲಿ ಹೇಳಿದಹಾಗೆ ಬೆಕ್ಕುಗಳಂತೆ ಕಾದಾಡಬೇಡಿ. ಅಣ್ಣತಮ್ಮಂದಿರಂತೆ ಅನ್ಯೋನ್ಯವಾಗಿ ವಿಶ್ವಾಸದಿಂದ ಬಾಳಿ. ಹೊಟ್ಟೆಗೆ ಏನೂ ಸಿಗದೆ ಇದ್ದರೆ, ಗುಡಿಗೆ ಬನ್ನಿ ಏನಾದರೂ ಪ್ರಸಾದ ಸಿಗಬಹುದು" ಎಂದು ಆಶೀರ್ವಾದ ಮಾಡಿದರಂತೆ.

"ಅದಕ್ಕೇ ಮೊಮ್ಮಕ್ಕಳಿರಾ! ಈಗಿನ ಕಾಲದಲ್ಲಿ ಬಾಳಬೇಕಾದರೆ ಗುರುಗಳಂತೆ ಬಂದವರ ತಲೆ ತಡವರಿಸಿ ಆಶೀರ್ವಾದ ಮಾಡಬೇಕು. ಹಾಗೂ ಅವರ ತಲೇನ ನುಣ್ಣಗೆ ಮಾಡಲು ಉಪಾಯವನ್ನು ಹುಡುಕಬೇಕು".

ಎಂದು ನಮ್ಮ ಅಡುಗೂಲಜ್ಜಿ ಕೋತಿ ಕಜ್ಜಾಯ ಹಂಚಿದ ಕತೆಯನ್ನು ಹೇಳಿದಳಂತೆ.

'ಭೂಲೋಕ ಮುಳುಗಿಹೋದ' ಕತೆ

ಇಂದಾನೊಂದು ಕಾಲದಲ್ಲಿ ಕಾವೇರಿ ನದಿಯ ಪಶ್ಚಿಮ ದಡದಲ್ಲಿ ಬಚ್ಚಪ್ಪನ ಗ್ರಾಮ ಅಂತ ಒಂದು ಗ್ರಾಮ ಇದೆಯಲ್ಲ, ಅದರಲ್ಲಿ ರಾಮಭದ್ರ ಶೆಟ್ಟಿ ಅಂತ ಒಬ್ಬ ವ್ಯಾಪಾರಸ್ಥ ಇದ್ದನಂತೆ. ತನ್ನ ಗ್ರಾಮದಲ್ಲಿ ಬೆಳೆದ ಸಾಮಗ್ರಿಗಳನ್ನು ಕೊಂಡು ದೋಣಿಯಲ್ಲಿ ಕಾವೇರಿಯನ್ನು ದಾಟಿ, ನೆರೆ ಊರಿಗೆ ಹೋಗಿ ಮಾರಾಟ ಮಾಡಿ ಬಂದ ಲಾಭದಲ್ಲಿ ಜೀವನ ನಡೆಸ್ತಾ ಇದ್ದನಂತೆ.

ಒಂದು ಸರ್ತಿ ದೋಣೀಲಿ ಹತ್ತು ಮೂಟೆ ಇರಿಸಿಕೊಂಡು ಕೂತಿದ್ದಾನೆ. ಸುತ್ತಲೂ ಹತ್ತಾರು ಜನ ಕೂತಿದ್ದಾರೆ. ದೋಣಿ ತುಂಬಿದೆ. ಶೆಟ್ಟಿ ಅಂಚಿನಲ್ಲೇ ಕುಳಿತಿದ್ದಾನೆ. ಜೋರಾಗಿ ಗಾಳಿ ಬೀಸಿತು. ದೋಣಿ ಕುಣಿದಾಡಿತು. ಹಳೇ ಕತೆಯಲ್ಲಿ ಆದಂತೆ ಶೆಟ್ಟಿ ನೀರಿಗೆ ಬಿದ್ದ.

"ಅಯ್ಯಯ್ಯೋ!" ಎಂದು ಬೊಬ್ಬೆ ಹೊಡೆದ.

ದೋಣಿಯಲ್ಲಿದ್ದವರು, ಹಳೇ ಕತೆಯನ್ನು ಜ್ಞಾಪಿಸಿಕೊಂಡು, "ಇದೇನೋ ಶೆಟ್ಟಿ! ಅಯ್ಯಯ್ಯೋ! ಅಂತ ಮಾತ್ರ ಬೊಬ್ಬೆ ಹೊಡೀತಾ ಇದಿ. 'ಭೂಲೋಕ ಮುಳುಗಿ ಹೋಯ್ತು; ಭೂಲೋಕ ಮುಳುಗಿ ಹೋಯ್ತು!' ಅಂತ ಯಾಕೋ ಅರಚುವುದಿಲ್ಲ" ಎಂದು ಕೇಳಿದರಂತೆ.

ಕಾವೇರಿ ನದಿಯಲ್ಲಿ ಕೈಕಾಲು ಝಾಡಿಸುತ್ತ, ಶೆಟ್ಟಿ ಹೇಳಿದನಂತೆ "ನಾನು ಮುಳುಗಿ ಹೋದರೆ ಭೂಲೋಕ ಯಾಕೆ ಮುಳುಗಿ ಹೋಗುತ್ತೆ. ಹೋದ ಸರ್ತಿ ಊರಿಗೆ ಹೋಗಿದ್ದಾಗ ಒಂದು ಲಕ್ಷ ರೂಪಾಯಿಗೆ ವಿಮೆ ಹಿಡಿದಿದ್ದೇನೆ. ನಾನು ಮುಳುಗಿ ಹೋದರೆ ನನ್ನ ಮಕ್ಕಳಿಗೆ ಹೆಂಡತಿಗೆ ಒಂದು ಲಕ್ಷ ರೂಪಾಯಿ ಬರುತ್ತೆ. ಭೂಲೋಕದಲ್ಲಿ ಸುಖವಾಗಿ ಮೆರೀತಾರೆ", ಎಂದು ಗುಟುಕು ನೀರು ಕುಡಿಯುತ್ತಾ, ಕುಡಿಯುತ್ತಾ ಹೇಳಿದನಂತೆ. "ಭೂಲೋಕ, ಅಂದರೆ ನನ್ನ ಪಾಲಿನ, ನನ್ನ ಮನೆಯ ಭೂಲೋಕ ಸ್ವರ್ಗವಾಗುತ್ತೆ, ನಾನು ಸ್ವರ್ಗವಾಸಿಯಾದರೆ" ಎಂದೂ ಕಣ್ಣು ಕಣ್ಣು ತೇಲಿಸುತ್ತಾ ಹೇಳಿದನಂತೆ. ಆದರೂ ನಗುಮುಖವಾಗೇ ಇದ್ದನಂತೆ. ಸಾವಿನ ದವಡೆಯಲ್ಲಿದ್ದರೂ ಹಲ್ಲು ಕಿರಿಯುತ್ತಲೇ ಇದ್ದನಂತೆ.

ನಗರದಿಂದ ವಿಮೆ ಮಾಡಿಸಲು ಆ ಗ್ರಾಮಕ್ಕೆ ಬಂದಿದ್ದ ಕುಳ್ಳಪ್ಪ ಆ ದೋಣಿ

ಯಲ್ಲೇ ಗ್ರಾಮದಿಂದ ತನ್ನ ಕೆಲಸವನ್ನು ಮುಗಿಸಿಕೊಂಡು, ಹಿಂತಿರುಗುತ್ತಿದ್ದನಂತೆ.

ಹಿಂದಿನ ವಾರವೇ ವಿಮಾ ಅಧಿಕಾರಿಗಳು ಅವನನ್ನು ಕರಸಿಕೊಂಡು " ಹೋದ ವರ್ಷವೆಲ್ಲಾ ನಿನ್ನಿಂದ ಎರಡು ಲಕ್ಷ ರೂಪಾಯಿನಷ್ಟೂ ವಿಮೆ ಸಂದಿಲ್ಲ. ನಿನ್ನ ಸರಹದ್ದಿನಿಂದ ಐದು ಲಕ್ಷ ಬರಬೇಕಾಗಿತ್ತು. ಇನ್ನೊಂದು ಮೂರು ತಿಂಗಳಲ್ಲಿ ಸಾಕಷ್ಟು ಪ್ರಗತಿ ತೋರಿಸದೆ ಇದ್ದರೆ, ಕೆಲಸದಿಂದ ಬರ್ತರ್ಫ್ ಮಾಡಬೇಕಾಗುತ್ತೆ" ಎಂದು ಬಯ್ದು ಎಚ್ಚರಿಕೆ ಕೊಟ್ಟಿದ್ದರಂತೆ.

ಮನೆಗೆ ಹಿಂತಿರುಗಿದಾಗ, ಈ ಎಚ್ಚರಿಕೆ ಬೈಗಳನ್ನು ಕೇಳಿಸಿಕೊಂಡು, ಕುಳ್ಳಪ್ಪನ ಹೆಂಡತಿ ಮೂರೂ ಹೆಣ್ಣುಮಕ್ಕಳನ್ನು ಅಂಗಳದಲ್ಲಿ ಕೂರಿಸಿಕೊಂಡು ಅಳ್ತಾ ಇದ್ದಳಂತೆ. " ಅಂತಹ ದೊಡ್ಡ ಮನೆಯ ಹೆಣ್ಣುಮಗಳು ನಾನು, ಈ ಕಂತ್ರಿ ಗಂಡನ್ನ ಮದುವೆಯಾಗಿ, ವರ್ಷಂಪ್ರತಿ ನಿಮ್ಮನ್ನು ಹೆತ್ತು, ಈಗ ನಿಮಗೆ ಸರಿಗೆ ಲಂಗ ಹೊಲಿಸಿಕೊಡಲು ಸಾಧ್ಯವಾಗಿಲ್ಲ. ಈ ಗೌರೀ ಹಬ್ಬಕ್ಕೆ ನಿಮ್ಮಪ್ಪ ಸರಿಗೆ ಲಂಗಕ್ಕೆ ದುಡ್ಡು ತರದೇ ಇದ್ದರೆ, ಹಿಂತಿರುಗಿ ತೌರಿಗೆ ಹೋಗಿ ಬಿಡೋಣ. ನನ್ನ ತಮ್ಮ ಈಗ ಜಮೀನ್ದಾರನಾಗಿದ್ದಾನೆ. ಸಾಕಷ್ಟು ಸಂಪಾದನೆ ಇದೆ. ಎಂ.ಎಲ್.ಎ. ಆಗಿದ್ದಾನೆ. ಅವನಿಗೆ ನಾನೇನೂ ಭಾರವಾಗುಲ್ಲ. ನೀವೂ ಭಾರವಾಗುಲ್ಲ ಎಂದು ಮಕ್ಕಳನ್ನು ಸಂತೈಸುತ್ತಾ ಇದ್ದಳಂತೆ.

ಇದೆಲ್ಲಾ ಕುಳ್ಳಪ್ಪನ ಕಿವಿಗೆ ಬಿತ್ತಂತೆ. ಆಮೇಲೆ ಮನೆ ಒಳಕ್ಕೆ ಬೆಕ್ಕಿನ ಮರಿಹಾಗೆ ಸದ್ದಿಲ್ಲದೆ ಹೋಗಿದ್ದನಂತೆ. ಆ ದಿನವೇ ಮಾತಾಡದೆ ಉಂಡು, ಮಾತಾಡದೇ ಮಲಗಿದಾಗ, " ನಾಳೆಯೇ ಬಚ್ಚಪ್ಪನ ಗ್ರಾಮಕ್ಕೆ ಹೋಗಿ, ಅಲ್ಲಿ ಆದಷ್ಟು ವಿಮೆ ಮಾಡಿಸಿ, ನನ್ನ ಕೆಲಸ ಉಳಿಸಿಕೊಳ್ಳಬೇಕು, ನನ್ನ ಹೆಂಡತೀನ ಒಲಿಸಿಕೊಳ್ಳಬೇಕು " ಎಂದು ನಿರ್ಧರಿಸಿದ್ದನಂತೆ.

ಮಾರನೇ ದಿನವೇ ಬಚ್ಚಪ್ಪನ ಗ್ರಾಮಕ್ಕೆ ಹೋದನಂತೆ. ಬಚ್ಚಪ್ಪ ಕಾಶೀ ಯಾತ್ರೆಗೆ ಹೋಗಿದ್ದನಂತೆ. ಗೆಳೆಯನಾಗಿದ್ದ ಅವನೇ ಗೈರುಹಾಜರಿ ಆದಮೇಲೆ ಆ ಕುಗ್ರಾಮದ ಯಾರು ತಾನೇ ವಿಮೆ ಎತ್ತುತ್ತಾರೆ. ಬರೀ ಕೈಯಲ್ಲಿ ಬರೀ ಹೊಟ್ಟೆಯಲ್ಲಿ ಹಿಂತಿರುಗುತ್ತಿದ್ದನಂತೆ. ತುಂಬಾ ಬೇಸರ ತುಂಬಿಕೊಂಡಿತ್ತಂತೆ, ಅವನ ಮನಸ್ಸನ್ನು.

ಆಗ ಶೆಟ್ಟಿ ತೇಲಿ ಮುಳುಗುತ್ತಾ ಹೇಳಿದ್ದು ಕೇಳಿಸಿತಂತೆ. ಆ ಶೆಟ್ಟಿಯ

ಬದಲು ನಾನು ಸತ್ತಿದ್ದರೆ, ನಾನೂ ವಿಮೆ ಎತ್ತಿದ್ದರೆ, ಎಷ್ಟು ಚೆನ್ನಾಗಿರುತ್ತಿತ್ತು. ಎಂದು ಅವನಿಗೆ ಅನಿಸಿತಂತೆ.

ಆದರೆ ಕೂಡಲೆ ಇನ್ನೊಂದು ಯೋಚನೆ ಹೊಳೆಯಿತಂತೆ. "ಕುಳ್ಳಪ್ಪ ನೀನಾದರೂ ಮೊದಲಿಂದ ಈಜು ಕಲಿತಿದ್ದಿ. ಈಗ ನೀರಿಗೆ ದುಮುಕಿ, ಶೆಟ್ಟಿಯ ಜುಟ್ಟುಹಿಡಿದು, ಅವನನ್ನು ಪೂರ್ವದ ದಂಡೆಗೆ ಸಾಗಿಸಿದರೆ, ಅವನ ಪ್ರಾಣ ಉಳಿಸಿದರೆ, ವಿಮಾ ಕಂಪನಿಗೆ ಲಕ್ಷ ರೂಪಾಯಿಗಳು ಉಳಿಯುತ್ತೆ. ಇಂತಹ ಒಳ್ಳೇ ಕೆಲಸ ಮಾಡಿದೆ ಅಂತ ವಿಮಾ ಕಂಪನಿಯ ಅಧಿಕಾರಿಗಳು ನಿನ್ನಮೇಲೆ ವಿಶ್ವಾಸ ತೋರಿಸಬಹುದು. ಆ ವಿಶ್ವಾಸ ಹಣದ ರೂಪನ್ನು ಹೊಂದಬಹುದು. ಆ ಹಣದಲ್ಲಿ ಮಕ್ಕಳಿಗೆ ಸರಿಗೆ ಲಂಗ ಹೊಲಿಸಬಹುದು. ಆಗ ಹೆಂಡತಿ ತೌರಿಗೆ ಹೋಗುವುದಿಲ್ಲ. ಅಂದಮೇಲೆ ಉಂಡು ಸುಖವಾಗಿ ಮಲಗಬಹುದು" ಎಂಬ ಯೋಚನೆ.

ತಟ್ಟಂತ ಕುಳ್ಳಪ್ಪ ನೀರಿಗೆ ದುಮುಕಿದನಂತೆ. ಶೆಟ್ಟಿಯ ಮೊಡಶಿರಕ್ಕೆ ಬಲಗಾಲಿನಿಂದ ಒದ್ದನಂತೆ, ಬಲವಾಗಿ ಒದ್ದನಂತೆ. ಆಮೇಲೆ ಜಡತನ ಹಿಡಿದಿದ್ದ ಶೆಟ್ಟಿಯ ಜುಟ್ಟನ್ನು ಹಿಡಿದು, ಕಾವೇರಿಯ ಪಶ್ಚಿಮದ ದಡಕ್ಕೆ ಈಜುತ್ತಾ, ಶೆಟ್ಟಿಯನ್ನು ದಂಡೆ ಮುಟ್ಟಿಸಿದನಂತೆ.

ದಂಡೆಯ ಮೇಲೆ ಶೆಟ್ಟಿಯ ದೇಹವನ್ನು ಹಾಕಿ, ತಾನು ಸ್ಕೌಟ್ ಆಗಿದ್ದಾಗ ಹೇಳಿಕೊಟ್ಟಿದ್ದ ಉಸಿರಾಟವನ್ನು ಪ್ರಯೋಗಿಸಿದನಂತೆ.

ಅಷ್ಟು ಹೊತ್ತಿಗೆ ದೋಣಿಯು ದಡ ಮುಟ್ಟಿತಂತೆ. ದೋಣಿಯಲ್ಲಿದ್ದವರೆಲ್ಲಾ ಕುಳ್ಳಪ್ಪನ ಕಡೆಗೆ ಓಡಿದರಂತೆ.

ಶೆಟ್ಟಿ ಅಷ್ಟು ಹೊತ್ತಿಗೆ ಎಚ್ಚೆತ್ತು ಕೂತಿದ್ದನಂತೆ. ಪೆಂಗುಪೆಂಗಾಗಿ ಸುತ್ತಲೂ ನೋಡುತ್ತಿದ್ದನಂತೆ. ಆ ಜನರೆಲ್ಲರೂ ಕುಳ್ಳಪ್ಪನ್ನ, ಮತ್ತು ಶೆಟ್ಟಿಯನ್ನೂ ನೋಡಿ, ಜಯಕಾರ ಮಾಡಿದರಂತೆ. ಅರ್ಧ ಜನ ಕುಳ್ಳಪ್ಪನನ್ನು ಹೆಗಲ ಮೇಲೇರಿಸಿಕೊಂಡು ವಿಮಾ ಅಧಿಕಾರಿಯ ಮನೆಗೆ ಹೋದರಂತೆ.

ಇನ್ನರ್ಧ ಜನ ಶೆಟ್ಟಿಯನ್ನು ಹೊತ್ತುಕೊಂಡು ಆಸ್ಪತ್ರೆಗೆ ಹೋದರಂತೆ.

ವಿಮಾ ಅಧಿಕಾರಿಯು ಕುಳ್ಳಪ್ಪನ ಸಾಹಸದ ವಿವರಗಳನ್ನು ಕೇಳಿ ತುಂಬಾ ಸಂತೋಷಪಟ್ಟನಂತೆ. ಕುಳ್ಳಪ್ಪನಿಗೆ ತನ್ನ ಜೇಬಿನಿಂದ ತೆಗೆದು ಐನೂರು ರೂಪಾಯಿಗಳನ್ನು ಕೊಟ್ಟನಂತೆ.

" ಕುಳ್ಳಪ್ಪ ! ಇದರಲ್ಲಿ ನಿನ್ನ ಮೂರು ಮಕ್ಕಳಿಗೂ ಮೂರು ಸರಿಗೆ ಲಂಗ ಹೊಲಿಸಿಕೋ " ಎಂದು ಹೇಳಿದನಂತೆ.

ಇಂದಾನೊಂದು ಕಾಲದಲ್ಲಿ, ಸ್ವಾತಂತ್ರ್ಯ ಬಂದ ಅಮಲಿನಲ್ಲಿ ಸರಿಗೆಲಂಗಕ್ಕೆ ಜಂಭ ಬಂದಿದೆಯಲ್ಲಾ. ಮಕ್ಕಳ ಅಳತೆಗಾದರೂ ನೂರು ರೂಪಾಯಾಗುತ್ತಲ್ಲ! ಆಮೇಲೆ ಆ ಮಕ್ಕಳ ತಾಯಿಗೆ ಒಂದು ಸರಿಗೆ ರವಿಕೆಯಾದರೂ ಗೌರೀ ಹಬ್ಬಕ್ಕೆ ಬೇಡವೇ ? ಅದಕ್ಕೆ ಇನ್ನೂರಾದರೂ ಆಗುತ್ತಲ್ಲ, ಹಾಗಿದ್ದಳಲ್ಲ ಕುಳ್ಳಪ್ಪನ ಹೆಂಡತಿ ! ಎದೆಗಾರ್ತಿ !!

ಅಲ್ಲದೆ ಆ ಶೆಟ್ಟಿಯ ಲಕ್ಷ ರೂಪಾಯಿನ ವಿಮೆಯನ್ನು ಆ ಅಧಿಕಾರಿಯೇ ಸ್ವಯಂ ಎತ್ತಿದ್ದನಲ್ಲಾ! ಶೆಟ್ಟಿ ಬದುಕಿದ್ದರಲ್ಲವೇ ಅವನಿಗೆ ವರ್ಷ ವರ್ಷವೂ ತುಸು ಸಂಪಾದನೆಯಾಗುತ್ತಿದ್ದುದು !!!

ಇತ್ತ ಶೆಟ್ಟಿ ಆಸ್ಪತ್ರೆಗೆ ಹೋಗುವ ಹೊತ್ತಿಗೆ ಪೂರ್ಣವಾಗಿ ಎಚ್ಚರಗೊಂಡಿದ್ದ ನಂತೆ.

" ಅಯ್ಯೋ ! ಜೇಬಿನಲ್ಲಿ ಮೂವತ್ತು ರೂಪಾಯಿಗಳಿದೆಯಲ್ಲಾ! ಅದನ್ನೂ ಈ ಆಸ್ಪತ್ರೆಯ ಸಿಬ್ಬಂದಿಯವರು ಲಪಟಾಯಿಸಿ ಬಿಡುತ್ತಾರಲ್ಲಾ! ಅತ್ತ ವಿಮೆ ಹಣ ಲಕ್ಷ ರೂಪಾಯಿ ಸಿಕ್ಕುವುದೂ ಹೋಯಿತು. ಇತ್ತ ಇದ್ದ ಮೂವತ್ತು ರೂಪಾಯಿಯೂ ಹೋಯಿತು. ಮುಂದೆ ವರ್ಷ ವರ್ಷವೂ ವಿಮೆಯ ಕಂತನ್ನು ಕಟ್ಟಲೇಬೇಕು.

" ಅಯ್ಯಯ್ಯೋ ! "

" ಅಯ್ಯಯ್ಯೋ ! ನಾನು ಬದುಕಿ ಸತ್ತೆ ! ಈಗ ದಿಟವಾಗಲೂ ಭೂಲೋಕ ಮುಳುಗಿ ಹೋಯ್ತು"

ಎಂದು ಗೋಳೋ ಎಂದು ಅಳಲಾರಂಭಿಸಿದನಂತೆ.

ಎಂದು ನಮ್ಮ ಅಡುಗೂಲಜ್ಜಿ, ಚೂಟಿಯಾದ ಮೊಮ್ಮಕ್ಕಳಿಗೆ " ಭೂಲೋಕ ಮುಳುಗಿ ಹೋಯ್ತು" ಎಂದು ಕಿರುಚಿದ ಶೆಟ್ಟಿಯ ಕತೆಯನ್ನು ಹೇಳಿದಳಂತೆ.

ಬೆಕ್ಕು ನರಿಯ ಕತೆ

ಇಂದಾನೊಂದು ಕಾಲದಲ್ಲಿ ಗ್ರಾಮದ ಶಿವನ ಗುಡಿಯಲ್ಲಿ ಒಂದು ಬೆಕ್ಕು ಮನೆ ಮಾಡಿಕೊಂಡಿತ್ತಂತೆ. ಗಡವಾ ಬೆಕ್ಕು ಅದು. ಕೇರಿಯ ಹೆಣ್ಣು ಬೆಕ್ಕುಗಳನ್ನು ಸತಾಯಿಸಿ, ಪರಚಿ, ಒಲಿಸಿಕೊಂಡು, ನಮ್ಮ ಕಾಲೇಜಿನ ಬೀದಿ ಕಾಮಣ್ಣ ಗಳಂತೆ, ಒಂದು ತರಹಾ ಬಾಳು ನಡಸುತ್ತಿತ್ತಂತೆ, ಸುಖವಾಗೇನೇ!

ಆದರೂ ಒಂದೊಂದು ಸಲ ಅದಕ್ಕೂ ಯೋಚನೆ ಅವುರಿಕೊಳ್ಳುತ್ತಿತ್ತಂತೆ. "ಇಷ್ಟು ಜನ ಮಕ್ಕಳಾದರೆ, ಅವಕ್ಕೆಲ್ಲಾ ಹೇಗೆ ಹೊಟ್ಟೆ ಹೊರೆಯಲು ಸಾಧ್ಯ! ಜನ ಸಂಖ್ಯೆಯ ಸಿಡಿತವಾದರೆ ಅವುಗಳು ಮುಂದೆ ಬಾಳುವುದಾದರೂ ಹೇಗೆ?" ಎಂಬ ಕೆಟ್ಟ ಯೋಚನೆ. ಆ ಯೋಚನೆ ನಿದ್ರೆಯನ್ನು ತಪ್ಪಿಸುತ್ತಿತ್ತಂತೆ, ಆದ ಕಾರಣವೇ ಆ ಗಡವಾ, ಹೆಂಡತಿ ಮೂರು ನಾಲ್ಕು ಮಕ್ಕಳನ್ನು ಹೆತ್ತರೆ, ಮೆಲ್ಲಗೆ ಕಳ್ಳ ಹೆಜ್ಜೆ ಹಾಕುತಾ್ತ ಬಂದು ಸಿಕ್ಕಿದ ಎಳೆಮರಿಯನ್ನೂ ಕಚ್ಚಿಕೊಂಡು ಹೋಗಿ ತಿಂದುಬಿಡುತ್ತಿತ್ತಂತೆ.

ಇಂತಹ ಗಡವನಿಗೆ ಶಿವನಗುಡಿಯ ಪ್ರಸಾದ ಏನು ಸುಖ ತಾನೇ ಕೊಡ ಬಲ್ಲುದು? ಬಲಿತ ಇಲಿಯನ್ನು ಹಿಡಿದು ಹಬ್ಬ ಮಾಡೋಣ ಎಂದರೆ ಆ ಇಲಿಯೇ ಶಿವನ ರಾಜಕುಮಾರ, ಗಣಪತಿಯ ಒಲವಿನ ವಾಹನ!!

ಅದಕ್ಕೇ ಗಡವ ಶಿವನ ಗುಡಿಯನ್ನು ಬಿಟ್ಟು ರಜಾಕ್ಕೆಂದು ಮೋಜು ಮಾಡ ಲೋಸುಗ, ಗ್ರಾಮದ ಅಂಚಿನಾಚೆ ಇದ್ದ ಕಾಡಿಗೆ ಗತವೈಭವವನ್ನು ಜ್ಞಾಪಿಸಿ ಕೊಂಡು ಹೋಗುತ್ತಿತ್ತಂತೆ.

ಕಾಡಿನಲ್ಲಿ ಒಂದು ನರಿ ಇತ್ತಂತೆ. ಅದಕ್ಕೆ ಕಾಡಿನಲ್ಲಿ ಸ್ವಯಂ ಶಕ್ತಿಯಿಂದ ಶಿಕಾರಿಮಾಡಿ ಜೀವನ ನಡಸುವ ಧೈರ್ಯವಾಗಲೀ, ಶಕ್ತಿಯಾಗಲಿ ಇತ್ತಿಲ್ಲವಂತೆ. ಆದಕಾರಣ ಅದು ತನ್ನ ಬುದ್ಧಿಶಕ್ತಿಯಿಂದ, ಬೇರೆ ಬೇರೆ ಉಪಾಯಗಳನ್ನು ಹೂಡಿ, ಶಕುತಿ ಶ್ರೀಮಂತರನ್ನು ಹಿಂಬಾಲಿಸಿ, ತನ್ನ ಹೊಟ್ಟೆ ತುಂಬಿಕೊಳ್ಳುತ್ತಿತ್ತಂತೆ. ಆಗಲೂ ತನ್ನ ಮನಸ್ಸಿನಲ್ಲೇ "ಈ ಶಕ್ತಿವಂತ ಹುಲಿ ಸಿಂಹಗಳೆಲ್ಲಾ, ತಿಂದು ಉಳಿದ ಎಂಜಲೇ ನನ್ನ ಹೊಟ್ಟೆ ತುಂಬುವುದಾದರೂ, ಈ ಶಕ್ತಿ ಶ್ರೀಮಂತರಿಗೆಲ್ಲಾ ಶಿಕಾರಿ

ಮಾಡಲು ನಾನೇ ದಾರಿ ತೋರುವೆನಲ್ಲಾ! ಅವರಿಗಿಂತ ನಾನೇ ಜಾಣ!" ಎಂದು ಮನಸ್ಸಿಗೆ ಸಮಾಧಾನ ತಂದುಕೊಂಡು ಬಾಳುತ್ತಾ ಇತ್ತಂತೆ.

ಇಂತಹ ನರಿಗೆ ಕಾಡಿನಲ್ಲಿ ತನ್ನ ಸಾಮರ್ಥ್ಯವನ್ನು ತೋರಲು ಆಗದೇ ಇದ್ದುದರಿಂದ, ಅದು ಒಮ್ಮೊಮ್ಮೆ ಕಾಡಿನಂಚಿನಲ್ಲಿದ್ದ, ಶಿವನಗುಡಿಯ ಹತ್ತಿರ ಇದ್ದ ಗುಡಿಸಲುಗಳಿಗೆ ಕಳ್ಳತನದಲ್ಲಿ ಹೋಗಿ, ಕೋಳಿ, ಅಥವಾ ಹುಂಜಗಳನ್ನು ಕಚ್ಚಿಕೊಂಡು ಓಡಿಬಿಡುತ್ತಿತ್ತಂತೆ.

ಒಂದು ದಿನ ಕಾಡಿನಂಚಿನಲ್ಲಿ ಪೂರ್ವಜನ್ಮವನ್ನು ನೆನೆಸಿಕೊಂಡು ಗಡವಾ ಬೆಕ್ಕು ಹೋಗುತ್ತಿದ್ದಾಗ ಉಪಾಯಗಳನ್ನು ಕಲಿತಿದ್ದ, ಊರಿಗೆ ಹೋಗಲು ಹೊರಟಿದ್ದ, ನರಿ ಭೇಟಿಯಾಯಿತಂತೆ.

"ಕ್ಷೇಮವೇ! ಗಡವಾ! ಬೆಕ್ಕೇ! ನಿನ್ನ ರೂಪಿನಲ್ಲಿರುವ ಹುಲಿಸಿಂಹಗಳ ನೆರಳಿನಂತೆ ನಡೆದುಕೊಂಡೇ ನಾನು ಹೊಟ್ಟೆತುಂಬಿಸಿಕೊಳ್ಳುತ್ತಿದ್ದೇನೆ. ಅವರ ಗೋತ್ರದವನೇ ಆದ ನಿನ್ನನ್ನು ಕಂಡರೆ ಮೊದಲು ನಾನು ನಮಸ್ಕಾರ ಮಾಡಬೇಕು. ದಿಟ! ಅದಕ್ಕೇ ವಂದನೆಗಳು, ಎಂದು ಅನ್ನುತ್ತಿದ್ದೇನೆ.

ಆದರೂ ನಿಮ್ಮ ಜಾತಿಯವರಿಗಿಂತ ನನ್ನ ಜಾತಿಗೆ ತುಂಬಾ ಜಾಣತನ ಹೆಚ್ಚಾಗಿದೆ. ಆದ ಕಾರಣವೇ ನನಗೆ ನೂರೂರು ಉಪಾಯಗಳು ಗೊತ್ತಿದೆ. ಪ್ರಾಣಾಪಾಯ ಒದಗಿದಾಗ, ಕಷ್ಟಬಂದಾಗ ಒಂದಲ್ಲ ಹತ್ತಲ್ಲ, ನೂರು ಉಪಾಯಗಳನ್ನು ಹೂಡಿ ಪ್ರಾಣ ಉಳಿಸಿಕೊಳ್ಳಬಲ್ಲೆ. ನಿನಗೆ ಎಷ್ಟು ಉಪಾಯಗಳು ಗೊತ್ತು?" ಎಂದು ಕೇಳಿತಂತೆ.

"ನನಗೆ ಒಂದೇ ಉಪಾಯ ಗೊತ್ತು. ನಿನ್ನ ಹಾಗೆ ಜಾಣನಲ್ಲ ನಾನು. ಆದರೂ ಅದೇನು ಉಪಾಯಗಳನ್ನು ಕಲಿತಿದ್ದಿ. ಕೇಳಾದರೂ ಸಂತೋಷ ಪಡ್ತೀನಿ" ಎಂದು ಗಡವಾ ಬೆಕ್ಕು ಹೇಳಿತಂತೆ.

"ಪ್ರಾಣಾಪಾಯ ಒದಗಿದಾಗ, ಶತ್ರು ಎದುರು ಬಂದಾಗ, ಮೊದಲು ಜೋರುಮಾಡಿ ಆರ್ಭಟಿಸ್ತೀನಿ. ಅಥವಾ ಕಾಣದಹಾಗೆ ಓಡಿಹೋಗ್ತೀನಿ. ಅಥವಾ ಸತ್ತುಬಿದ್ದವರ ತರಹ ಅಂಗಾತ ಬಿದ್ದುಕೋತೀನಿ, ಅಥವಾ ಏನಾದರೂ ಕಟ್ಟುಕತೆ ಹೇಳಿ, ನನ್ನ ಬೆಂಬಲಕ್ಕೆ ಹುಲಿ ಸಿಂಹಗಳು ಹಿಂದೆಯೇ ಇವೆ, ಕೂಗು ಹಾಕಿದರೆ ಅವು ನನ್ನ ನೆರವಿಗೆ ಬರುತ್ತೆ ಎನ್ನುತ್ತೇನೆ. ಇಲ್ಲದೆ ಇದ್ದರೆ ಮರಳಿರೊ ಕಡೆಗೆ ಓಡಿಹೋಗಿ ನಿಲ್ಲುತ್ತೇನೆ. ಶತ್ರು ಹತ್ತಿರ ಬಂದರೆ ಅವನ ಕಣ್ಣಿಗೆ ಜಟ್ಟಂತ

ಮರಳನ್ನು ಝಾಡಿಸುತ್ತೇನೆ. ಹೀಗೆಲ್ಲಾ ನೂರಾರು ಉಪಾಯ ಹೂಡುತ್ತೇನೆ. ಅಷ್ಟು ಬುದ್ಧಿ ಇದೆ ನನಗೆ. ಸಮಯ ನೋಡಿ ಪರಿಸ್ಥಿತಿಗೆ ತಕ್ಕಂತೆ ಹೊಸ ಉಪಾಯವನ್ನು ಯೋಚಿಸುವ ಶಹಣೆ ನಾನು" ಎಂದೆಲ್ಲಾ ಜಂಭ ಕೊಚ್ಚಿ ಕೊಂಡಿತಂತೆ.

"ಹೌದಾ!" ಅಂತ ಗಡವಾ ಬೆಕ್ಕು ಮಂಗಳೂರಿನವರ ತರಹಾ ನಯವಾಗಿ ಉದ್ಗಾರ ಮಾಡಿತಂತೆ.

ಎಲ್ಲಿಂದಲೋ ಬಂದ ವಾಸನೆ ಇಬ್ಬರಿಗೂ ಬಡಿಯಿತಂತೆ. ಕೆಟ್ಟವಾಸನೆ. ಬೇಟೆಗಾರ ಮನುಷ್ಯರ ವಾಸನೆ. ಕಾಡಿನಲ್ಲಿ ನಾಲ್ಕು ಕಾಲುಗಳಮೇಲೆ ನಡೆಯುವ ಪ್ರಾಣಿಗಳಿಗೆಲ್ಲಾ, ಎರಡು ಕಾಲುಗಳಮೇಲೆ ನಡೆಯುವ ಈ ಮನುಷ್ಯ ಪ್ರಾಣಿಯನ್ನು ಕಂಡರೆ ಬಲು ಭಯವಂತೆ.

ಎಲ್ಲಿಂದ ಈ ವಾಸನೆ ಬಂತು? ಎಂದು ಯೋಚಿಸುವ ಹೊತ್ತಿಗೆ ಬೇಟೆಯಾಡುವ ಕಾಡುಕುರುಬರಿಬ್ಬರು ಬಲೆ ಸಹಿತ ಎದುರಿನಲ್ಲೇ ಯಾವ ಮಾಯದಲ್ಲೋ ಬಂದು ನಿಂತರಂತೆ.

ಯಾವ ಯೋಚನೆಯನ್ನೂ ಮಾಡದೆ ಗಡವಾ ಬೆಕ್ಕು ಸರ್‍ರ್ರಂತ ಹತ್ತಿರವೇ ಇದ್ದ ಮರವನ್ನು ಹತ್ತಿ ಎಲೆಗಳ ಮರೆಯಲ್ಲಿ ಹುದುಗಿಕೊಂಡಿತಂತೆ.

ತನ್ನ ಜಾಣತನವನ್ನು ಉಪಯೋಗಿಸಿ ಯಾವ ಉಪಾಯ ಹೂಡಬೇಕು ಎಂದು ನರಿ ಯೋಚಿಸುವ ಹೊತ್ತಿನಲ್ಲಿ, ಬೇಟೆಯ ಕಾಡುಕುರುಬರು, ಬಲೆ ಬೀಸಿ ನರಿಯನ್ನು ಹಿಡಿದಿದ್ದರಂತೆ.

ಕಲಿತಿದ್ದ ಒಂದು ಉಪಾಯದಿಂದ ಗಡವಾ ಬೆಕ್ಕು ಪ್ರಾಣ ಉಳಿಸಿಕೊಂಡಿತು. ಯಾವ ಉಪಾಯ ಹೂಡಲಿ ಅಂತ ಯೋಚನೆಮಾಡ್ತಾ ಜಾಣನರಿ ಪ್ರಾಣ ಕಳೆದುಕೊಂಡಿತು. ಆದ್ದರಿಂದ, "ಮೊಮ್ಮಕ್ಕಳಿರಾ! ಒಂದು ವಿದ್ಯೆ ಕಲಿತು ಬಾಳಿಕೊಳ್ಳಿ, ತುಂಬಾ ಕಲಿತು ತಲೆ ಕೆಡಿಸಿಕೊಂಡು ಪ್ರಾಣ ಬಿಡಬೇಡಿ" ಅಂತ ನಮ್ಮ ಅಡುಗೂಲಜ್ಜಿ ನರಿ ಬೆಕ್ಕಿನ ಕತೆಯನ್ನು ಹೇಳಿದಳಂತೆ.

ನಾಯಿ-ಮಾಂಸದ ತುಂಡಿನ ಕತೆ

ಇಂದಾನೊಂದು ಕಾಲದಲ್ಲಿ ಕಸಾಯಿ ಅಂಗಡಿ ಪಕ್ಕದಲ್ಲೇ ಒಂದು ನಾಯಿ ವಾಸವಾಗಿತ್ತಂತೆ. ಕಸಾಯಿ ಅಂಗಡಿ ಅಂದರೆ ಹಿಂದಿನ ಕಾಲದಲ್ಲಿ ಇತ್ತಲ್ಲ, ಒಬ್ಬ ಸಾಬಿ ಮಾಂಸದ ತುಂಡುಗಳನ್ನು ಲಕ್ಷಣವಾಗಿ ನೇತುಹಾಕಿ ವ್ಯಾಪಾರಮಾಡ್ತಾ ಇದ್ದದ್ದು, ಹಾಗಲ್ಲ. ಈಗ ಹತ್ತೂಜನ ಸೇರುಹಾಕಿ ಸಹಕಾರ ಕಸಾಯಿ ಅಂಗಡಿ ಇಟ್ಟಿದ್ದಾರೆ. ಒಬ್ಬ ಸೆಕ್ರಿಟೆರಿ, ಒಬ್ಬ ಪ್ರೆಸಿಡೆಂಟ್, ಒಬ್ಬ ಖಜಾಂಚಿ, ಇತ್ಯಾದಿ ಅಂಗಡಿಯ ಜವಾಬ್ದಾರಿಯನ್ನು ಹರಿದು ಹಂಚಿಕೊಂಡಿದ್ದರು.

ಇಂತಹ ಹೊಸ ಕಸಾಯಿ ಅಂಗಡಿಯಲ್ಲಿ ನಾಯಿಗೆ ಬಲು ಖುಷಿಯಂತೆ. ಯಾಕೆ ಅಂದರೆ? ಅಂಗಡಿ ಒಳಕ್ಕೆ ನಾಯಿ ಹೋದರೆ ಮೊದಲು ದೊಣ್ಣೆ ತೆಗೆದು ಕೊಂಡು ಹೊಡೆದು ಸಾಬಿ ಅಟ್ಟುತ್ತಿದ್ದ. ಆದರೆ ಈಗ ಅಧ್ಯಕ್ಷರ ಮನೆ ನಾಯಿ ಕಣೋ ಅದು, ಬಾಲಕ್ಕೆ ರಿಬ್ಬನ್ ಕಟ್ಟಿದೆ ನೋಡು ಎಂದು ಅಂಗಡಿಯ ನೌಕರ, ಜವಾನನಿಗೆ ಹೇಳುತ್ತಿದ್ದನಂತೆ. ಹಿಂದಿನ ದೀಪಾವಳಿಯಲ್ಲಿ ಪೇಟೆ ಹುಡುಗರು ನಾಯಿನ ಬಾಲಕ್ಕೆ ಪಟಾಕಿಸರ ಕಟ್ಟಿದಾಗ, ಸೀರೆಯ ತುಂಡೊಂದನ್ನೂ ಕಟ್ಟಿದ್ದರಂತೆ, ಬಾವುಟದಂತೆ ಹಾರಾಡಲಿ ಎಂದು. ಪಟಾಕಿ ಸುಟ್ಟುಹೋಯಿತು. ಲೊಳ್ ಲೊಳ್ ಅಂತ ನಾಯಿ ಹುಚ್ಚುಹಿಡಿದಂತೆ ಓಡಾಡಿತು. ಆದರೆ ಸೀರೆಯ ಒಂದು ತುಂಡು ಬಾಲಕ್ಕೆ ಅಂಟಿಕೊಂಡೇ ಇತ್ತು. ಅದೇ ಈಗ ನಾಯಿಗೆ ಮಂಗಳ ಸೂತ್ರವಾಗಿ ಕಾಪಾಡುತ್ತಿತ್ತು.

ಒಂದು ದಿನ ನಾಯಿ ಸಹಕಾರೀ ಕಸಾಯಿ ಅಂಗಡಿಗೆ ಹೋಯ್ತಂತೆ. ನೌಕರ ಟೈಪಿಸ್ಟ್ ಹತ್ತಿರ ಲಲ್ಲೆ ಹೊಡೆಯುತ್ತಿದ್ದನಂತೆ. ಆಗ ಛಂಗಂತ ನೆಗೆದು ಮಾಂಸದ ದೊಡ್ಡ ತುಣುಕನ್ನು ಕಚ್ಚಿಕೊಂಡು ನಾಯಿ, ಊರಾಚೆ ಓಡಿಬಿಡ್ತಂತೆ.

ಸಹಕಾರಿ ಕಸಾಯಿ ಅಂಗಡಿಯವರೆಲ್ಲಾ “ಅಯ್ಯೋ ಅಯ್ಯೋ ಪೋಲೀಸಿನವರನ್ನು ಕರೆಸಿ, ಮಾಂಸ ಕಳುವಾಯ್ತು” ಎಂದು ಅರಚಿಕೊಂಡರಂತೆ. ಯಾರೂ ನಾಯಿನ ಹಿಂದೆ ಓಡಲಿಲ್ಲ. ಒಂದು ಕಲ್ಲೂ ಎಸೆಯಲಿಲ್ಲವಂತೆ. ಸಹಕಾರಿ ಅಂಗಡಿ, ಯಾರೊಬ್ಬರಿಗೂ ಜವಾಬ್ದಾರಿ ಇಲ್ಲವಂತೆ. ಯಾರೊಬ್ಬರೂ ಓಡಲೇ ಇಲ್ಲವಂತೆ.

ಊರಾಚೆ ಸ್ಮಶಾನದ ಬಳಿ ಇದ್ದ ಬಸವನಕೊಳಕ್ಕೆ ನಾಯಿ ಓಡಿಹೋಯ್ತಂತೆ. ವಾತಾವರಣ ಶಾಂತವಾಗಿತ್ತಂತೆ. ಯಾವೊಂದು ನರಪ್ರಾಣಿಯೂ ಅಲ್ಲಿರಲಿಲ್ಲ ವಂತೆ. ಸುತ್ತಲೂ ನೋಡಿ, ತಾನೊಬ್ಬನೇ ಇದೀನಿ ಎಂದು ಖಂಡಿತ ಮಾಡಿ ಕೊಂಡು, ಕೊಳದ ಕಟ್ಟೆಮೇಲೆ ನಾಯಿ ನಿಂತಿತಂತೆ.

ಕೊಳವೂ ಶಾಂತವಾಗಿತ್ತಂತೆ. ಕನ್ನಡಿ ಹಾಗಿತ್ತಂತೆ ಕೊಳದ ನೀರು. ನೀರಿನ ಕಡೆಗೆ ನಾಯಿ ತಲೆ ಹಾಕಿತ್ತಂತೆ. ಮಾಂಸ ತಿಂದಮೇಲೆ ಕುಡಿಯುಕ್ಕೆ ನೀರು ಚೆನ್ನಾಗಿರುತ್ತ್ಯೆ? ಅಂತ ನೋಡುಕ್ಕೆ. ಆದರೆ ಅಲ್ಲಿ ಅದಕ್ಕೆ ಕಾಣಿಸಿದ್ದೇನು? ಇನ್ನೊಂದು ನಾಯಿ, ಇನ್ನೊಂದು ಮಾಂಸದ ತುಣುಕನ್ನು ಕಚ್ಚಿಕೊಂಡಿದೆ! ಎಲ ಎಲಾ! ಕಸಾಯಿ ಅಂಗಡೀಲಿ ಛಪಾವಣೆ ಮಾಡಿ ಮಾಂಸದ ತುಣುಕನ್ನು ತಂದೆ. ಪೋಲೀಸಿನವರ ಕಣ್ಣು ತಪ್ಪಿಸಿಕೊಂಡು ಓಡಿಬಂದೆ, ಇಲ್ಲದೆ ಇದ್ದರೆ ಅವರಿಗೂ ಒಂದುಪಾಲು ಕೊಡಬೇಕಾಗಿ ಬರುತ್ತಿತ್ತು. ಇಷ್ಟೆಲ್ಲಾ ಕಷ್ಟಪಟ್ಟು ನಾನು ಸಂಪಾದಿಸಿದರೆ, ಕೊಳದಲ್ಲಿರುವ ಈ ನಾಯಿ ಅದೇ ತರಹ ಮಾಂಸದ ತುಣುಕನ್ನು ಪ್ರಯಾಸವಿಲ್ಲದೆ ಗಿಟ್ಟಿಸಿದೆಯಲ್ಲಾ ಅಂತ ಹೊಟ್ಟೆ ಉರಿಯಿತಂತೆ.

ಅದರ ಆಸೆ ಅತಿಯಾಯಿತಂತೆ.

ಕೊಳದಲ್ಲಿದ್ದ ನಾಯನ್ನು ಬೆದರಿಸಿ ಆ ಮಾಂಸದ ಆ ತುಣುಕನ್ನೂ ಲಪಟಾ ಯಿಸಬೇಕು ಎಂದು ಅತಿ ಆಸೆಯಾಯ್ತಂತೆ.

ಭೌ ಭೌ ಎಂದು ಜೋರಾಗಿ ಬೊಗಳಿ, ಕೊಳದನಾಯನ್ನು ಹೆದರಿಸಿತಂತೆ. ತನ್ನ ಬಾಯಲ್ಲಿದ್ದ ಮಾಂಸದ ತುಣುಕು ಕೊಳಕ್ಕೆ ಬಿದ್ದುಹೋಯಿತು. ಆ ರಭಸಕ್ಕೆ ಕೊಳದನೀರು ಕದಡಿಹೋಯ್ತು. ಹಾಗಾಗಿ ಕೊಳದಲ್ಲಿದ್ದ ನಾಯಿ, ಕಟ್ಟೆಮೇಲಿದ್ದ ನಾಯಿಗೆ ಕಾಣಿಸಲೇ ಇಲ್ಲವಂತೆ.

"ದರಿದ್ರಮುಂಡೇದು! ನನ್ನ ನೋಡಿ ಹೆದರಿಕೊಂಡು ಕೊಳದ ತಳಕ್ಕೆ ಓಡಿ ಹೋಗಿದೆ. ನಾನೂ ಮುಳುಗಿ ಅದರೊಡನೆ ಕಾದಾಡಿ ಮಾಂಸದ ತುಣುಕು ಗಳನ್ನು ತಿರುಗಿ ಪಡೆಯಲೇಬೇಕು" ಎಂದು ಯೋಚಿಸಿ, ಕೊಳಕ್ಕೆ ದುಮುಕಿತಂತೆ.

ಕೊಳದೊಳಗೆ ಏನಾಗಿದೆ? ಅಂತ. ಮಾಂಸದ ತುಣುಕು, ತಳಕ್ಕೆ ಬಿದ್ದಾಗ, ಕೊಳದಲ್ಲೇ ತುಂಬಾದಿನಗಳಿಂದ ಪಾರುಪತ್ಯ ಮಾಡುತ್ತಿದ್ದ ಮೀನು ಅದನ್ನು ನೋಡಿತಂತೆ. ಚಕ್ಕಂತ ಬಂದು ಅದನ್ನು ತನ್ನ ಬಾಯಲ್ಲಿ 'ಗಕ್' ಅಂತ ಕಚ್ಚಿ ಕೊಂಡಿತಂತೆ. ಮಾಂಸದ ತುಣುಕಿನಲ್ಲಿದ್ದ ಮೂಳೆ ಮೀನಿನ ಅಂಗಳವನ್ನು

ಬಲವಾಗಿ ಚುಚ್ಚಿಕೊಂಡಿತಂತೆ. ನೋವಿಗೆ, ಮೀನು ಬಾಯಿ ಬಡಕೊಳ್ಳುಕ್ಕೂ ಆಗಲಿಲ್ಲವಂತೆ, ಪಾಪ!

ಆ ಹೊತ್ತಿಗೆ ಕಟ್ಟೆಮೇಲಿದ್ದ ನಾಯಿ ಕೊಳದ ತಳಕ್ಕೆ ಬಿದ್ದಿತಂತೆ. ಊರ ಕಂತ್ರಿನಾಯಿ ಅದು, ಎಲ್ಲಾ ಆಟಾನೂ ಕಲಿತೇ ಇತ್ತಂತೆ. ಈಜೋದು ಅಂದರೆ ನೀರು ಕುಡಿಯದೇ ಇರೋಹಾಗಂತೆ ಅದಕ್ಕೆ. ಹಳೇಕತೆಯ ನಾಯಿನ ತರಹ ಅತಿ ಆಸೆ ಗತಿ ಕೆಡಿಸಿತು, ಇದ್ದ ಮಾಂಸದ ತುಂಡೂ ಹೋಯಿತು, ಅಂತ ಅಳೋಜಾತಿ ಯಲ್ಲವಂತೆ. ಮುನ್ನುಗ್ಗಿ ನಮ್ಮ ರಾಜಕಾರಣ ಪುಢಾರಿಗಳ ತರಹ ಕಾದಾಡಿ ಕಚ್ಚಾಡಿ ಗುದ್ದಾಡೋದಂತೆ.

ಕೊಳದ ತಳದಲ್ಲಿ ಮೀನು ಕಾಣಿಸಿತು ನಾಯಿಗೆ. ಅದನ್ನೇ ಕಚ್ಚಿಕೊಂಡು ಮೇಲಕ್ಕೆದ್ದಿತು ನಾಯಿ. ಕಟ್ಟೆಮೇಲಕ್ಕೆ ಹಾರಿ ತುಸುದೂರ ಹೋಗಿ ಮೈ ಝಾಡಿಸಿ, ಹುಲ್ಲಿನ ಮೇಲೆ ಮೀನನ್ನು ಇಟ್ಟಿತಂತೆ. ಆಗಲೇ ನಾಯಿಗೆ ಮೀನನ್ನು ನೋಡಲು ಅವಕಾಶ ಸಿಕ್ಕಿದ್ದಂತೆ. ಭಾರಿ ಮೀನಂತೆ. ಅದರ ಬಾಯಲ್ಲಿ ತಾನು ಲಪಟಾಯಿಸಿದ್ದ ಮಾಂಸದ ಚೂರೂ ಇತ್ತಂತೆ.

ಓಡಿ, ನೀರಿಗೆಬಿದ್ದು, ಈಜಿ, ಎದ್ದು, ನಾಯಿಗೆ ಸಾಕಷ್ಟು ವ್ಯಾಯಾಮ ವಾಗಿತ್ತಂತೆ. ಕಾರಣ ಹಸಿವೂ ಚುರ ಚುರ ಅಂತಿತ್ತಂತೆ. ಮಾಂಸದ ಚೂರನ್ನೂ ಮೀನನ್ನೂ ತಿಂದು, ನಂತರ ಉಳಿದಿದ್ದ ಆ ಮೂಳೆಯನ್ನು ಕಡಿಯುತ್ತಾ ಹಾಯಾಗಿ ಮಲಗಿತಂತೆ.

ಅದಕ್ಕೇ ಮೊಮ್ಮಕ್ಕಳಿರಾ! ಅತಿ ಆಸೆ ಗತಿ ಕೆಡಿಸುತ್ತೆ ಎಂದು ಯಾರಾದರೂ ಹೇಳಿದರೆ ನಂಬಬೇಡಿ. ಅದು ಹಳೇಕಾಲಕ್ಕೆ ಆಗಿಹೋಯಿತು. ಈಗ ಆಸೆ ಏರಿದಷ್ಟು, ಪುಢಾರಿಗಳಂತೆ ಭವ್ಯ ಜೀವನ ಮಾಡಬಹುದು, ಎಂದು ನನ್ನ ಅಡುಗೂಲಜ್ಜಿ ನಾಯಿ – ಮಾಂಸದ ತುಂಡಿನ ಕತೆ ಹೇಳಿದಳಂತೆ.

"ಕಡುಬು ಕಡುಂಬಿನ" ಕತೆ

ಇಂದಾನೊಂದು ಕಾಲದಲ್ಲಿ ಮಲೆನಾಡಿನ ಸೆರಗಿನಲ್ಲಿರುವ ಜೋಡಿಹಾಳ್‌ನಲ್ಲಿ ಯೆಂಕಪ್ಪ ಎನ್ನುವವನೊಬ್ಬನಿದ್ದನಂತೆ. ಸ್ವಲ್ಪ ಝೋರಿನ ಆಸಾಮಿ, ಯೌವ್ವನ ಉಕ್ಕುತಿತ್ತು, ಬೆಟ್ಟ ಇಳಿದು ಪಶ್ಚಿಮ ಕಡಲತೀರಕ್ಕೆ ಹೋಗಿ ವ್ಯಾಪಾರಮಾಡು ತ್ತಿದ್ದನಂತೆ. ಕಾರಣ ಮೂರು ವರ್ಷಗಳಲ್ಲಿ ಅಪ್ಪ ಗಳಿಸಿಟ್ಟಿದ್ದ ಆಸ್ತಿಪಾಸ್ತಿಗಳ ನ್ನೆಲ್ಲಾ ಅಡವಿಟ್ಟು, ಕೆಟ್ಟು ಪಟ್ಟಣ ಸೇರಿದನಂತೆ.

ಮತ್ತೆ ಇನ್ನೇನು ತಾನೇ ಆದೀತು? ಕಡಲತೀರದ ಮಂಗಳೂರು ಮಲ್ಲಿಗೆ ಮುಡಿದವರು ವ್ಯಾಪಾರಕ್ಕೆ ಬಂದವರನ್ನು ಸುಮ್ಮನೆ ಬಿಟ್ಟುಕೊಡುತ್ತಾರೆಯೇ?

ಪಟ್ಟಣ ಸೇರಿದಮೇಲೆ, ಚುರುಕಾದನಂತೆ ಯೆಂಕಪ್ಪ. ತನ್ನ ಗ್ರಾಮಕ್ಕೆ ಹೋಗುವುದು, ಅಲ್ಲಿದ್ದ ಜನರಿಗೆ, "ನಿಮ್ಮ ಕೆಲಸ ರಾಜಧಾನಿಯಲ್ಲಿ, ಸರಕಾರ ದಲ್ಲಿ, ಏನಾದರೂ ಆಗಬೇಕಾಗಿದ್ದರೆ, ಅರ್ಜಿ ಬರೆದು ಹಾಕಿದರೆ ಸಾಲದು. ಅದರ ಪ್ರತಿಯನ್ನೂ ನನ್ನ ಕೈಲಿ ಕೊಡಿ. ನಾನು ಸ್ವತಃ ಹೋಗಿ, ಖುದ್ದಾಗಿ ಇದ್ದು, ಕೆಲಸಮಾಡಿಸುತ್ತೇನೆ. ಅಂದು ಅಂದಿನ ಖರ್ಚು ಕೊಟ್ಟರೆ ಸಾಕು, ಬೇರೇನೂ ಹಣ ಬೇಡ" ಎಂದು ಹೇಳಿದನಂತೆ. ಅವರೂ ಅಲ್ಪವೋ ಸ್ವಲ್ಪವೋ ಕೊಟ್ಟು, ಅರ್ಜಿಗಳ ಪ್ರತಿಗಳನ್ನು ಯೆಂಕಪ್ಪನಿಗೆ ಕೊಡುತ್ತಿದ್ದರಂತೆ. ನಿಷ್ಠಾವಂತ ಯೆಂಕಪ್ಪ, ಈಗ. ಅವರ ಕೆಲಸವನ್ನೆಲ್ಲಾ ಶ್ರದ್ಧೆಯಿಂದ ಮಾಡುತ್ತಿದ್ದನಂತೆ.

ಅಂದಮೇಲೆ ಕೆಲವೇ ದಿನಗಳಲ್ಲಿ ಯೆಂಕಪ್ಪ ತನ್ನ ಊರಿನಲ್ಲಿ ಎಲ್ಲರಿಗೂ ಬೇಕಾದವನಾದನಂತೆ. ಆ ಬಾರಿ ಚುನಾವಣೆಗೆ ನಿಂತಾಗ ಜಯಭೇರಿಯನ್ನು ಆನೆಮೇಲಿಟ್ಟು ಹೊಡಿಸಿದನಂತೆ. ಆನೆಯೇ ಅವನ ಚುನಾವಣಾ ಚಿಹ್ನೆಯಂತೆ.

ರಾಜಧಾನಿಗೆ ಬಂದಾಗ ಹಿರಿಯ ನಾಯಕ ಎಂದು ಎಲ್ಲರೂ ಹೂವಮಾಲೆ ಹಾಕಿದರಂತೆ. ಯಾವ ಸಾರ್ವಜನಿಕ ಸಮಾರಂಭಕ್ಕೂ ಆಹ್ವಾನ ಹೋಗು ತ್ತಿತ್ತಂತೆ.

ದೊಡ್ಡ ಬಂಗಲೆ, ಪುಕಟ್ಟು ಮೋಟಾರು. ಆಳು, ಕಾಳು, ಎಲ್ಲವೂ ಅವನ ಪಾಲಂತೆ. ಅಡಿಗೆಯವರು ಪರಿಚಾರಕರೂ ಗಿಲಿಗಿಲಿ ಇದ್ದರಂತೆ. ಹೀಗಾಗಿ ಅವನ ಹೆಂಡತಿ, ಆರೂ ಹೆಣ್ಣುಮಕ್ಕಳು, ಮೂರೂ ಗಂಡುಮಕ್ಕಳು ಮನೆಯಲ್ಲಿ ಕೆಲಸವಿಲ್ಲದೆ, ತಿಂದು ತೇಗಿ ಕೊಬ್ಬಿ ಬೆಳೆಯುತ್ತಿದ್ದರಂತೆ.

ಯೆಂಕಪ್ಪನ ಸ್ನೇಹಿತರು ಮನೆಗೆ ಬಂದಾಗಲೆಲ್ಲಾ, ಕಾಫಿ ತಿಂಡಿ ತಂದು ಕೊಡಲು ಮೊದಲ ಮಗಳು ಚಿನ್ನಮ್ಮನೇ ಕಾಣಿಸಿಕೊಳ್ಳುತ್ತಿದ್ದಳಂತೆ.

ಆದರದ ಆತಿಥ್ಯವನ್ನು ಸ್ವೀಕರಿಸಿದ ಸ್ನೇಹಿತರು " ಎಷ್ಟು ಚೆನ್ನಾಗಿದೆ, ಚಿನ್ನಮ್ಮಾ! ನೀ ತಂದುಕೊಟ್ಟ ತಿಂಡಿಯ ರುಚಿಯನ್ನು ಎಂದೂ ಉಂಡಿದ್ದಿಲ್ಲ; ಆ ಕಾಫಿಯೋ ಇಂದ್ರ ಯೋಗ್ಯ! " ಎಂದು ಹೊಗಳುತ್ತಿದ್ದರಂತೆ. ಚಿನ್ನಮ್ಮ ತುಸು ಮಾಸಲು ಕಪ್ಪಾಗಿದ್ದರೂ ಅಷ್ಟು ಹೊರವಾಗಿ ಮೈತುಂಬಿಕೊಂಡಿದ್ದಳಂತೆ.

" ಚಿನ್ನಿ ಇದ್ದರೆ ಮನೆಯ ಯೋಚನೆಯೇ ನನಗಿಲ್ಲ. ಎಲ್ಲವನ್ನೂ ನಿಭಾಯಿಸಿಕೊಂಡು ಹೋಗ್ತಾಳೆ" ಎಂದು ಯೆಂಕಪ್ಪ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದನಂತೆ. ಅವನ ತದ್ರೂಪೇ ಅಲ್ಲವೇ ಚೊಚ್ಚಲ ಮಗಳು!

" ಅಡಿಗೆ ಭಟ್ಟ ಮಾಡಿದ್ದನ್ನು ನಾನು ತಂದುಕೊಡ್ತೀನಿ, ತಿಂಡಿ ಊಟ ರುಚಿಯಾಗಿದ್ದರೆ, ಅವನನ್ನು ಹೊಗಳಬೇಕು, ಅವನ ಹಾಗೆ ಅಡಿಗೆ ಮಾಡಲು ನನಗೆ ಬರುಲ್ಲ" ಎಂದು ಚಿನ್ನಮ್ಮ ಸೌಜನ್ಯದಿಂದ, ಹೇಳುವಾಗ ಅವಳ ಮುಖ ಕೆಂಪೇರಬೇಕಾಗಿತ್ತು. ಆದರೆ ವರ್ಣದೋಷದಿಂದ ತಿಳಿಹಸಿರಾಗಿ ಕಾಣಿಸುತ್ತಿತ್ತಂತೆ.

" ಏನು ಸೆಂದಾಗಿ ಅಂತೀಯಲ್ಲೇ" ಅಂತ ಒಬ್ಬ ಅತಿಥಿ ಚಿನ್ನಮ್ಮನನ್ನು ನೋಡಿ ಉದ್ಗಾರ ತೆಗೆದದ್ದೂ ಉಂಟು. ಆದರೆ ಯಾರಿಗೂ ಕೇಳಿಸದಂತೆ ಅಂದಿದ್ದನಂತೆ.

* * * * *

ಒಂದು ದಿನ, ಷಹರಿನ ಹೊಸ ಸ್ಮಶಾನವೊಂದನ್ನು ಉದ್ಘಾಟಿಸಬೇಕಾದಾಗ, ನಾಯಕ ಯೆಂಕಪ್ಪನನ್ನೇ ಕರೆದಿದ್ದರಂತೆ. ಯಥಾಪ್ರಕಾರ, ಬಾಜಾ ಬಜಂತ್ರಿ, ಹೂವು ಹಾರ, ಉದ್ಘಾಟನೆ, ಎಲ್ಲವೂ ಆದಮೇಲೆ, ಉಪಾಹಾರದ ಏರ್ಪಾಡಿತ್ತಂತೆ. ಸ್ಮಶಾನದ ಪಕ್ಕದಲ್ಲೇ ಇದ್ದ ಹೋಟಲಿನವ ಉಪಾಹಾರವನ್ನು ಒದಗಿಸಿದ್ದನಂತೆ. ನವಗ್ರಹದ ಧಾನ್ಯಗಳೆಲ್ಲವನ್ನೂ ಆತ ಇಡಲಿಹಿಟ್ಟಿಗೆ ಹಾಕಿ, ಬರುವವರ ಹೆಸರು ಕೇಳಿದಮೇಲೆ, ತುಸು ಬೆಳ್ಳುಳ್ಳಿಯನ್ನೂ ಹಗೂರಾಗಿ ಜಡಿದು, ಕಡುಬುಮಾಡಿ, ಸರಬರಾಜಿಸಿದನಂತೆ.

ಒಂದು ಕಡುಬು ತಿಂದನಂತೆ ಯೆಂಕಪ್ಪ. ಬಲು ಪಸಂದೈತಿ ಅಂದನಂತೆ.

ಎರಡು ಕಡುಬು ತಿಂದನಂತೆ ಯೆಂಕಪ್ಪ. ಹೊಟ್ಟೆ ಉಬ್ಬೈತಿ ಅಂದನಂತೆ.

ಮೂರನೆ ಕಡುಬು ತಿಂದನಂತೆ, ಯೆಂಕಪ್ಪ.

ಆಗ ಆತಿಥೇಯರು ನೋಡಿದರು, ಯೆಂಕಪ್ಪನ ಮುಖವನ್ನು. "ಇನ್ನೊಂದು ಕಡುಬು ತಿಂದರೆ ಈ ಹೊಸ ಸ್ಮಶಾನದಲ್ಲಿ ಯೆಂಕಪ್ಪನದೇ ಮೊದಲ ಹೆಣ ಬೀಳುತ್ತೇನೋ?" ಎಂದು ಅವರಿಗೆ ಗಾಬರಿಯಾಯಿತಂತೆ. ಕಾರಣ ಯೆಂಕಪ್ಪನ ಕಿವಿಯಲ್ಲಿ "ಕಡುಬು ಮುಗಿದು ಹೋಯಿತು" ಎಂದು ಕಾರ್ಯದರ್ಶಿ ಪಿಸುದನಿಯಲ್ಲಿ ಹೇಳಿದನಂತೆ.

* * * * *

ಮೂರನೆ ದಿನ ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಯೆಂಕಪ್ಪ ಎಚ್ಚತ್ತಾಗ, ಚಿನ್ನಿ ಕಾಫಿ ಕುಡಿಸಿದಳಂತೆ. "ಅಪ್ಪಾ! ಅದ್ಹೆಂಗೆ ಅಷ್ಟು ಸೊಂಪಾಗಿ ನಿದ್ದಿ ಬಿದ್ದಿರಿ" ನನಗೆ ಗಾಬರಿಯಾಗಿ ಡಾಕ್ಟರನ್ನು ಬೆಳಗಿನ ಝಾಮು ಕರೆಸಿದ್ನಿ. ನಿಮ್ಮ ಗೊರಕೆ ಕೇಳಿ ಭಯ ಆತು. ಡಾಕಟರು "ನಿದ್ದೆ ಬಂದಿದೆ ಎಬ್ಬಿಸಬೇಡಿ" ಎಂದಾಗ ತುಸು ಧೈರ್ಯ ಬಂತು. ಈಗ ಚೆಂದಾಗಿದೀರಾ? ಏನಾದರೂ ಉಣ್ತೀರಾ" ಎಂದು ಕೇಳಿದಳಂತೆ.

ಆ ಸಂಜೆ ತನಕ ಯೆಂಕಪ್ಪ ಒಂದು ತರಹಾ ಅಜಗರದಂತೆಯೇ ಮನೆಯಲ್ಲಿ ಉರುಳಾಡುತ್ತಿದ್ದನಂತೆ.

ರಾತ್ರಿ ಬಾಣಂತಿ ಲೇಹವನ್ನು ಸ್ವಲ್ಪ ತಿಂದು, ಊಟಮಾಡದೆ ಮಲಗಿದನಂತೆ.

ಬೆಳಗಾದಾಗ ಯೆಂಕಪ್ಪ, ಜಿಂಕೆಯಂತೆ ಜಿಗಿದಾಡಿದನಂತೆ. ಅಷ್ಟು ಹಗೂರಾಗಿದ್ದನಂತೆ, ಬೆಳಗಿನ ದೇಹಶಾಂತಿಯ ಕಾರ್ಯ ಮುಗಿಸಿದ ನಂತರ. ಬಾಣಂತಿ ಲೇಹ ಅಂತ ಅವ ತಿಂದಿದ್ದು ಅಶ್ವಗಂಧಿ ಲೇಹ್ಯವಂತೆ; ಚಿನ್ನಮ್ಮನ ತಪ್ಪು. ಅಮ್ಮ ಮಲಗಿದ್ದ ಕೋಣೆ ಕತ್ತಲು ಕತ್ತಲಾಗಿತ್ತಂತೆ. ಅದಕ್ಕೇ ಲೇಹ್ಯದ ಡಬ್ಬಿಯನ್ನು ಎತ್ತುವಾಗ ತಪ್ಪುಮಾಡಿದ್ದಳಂತೆ.

"ನಾಷ್ಟಾ"ಕ್ಕೆ ಕೂತನಂತೆ, ಯೆಂಕಪ್ಪ. ಅಡಿಗೆ ಭಟ್ಟ "ಉಪ್ಪಿಟ್ಟು, ಕಾಫಿ" ತಂದಿಟ್ಟನಂತೆ. ಅದನ್ನು ತಿಂದನಂತೆ ಯೆಂಕಪ್ಪ.

ಜೀವ ಬಂದಹಾಗಾಯ್ತಂತೆ ಯೆಂಕಪ್ಪನಿಗೆ. ಧಾರಾಳವಾಗಿ ಉಸಿರು ಬಿಟ್ಟನಂತೆ. ಹಲಸಿನತೊಳೆ ತಂದಿಟ್ಟನಂತೆ ಅಡಿಗೆಯ ಭಟ್ಟ, ತಟ್ಟೆಯಲ್ಲಿ.

ಒಂದು ತೊಳೆ ಬಾಯಿಗೆ ಹಾಕಿ, ಅಗಿದು ನುಂಗಿ, ಯೆಂಕಪ್ಪ ಅಂದನಂತೆ "ಇವತ್ತು ಸಂಜೆ, ಅದನ್ನು ಮಾಡು, ನಿನ್ನೆ ತಿಂದೆನಲ್ಲಾ ಅದನ್ನು ಹಾಗೇ ಮಾಡು?" ಅಂತ. "ಯಾವುದನ್ನು ಸಾಹೇಬ್ರ, ಹೇಗೆ ಮಾಡೋದು?" ಎಂದು

ಅಡಿಗೆ ಭಟ್ಟ ತಲೆ ಕೆರೆದುಕೊಂಡನಂತೆ. ಅಡಿಗೆ ಭಟ್ಟನ ತಲೆ ತುಂಬಾ ಹೊರವಾದ ಗುಂಗುರು ಕೂದಲು. ಕೆರೆದಷ್ಟೂ ಹಿತ ಅವನಿಗೆ.

ಯೆಂಕಪ್ಪ ತನ್ನ ಬಟ್ಟತಲೆಯನ್ನು ನೀವಿಕೊಂಡ. " ಅದು "—" ಅದರ ಹೆಸರು" ಜ್ಞಾಪ್ತಿಗೆ ಬರಲಿಲ್ಲ, ಅದಕ್ಕೇ ಕೋಪಬಂತು.

ಫಳೀರ್ ಅಂತ ಅಡಿಗೆ ಭಟ್ಟನ ಕೆನ್ನೆಗೆ ಹೊಡೆದ.

" ಮಂಕು ಮುಂಡೇದೇ ಅದೂ ಗೊತ್ತಿಲ್ಲವೇ ? " ಎಂದು ಅಂದು ಹೊರ ಕೋಣೆಗೆ ಹೋದ.

* * * * *

ಕೆನ್ನೆ ತಡವರಿಸಿಕೊಳ್ಳುತ್ತಾ ಅಡಿಗೆ ಭಟ್ಟ, ಅಡಿಗೆ ಮನೆಗೆ ಹೋದನಂತೆ. " ಇವತ್ತೇ ರಾಜಿನಾಮೆ ಕೊಟ್ಟು ಹಳ್ಳಿಗೆ ಹೋಗೋದು ವಾಸಿ, ಅಂಬಲಿಯೋ ತುಂಬೆಸೊಪ್ಪೋ ದೇವರು ಕೊಟ್ಟದ್ದನ್ನು, ಹೆಂಡತಿ ಮಕ್ಕಳಜತೆ ಉಂಡರೆ ಸಾಕು," ಎಂದು ನಿರ್ಧಾರ ಮಾಡುತ್ತಿದ್ದನಂತೆ. ಸಂಜೆ ಹೊರಟು ಹೋಗೋಣ ಅಂತ ಅಡುಗೆಗೆ ಶುರುಮಾಡಿದನಂತೆ.

ಆಗ ಅಡಿಗೆ ಮನೆಗೆ ಚಿನ್ನಮ್ಮ ಬಂದಳಂತೆ. ಸುಮಾರು ೨ ತಾಸು ಆಗಿರ ಬಹುದಂತೆ ಆಗ, ಅಡಿಗೆಭಟ್ಟ ಪೆಟ್ಟುತಿಂದು. ಭಟ್ಟನ ಮುಖ ನೋಡಿದಳಂತೆ. ಬಲಗೆನ್ನೆ ಊದಿಕೊಂಡಿತ್ತಂತೆ. ಅದನ್ನು ನೋಡಿ ಚಿನ್ನಮ್ಮನಿಗೆ ತುಂಬಾದುಃಖ ವಾಯಿತಂತೆ. ತನ್ನ ಬೆರಳುಗಳಿಂದ ಊದಿದ ಕೆನ್ನೆಯನ್ನು ತಡವರಿಸಿ, " ತುಂಬಾ ನೋವಾಗುತ್ತದೆಯೇ ? ಬಿಸಿಹಸಿ ಶಾಖ ಕೊಡಲೆ " ಎಂದು ಆದರದಿಂದ ಕೇಳಿದ ಳಂತೆ. ಬಿಸಿಹಸಿ ಶಾಖ ಕೊಟ್ಟಳಂತೆ.

ಅಡಿಗೆ ಭಟ್ಟನಿಗೆ ನೋವು ಕಡಿಮೆಯಾಗಿದ್ದಿರಬೇಕು. ಮುಖದಲ್ಲಿ ಗೆಲುವು ಕಂಡು ಬಂದಿತಂತೆ. ಅದನ್ನು ನೋಡಿ ಚಿನ್ನಮ್ಮನಿಗೆ ಸಂತೋಷವಾಯ್ತಂತೆ. ಸಲಿಗೆ ಯಥಾಪ್ರಕಾರ ಉಕ್ಕಿತಂತೆ.

"ಏನೋ ಇದು, ನಿನ್ನ ಕೆನ್ನೆ ಕಡುಬಿನಂತೆ ಉಬ್ಬಿದೆ, ಯಾಕೋ" ಎಂದಳಂತೆ.

ಅಡಿಗೆ ಭಟ್ಟನ ಕಿವಿ ನಿಮಿರಿತಂತೆ. ಕಣ್ಣು ಹೊಳಪಿತಂತೆ. ಸಾಹೇಬ್ರು ಅದು ಎಂದಿದ್ದು ಕಡುಬು ಇರಬಹುದು ಎಂದು ಹೊಳೆಯಿತಂತೆ

ಚಿನ್ನಮ್ಮನ ತೋಳುತೆಕ್ಕೆಯಿಂದ ಬಿಡಿಸಿಕೊಂಡು, ಅಡಿಗೆ ಮನೆ ಚಿಲಕ ಬಿಚ್ಚಿ, ಅಡಿಗೆ ಭಟ್ಟ ನೇರನೆ ಬಂಗಲೆಯ ಹೊರಕೋಣೆಗೆ ಓಡಿದನಂತೆ.



ಸ್ನೇಹಿತರೊಂದಿಗೆ ಯೆಂಕಪ್ಪ ಯಾವುದೋ ಗಹನವಾದ ವಿಷಯವನ್ನು ಚರ್ಚಿಸುತ್ತಿದ್ದನಂತೆ.

"ಸಾಹೇಬ್ರು, ಅದು ಎಂದರೆ ಕಡುಬಾ" ಎಂದನಂತೆ ಅಡಿಗೆ ಭಟ್ಟ, "ಹ್ಞಾ ಕಣೋ, ಕಡುಬು, ಈಗ ನೆನಪಾಯಿತು. ಸ್ಮಾಶಾನದ ಸಮಾರಂಭದಲ್ಲಿ ನಿನ್ನೆ ಫಲಾಹಾರಕ್ಕೆ ಬಡಿಸಿದರು" ಎಂದನಂತೆ, ಯೆಂಕಪ್ಪ, ಸಂತಸದಿಂದ.

"ಸ್ಮಾಶಾನದ ಹತ್ತಿರಾನಾ, ನರಸಿಂಹ್ಮಯ್ಯನ ಹೋಟಲಾ, ಅಲ್ಲೇ ನಾನು ಮಾಣಿಯಾಗಿದ್ದದ್ದು. ನವಧಾನ್ಯದ ಕಡುಬು, ಇವತ್ತು ರಾತ್ರಿ ಮಾಡಿ ಬಡಿಸುತ್ತೀನೆ" ಎಂದು ನಗ್ತಾ ನಗ್ತಾ ಅಡಿಗೆ ಭಟ್ಟ ಹಿಂತಿರುಗಿದನಂತೆ.

ಅಡಿಗೆ ಮನೆಯಲ್ಲಿ ಅಡಿಗೆ ಭಟ್ಟ ಚಿನ್ನಮ್ಮನಿಗೆ ನಡೆದುದೆಲ್ಲವನ್ನೂ ವಿವರಿಸಿದನಂತೆ. ಇಬ್ಬರೂ ನಕ್ಕು ನಗುತ್ತಾ ನವಧಾನ್ಯದ ಕಡುಬನ್ನು ತಯ್ಯಾರಿಸಿದರಂತೆ. ಯೆಂಕಪ್ಪ ತುಂಬಾ ಸಂತೋಷಪಟ್ಟನಂತೆ, ಊಟವನ್ನು ರಾತ್ರಿ ಮುಗಿಸಿದಾಗ.

ಎಂದು ನವ್ಯ ಅಡುಗೂಲಜ್ಜಿ ಮೊಮ್ಮಕ್ಕಳಿಗೆ, ಪಾಪ್‌ಕಾರನ್ ಹಂಚುತ್ತ ಕಡುಬು ಕಡುಬಿನ ಕತೆ ಹೇಳಿದಳಂತೆ.

ಮೇಕೆ - ನರಿಯ ಕತೆ

ಇಂದಾನೊಂದು ಕಾಲದಲ್ಲಿ ಒಂದು ನರಿ ಇತ್ತಂತೆ. ಕಾಡಿನ ಅನಾಥಾಲಯದಲ್ಲಿ ಬೆಳೆದ ಆ ನರಿ, ಮೋಸ, ತಟವಟ, ದಗಲ್‌ಬಾಜಿ ಇತ್ಯಾದಿ ಪುಢಾರಿ ವಿದ್ಯೆಗಳೆಲ್ಲವನ್ನೂ ಕಲಿತುಕೊಂಡಿತ್ತಂತೆ. ಕಾಡಿನ ಹುಲಿಯೊಂದನ್ನು ಹಿಂಬಾಲಿಸಿಕೊಂಡು, ಅದರ ಹೆಸರು ಹೇಳಿಕೊಂಡು ಅವರಿವರನ್ನು ಹೆದರಿಸಿ ಜೀವನ ಮಾಡಿಕೊಂಡಿತ್ತಂತೆ. ನಾಡಿನವರ ತರಹಾನೇ!

ಒಂದು ಮುತ್ಸಂಜೆ. ನಿದ್ರೆಯಿಂದ ಎದ್ದಿತು ನರಿ. ಬೇಗ ಮುಖ ತೊಳೆದುಕೊಂಡು ಅನ್ನ ಸಂಪಾದಿಸಿಕೊಳ್ಳಕ್ಕೆ ಅಂತ ಕಾಡಿನತ್ತ ಹೊರಡಬೇಕು! ಹೆಂಡತಿನರಿ ಕಾಫಿಯನ್ನು ತಂದು ಕೊಡಲೇ ಇಲ್ಲ. "ಲೇ" ಅಂತ ನರಿ ಕೂಗಿತು. ಪೊಟರೆ ಮನೆಯಿಂದ ವಯಂಕ್ ವಯಂಕ್ ಅಂತ ಮಾರ್ದನಿ ಬಂತು. "ಎಲಾ! ಏನಾಯ್ತು ಇವಳಿಗೆ?" ಅಂತ ನರಿ ಮನೆಯ ಹಿತ್ತಲ ಕಡೆಗೆ ಹೋಯಿತು. ಅಲ್ಲಿ, ಬಚ್ಚಲ ಪಕ್ಕದಲ್ಲಿ ಹೆಂಡತಿನರಿ ವಾಕರಿಸುತ್ತಾ ಕೂತಿದ್ದಾಳೆ. ನಾಡಿನವರಿಗೆ ಬೆಳಿಗ್ಗೆ ಎದ್ದಾಗ ಬಯಕೆಗೆ ಶುರುವಾದರೆ ಕಾಡಿನವರಿಗೆ ಸಂಜೆ ಮುಂದೆಯೇ ಬಯಕೆಗೆ ಶುರುವಾಗುತ್ತೆ. ಕಾಡಿನಲ್ಲಿ ನಿಶಾಚರಣೆ ಅಲ್ಲವೇ? ಸರಿ! ಇನ್ನು ಕಾಫಿ ಕುಡಿಯಬೇಕಾದರೆ ಚಿಲ್ಲರೆ ಹೋಟಲೇ ಗತಿ ಎಂದಂದುಕೊಂಡು ನರಿ ಮನೆಬಿಟ್ಟು ಹೊರಟಿತಂತೆ.

ಸ್ವಲ್ಪ ದೂರ ಹೋಗುವುದರಲ್ಲೇ ಹುಲಿಯ ಘರ್ಜನೆ ಕೇಳಿಸಿತಂತೆ. ಬೇಗ ಹೋಗಿ ಹುಲಿಯನ್ನು ಹಿಂಬಾಲಿಸಬೇಕು, ಇಲ್ಲದೆ ಇದ್ದರೆ ಬೇರೆ ಪುಢಾರಿಗಳು ಅಲ್ಲಿ ಹಾಜರಾಗಿ ಬಿಡುತ್ತವೆ, ಎಂದಂದುಕೊಂಡು ನರಿ ಓಡುಕ್ಕೆ ಶುರು ಮಾಡಿತಂತೆ. ಕಾಫಿ ಕುಡಿಯದಿದ್ದಕಾರಣ ಅದರ ಬುದ್ಧಿ ಸ್ವಲ್ಪ ಮಂಕಾಗಿತ್ತಂತೆ. ಆದಕಾರಣ ಓಡುವಾಗ, ಹಾದಿಯಲ್ಲಿ ಹಾಳು ಬಾವಿಯೊಂದಿದ್ದುದನ್ನು ಮರೆತು, ದಭಕ್ ಅಂತ ಅದರಲ್ಲಿ ಬಿದ್ದುಬಿಡ್ತಂತೆ.

ಹಾಳು ಬಾವಿ ತಳದಲ್ಲಿ ಹುಲ್ಲು ಹಸಿರು ಸೊಪ್ಪು ಬೆಳೆದುಕೊಂಡಿತ್ತಂತೆ. ಹಾಗಾಗಿ ನರಿಯ ಮೈಯ್ಯಿಗೆ ಅಂತಹ ಪೆಟ್ಟೇನೂ ಬೀಳಲಿಲ್ಲವಂತೆ. ಆದರೂ ಮನಸ್ಸಿಗೆ ಸ್ವಲ್ಪ ಆಘಾತವಾಯಿತಂತೆ. ಜಾಣ ನರಿ ಅಂತ ನನಗೆ ಕೀರ್ತಿ,

ಕಂಡವರನ್ನು ಈ ಹಾಳು ಬಾವಿಗೆ ನಾನೇ ಎಷ್ಟೋ ಸಲ ನೂಕಿದ್ದೇನೆ. ಇಂತಹ ಹಾಳು ಬಾವಿಗಳು ಕಾಡಿನಲ್ಲಿ ಎಲ್ಲೆಲ್ಲಿವೆ ಎನ್ನುವುದು ಚೆನ್ನಾಗಿ ಗೊತ್ತು. ಅಂತಹುದರಲ್ಲಿ ನಾನೇ ಬೀಳಬೇಕಾದರೆ ಎಷ್ಟು ಬೇಹುಷಾರಾಗಿರಬೇಕು ಎಂದು ಅದರ ಮನಸ್ಸಿಗೆ ಆಘಾತವಾಯಿತಂತೆ. ಆಮೇಲೆ ನರಿ ಚೇತರಿಸಿಕೊಂಡು, ಇಲ್ಲಿಂದ ಹೇಗೆ ಪಾರಾಗುವುದು? ಎಂದು ಯೋಚಿಸಿತಂತೆ.

ಈಗೇನಾದರೂ ಬೊಬ್ಬೆ ಹೊಡೆದರೆ, ಹೆಬ್ಬಾವು ಬಂದು ಸುಲಭವಾಗಿ ನನ್ನನ್ನು ಅನಾಮತ್ತು ನುಂಗಿಬಿಡುತ್ತೆ. ಬೆಳಗಿನ ತನಕ ಕಾಯೋಣ, ಆಮೇಲೆ ದೇವರು ಏನಾದರೂ ಮಾರ್ಗ ತೋರಿಸಿಯಾನು ಎಂದು ತೆಪ್ಪಗೆ ಬಿದ್ದುಕೊಂಡಿತಂತೆ.

ಬೆಳಗಾಯಿತು. ಹಕ್ಕಿಗಳೆಲ್ಲ ಚಿಲಿಪಿಲಿಗುಟ್ಟುಕ್ಕೆ ಶುರುಮಾಡಿದುವು, ಮನೆಯ ಮಕ್ಕಳ ತರಹ. ನರಿಗೂ ಎಚ್ಚರವಾಯಿತು. ಹಾಳು ಬಾವಿಯ ಹತ್ತಿರ ಯಾರಾದರೂ ಬರುತ್ತಾರೆಯೇ, ತಿಳಿದುಕೊಳ್ಳಬೇಕು. ಆಮೇಲೆ ತಕ್ಕ ಉಪಾಯ ಹೂಡಬೇಕು, ಎಂದುಕೊಂಡು, ನರಿ ಕಿವಿಗಳನ್ನು ನಿಮಿರಿಸಿ ನಿಲ್ಲಿಸಿತಂತೆ. ಸ್ವಲ್ಪ ಹೊತ್ತಿನಲ್ಲೇ ಕಾಡುಕೋಣವೊಂದು ಗುಟುರು ಹಾಕಿತಂತೆ. ದಬ ದಬ ಅಂತ ಯಾರೋ ಓಡಿದ ಸದ್ದೂ ಆಯಿತಂತೆ. ಓಹೋ! ಕಾಡುಕೋಣ ಸೀಟಿ ಹೊಡೆಯಿತು ಅಂದರೆ ಕಾಡೆಮ್ಮೆಗಳು ಇಲ್ಲೇ ಎಲ್ಲೋ ಇರಬೇಕು! ಕಾಡುಕೋಣಕ್ಕೆ ಬುದ್ಧಿಗಿದ್ಧಿ ಏನಾದರೂ ಇದೆಯೇ? ಮನುಷ್ಯರ ತರಹಾನೇ ಯಾವ ಹೊತ್ತು ಅಂತ ಕೂಡ ನೋಡದೆ, ಕಾಡೆಮ್ಮೆಯನ್ನು ಕಂಡರೆ ಸೀಟಿ ಹೊಡೆಯುತ್ತೆ. ಹತ್ತು ಹನ್ನೆರಡು ಕಾಡೆಮ್ಮೆಗಳು ಕೋಣನ ಜನಾನಾದಲ್ಲಿರುತ್ತವೆ. ಅಂದಮೇಲೆ ಸೀಟಿಗೆ ಎರಡು ಮೂರು ಎಮ್ಮೆ ಉತ್ತರ ಕೊಡುತ್ತೆ. ಮಿಕ್ಕವು ಹುಲ್ಲು ಮೇಯುಕ್ಕೆ ಬರುತ್ತವೆ. ಎಂದು ನರಿ ಯೋಚಿಸಿತಂತೆ. ಯಾವ ಕಾಲದಿಂದಲೂ ಹೆಣ್ಣು ಮಕ್ಕಳಿಗೆ, ಭಜನೆ, ಸಂಗೀತ, ಹರಿಕಥೆ ಎಂದರೆ ಬಲು ಪ್ರಿಯ. ದೇವರು, ಪೂಜಾರಿಗಳು, ಆಚಾರಿಗಳು, ಸಾಧುಗಳು, ಸ್ವಾಮಿಗಳು ಎಂದರೆ ಬಲು ನಂಬಿಕೆ. ಆದುದರಿಂದ ಈಗ ನಾನು ಭಜನೆ ಮಾಡಿದರೆ ಯಾವುದಾದರೂ ಕಾಡೆಮ್ಮೆ ಬರಬಹುದು ಎಂದು ನರಿ ಆಲೋಚಿಸಿ ಭಜನೆಗೆ ಶುರುಮಾಡಿತಂತೆ.

ಅದು ಯೋಚಿಸಿದ ಹಾಗೆಯೇ ಒಂದು ಕಾಡೆಮ್ಮೆ ಭಜನೆಯನ್ನು ಕೇಳಿ

ಬಾವಿಯ ಹತ್ತಿರಕ್ಕೆ ಬಂತಂತೆ. ಇಣಿಕಿ ನೋಡಿತಂತೆ, ಬಾವಿಯಲ್ಲಿ ಭಜನೆ ಮಾಡುತ್ತಿದ್ದ ನರಿ ಕಂಡಿತು. "ಎಷ್ಟು ಚೆನ್ನಾಗಿ ಭಜನೆ ಮಾಡ್ತಾ ಇದೆ, ನರಿ! ಎಷ್ಟು ಭಕ್ತಿಯಿಂದ ನುಡಿಯುತ್ತಾ ಇದೆ" ಎಂದುಕೊಂಡಿತಂತೆ ಕಾಡೆಮ್ಮೆ. ಆದರೆ ಅದೇ ಹೊತ್ತಿಗೆ ಕಾಡುಕೋಣ ತಿರುಗಿ ಗುಟುರು ಹಾಕಿತಂತೆ. ಓಹೋ ಈಗ ನನ್ನ ಸರದಿ ಇರಬಹುದು ಎಂದು ಆ ಕಾಡೆಮ್ಮೆಗೆ ಅನಿಸಿತಂತೆ. ಕಾರಣ ಅದು ಕೋಣನ ಕಡೆಗೆ ಓಡಿಹೋಯ್ತಂತೆ.

ನರೀಗೆ ತುಂಬಾ ನಿರಾಶೆಯಾಯಿತಂತೆ; ಒಂದು ಕ್ಷಣ. ತಾಳಿದವ ಬಾಳಿಯಾನು, ಇದನ್ನು ತಿಳಿದೂ ನಾನು ಖಿನ್ನನಾಗಬಾರದು ಎಂದು ತನ್ನಷ್ಟಕ್ಕೆ ತಾನೇ ಧೈರ್ಯ ತಂದುಕೊಂಡಿತಂತೆ. ಭಜನೆಯನ್ನು ಮುಂದುವರಿಸಿತಂತೆ. ಯಾವನಾದರೂ ಒಬ್ಬ ಋಷಿ ಬಂದರೂ ಬರಬಹುದು, ನನ್ನ ಭಜನೆಯನ್ನು ಕೇಳಿ ಸಹಾಯವನ್ನೂ ಮಾಡಬಹುದು ಎಂದು ಅದಕ್ಕೆ ಒಂದು ದೂರದ ಆಸೆಯಂತೆ.

ಈ ಆಸೆ ಅದರ ಮನಸ್ಸಿನಲ್ಲಿ ತೋರುವ ಹೊತ್ತಿಗೆ ಒಂದು ಗಡ್ಡದ ಮುಖ ಬಾವಿಯಲ್ಲಿ ಇಣುಕಿ ನೋಡುತ್ತಿದ್ದುದು, ನರಿಗೆ ಕಾಣಿಸಿತಂತೆ. ಭಗವಂತ ಭಕ್ತರ ಕೈಬಿಡುವುದಿಲ್ಲ ಎಂದು ಅಂದುಕೊಂಡಿತಂತೆ, ಒಂದು ಕ್ಷಣ. ಆದರೂ ಸ್ವಪ್ರಯತ್ನವೂ ಇರಬೇಕಲ್ಲ! ಎಂದು ದಿಟ್ಟಿಸಿ ನೋಡಿತಂತೆ. ಆಗ ಮೇಕೆ ಕಾಣಿಸಿತಂತೆ. ಭಜನೆಯ ವೇಗವನ್ನು ತೀವ್ರಗೊಳಿಸಿತಂತೆ.

"ಯಾರದೋ ಭಜನೆ ಶಬ್ದ ಕೇಳಿಸಿತು, ತೋರಣ ಕಟ್ಟಿರುತ್ತಾರೇನೋ ಅಂತ ಓಡಿ ಬಂದೆ. ಇಲ್ಲಿ ನೋಡಿದರೆ ಬಾವಿ. ಅದರೊಳಗೆ ನೀನು, ನರಿ ರಾಯ! ಹೀಗೇಕಾಯಿತು?" ಎಂದು ಮೇಕೆ ಕೇಳಿತಂತೆ.

ಆಗ ನರಿ ಬುದ್ಧಿಯನ್ನೆಲ್ಲಾ ಉಪಯೋಗಿಸಿ ಒಂದು ಯೋಜನೆ ಹೂಡುತ್ತಾ "ಮೇಕೆ! ಮೇಕೆ! ಕನಸಿನಲ್ಲಿ ಬ್ರಾಹ್ಮಣ ಬಂದು, ಈ ಬಾವಿಯಲ್ಲಿ ಇಂದ್ರನ ವಿಗ್ರಹ ಇದೆ, ಅದರ ಬಳಿ ಹೋಗಿ ಮೂರು ದಿನ ಭಜನೆ ಮಾಡು. ನೀನು ಕೇಳಿದ ವರವನ್ನು ಕೊಡುತ್ತಾನೆ ಎಂದು ಹೇಳಿದ ಹಾಗಾಯಿತು. ಅದರಂತೆಯೇ ಅನುಸರಿಸಿದೆ. ನೀನೂ ಬೇಕಾದರೆ ಬಂದು ಭಜನೆ ಮಾಡು. ನೀನು ಕೇಳಿದ ವರವೂ ಫಲಿಸುತ್ತೆ" ಎಂದು ಹೇಳಿತಂತೆ.

"ಗರಿಕೆ ಹುಲ್ಲು ಕೊಡ್ತಾನಾ? ಲಂಟಾಣಾ ಮುಳ್ಳು ಕೊಡ್ತಾನಾ?

ಅದನ್ನು ತಿಂದರೆ ನಾಲಿಗೆಯ ಮುಲ ಮುಲ ಹೋಗುತ್ತೆ." ಎಂದು ಮೇಕೆ ಕೇಳಿತಂತೆ.

"ಹ್ಞೂ! ಸುರಪತಿಂ ಭಜಾಮಿ
"ಹ್ಞೂ! ಶಚಿಪತಿಂ ಭಜಾಮಿ
"ಹ್ಞೂ! ರಂಭಾಮಿತಿಂ ಭಜಾಮಿ.

ಎಂದು ನರಿ ಮೂರು ಸಲ ಭಜನೆಯ ಮಧ್ಯೆ ಹ್ಞೂ ಗುಟ್ಟಿತಂತೆ.

ಸರಿ! ಹಳೆ ಕತೆಯಲ್ಲಿ ಆದ ಹಾಗೆಯೇ ಮೇಕೆ ಬಾವಿಗೆ ಬಿತ್ತಂತೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿ, ಇಲ್ಲಿಂದ ಹೇಗೆ ಪಾರಾಗುವುದು ಎಂದು ಯೋಚಿಸಿತಂತೆ.

"ಅಳು ಮುಖ ಮಾಡಿಕೋಬೇಡ, ಮೇಕೆ! ಬಾವಿಯ ಗೋಡೆಗೆ ನೀನು ಕಾಲುಗಳನ್ನು ಆನಿಸಿ ನಿಂತುಕೋ! ನಿನ್ನ ಮೇಲೆ ಕಾಲಿಟ್ಟುಕೊಂಡು ಏರಿ ಬಾವಿಯ ಆಚೆಗೆ ಹಾರುತ್ತೇನೆ. ನಂತರ ನಿನ್ನನ್ನು ಮೇಲಕ್ಕೆ ಎಳೆದುಕೊಳ್ಳುತ್ತೇನೆ" ಎಂದು ನರಿ ಉಪಾಯ ಹೇಳಿತಂತೆ.

ಅದರಂತೆಯೇ ಮೇಕೆಯು ಮಾಡಿತು. ನರಿಯೂ ಬಾವಿಯಾಚೆಗೆ ಸುರಕ್ಷಿತವಾಗಿ ಸೇರಿತು. ನಂತರ ಬೈ ಬೈ ಮೇಕೆ ಎಂದು ಹೇಳಿ ಹೊರಟು ಹೋಗಬೇಕು! ಅಷ್ಟರಲ್ಲೇ ಮೇಕೆ ನನ್ನ ಪಾಡೇನು ಎಂದು ಕೇಳಿತಂತೆ.

"ಅಲ್ಲಾ ಮಂಕೆ! ಕೇಳಿದ ವರ ಕೊಡುವ ಇಂದ್ರನ ವಿಗ್ರಹ ಇಲ್ಲಿದೆ ಎಂದರೆ ನಂಬಿ ಇಳಿದು ಬಂದೆಯಲ್ಲಾ? ಕಷ್ಟ ಒದಗಿದಾಗ ಹಿಂದೊಮ್ಮೆ ಇಂದ್ರ ನಿನ್ನಿಂದಲೇ ತನಗೆ ಅಗತ್ಯವಾದ್ದನ್ನು ಲಪಟಾಯಿಸಿಕೊಂಡು ಹೋಗಿಬಿಟ್ಟ. ಅಂತಹ ದೇವರನ್ನು ನಂಬಿದೆಯಲ್ಲಾ ಪೆಚ್ಚೇ!" ಎಂದು ಹಾಸ್ಯಮಾಡಿ ನರಿ ಹೊರಟು ಹೋಯಿತಂತೆ.

ಎಂದು ನನ್ನ ಅಡುಗೂಲಜ್ಜಿ ಮೇಕೆ-ನರಿಯ ಕತೆಯನ್ನು ಮೊಮ್ಮಕ್ಕಳಿಗೆ ಹೇಳಿದಳಂತೆ.

ಮೊದಲಿದ್ದೋಳ ಕತೆ

ಇಂದಾನೊಂದು ಕಾಲದಲ್ಲಿ ಒಂದು ಎಂಮ್ಮೆ ಇತ್ತಂತೆ. ಹತ್ತಿರವೇ ಇದ್ದ ಶಾಲೆಯಲ್ಲಿ ಕನ್ನಡ ಪಾಠ ಹೇಳಿಕೊಡುತ್ತಾ, ಅಧಿಕಾರಿಗಳು ಕೊಟ್ಟ ಸಂಬಳ ಇಸುಕೊಂಡು, ತೋರಿಸಿದ ರಸೀತಿಗೆ ರುಜು ಮಾಡಿ, ಒಂದು ತರಹಾ ಒಂಟಿ ಬಾಳು ನಡಸುತ್ತಿತ್ತಂತೆ. ಅನುಕೂಲ ಒದಗಿದರೆ ಹೊತ್ತಿಗೆ ಹನ್ನೆರಡು ಲೀಟರ್ ಕರೀಬಹುದು ಎಂದನ್ನಿಸುತ್ತಿತ್ತಂತೆ, ಅದನ್ನು ನೋಡಿದವರಿಗೆ. ಆದರೆ ಅನುಕೂಲ ಕೂಡಿ ಬಂದಿರಲಿಲ್ಲವಂತೆ.

ದಾರಿ ತಪ್ಪಿ ಅದೇ ಶಾಲೆಗೆ ಸಂಸ್ಕೃತ ಪಾಠ ಹೇಳಿಕೊಡಲು ಒಂದು ಕೋಣ ಬಂತಂತೆ. ಮಾರಿ ಕಣ್ಣಿಗೆ ಮಣ್ಣೆರಚಿಬಂದ ಈ ಕೋಣ ಶಾಲೆಯಲ್ಲಿ ' ಡ್ರಿಲ್ ' ಕೂಡ ಮಾಡಿಸುತ್ತಿತ್ತಂತೆ.

ನಾಯಿಯೂ ಹಸಿದಿತ್ತು. ಅನ್ನವೂ ಹಳಸಿತ್ತು.

ಇಬ್ಬರ ಸಂಬಳವನ್ನೂ ಸೇರಿಸಿದರೆ ಸಂಸಾರ ನಿಭಾಯಿಸಬಹುದು ಎಂದು ತೀರ್ಮಾನಿಸಿ, ಇಬ್ಬರೂ ಮದುವೆಯಾದರಂತೆ. ಒಂದೇ ಸೂರಿನ ಕೆಳಗೆ ವಾಸಿಸಲು ಶುರು ಮಾಡಿದರಂತೆ. ಎರಡು ದಿನ ಸುಖವಾಗೇ ಇದ್ದರಂತೆ.

ಒಂದು ಸಂಜೆ ಕೋಣ ಮನೆಗೆ ಬಂದಾಗ, ಕನ್ನಡದಲ್ಲಿ ಪದ್ಯವನ್ನು ಎಂಮ್ಮೆ ಬರೀತಾ ಇತ್ತಂತೆ. " ಅಡಿಗೆ ಆಯ್ತೇನೆ, ಬರಿಯುಕ್ಕೆ ಕೂತುಬಿಟ್ಟೆಯಲ್ಲ ! " ಎಂದು ಕೋಣ ಗುಟುರಿತಂತೆ.

" ಇಪ್ಪತ್ತನೇ ತಾರೀಖು ಇವತ್ತು. ತಿಂಗಳಿಗೆ ತಂದ ಸಾಮಾನೆಲ್ಲಾ ಮುಗಿಯುತ್ತಾ ಬಂತು. ನಾನು ಅಡಿಗೆ ಮಾಡಿದರೆ ರುಚಿಯಾಗಿರುತ್ತೆ. ನಿಮ್ಮ ನಾಲಿಗೇನೋ, ಸಂಸ್ಕೃತ ನುಡಿದೂ ನುಡಿದು, ಚಪಲ ಬೆಳೆಸಿಕೊಂಡಿದೆ, ಹೊಟ್ಟೇನೋ ಗುಡಾಣದ ಹಾಗಿದೆ. ಅದಕ್ಕೇ ಇವತ್ತಿಂದ ನೀವು ಅಡಿಗೆ ಮಾಡಿ. ಹೇಗಿದ್ದರೂ ರುಚಿ ಇರುಲ್ಲ. ಅಂದಮೇಲೆ ತಿನ್ನೋದಾದರೂ ಕಡಿಮೆ ಆಗುತ್ತೆ. ಇರೋ ಸಾಮುಗ್ರಿಯಲ್ಲಿ ತಿಂಗಳ ಕೊನೇತನಕ ನಿಭಾಯಿಸಬಹುದು. ರೇಷನ್ ಅಂಗಡಿಗೆ ಹೋಗಿ ಸಾಮಾನು ತರೋ ಕೆಲಸವನ್ನು ನಾನು ಮಾಡ್ತೀನಿ, ಹೆಂಗಸರಿಗೆ ಬೇರೆ ಕ್ಯೂ ಇರುತ್ತೆ. ಅಷ್ಟು ವಿಳಂಬ ಆಗುಲ್ಲ ಎಂದಳಂತೆ ಎಂಮ್ಮೆ.

ಕೋಣನಿಗೂ ಇದು ಹಿತವಾಗಿ ಕಾಣಿಸಿತಂತೆ. ತಾನೇ ಅಡಿಗೆ ಮಾಡಿದರೆ ಹೆಚ್ಚಾಗಿ ಸೊಪ್ಪು ಹಾಸಿ ಬಸಿದ ಸಾರು ಮಾಡಿದರೆ, ಕಲಗಚ್ಚಿನ ಘಮ ಘಮ ಹೊಡೆಯುತ್ತೆ. ಆಗ ಮೋಜಿನಿಂದ ಮೆಲ್ಲಬಹುದು. ಹಾಗೂ ಅಡಿಗೆ ಮನೆ ಒಲೆ ಮುಂದೆ ಕೂತು ಹಿತವಾಗಿ ಬೆಂಕಿ ಕಾಯಿಸಿಕೊಳ್ಳಬಹುದು. ಅಲ್ಲದೆ ಮನೆಯನ್ನು ಗುಡಿಸೋದು, ಬಟ್ಟೆ ಒಗೆಯೋದು, ಮುಸಿರೆ ತಿಕ್ಕೋದು ಇದೆಲ್ಲ ವನ್ನೂ ಇನ್ನು ಮೇಲೆ ಹೆಂಡತಿ ಮಾಡ್ತಾಳಲ್ಲ!" ಎಂದುಕೊಂಡು ಕೋಣ ಈ ಏರ್ಪಾಡಿಗೆ ಒಪ್ಪಿಕೊಂಡಿತಂತೆ, ಸಂತೋಷದಿಂದ.

ರಾತ್ರಿ ಅಡಿಗೆ ಆಯ್ತಂತೆ. "ಬಾರೇ ಊಟ ಮಾಡೋವಂತೆ" ಎಂದು ಕೋಣ ಕರೀತಂತೆ. ಊಟಕ್ಕೆ ಕೂತು ಒಂದು ತುತ್ತು ಬಾಯಿಗೆ ಹಾಕ್ಕೊಂಡು "ಇದನ್ನು ಹೇಗೆ ತಿನ್ನೋದು, ತಿನ್ನದೇ ಇದ್ದರೆ, ಗಂಡನಿಗೆ ಬೇಸರ ಆಗುತ್ತೆ" ಎಂದು ಕಷ್ಟಪಟ್ಟುಕೊಂಡು ಎರಡೇ ತುತ್ತು ತಿಂದು, ಹೊಟ್ಟೆ ತುಂಬಿತು ಎಂದು ಎದ್ದುಬಿಟ್ಟಳಂತೆ. ಕೂಡಿದವರಿಗೆ ಕೋಡಗ ಮುದ್ದಾದ ಹಾಗೆ, ಅಡಿಗೆ ಮಾಡಿದ ಕೋಣನಿಗೆ ಬಸ್ಸಿದಸಾರು ನಳಪಾಕದಂತಿತ್ತಂತೆ. ಗಡದ್ದು ತಿಂದನಂತೆ.

ಆ ರಾತ್ರಿಯಿಂದಲೇ ಶುರುವಾಯ್ತಂತೆ, ಕಾಳಗ. ಸೊಪ್ಪಿನ ಸಾರು ತಿಂದಿದ್ದ ಸಂಸ್ಕೃತ ಪಂಡಿತ

"ಚತುರ್ಭುಜೇ! ಚಂದ್ರಕಳಾವತಂಸೆ!
ಕುಚೋನ್ನತೇ! ಕುಂಕುಮ ರಾಗ ಶೋಣೆ!"

ಎಂದು ಎಂಮ್ಮೆಯ ಹಣೆಯ ಮೇಲಿದ್ದ ಕುಂಕುಮದ ಬಟ್ಟನ್ನು ತಿಲಕ ಮಾಡಿದ ನಂತೆ. ನುಡಿದಿದ್ದನ್ನೂ ಕೈಯ್ಯಾರೆ ತೋರಿಸಿದನಂತೆ.

ಹೊಟ್ಟೆ ತಾಳ ಹಾಕ್ತಾ ಇತ್ತು ಎಂಮ್ಮೆಗೆ. ಆದುದರಿಂದಲೇ ಕನ್ನಡದ ಅಧ್ಯಾಪಕಿಯಾದರೂ ಗಾದೆ ಜ್ಞಾಪಕ ಬರಲಿಲ್ಲವಂತೆ. "ಅದೇನೇನೋ ಕೆಟ್ಟ ಕೆಟ್ಟದಾಗಿ ಅಂತೀರಲ್ಲ! ಕಸ್ತೂರಿಯಂತಿರುವ ಕನ್ನಡದಲ್ಲಿ ಹೇಳೋದನ್ನು ಹೇಳ ಬಾರದೆ?" ಎಂದು ಮುನಿಸಿಕೊಂಡಳಂತೆ.

"ಬಾಲೆ! ಬಾಲೇಂದು ಫಾಲೆ! ಫಾಲಲೋಚನನ ಅರಗಿಳಿಯೇ" ಅಂತ ಕೋಣ ಶುರು ಮಾಡಿದನಂತೆ, ಒಂದು ಸರ್ತಿ ತೇಗಿ.

ಆಗ ಕನ್ನಡದ ಗಾದೆಯ ಜ್ಞಾಪಕ ಬಂತಂತೆ ಎಂಮ್ಮೆಗೆ.

* * * * *

ಇದೇ ಮಾದರಿಯಾಯ್ತಂತೆ ಆಮೇಲೆ. ಹಗಲೆಲ್ಲಾ ಕನ್ನಡ, ಸಂಸ್ಕೃತ ಅಂತ ಗಂಡ ಹೆಂಡಿರ ಜಗಳ. ಅಡಿಗೆಯನ್ನೆಲ್ಲಾ ಮಾಡಿಟ್ಟು, ಕೋಣ ಹೋಗಿ ಎಂಮ್ಮೆಯನ್ನು ಪುಸಲಾಯಿಸಿ, ಮಲಗಿದ್ದವಳನ್ನು ಎಬ್ಬಿಸಿ, ಊಟಕ್ಕೆ ಕರೆದುಕೊಂಡು ಹೋಗುವುದು. ಅಲ್ಲಿ ಎಂಮ್ಮೆ ತುತ್ತಿಗೆ ಮುತ್ತು ಕೊಟ್ಟು ಏಳುವುದು, ಈ ರೀತಿ.

ಎಷ್ಟು ದಿನ ನಡೆದೀತು ಇದು. ಹನ್ನೆರಡು ಲೀಟರ್ ಹೊತ್ತಿಗೆ ಹಿಂಡುವ ಯೋಗ್ಯತೆ ಇದ್ದಾಕೆ ಹೊಟ್ಟೆ ತುಂಬಾ ಉಣ್ಣದಿದ್ದರೆ ಹೇಗೆ? ಆಕೆಯಾದರೂ ಕೆಟ್ಟ ಅಡಿಗೆಯನ್ನು ಬಯಕೆ ಬಂದಾಗ ಹೇಗಾರೂ ತಿಂದಾಳು?

ಆರನೇ ತಿಂಗಳಿನಲ್ಲೇ ಎಂಮ್ಮೆ ಆಸ್ಪತ್ರೆಗೆ ಹಠಾತ್ತಾಗಿ ಹೋದಳಂತೆ. ಡಾಕ್ಟರು ಏನೆಲ್ಲಾ ಮಾಡಿದರಂತೆ. ಎಂಮ್ಮೆ ಸ್ವರ್ಗವಾಸಿಯಾದಳಂತೆ. ಕನ್ನಡಮ್ಮನ ಸ್ವರ್ಗಕ್ಕೆ ಹೋಗಿ ನಕ್ಷತ್ರವಾದಳಂತೆ.

* * * * *

ಕೋಣನ ಪಾಡು! ಏನೂ ಅಂತಹ ಗೋಳಾಗಲಿಲ್ಲವಂತೆ. ಮನೆಗೆಲಸ ಮಾಡಿ ಅಭ್ಯಾಸವಾಗಿತ್ತಂತೆ. ಹೇಗೋ ಹಗಲೆಲ್ಲಾ ಕಾಲ ಹಾಕಿದನಂತೆ.

ಆ ವೇಳೆಗೆ ಆ ಶಾಲೆಯಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಬೇಕು ಎಂದು ಆಡಳಿತ ವರ್ಗದವರು ತೀರ್ಮಾನಿಸಿದರಂತೆ. ರಾಷ್ಟ್ರಭಾಷೆಯ ಪ್ರೇಮದಿಂದಲ್ಲ. ಆ ಯೋಜನೆ ಹೂಡಿದರೆ ಸರ್ಕಾರ ವರ್ಷಂಪ್ರತಿ ಹತ್ತು ಸಾವಿರ ರೂಪಾಯಿ ಗ್ರಾಂಟ್ ಕೊಡುತ್ತೇವೆ ಎಂದಿದ್ದರಂತೆ, ಆ ಕಾರಣದಿಂದ. ಅಂದ ಮೇಲೆ, ಹಿಂದಿ ಭಾಷಾ ವಿಶಾರದೆ ಮಾಸ್ತರಿಣಿಯಾಗಿ ಬರಲೇ ಬೇಕಲ್ಲ! ಬಂದ ಮಾಸ್ತರಿಣಿಗೆ ಹುರುಪು ಹೆಚ್ಚಲ್ಲ! ಕುದುರೆ ಮರಿ ಇದ್ದಹಾಗೆ ಅವಲಕ್ಷಣವಾಗಿದ್ದರೂ, ಜಿಗಿದಾಡುತ್ತಿದ್ದಳಂತೆ, ಕುಳ್ಳಿ.

ಪ್ರಕೃತಿಯಲ್ಲಿ ಯಾವಾಗಿನಿಂದಲೂ ಒಂದು ರೀತಿ ಇದೆಯಲ್ಲಾ!

ಉದ್ದಾನೆ ಗಡಾ ಉದ್ದೀನನಿಗೆ ಕುಳ್ಳಾನೆ ಕುಪ್ಪಮ್ಮನೇ ಚೆಂದ,
ಅಡ್ಡಾನೆ ಲಂಬೋದರನಿಗೆ ಕೃಶಾಂಗಿಯೇ ರೂಪಸ್ಥೆ
ಗುಜ್ಜಾನೆ ಗಜಲಕ್ಷ್ಮಮ್ಮನಿಗೆ, ಲಂಬೂ ಲಚ್ಚಣ್ಣನೇ ಅಚ್ಚುಮೆಚ್ಚು
ಕಪ್ಪಾನೆ ಕ್ಯಾಥರೀನ್ ಅಮ್ಮ, ಬಿಳಿಗಿರಿರಾಯನಿಗೆ ಬಲುಮೋಜು.
ಹೆಸರಿಗೆ ತಕ್ಕಂತೆ ಇರುವ ಚಂದ್ರಪ್ರಭೆಗೆ, ಕಾಳಪ್ಪನ ಮೇಲೇ ಕಣ್ಣು.

ಪ್ರಕೃತಿಯನ್ನು ಮೀರುವುದು ಸಾಧ್ಯವೆ?

ಅದೂ ಒಂದೇ ಶಾಲೆಯಲ್ಲಿ, ಪೀರಿಯಡ್, ಪೀರಿಯಡ್ಡಿಗೂ, ಶಾಲೆಯ ಕೈಸಾಲೆಯಲ್ಲಿ ಡಿಕ್ಕಿ ಹೊಡೆಯುವಂತಾದರೆ? ಈ ತರಗತಿಯಿಂದ ಆ ತರಗತಿಗೆ ಹೋಗುವ ಗಲಭೆಯಲ್ಲಿ.

ಹಿಂದಿ ಮಾಸ್ತರಿಣಿ ಕುಸುಮ್‌ಬಾಯ್, ಸಂಸ್ಕೃತ ಪಂಡಿತನ ಕೈಹಿಡಿದಳು. ಎರಡೂ ಭಾಷೆಗಳಿಗೆ ಲಿಪಿ ಒಂದೇ ಅಲ್ಲವೇ? ದೇವನಾಗರಿ ಲಿಪಿ! ಅವರಿಬ್ಬರ ಹಣೆಯಲ್ಲೂ ಅದೇ ಲಿಪಿ ಬರೆದಿತ್ತು. ದೇವಲೋಕದಲ್ಲಿ ಬರೆದ ಲಿಪಿಯನ್ನು ಭೂಲೋಕದಲ್ಲಿ ಅನುಭವಿಸಬೇಕಲ್ಲ!

* * * * *

ಮೊದಲ ದಿನವೇ ಕೋಣ ಹೇಳಿತಂತೆ, ಕುದುರೆ ಮರೀಗೆ, ಕುದುರೆ ಬಾಲ ದಂತಿದ್ದ ಹಿಂದಿ ಪುರುಚಲು ಜಡೆಯನ್ನು ತಡವರಿಸುತ್ತಾ :—

ಮನೆಗೆಲಸ ಅಂತ ಏನೂ ಭಯಬೀಳಬೇಡ. ಇದೆಲ್ಲವನ್ನೂ ಮಾಡಿ ಅನುಭವ ನನಗಿದೆ.

ಕುಂದೇಂದು ತುಷಾರ ಹಾರ ಧವಳವಾಗಿರು
ಶುಭ್ರ ವಸ್ತ್ರಾನ್ವಿತಳಾಗಿರು
ಹಿಂದಿ ವೀಣಾ ಪಾಣಿಪಲ್ಲವೆಯಾಗಿರು
ಶ್ವೇತ ಪದ್ಮಾಸನೆಯಾಗಿರು

ಎಂದು ಸಂಸ್ಕೃತ ಕನ್ನಡ ಕುಟ್ಟಿ ಬಜಾಯಿಸಿದನಂತೆ. ಎಂದೂ ಕಾಣದೆ ಇದ್ದ ನವ್ಯ ವೇಗದ ಕುದುರೆ ಮರಿಯನ್ನು ಕಂಡರೆ, ಅದು ದಕ್ಕಿದರೆ ಇನ್ನೇನು ತಾನೆ ಮಾಡಬಲ್ಲ, ಕೋಣ.

"ಉಪ್ಪರ್ ದೇಖೋ ಝಿಲಿಮಿಲಿತಾರೆ
ಕೈಸಾ ಸುಂದರ್ ಕೈಸಾ ಪ್ಯಾರೆ"

ಎಂದಳಂತೆ, ಕುದುರೆ ಮರಿ.

* * * * *

ಮರುದಿನ ಶಾಲೆ ಮುಗಿಸಿಕೊಂಡು ಇಬ್ಬರೂ ಮನೆಗೆ ಬಂದರಂತೆ. ಯಥಾ ಪ್ರಕಾರ ಕೋಣ ಅಡಿಗೆ ಮನೆಗೆ ಹೋದನಂತೆ. ಅಡಿಗೆಗೆ ಶುರುಮಾಡಿದನಂತೆ.

ಇತ್ತ ಕುದುರೆ ಮರಿ ಕೈಸಾ ಸುಂದರ್ ಕೈಸಾ ಪ್ಯಾರೆ ಅಂತ ಹಾಡುತ್ತ ಹಾಸಿಗೆ ಮೇಲೆ ಒರಗಿದಳಂತೆ.

ಆ ಮಧ್ಯಾಹ್ನ ಶಾಲೆಯಲ್ಲಿ ಏನಾಗಿತ್ತಂತೆ ಅಂತ.

ಮಧ್ಯಾಹ್ನ ವಿರಾಮ ಕಾಲದಲ್ಲಿ ಕುದುರೆ ಮರಿ ಶಾಲೆ ಹೊರಗೆ ಚಹಾ ಕುಡಿಯಲು ಹೊರಟಾಗ, ಶಾಲೆಯ ಗೇಟಿನ ಹತ್ತಿರವೇ ಚಂದ್ರಸೀಬೆ ಹಣ್ಣನ್ನು ಒಬ್ಬ ಮುದುಕಿ ಮಾರುತ್ತಿದ್ದಳಂತೆ.

"ವೋ ಕ್ಯಾ" ಎಂದು ಕೇಳಿದಳಂತೆ ಕುದುರೆ ಮರಿ.

"ಚಂದ್ರಸೀಬೆ ಹಣ್ಣು" ಎಂದಳಂತೆ ಮುದುಕಿ.

ನೋಡುಕ್ಕೆ ಚೆನ್ನಾಗಿತ್ತು. ಕುದುರೆ ಮರಿ ೫೦ ಪೈಸೆ ಕೊಟ್ಟು ಮೂರು ಹಣ್ಣುಕೊಂಡು ತಿಂದಳಂತೆ. "ಬಹೂತ್ ಅಚ್ಛಾ! ಬಹೂತ್ ಪಸಂದ್" ಎಂದು ಲೊಟ್ಟೆ ಹೊಡೆದಳಂತೆ. ಕಾರಣ ಸಂಜೆ ಮನೆಗೆ ಬಂದ ಸ್ವಲ್ಪ ಹೊತ್ತಿನಲ್ಲೇ ಹೊಟ್ಟೆ ದುಃಖ್ಯಾಯಿತಂತೆ. ಕೈಸಾ ಸುಂದರ್‌ಊ ಬೇಡ. ಕೋನ್ಸಾ ಪ್ಯಾರೇನೂ ಬೇಡ ಎನ್ನುವಂತಾಯ್ತಂತೆ. ಹೊಟ್ಟೆಯನ್ನು ನೀವುತ್ತಾ ನರಳುತ್ತಾ ಮಲಗಿದಳಂತೆ, ಹೊಟ್ಟೆ ಡುಬ್ಬುಹಾಕಿಕೊಂಡು.

ಅಡಿಗೆ ಮುಗಿಸಿದನಂತೆ ಕೋಣ. ತಟ್ಟೆಗಳನ್ನು ಇಟ್ಟನಂತೆ, ನೀರು ತುಂಬಿ ಲೋಟಾ ಇಟ್ಟನಂತೆ. ಕುದುರೆ ಮರಿಯನ್ನು ಊಟಕ್ಕೆ ಕರೆಯಲು ಕೋಣೆಗೆ ಹೋದನಂತೆ.

"ಉತ್ತಿಷ್ಠ! ಉತ್ತಿಷ್ಠ! ಘೃತಾನ್ನಂ ಸಮರ್ಪಯಾಮಿ, ಕದಳೀ ಫಲಾನ್ ಸಮರ್ಪಯಾಮಿ, ದಧ್ಯಾನ್ನಂ ಸಮರ್ಪಯಾಮಿ!"

ಎಂದು ಆರಾಧಿಸಲು ಶುರು ಮಾಡಿದನಂತೆ.

"ನಹೀ ನಹೀ" ಎಂದು ಹೇಳಿ ಕುದುರೆ ಮರಿ ಮುಸುಕುಹಾಕಿಕೊಂಡು ಮಲಗಿದಳಂತೆ.

ಏನು ಮಾಡಿದರೂ ಎರಡನೆ ಹೆಂಡತಿ ಏಳಲೇ ಒಲ್ಲಳು, ಊಟಕ್ಕೆ. ತಲೆ ಕೆರೆದುಕೊಳ್ಳುತ್ತಾ ಕೋಣ ಅಡಿಗೆ ಕೋಣೆಗೆ ಹೋದನಂತೆ.

ಊಟ ಮಾಡ್ತಾ ಮಾಡ್ತಾ, ಎದುರು ಗಡೆ ಇದ್ದ ಖಾಲಿ ತಟ್ಟೆಯನ್ನು ನೋಡುತ್ತ ಹೇಳಿದನಂತೆ.

"ಮೊದಲಿದ್ದೋಳೆ ವಾಸಿ, ಎಬ್ಬಿಸಿದರೆ ಉಣತಾ ಇದ್ದಳು" ಅಂತ.

* * * * *

ಎಂದು ನಮ್ಮ ಅಡುಗೂಲಜ್ಜಿ ಮೊದಲಿದ್ದೋಳ ಕತೇನ ಮೊಮ್ಮಕ್ಕಳಿಗೆ ಹೇಳಿದಳಂತೆ.

ಹೇಳಿ ಮಾಡಿಸಿದ ಸೀನಣ್ಣನ ಕತೆ

ಇಂದಾನೊಂದು ಕಾಲದಲ್ಲಿ ಕಂದಾಯದ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದ ಸೀನಣ್ಣ, ತಾಲ್ಲೂಕು ಕಚೇರಿಗೆ ಅಧಾರಸ್ಥಂಭದಂತೆ ಇದ್ದನಂತೆ. ಯಾರು ಯಾರಿಂದ ಎಷ್ಟೆಷ್ಟು ಕಂದಾಯವನ್ನು ವಸೂಲ್ಮಾಡಬೇಕು, ಯಾವ ಯಾವಾಗ, ಇವೆಲ್ಲವನ್ನು ಅವ ಚೆನ್ನಾಗಿ ತಿಳಿದುಕೊಂಡಿದ್ದನಂತೆ. ತುಂಬಾ ಜಾಣನಂತೆ, ಅಸಾಧ್ಯ ಜ್ಞಾಪಕ ಶಕ್ತಿ ಇತ್ತಂತೆ.

ಅದೇ ಕಚೇರಿಯಲ್ಲಿ ಅವನ ತಬ್ಬಲಿ ಸೋದರಳಿಯನ್ನ ಇಂದಾ-ಗೆ ನೌಕರ ನನ್ನಾಗಿ ಕೆಲಸಕ್ಕೆ ಸೇರಿಸಿದ್ದನಂತೆ. ಅಂದ ಮೇಲೆ ಸೋದರಳಿಯನ ನೆರವು ಸರ್ವದಾ ದೊರಕುತ್ತಿತ್ತಂತೆ.

ಹೀಗಾಗಿ ಸೀನಣ್ಣ ಆಡಿದ್ದೇ ಆಟ, ಹೂಡಿದ್ದೇ ನೋಟ, ಬರೆದಿಟ್ಟದ್ದೇ ದಾಖಲೆ. ಸಂದ ಹಣವನ್ನೆಲ್ಲಾ ನೂರು ಮೈಲಿ ಆಚೆ ಇದ್ದ, ತನ್ನ ಮಾವನ ಊರಿನಲ್ಲಿ ಜಮೀನು ಕೊಂಡುಕೊಳ್ಳಲು ಉಪಯೋಗಿಸಿಕೊಂಡನಂತೆ. ಜಮೀನೆಲ್ಲವನ್ನೂ ತನ್ನ ಹೆಂಡತಿಯ ಹೆಸರಿನಲ್ಲೇ ಮಾಡಿಸಿಟ್ಟನಂತೆ.

ಜಮಾಬಂದೀಗೆ ಎಂದು ಅಮಲ್ದಾರರು ಬಂದರಂತೆ. ಬಂದವರು ಪ್ರವಾಸಿ ಮಂದಿರದಲ್ಲಿ, ಸೋದರಳಿಯ ತಂದು ಕೊಟ್ಟ ಕಾಫಿ ತಿಂಡಿಗಳನ್ನು ತಿನ್ನುತ್ತಾ "ಈ ಸರ್ತಿ ಜಮಾಬಂದಿ ಮುಗಿಸಿ ಹೋದಮೇಲೆ, ನಮ್ಮ ಕೇಂದ್ರ ಕಚೇರಿಯಿಂದ ಆಡಿಟ್ ಸಿಬ್ಬಂದಿ ಕಳಿಸಿ ಲೆಕ್ಕ ಪತ್ರಗಳನ್ನೆಲ್ಲಾ ಕೂಲಂಕಷವಾಗಿ ತಪಾಸು ಮಾಡಿಸಬೇಕು" ಎಂದು ತಮಗೆ ತಾವೇ ಹೇಳಿಕೊಂಡರಂತೆ.

ಇದನ್ನು ಕೇಳಿ ಸೋದರಳಿಯನಿಗೆ ಹೆದರಿಕೆ ಆಯಿತಂತೆ. ಆ ರಾತ್ರಿ ಸೋದರ ಮಾವ ಸೀನಣ್ಣನ ಮನೆಗೆ ಹೋಗಿ ಗುಟ್ಟಿನಲ್ಲಿ "ಮಾವ! ಅಮಲ್ದಾರರು ಈ ಬೆಳಿಗ್ಗೆ ತಿಂಡಿ ಕಾಫಿ ತೆಗೆದುಕೊಂಡು ಹೋಗಿ ಕೊಟ್ಟಾಗ ಹೀಗೆ ಹೀಗೆ ಅಂದುಕೊಂಡರು. ಈಗಲೇ ವರ್ಗ ಮಾಡಿಸಿಕೊಂಡು ನೀವು ಬೇರೆ ಊರಿಗೆ ಹೊರಟು ಹೋಗೋದು ಲೇಸು. ನನ್ನನ್ನೂ ಕರಕೊಂಡು ಹೋಗಿಬಿಡಿ. ಇಲ್ಲೇ ಉಳಿದರೆ ಸಿಕ್ಕಿ ಹಾಕಿಕೊಂಡು ಬಿಡ್ತೇವೇನೋ?" ಎಂದು ಹೇಳಿದನಂತೆ.

"ಇಷ್ಟಕ್ಕೆಲ್ಲಾ ಯಾಕೆ ಹೆದರ್ತಿ. ಅವರ ಸಿಬ್ಬಂದಿಗೆ ಅವರು ಹೇಳಿ, ಅವ

ರೆಲ್ಲಾ ಇಲ್ಲಿಗೆ ಬಂದು ತಪಾಸ್ ಮಾಡುಕ್ಕೆ ಸುಮಾರು ಕಾಲ ಹಿಡಿಯುತ್ತೆ. ಅಷ್ಟು ಹೊತ್ತಿಗೆ ಆದಷ್ಟನ್ನು ಬೇಗ ಗೆಬಕಿಕೊಂಡುಬಿಡೋಣ. ಸಿಕ್ಕಿಹಾಕಿ ಕೊಳ್ಳದ ಹಾಗೆ ಉಪಾಯ ಹೂಡಿದ್ದೀನಿ" ಎಂದು ಸೀನಣ್ಣ ಹೇಳಿದನಂತೆ.

ಆರು ತಿಂಗಳಾಯಿತು. ತಿರುಗಿ ಜಮಾಬಂದೀಗೆ ಅಮಲ್ದಾರರು ಬಂದ ರಂತೆ. ಯಥಾಪ್ರಕಾರ ಸೋದರಳಿಯ ತನ್ನ ಮನೆಯಿಂದ, ಬೆಳ್ಳಿ ಕೂಜಾ ತುಂಬಾ ಕಾಫಿ, ಕ್ಯಾರಿಯರ್ ತುಂಬಾ ಇಡಲಿ ಸಾಂಬಾರ್ ಬೆಣ್ಣೆಯನ್ನು, ತೆಗೆದು ಕೊಂಡು ಹೋಗಿ ಪ್ರವಾಸಿ ಮಂದಿರದಲ್ಲಿ ಬೆಳಗಿನ ಝಾಮುವೇ ಹಾಜರಾದನಂತೆ.

ಎಂಟು ಇಡಲಿ ತಿಂದು, ಎರಡು ಕಾಫಿ ಬಟ್ಟಲು ನೆಂಜಿಕೊಂಡು, ಇನ್ನೊಂದು ಚೂರು ಇಡಲಿಯನ್ನು ಸಾಂಬಾರಿನಲ್ಲಿ ಅದ್ದುತ್ತಾ, ಅಮಲ್ದಾರರು "ಆತ್ಮಗತ" ಹೇಳಿದರಂತೆ.

"ಈ ಸಾರಿ ಒಂದೆರಡು ವಾರಗಳಲ್ಲಿ ಬಿಡುವು ಮಾಡಿಕೊಂಡು ಆಡಿಟ್ ನೌಕರರನ್ನು ಕರೆದುಕೊಂಡು ನಾನೇ ಬಂದು ಲೆಕ್ಕಪತ್ರಗಳನ್ನು ಪರೀಕ್ಷಿಸಬೇಕು. ಈ ತಾಲ್ಲೂಕಿನಿಂದ ಮೂವತ್ತು ಸಾವಿರ ವರಮಾನ ಇರಬೇಕು, ಮೂರು ವರ್ಷ ಗಳಿಂದ ಒಟ್ಟು ಮೂರು ಸಾವಿರವೂ ಜಮಾ ಆಗಿಲ್ಲ ಅಂತ ರೆವಿನ್ಯೂ ಕಮಿಷನರು ದಬಾಯಿಸಿ ಬರೆದಿದ್ದಾರೆ" ಎಂದು.

ಆ ರಾತ್ರಿ ಸೀನಣ್ಣನಿಗೆ ಸೋದರಳಿಯ ಈ ಸುದ್ದಿ ತಿಳಿಸಿದನಂತೆ. ಆಗ ಸೀನಣ್ಣ ನಿಮಿರಿ ಕುಳಿತು "ಈಗ ನಾವು ಎಚ್ಚರವಾಗಬೇಕು. ಇವತ್ತೇ ವರ್ಗ ಮಾಡಿಸಿಕೊಳ್ಳುವ ಸನ್ನಾಹಕ್ಕೆ ಶುರು ಮಾಡ್ತೇನೆ, ಹಾಗೂ ಮಿಕ್ಕ ಏರ್ಪಾಡು ಗಳನ್ನೂ ತ್ವರಿತಗೊಳಿಸುತ್ತೇನೆ" ಎಂದು ಹೇಳಿದನಂತೆ.

ಮಾರನೆಯ ಬೆಳಿಗ್ಗೆಯೇ ಪ್ರವಾಸಿ ಮಂದಿರಕ್ಕೆ ತಾನೇ ಕಾಫಿ ತಿಂಡಿಗಳನ್ನು ಹೊರಿಸಿಕೊಂಡು ಹೋದನಂತೆ. "ಹೆಂಡತಿಗೆ ಸಖತ್ ಖಾಯಿಲೆ ಆಗಿದೆ, ಉಳೀತಾಳೋ ಇಲ್ಲವೋ ಹೇಳುವುದು ಕಷ್ಟ" ಎಂದು ತನ್ನ ಮಾವ ತಾರೀಖು ತೋರದೆ ಎಂದೋ ಬರೆದಿದ್ದ ಕಾಗದವನ್ನೂ ಅಮಲ್ದಾರರ ಮುಂದಿಟ್ಟನಂತೆ. ಆರು ತಿಂಗಳಿಂದ ಕ್ಷಯದ ಸೂಚನೆ ಇತ್ತು. ಕಡೆಗಾಲದಲ್ಲಾದರೂ ಆಕೆ ಯೊಡನೆ ಇದ್ದು ಆದಷ್ಟು ಶುಶ್ರೂಷೆ ಮಾಡಬೇಕು ಎಂದು ಆಸೆ. ದಯವಿಟ್ಟು ನನ್ನನ್ನೂ ಆ ಗ್ರಾಮಕ್ಕೆ ವರ್ಗ ಮಾಡಬೇಕು, ಖಾವಂದರು, ಎಂದು ಬಿನ್ನವಿಸಿ ಕೊಂಡನಂತೆ.

"ಜಮಾಬಂದೀಗೆ ಬಂದಾಗ ಎಲ್ಲಾ ಸರಬರಾಜನ್ನೂ ಅಣಿಯಾಗಿ ಮಾಡ್ತಿ, ಬಡ್ತಿ ಕೊಟ್ಟು ನನ್ನ ಆಫೀಸಿಗೆ, ಸ್ವಂತ ಕಾರಕೂನನನ್ನಾಗಿ ಕರೆಸಿ ಕೊಳ್ಳೋಣ ಅಂತಿದ್ದೆ. ಈಗ ಹೀಗಂತ ಬೇಡ್ತೀಯಲ್ಲಾ ?" ಎಂದು ಅಮಲ್ದಾರರು ಅಂದರಂತೆ.

"ಮಹಾ ಸ್ವಾಮಿ! ಹೆಂಡತಿ ಹೆಣ ಬಿದ್ದಮೇಲೆ ಹಣ ಕಟ್ಟಿಕೊಂಡು ಏನು ಮಾಡಲಿ? ಆಕೆ ತುಂಬಾ ದುಡಿದಿದ್ದಾಳೆ, ನನ್ನ ಸುಖಕ್ಕೆ, ನನ್ನ ಅನುಕೂಲಕ್ಕೆ, ಆ ಒಲವಿನ ಋಣವನ್ನು ಸ್ವಲ್ಪವಾದರೂ ತೀರಿಸಬೇಡವೇ ?" ಎಂದು ಕಣ್ಣೀರು ತಂದುಕೊಂಡೇ ಸೀನಣ್ಣ ಹೇಳಿದನಂತೆ.

ಅಮಲ್ದಾರರ ಮನಸ್ಸು ಕರಗಿತಂತೆ. ಆ ಬೆಳಿಗ್ಗೆ ತಿಂದಿದ್ದ ನಾಲ್ಕು ಈರುಳ್ಳಿ ದೋಸೆಗಳೂ ಅವರ ಹೊಟ್ಟೆಯಲ್ಲಿ ಕರಗಲು ಶುರುವಾಗಿತ್ತಂತೆ. ಅಂತೂ "ಆಗಲಿ ಸೀನಣ್ಣ, ಒಂದು ವಾರದಲ್ಲೇ ವರ್ಗಮಾಡುವ ಆರ್ಡರ್ ಕಳಿಸ್ತೀನಿ" ಎಂದು ಹೇಳಿದರಂತೆ.

ಆ ದಿನದ ಜಮಾಬಂದಿಯನ್ನೂ ತೇಗುತ್ತಾ ತೇಗುತ್ತಾ ಅಮಲ್ದಾರರು ಬೇಗ ಮುಗಿಸಿದರಂತೆ. ತಮ್ಮ ಊರಿಗೆ ಹಿಂದಿರುಗಿದರಂತೆ.

ಮಾರನೇ ದಿನವೇ ಸೀನಣ್ಣ ಪ್ರವಾಸಿ ಮಂದಿರದ ಹಿಂದುಗಡೆ ಇದ್ದ ಸಾದೆ ಮನೆಗೆ ಹೋದನಂತೆ. ಲಾಗಾಯ್ತಿನಿಂದಲೂ ಆ ಮನೆಯಲ್ಲಿ ಹೊರವಾಗಿ ಗೋಡೆ ತುಂಬಾ ಗೆದ್ದಿಲು ಬೆಳೆದಿತ್ತಂತೆ. ಒಂದು ಸಣ್ಣ ಡಬ್ಬದಲ್ಲಿ ಹುಳುಗಳ ಸಹಿತ ಆ ಗೆದ್ದಿಲು ಗೂಡನ್ನು ಹಾಕಿಕೊಂಡು ಕಚೇರಿಗೆ ಬಂದನಂತೆ.

ತಾಲ್ಲೂಕು ಕಚೇರಿಯಲ್ಲಿ ಹಿಂದಿನ ವರಾಂಡವನ್ನು ಜವಾನರು ಮಲಗುಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರಂತೆ. ಹೆಂಚು ಹಾಕಿದ ವರಾಂಡಾ ಅದು. ಒಂದು ಕಡೆ ಗೋಡೆಯಿಲ್ಲ. ಬರೀ ಮರದ ಕಟಕಟ್ಟೆ ಹಾಕಿತ್ತಂತೆ. ಆ ವರಾಂಡಾದ ಗೋಡೆಯಲ್ಲಿ ಗೆದ್ದಿಲು ಬಳ್ಳಿಗಳು ಮೂರು ನಾಲ್ಕು ಕಾಣಿಸುತ್ತಿದ್ದುವಂತೆ.

ಅಲ್ಲಿ ಹೋಗಿ ತಾನು ಪ್ರವಾಸಿ ಮಂದಿರದಿಂದ ತಂದಿದ್ದ ಗೆದ್ದಿಲು ಗೂಡನ್ನು ಗೋಡೆಯಂಚಿನಲ್ಲಿ, ಮಣ್ಣಿನ ನೆಲದಲ್ಲಿ ಗುಂಡಿ ತೆಗೆದು ಹಾಕಿದನಂತೆ. ಮೇಲೆ ಹಗೂರಾಗಿ ಹಸಿ ಮಣ್ಣನ್ನೂ ಹಾಕಿದನಂತೆ. ಸೋದರಳಿಯನೂ ಸೀನಣ್ಣನೂ ತಾಲ್ಲೂಕು ಕಚೇರಿಯಿಂದ ಇಷ್ಟು ಮಾಡಿ ಹೊರಗೆ ಬರುವಾಗ ಬೆಳಗಾಗಿತ್ತಂತೆ. ಆಗತಾನೇ ತಾಲ್ಲೂಕ್ ಕಚೇರಿಯ ಕಾವಲುಗಾರ ಜವಾನ ಊಗಾಡುತ್ತಾ

ಬರುತ್ತಿದ್ದನಂತೆ. "ಸೋಮಿ ದಂಡ ಬಿದ್ದೆ, ನೆನ್ನೆ ನೀವು ದೊಡ್ಡ ಮನಸ್ಸು ಮಾಡಿ, ಸಂತೇಗೆ ಹೋಗಿ 'ಸಾಮಾನು ತಾ' ಅಂದಿರಿ, ಅಲ್ಲಿಗೆ ಹೋದೆ. ನನ್ನ ಭಾವನ್ಮೈದ ಸಿಕ್ಕಿದ. ಮನೇಲಿ ರಾತ್ರಿ ಉಂಡು ಹೋಗುವಂತೆ ಅಂದ, ನಿಮಗೆ ಗೊತ್ತಿಲ್ಲ, ಅವ ಸೇಂದಿ ಅಂಗಡಿ ಮಡಗವ್ನೆ. ಅವನ ಜತೆ ಉಂಡೆ, ನಿದ್ದೆ ಬಂತು. ಈಗ ತಾನೇ ಬೇಗ ಎದ್ದು ಬರ್ತಾ ಇದೀನಿ. ರಾತ್ರಿ ಬರ್ನಿಲ್ಲ ಅಂತ ಬಯ್ಯ ಬೇಡಿ" ಎಂದು ಅಡ್ಡ ಬಿದ್ದನಂತೆ.

"ಪರವಾಗಿಲ್ಲ ಬಿಡೋ ಯಾರಿಗೂ ಗೊತ್ತಾಗಲಿಲ್ಲ" ಅಂದನಂತೆ ಸೀನಣ್ಣ.

ಆ ದಿನ ಮಧ್ಯಾಹ್ನ ಶಿರಸ್ತೆದಾರ್ರಿಗೆ ಸೀನಣ್ಣ ಹೇಳಿದನಂತೆ. "ಸಾಹೇಬ್ರ! ಹಿಂದಿನ ವರಾಂಡಾದಲ್ಲಿ ಕಾವಲು ಜವಾನ ಮಲಗ್ತಾನೆ. ತುಂಬಾ ಥಂಡಿ ಅಲ್ಲಿ. ಆಗಾಗ್ಗೆ ಸೀರ್ ಗೂರ್ ಅಂತ ಗೊರಗುಟ್ಟುತಾನೆ. ನೀವು ಒಪ್ಪಿದರೆ ಕಾಗದ ಪತ್ರಗಳ ಬೀರುಗಳನ್ನು ಹಿಂದಿನ ವರಾಂಡಾದಲ್ಲಿಟ್ಟು, ದೊಡ್ಡ ಹಾಲಿನಲ್ಲಿ ಅವ ಮಲಗುವುದಕ್ಕೆ ಏರ್ಪಾಡು ಮಾಡಬಹುದು" ಎಂದು.

"ಅವನಿಗೇನಾದರೂ ಕ್ಷಯಗಿಯನೇನ್ರಿ?" ಎಂದರಂತೆ ಶಿರಸ್ತೆದಾರರು. ಅವರಿಗೆ ಹೆದರಿಕೆ. ಕಾವಲು ಜವಾನನೇ ಅವರ ಮನೆಗೆ ಹಾಲು ತರಕಾರಿ ಪುಕಟ್ಟೆ ಸರಬರಾಜು ಮಾಡುವವನು.

"ಇಲ್ಲ. ಸ್ವಲ್ಪ ಉಬ್ಬಸ ಅವನಿಗೆ ಅಷ್ಟೇ!" ಎಂದನಂತೆ ಸೀನಣ್ಣ.

ಶಿರಸ್ತೆದಾರರ ಅಪ್ಪಣೆ ಪಡೆದು, ಕಾಗದ ಪತ್ರಗಳಿದ್ದ ಬೀರುಗಳನ್ನು ಹಿಂದಿನ ವರಾಂಡಾಕ್ಕೆ ಸಾಗಿಸಿದರಂತೆ. ಭದ್ರವಾಗಿ ಬೀಗ ಹಾಕಿದರಂತೆ.

ಎಂಟನೇ ದಿನವೇ ಸೀನಣ್ಣನ ವರ್ಗದ ಆರ್ಡರ್ ಬಂತಂತೆ. ಮಾರನೆ ದಿನವೇ ಅವ ತನ್ನ ಮಾವನ ಊರಿಗೆ ಹೊರಟನಂತೆ. ಹೊರಡುವ ಮುನ್ನ ಅಮಲ್ದಾರರಿಗೆ ಒಂದು ಮೂಗರ್ಜಿಯನ್ನು ಸೋದರಳಿಯನ ಕೈಲಿ ಬರಸಿ ಹಾಕಿಸಿದನಂತೆ.

* * * * *

ಶಿರಸ್ತೆದಾರರಿಗೆ ಸಿಡಿಲು ಬಡಿದಂತಾಯಿತಂತೆ, ಆ ದಿನ ಅಮಲ್ದಾರರು ಆಡಿಟ್ ಸಿಬ್ಬಂದಿಯೊಡನೆ ಜಮಾಬಂದಿಗೆ ಹಠಾತ್ತಾಗಿ, ಬಂದಿದ್ದಾರೆ, ಅಂತ ಪ್ರವಾಸಿ ಮಂದಿರದ ಆಳು ಬಂದು ಹೇಳಿದಾಗ.

ಜಟ್ಟಂತ ಹೋಗಿ ಪ್ರವಾಸಿ ಮಂದಿರದಲ್ಲಿ ಭೇಟಿಯಾದರಂತೆ.

ಅಮಲ್ದಾರರು ರೇಗಿದಂತೆ ಕಂಡಿತಂತೆ. "ಏನ್ರೀ! ಬೆಣ್ಣೇಲಿ ಕೂದಲು ತೆಗೆದ ಹಾಗೆ ಮಾತಾಡ್ತೀರಿ, ಆದರೆ ಒಳಗೊಳಗೇ ಛಪಾವಣೆ ಆಗ್ತಿರುತ್ತೆ, ಈಗಲೇ ನಿಮ್ಮ ಕಚೇರಿ ಇನ್‌ಸ್ಪೆಕ್ಷನ್ ಮಾಡ್ತೀನಿ" ಎಂದರಂತೆ.

"ಆಗಬಹುದು, ಮಹಾಸ್ವಾಮಿ! ಏನೂ ತಪ್ಪಾಗಿಲ್ಲ" ಎಂದರಂತೆ ಶಿರಸ್ತೆದಾರರು. ಅವರ ಕಚೇರಿಯಲ್ಲಿ ಆಗಿದ್ದು ಅವರಿಗೇನು ಗೊತ್ತು? ಸಾಧು ಮನುಷ್ಯ.

ಇನ್‌ಸ್ಪೆಕ್ಷನ್ ಶುರುವಾಯಿತು. ಶಿರಸ್ತೆದಾರರ ಕೊಠಡಿಯಲ್ಲಿದ್ದ ಪುಸ್ತಕಗಳ ತನಿಖೆ ಆಯಿತು. ಸರಿಯಾಗಿತ್ತು. ಮಿಕ್ಕ ರೆಕಾರ್ಡ್ ನೋಡೋಣ, ಅದಕ್ಕೂ ನಿಮ್ಮ ಪುಸ್ತಕಗಳಿಗೂ ತಾಳೆ ಆಗುತ್ತೋ ಎಂದರು ಅಮಲ್ದಾರರು.

ಆಡಿಟ್ ಸಿಬ್ಬಂದಿಯೊಡನೆ ಅಮಲ್ದಾರರು, ಹಿಂದಿನ ವರಾಂಡಾಕ್ಕೆ ಹೋದರು. ಬೀರುಗಳ ಬೀಗಗಳಿಗೆ ಬಟ್ಟೆ ಕಟ್ಟಿ ಶಿರಸ್ತೆದಾರರೇ ಮೊಹರು ಹಾಕಿದ್ದರು. ಅವರೇ ಖುದ್ದಾಗಿ ಮೊಹರು ಒಡೆದು, ಬೀಗ ತೆಗೆಸಿದರು, ಬೀರುವಿನ ಬಾಗಿಲು ತೆಗೆದರು.

ಗೆದ್ದಿಲ ಸಂತೆಯೇ ಮಳೆ ಬಿದ್ದಹಾಗೆ ಹೊರಗೆಬಿದ್ದುವು. ಒಂದಾದರೂ ಹಳೆ ದಾಖಲೆಯಾಗಲಿ, ಪತ್ರವಾಗಲಿ, ಬಂಡಾ ಆಗಿ ದೊರಕಲಿಲ್ಲ.

"ಹೀಗೇನೇನ್ರಿ! ರೆಕಾರ್ಡ್ಸ್ ಇಡೋದು! ಯಾವತ್ತ್ರಿ, ನೀವು ಈ ಬೀರು ತೆಗೆದಿದ್ದು?" ಎಂದು ಎರಗಿದರು ಅಮಾಲ್ದಾರರು.

"ಮಹಾಸ್ವಾಮಿ! ಹತ್ತುದಿನದ ಹಿಂದೆ ನಾನೇ ಬಾಗಿಲಿಗೆ ಮೊಹರು ಹಾಕಿದೆ. ಎಲ್ಲಾ ರೆಕಾರ್ಡುಗಳೂ ಸರಿಯಾಗಿತ್ತು. ಎಲ್ಲಿಂದಲೋ ಯಾವ ಮಾಯದಲ್ಲೋ ಗೆದ್ದಿಲು ನುಗ್ಗಿದೆ. ಇದಕ್ಕೆ ನಾನೇನು ಮಾಡಲಿ?" ಎಂದು ಶಿರಸ್ತೆದಾರರು ಹೇಳಿದರಂತೆ.

"ತಾವೇ ಹತ್ತುದಿನಗಳ ಹಿಂದೆ ಬಂದಿದ್ದಾಗ ಎಲ್ಲವನ್ನು ಪರೀಕ್ಷಿಸಿ ಸರಿಯಾಗಿದೆ ಅಂತ ನನ್ನ ಪುಸ್ತಕದಲ್ಲಿ ಬರೆದು ಹೋಗಿದ್ದೀರಲ್ಲಾ?" ಎಂದೂ ನೆನಪು ಮಾಡಿಕೊಟ್ಟರಂತೆ.

ತಮ್ಮ ಹಳೆಯ ಅನುಭವವನ್ನೆಲ್ಲಾ ಉಪಯೋಗಿಸಿಕೊಂಡು, ಅಮಲ್ದಾರರು ನೌಕರರೆದುರಿಗೆ ಬಚಾವ್ ಮಾಡಿಕೊಳ್ಳುವ ಹೊತ್ತಿಗೆ ಸುಸ್ತಾಗಿ ಹೋಗಿದ್ದರಂತೆ.

ಹೇಳಿ ಮಾಡಿಸುವ ಕೆಲಸ ಹಾಳು, ತಾನು ಮಾಡುವ ಕೆಲಸ ಮೇಲು ಎಂದು

ತಿಳಿದಿದ್ದ ಸೀನಣ್ಣ, ಸರಿಯಾದ ಹೊತ್ತಿನಲ್ಲಿ ವರ್ಗ ಹೋಗಿ, ಕೂಡಲೆ ಅಜಮಾಯಿಷಿ ಆಗುವಂತೆ ಅರ್ಜಿ ಬರೆಸಿ ಆ ವೇಳೆಗೆ ಗದ್ದಿಲು ಹುತ್ತವನ್ನು ಬೀರುಗಳಲ್ಲಿ ಬೆಳೆಸಿ ಬದುಕಿಕೊಂಡನಂತೆ.

ಎಂದು ನನ್ನ ಅಡುಗೂಲಜ್ಜಿ ಸೀನಣ್ಣನ ಕತೆಯನ್ನು ಹೇಳಿದಳಂತೆ.

ಕಾಗೆ ಉಪಾಯದ ಕತೆ

ಇಂದಾನೊಂದು ಕಾಲದಲ್ಲಿ ಹಯವದನ ಎಂಬ ಹೆಸರಿನ ಯುವಕ ಒಬ್ಬ ನಿದ್ದನಂತೆ. ಹೆಸರಿಗೆ ತಕ್ಕಂತೆ ಕುದುರೆಗಳ ಮೇಲೆ ಪ್ರೀತಿಯಂತೆ, ಅವನಿಗೆ. ಕಾರಣ ಅವುಗಳಮೇಲೆ ಬಾಜಿಕಟ್ಟಿ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುತ್ತಿದ್ದನಂತೆ.

ತಿಂಗಳಿಗೆ ಅವನಿಗೆ ರೇಷನ್ ಅಂಗಡೀಲಿ ಬರ್‍ತಾಇದ್ದ ಸಂಬಳ ನೂರಾ ಇಪ್ಪತ್ತಂತೆ. ಆ ಸಂಬಳದಲ್ಲಿ ಕೊಠಡಿ ಬಾಡಿಗೆ, ಎರಡು ಹೊತ್ತು ಊಟ, ಎರಡುವೇಳೆ ತಿಂಡಿ ಕಾಫಿ, ಲಕ್ಷಣವಾದ ಷರಾಯಿ, ಬುಷ್‌ಷರ್ಟು, ಎಲ್ಲವೂ ಆಗಿ, ಜತೆಗೆ ಕುದುರೆ ಬಾಲಕ್ಕೆ ಕಟ್ಟುಕ್ಕೆ ಹಣದ ಚೌರಿಯೇ ಬೇಕಾದಾಗ, ಸಾಲ ಮಾಡಲೇಬೇಕಾಯಿತಂತೆ.

ನಾಲ್ಕು ಕುದುರೆ ಪಂದ್ಯಗಳಾದುವಂತೆ. ನಾಲ್ಕು ಪೈಸೇನೂ ಬರಲಿಲ್ಲವಂತೆ. ಆ ರಾತ್ರಿ ನಿದ್ರೇನೂ ಬರಲಿಲ್ಲವಂತೆ. ಮಾರನೆ ದಿನ ಎಂಟು ಗಂಟೆಗೆ ರೇಷನ್ ಅಂಗಡಿ ತೆಗೆದಾಗ, ಬಾಗಿಲ ಹೊರಗೇ ಪಠಾಣ ಕಾದಿರ್‍ತಾನಲ್ಲಪ್ಪ ? ಅವನು ತದುಕಿಬಿಡ್ತಾನಲ್ಲಪ್ಪ ? ಎಂದು ಹಯವದನ ಹೆದರಿದನಂತೆ.

ಕಾರಣ ಕೆರೆಗೆ ಹೋಗಿ ಬಿದ್ದು ಪ್ರಾಣ ಕಳೆದುಕೊಳ್ಳುವುದೇ ಮೇಲು ಅಂತ ಬೆಳಗಿನ ಝಾಮು ಆರು ಗಂಟೆಗೆ ಊರಾಚೆ ಇದ್ದ ಕೆರೆಯ ಬಳಿಗೆ ಹೋದನಂತೆ. ಕೆರೆ ನೀರು ಪೂರ್ತಿ ಬತ್ತಿಹೋಗಿದೆ. ಊರನಾಯಕರು ಮಾಡಿದ ಪಾಪವೆಲ್ಲಾ ಕೆರೆ ನೀರನ್ನೂ ಕುದಿಸಿ ಆವಿಯನ್ನಾಗಿ ಹಾರಿಸಿದೆ! ಪಾಪಿ! ಆತ್ಮಹತ್ಯೆಗೆ ಅಂತ ಕೆರೆಗೆ ಬಂದರೆ, ಕೆರೆ ಅಂಗಳ ಒಣಗಿರಬೇಕೇ? ಎಂದು ಖಿನ್ನನಾಗಿ ತಲೆ ಮೇಲೆ ಕೈ ಇಟ್ಟುಕೊಂಡು ಕೂತನಂತೆ.

ಕೆರೆ ಮಂಟಪದ ಹತ್ತಿರ ಒಂದು ಹೂಜ ಬಿದ್ದಿತ್ತಂತೆ. ಅದರ ಹತ್ತಿರಕ್ಕೆ ಒಂದು ಕಾಗೆ ಹಾರಿಹೋಗಿ, ಕೊಕ್ಕನ್ನು ಒಳಗೆ ಇಳಿಸಲು ಯತ್ನಿಸಿತಂತೆ. ಎರಡು ಮೂರು ಸಾರಿ ಪ್ರಯತ್ನಪಟ್ಟು ನಂತರ ಕಾ ಕಾ ಎಂದು ಕೂಗಿತಂತೆ. ಗಂಟಲು ಒಣಗಿದ್ದಿರಬೇಕು, ಕಾಗೆಗೆ, ಕ್ರಾ,ಕ್ರಾ ಅಂತ ಕೇಳಿಸಿತಂತೆ. ಆಮೇಲೆ ಆ ಕಾಗೆ ಸಣ್ಣ ಕಲ್ಲೊಂದನ್ನು ಎತ್ತಿತಂದು ಆ ಹೂಜದಲ್ಲಿ ಹಾಕಿತಂತೆ. ಇನ್ನೊಂದುಕಲ್ಲು ತಂದುಹಾಕಿತಂತೆ. ಮತ್ತೊಂದು ಕಲ್ಲುಹಾಕಿತಂತೆ. ಸುಮಾರು

ಕಲ್ಲು ಹಾಕಿದಮೇಲೆ, ಕೊಕ್ಕನ್ನು ಹೂಜಾದ ಒಳಕ್ಕೆ ಇಳಿಬಿಟ್ಟು ನೋಡಿತಂತೆ. ನೀರು ಸಿಕ್ಕಿರಬೇಕು. ಅದು ಬೇಕಾದಷ್ಟು ಕುಡಿದಿರಬೇಕು. ಸಂತೋಷದಿಂದ, ತೇಗಿದಾಗ, ಕಾ ಕಾ ಶಬ್ದವೇ ಕೇಳಿಸಿತಂತೆ. ಖುಷಿಯಾಗಿ ರೆಕ್ಕೆಬಿಚ್ಚಿ ಕಾಗೆ ಹಾರಿಹೋಯಿತಂತೆ.

ಇದನ್ನೆಲ್ಲಾ ಹಯವದನ ನೋಡಿದನಂತೆ. ಮಿಂಚು ಬಡಿದಹಾಗೆ ಅವನ ತಲೆಗೆ ಯೋಚನೆ ಹೊಳೆಯಿತಂತೆ. ಹಿಂತಿರುಗಿ ಬಂದನಂತೆ ಕೊಠಡಿಗೆ. ಉಡುಪು ಧರಿಸಿ ರೇಷನ್ ಅಂಗಡೀಗೆ ಹೋದನಂತೆ. ಎಲ್ಲೋ ನೋಡುತ್ತಾ ಬೈಸಿ ಕಲ್ಲು ಹಿಡಿದು ನಿಂತಿದ್ದ ಪಠಾಣನನ ಬೆನ್ನು ತಟ್ಟಿದನಂತೆ. ಕಕ್ಷಿಗಾರರೆಲ್ಲ ಪಠಾಣ ನನ್ನ ಕಂಡರೆ ಕಣ್ಣು ತಪ್ಪಿಸಿಕೊಂಡು ಓಡಿಹೋಗುವ ವಾಡಿಕೆ. ಅಂತಹುದರಲ್ಲಿ ಹಯವದನ ಮೇಲೆಬಿದ್ದುಬಂದು, ಕ್ಷೇಮಸಮಾಚಾರ ವಿಚಾರಿಸಿ, ಸಿಗರೇಟ್ ಕೊಟ್ಟನಲ್ಲ! ಇವನಿಗೆ ಎಲ್ಲೋ ಹಣ ಬಂದಿರಬೇಕು. ಯಾವುದೋ ಕುದುರೆ ಒಲಿದಿರಬೇಕು, ಎಂದುಕೊಂಡನಂತೆ ಪಠಾಣ. ಅದ್ಮಿ ಹತ್ತಿರ ಹಣ ಇದೆ ಎಂದು ತೋರಿದರೆ ಪಠಾಣ ಬಾಕಿಯನ್ನು ಯಾಕೆ ವಸೂಲ್ಮಾಡ್ತಾನೆ? ಆದಷ್ಟು ಬಡ್ಡಿ ಯನ್ನು ಆದ ಆದಾಗಲೆಲ್ಲಾ ಕಸೀತಾನೆ. ಪಠಾಣನ ಮುಖ ಈ ಆಲೋಚನೆ ಗಳಿಂದ ಪ್ರಸನ್ನವಾದುದನ್ನು ಕಂಡು ಹಯವದನ ಅಂದನಂತೆ. ಮುಂದಿನ ಭಾನುವಾರದ ಹೊತ್ತಿಗೆ ನಿನ್ನ ಸಾಲ ಬಡ್ಡಿ ಸಹಿತ ತೀರಿಸ್ತೀನಿ. ಈಗ ಇರುವ ಸ್ವಲ್ಪ ಹಣ ಹಾಕಿ ಒಂದು ಅಂಗಡಿ ಕೊಂಡುಕೋತೀನಿ ಎಂದನಂತೆ. ಪಠಾಣ ನಿಗೆ ಖುಷಿಯಾಯ್ತಂತೆ. ಈ ಗಿರಾಕಿಗೆ ಹಣ ಬಂದರೆ, ಎಂದಿದ್ದರೂ ಕೊನೆಗೆ ನನಗೇ ಬಂದಹಾಗಲ್ಲವೇ? ಅಂತ. ಆಗಲಿ ಅಂದನಂತೆ.

ರೇಷನ್ ಅಂಗಡೀಗೆ ಹೋದನಂತೆ. ಬಿರುಸಾಗಿ ಕೆಲಸ ಮಾಡಿದನಂತೆ. ಒಂದು ಗಂಟೆಗೆ ಅಂಗಡಿ ಮುಚ್ಚಿ ಊಟಕ್ಕೆ ಹೋಗಬೇಕು. ಆಗ ಹಯವದನ ಹೇಳಿದನಂತೆ. ಅಂಗಡಿ ಉಗ್ರಾಣದಲ್ಲೇ ಮಲಗಿರ್ತೀನಿ. ಬೇರೆ ಕೆಲಸ ಇಲ್ಲ. ಕೊಠಡಿಗೆ ಹೋಗಿ ಒಂಟಿಯಾಗಿರುಕ್ಕೆ ಬೇಜಾರು ಎಂದನಂತೆ, ಮ್ಯಾನೇಜರಿಗೆ. ಆಗಲಿ ಅಂದರು ಮ್ಯಾನೇಜರು.

ಕೆರೆ ಅಂಗಳದಲ್ಲಿ ಕಾಗೆ ಹೂಡಿದ ಉಪಾಯವನ್ನೇ ಮೆಲುಕು ಹಾಕುತ್ತಿದ್ದ ನಂತೆ, ಹಯವದನ. ಒಂದು ಚೀಲ ಅಕ್ಕಿಯನ್ನು ಎರಡು ಚೀಲಗಳಿಗೆ ಅರ್ಧರ್ಧ ತುಂಬಿದನಂತೆ. ಸಣ್ಣಪುಟ್ಟ ಕಲ್ಲುಗಳನ್ನು ಉಗ್ರಾಣದ ಹಿಂದೆ ಮನೆ ರಿಪೇರಿ

ಮಾಡುವ ಕಂಟ್ರಾಕ್ಟರು ಗುಡ್ಡೆ ಹಾಕಿದ್ದನಂತೆ. ಬೇಬಿ ಜಲ್ಲಿಕಲ್ಲು ಸಣ್ಣದಾಗಿ ಬೆಳ್ಳಗೆ ನೋಡಲು ಚೆನ್ನಾಗಿತ್ತಂತೆ. ಅರ್ಧಚೀಲ ಬೇಬಿಜಲ್ಲಿ ಅರ್ಧಚೀಲ ಅಕ್ಕಿ, ಹೀಗೆ ಒಂದು ಚೀಲಾನ ಎರಡು ಚೀಲಾ ಮಾಡಿದನಂತೆ. ಆ ಮಧ್ಯಾಹ್ನ ಬಂದವರಿಗೆಲ್ಲಾ ಅಳತೆಹಾಕಿ ಕೊಡುವಾಗ, ಏನು ವಿನಯ, ಎಷ್ಟು ಉತ್ಸಾಹವನ್ನು ಹಯವದನ ತೋರುತ್ತಿದ್ದಾನೆ ಎಂದು ಮ್ಯಾನೇಜರು ಸಹಬ್ಬಾಸ್ ಅಂದರಂತೆ.

ಈ ಉಪಾಯದಿಂದ ಭಾಗ್ಯಲಕ್ಷ್ಮಿಯ ಸೆರಗಂಚನ್ನು ಹಯವದನ ಹಿಡಿದ ಹಾಗಾಯ್ತಂತೆ. ಮೆಲ್ಲಮೆಲ್ಲಗೆ ಸೆರಗನ್ನೇ ಹಿಡಿದ. ಭಾಗ್ಯಲಕ್ಷ್ಮೀನೂ ಒಲಿದ ಳಂತೆ. ಕಳ್ಳತನದಲ್ಲಿ ಯಾರಿಗೂ ಕಾಣದಹಾಗೆ, ಯಾರಿಗೂ ಗೊತ್ತಾಗುಲ್ಲ ಅಂತ ಅನ್ನಿಸಿದರೆ, ಯಾವ ಹೆಣ್ಣು ತಾನೆ ಒಲಿಯುಲ್ಲ!

ಈಗ ಹಯವದನ ಸಾರಕ್ಕಿ ಬಂಡೆಗಳ ಹತ್ತಿರ ಅಕ್ಕಿಗಾಗಿ ಜಲ್ಲಿ, ಗೋಧಿ ಗಾಗಿ ಆ ಬಣ್ಣದ ಜಲ್ಲಿ, ಕಡಲೆಗಾಗಿ ಜಲ್ಲಿ, ಹೀಗೆ ನಾನಾ ತರಹ ಜಲ್ಲಿ ತಯಾರಿ ಸುವ ಕಾರ್ಖಾನೆ ಇಟ್ಟಿದಾನಂತೆ.

ಸುಲಭ ದರದಲ್ಲಿ ದೇಶದಾದ್ಯಂತ ದಿನಸಿ ಅಂಗಡಿಗಳಿಗೆ ಕಿಲೋಗ್ರಾಂ ಚೀಲ ಗಳಲ್ಲಿ, ಐದು ಕಿಲೋ ಪ್ಲಾಸ್ಟಿಕ್ ಚೀಲಗಳಲ್ಲಿ, ೧೦ ಕಿಲೋ ಕೈ ಚೀಲಗಳಲ್ಲಿ, ಕ್ವಿಂಟಾಲಿನ ಹಳೆ ಸಿಮೆಂಟ್ ಚೀಲಗಳಲ್ಲಿ, ಸರಬರಾಜು ಮಾಡುತ್ತಿದ್ದಾನಂತೆ. ಅಖಿಲಭಾರತ ಕಾರ್ಯಕ್ರಮವನ್ನೂ ಯೋಜಿಸಿದ್ದಾನಂತೆ.

ಅಕ್ಕಿಯನ್ನು ಭಾರತ ಆಮದುಮಾಡಿಕೊಳ್ಳುವ ದೇಶಗಳಿಗೆಲ್ಲಾ ಹೋಗಿ ತನ್ನ ಸರಕನ್ನು ಗೋಪ್ಯವಾಗಿ ಮಾರಿ, ಆ ದೇಶಗಳ ಮಂದೀಗೆಲ್ಲಾ ತನ್ನ ಉಪಾಯ ಹೇಳಿಕೊಟ್ಟು, ಹೇರಳವಾಗಿ ವಿದೇಶಿ ವಿನಿಮಯವನ್ನೂ ಸಾಧಿ ಸಿದ್ದಾನಂತೆ.

ಈ ಉಪಕಾರಕ್ಕಾಗಿ ಸರಕಾರ ಅವನನ್ನು ಗೌರವಿಸಿತಂತೆ. ಈಗ ಪದ್ಮಶ್ರೀ ಹಯವದನರಾಯ ಅಂತ ವಿಸಿಟಿಂಗ್ ಕಾರ್ಡುಗಳನ್ನು ಅಚ್ಚಿಸಿದ್ದಾನಂತೆ.

ಎಂದು ನನ್ನ ಅಡುಗೂಲಜ್ಜಿ ಕಾಗೆ ಉಪಾಯದ ಕತೆಯನ್ನು ಮೊಮ್ಮಕ್ಕ ಳಿಗೆ ಹೇಳುತ್ತಾ, ತಿಂದ ಹುರುಗಾಳಿನಲ್ಲಿ ಸಿಕ್ಕ ಕಲ್ಲನ್ನು ಕಟಂ ಅಂತ ಕಡಿದು, ಉಗುಳಿದಳಂತೆ.

ಶಿಷ್ಯ - ಬೇವಿನ ಎಣ್ಣೆಯ ಕತೆ

ಇಂದಾನೊಂದು ಕಾಲದಲ್ಲಿ ಒಬ್ಬ ಪಂಡಿತ ಇದ್ದನಂತೆ. ದೇವಸ್ಥಾನದ ಪಾಠಶಾಲೆಯಲ್ಲಿ ಅವ ಸಂಸ್ಕೃತದ ಮೇಷ್ಟರಾಗಿದ್ದನಂತೆ. ಪಾಠಶಾಲೆಯಲ್ಲಿ ಕೊಡೋ ಸಂಬಳದಲ್ಲಿ ಯಾರಾದರೂ ಈಗಿನ ಕಾಲದಲ್ಲಿ ಬದುಕುಕ್ಕೆ ಆಗುತ್ತ್ಯೇ? ಆದುದರಿಂದ ಅವ ಮನೆಯಲ್ಲಿ ಪ್ರೈವೇಟ್ ಟ್ಯೂಷನ್ನುಗಳನ್ನಿಟ್ಟುಕೊಂಡು ಸಂಬಳದ ಹತ್ತರಷ್ಟು ಸಂಪಾದನೆ ಮಾಡಿಕೊಂಡು ಒಂದು ತರಹಾ ಮುಸುಕಿನೊಳಗಿನ ಜೋಳದ ಕಾಳಿನಂತೆ ಬಾಳ್ತಾ ಇದ್ದನಂತೆ.

ಅವನ ಹೆಂಡತಿ ತುಂಬಾ ಸಾಧುವಾದ ಪ್ರಾಣಿಯಂತೆ. ಗಂಡನೇ ಪ್ರತ್ಯಕ್ಷ ದೇವರು ಅಂತ ತಿಳಿದುಕೊಂಡು ಬೆಳಗಿನ ಝಾಮು ಎದ್ದು ಮೊದಲು ಗಂಡನ ಕಾಲುಗಳಿಗೆ ನಮಸ್ಕಾರ ಮಾಡುತ್ತಿದ್ದಳಂತೆ. ಮಲಗಿದ್ದಲ್ಲಿಂದಲೇ ಗಂಡ "ದೀರ್ಘ ಸುಮಂಗಲೀ ಭವ" ಎಂದು ಆಶೀರ್ವಾದ ಮಾಡುತ್ತಿದ್ದನಂತೆ. ಅವಳ ಪುಣ್ಯದಿಂದಲಾದರೂ ನನಗೆ ಆಯುಸ್ಸು ತುಂಬಿ ಬರಲಿ ಎನ್ನುವ ಆಸೆಯಿಂದ. ಗಂಡನಿಗೆ ಕಾಫಿ ಕೊಟ್ಟು, ಉಪ್ಪಿಟ್ಟು ಉಣಿಸೋತನಕ ಆಕೆ ಎಂಜಲನ್ನೂ ಕೂಡ ನುಂಗುತ್ತಿರಲಿಲ್ಲವಂತೆ. ಅಂತಹ ಸಾಧ್ವೀಮಣಿ ತುಂಬಾ ಕೊರಗ್ತಾ ಇದ್ದಳಂತೆ.

ಯಾಕೆ? ಅಂತ ಅನ್ನಿಸೇ ಅನ್ನಿಸುತ್ತೆ ಅಲ್ಲವೇ? ಮುತ್ತಿನಂತಹ ಗಂಡ. ಕಂಡ ಹಾಗೆ ಕಾಣದ ಹಾಗೆ ಸಂಪಾದನೆ. ಮತ್ತೇನು ಕಾರಣ ಇರಬಹುದು? ಓಹೋ! ಮೇಷ್ಟರು. ಪಾಠಶಾಲೆಯ ಮೇಷ್ಟರು. ಅಂದಮೇಲೆ ಮನೆ ತುಂಬಾ ಮಕ್ಕಳಿರಬೇಕು. ಯಾವ ಯಾವ ಮಗುವಿಗೆ ಏನೇನು ಬೇನೆಯೋ? ಅನ್ನಿಸಬೇಕು ಅಲ್ಲವೇ?

ಇಲ್ಲ! ಹಾಗಿತ್ತಿಲ್ಲ. ಬಡ ಮೇಷ್ಟರಾದರೂ ಕೂಡ, ಮಕ್ಕಳೇ ಇರಲಿಲ್ಲವಂತೆ. ಗಂಡು ಪರಂಗಿಮರ ಬೆಳೆದ ಹಾಗೆ ಗಂಡ ಬೆಳೆದಿದ್ದರೂ, ಮನೆಯಲ್ಲಿ ಆಡಲು ಒಂದು ಮಗುವೂ ಇರಲಿಲ್ಲವಂತೆ. ಆ ಕಾರಣದಿಂದ ಪಂಡಿತನಿಗೆ ಏನೂ ಬೇಸರ ಕಾಣಬರದೆ ಇದ್ದರೂ, ಆತನ ಹೆಂಡತಿ, ಹುದುಗಲಾರದ ದುಃಖವನ್ನು ಹೊಟ್ಟೆಗೆ ಅಮುಕಿಕೊಂಡು ಕೊರಗುತ್ತಾ ಇದ್ದಳಂತೆ.

ಒಂದು ರಾತ್ರಿ ಗಂಡನೆದುರಿಗೆ ಅತ್ತೇಬಿಟ್ಟಳಂತೆ. ಮಕ್ಕಳನ್ನು ಎದೆಗೆ

ಅವಚಿಕೊಂಡು ಪಾಲಿಸಿ ಲಾಲಿಸಿ ಬಾಳೋ ಸುಖ ನನಗಿಲ್ಲವಲ್ಲಾ ಅಂತ. ತೀರ್ಥಯಾತ್ರೆ ಮಾಡಿಕೊಂಡು ಬರೋಣ ಅಂದ್ರೆ, ಅಥವಾ ವಿದುರಾಶ್ವತ್ಥ ಕ್ಕಾದರೂ ಹೋಗಿ ಬರೋಣ ಎಂದು ಹೆಂಡತಿ ಅಂಗಲಾಚುತ್ತ ಬೇಡಿ ಕೊಂಡಳಂತೆ.

"ಅಲ್ಲಾ ಕಣೆ! ನಾನು ಸಂತಾನ ಗೋಪಾಲಕೃಷ್ಣದೇವರ ಪಾಠಶಾಲೆಯಲ್ಲಿ ಮೇಷ್ಟರ ಕೆಲಸ ಮಾಡೋದು. ಈ ತರಹಾ ಜೋಡಿ ಪುಣ್ಯದಿಂದ ನ್ಯಾಯ ವಾಗಿ ವರ್ಷಂಪ್ರತಿ ಅವಳಿ ಜವಳಿ ಇಳೀಬೇಕು. ಅಂತಹುದರಲ್ಲಿ ಇಷ್ಟು ವರ್ಷ ಮಕ್ಕಳಾಗದೆ ಇದ್ದಮೇಲೆ ಈಗ ವಿದುರಾಶ್ವತ್ಥಕ್ಕೆ ಹೋಗಿ ಪ್ರದಕ್ಷಿಣೆ ಹಾಕಿ ಬಂದರೆ ಸೊಂಟ ನೋವಾಗುತ್ತೇ ಹೊರತು ಮಕ್ಕಳಾಗುಲ್ಲ" ಎಂದೇನೋ ಹೇಳಿದನಂತೆ.

ಆದರೆ ಹೆಂಡತಿ ಮುಸಿ ಮುಸಿ ಮಾಡೋದು ನಿಲ್ಲಲೇ ಇಲ್ಲವಂತೆ. ಕಡೆಗೆ ನಿದ್ರೆ ಬರುವ ಹೊತ್ತಿನಲ್ಲಿ "ಆಗಲಿ ಕಣೆ, ಅದೊಂದು ಆಸೆ ತಾನೆ ನಿನ್ನದು, ಅದನ್ನೂ ಈಡೇರಿಸಿ ಬಿಡ್ತೀನಿ" ಎಂದು ಪಂಡಿತ ಅಂದನಂತೆ.

ಬೆಳಗಾದ ಮೇಲೆ ವಿದುರಾಶ್ವತ್ಥದ ಯಾತ್ರೆಯ ವಿಷಯ ಜ್ಞಾಪಿಸಿದಳಂತೆ. ಪಂಡಿತ ತಿರುಗಿ ಹೇಳಿದನಂತೆ. "ನೋಡೇ, ಬೆಳಗಾದರೆ ಈ ಹುಡುಗರು ಪಾಠ ಹೇಳಿಸಿಕೊಳ್ಳಲು ಬರ್ತಾರೆ. ಆ ದರಿದ್ರ ಮುಂಡೇವುಗಳ ಹತ್ತಿರ ಏಗುಕ್ಕೆ ಆಗುಲ್ಲ. ನನಗೆ ಹುಚ್ಚು ಹಿಡಿಯುತ್ತೇನೋ ಎಂದು ಅನ್ನಿಸುತ್ತೆ. ಅವುಗಳ ತಂದೆ ತಾಯಂದಿರು ಕೊಡೋ ಟ್ಯೂಷನ್ ಫೀಸ್ ಜ್ಞಾಪಿಸಿಕೊಂಡು ತೆಪ್ಪ ಗಿರ್ತೀನಿ. ಇಲ್ಲದೆ ಇದ್ದರೆ ಅವುಗಳಿಗೆ ತಪರಾಕು ಹಾಕಿ ಒದ್ದು ಓಡಿಸ್ತಿದ್ದೆ! ಒಂದು ಗಂಟೆ ಅವುಗಳ ಜತೆ ಏಗುಕ್ಕೆ ಆಗದೆ ಇರೋ ಪರಿಸ್ಥಿತಿ. ಇಂತಹುದರಲ್ಲಿ ನಮಗೆ ಒಂದು ಅಂತಹ ಮಗುವಾಗಿ ಅದು ಮನೇಲೆ ೨೪ ತಾಸು ಅಡ್ಡಾಡಿದರೆ, ಬದುಕೋದು ಕಷ್ಟ ಅಲ್ಲವೇನೇ?" ಎಂದು ಏನೇನೋ ಸಮಾಧಾನ ಹೇಳಿದ ನಂತೆ.

ಬಂಜೆಯಾದ ಹೆಣ್ಣು, ಮಕ್ಕಳ ಹಠ ಬಿಡ್ತಾಳೆಯೇ?

ಕಡೆಗೆ ಪಂಡಿತ ಮೂರು ದಿನ ರಜಾ ಹಾಕಿ ವಿದುರಾಶ್ವತ್ಥಕ್ಕೆ ಹೆಂಡತೀನ ಕರಕೊಂಡು ಹೋದನಂತೆ. ಸಂಸ್ಕೃತ ಪಂಡಿತರು ಬಂದಿದ್ದಾರೆ ಅಂತ ಛತ್ರದ ಸಂಜೀವಪ್ಪ ಖುದ್ದಾಗಿ ದಂಪತಿಗಳ ಸೌಕರ್ಯಗಳನ್ನು ನೋಡಿಕೊಂಡನಂತೆ.

ಛತ್ರದ ಸಂಜೀವಪ್ಪನಿಗೆ ಒಬ್ಬ ಮಗ ಇದ್ದನಂತೆ. ದಡ್ಡ ಅಂದರೆ ದಡ್ಡ ಅಂತೆ. ಆದರೆ ಯಾವ ತಂದೆ ತಾನೇ ಮಗ ದಡ್ಡ ಅಂತ ಒಪ್ಪಿಕೋತಾನೆ? ಮಗನಿಗೆ ವಿದ್ಯೆ ಕಲಿಸಬೇಕು, ಅದರಲ್ಲೂ ಸಂಸ್ಕೃತವನ್ನು. ಅವ ವಿದುರಾಶ್ವತ್ಥದ ಕಟ್ಟೆ ಮೇಲೆ ಕುಳಿತು ಮಂತ್ರ ಹೇಳುವಂತಾಗಬೇಕು, ಅದನ್ನು ಕಂಡು ತಾನು ಹಿಗ್ಗ ಬೇಕು ಎಂದು ಸಂಜೀವಪ್ಪನ ಹಂಬಲ.

ವಿದುರಾಶ್ವತ್ಥದಲ್ಲೇ ಇದ್ದ ಶಾಲಾ ಮಾಸ್ತರು “ನಿನ್ನ ಮಗನಿಗೆ ಕಲಿಸುಕ್ಕೆ ಸಾಧ್ಯವೇನೋ? ಬ್ರಹ್ಮನಿಗೂ ಸಾಧ್ಯವಿಲ್ಲ. ಸುಮ್ಮಗೆ ದನ ಕಾಯಿಕೊಂಡು ಇರಲಿ ಬಿಡು” ಎಂದು ಕಠಿಣವಾಗಿ ಹೇಳಿದ್ದರಂತೆ. ಸಂಜೀವಪ್ಪನಿಗೆ ಆಸೆ ಇನ್ನೂ ಇದ್ದೇ ಇತ್ತಂತೆ.

ಷಹರಿನಿಂದ ಯಾತ್ರಾರ್ಥಿಯಾಗಿ ಬಂದಿದ್ದ ಪಂಡಿತರನ್ನು ನೋಡಿದಾಗ ಆಸೆ ಚಿಗುರಿತಂತೆ. ಅದೇ ಕಾರಣದಿಂದಲೇ ಸಂಜೀವಪ್ಪ ಪಂಡಿತರ ಸೇವೆಯನ್ನು ಮಾಡಿದ್ದಂತೆ.

ಊರಿಗೆ ಹಿಂತಿರುಗುವಾಗ ಪಂಡಿತರಿಗೆ ಸಂಜೀವಪ್ಪ ಹೇಳಿದನಂತೆ “ಸೋಮಿ ಯಾರ! ನನ್ನ ಮಗನ್ನ ನಿಮ್ಮ ಪಾದಕ್ಕೆ ಬೀಳಿಸ್ತೀನಿ. ಹೆಂಗಾರ ಯಿದ್ಯೆ ಕಲಿಸಿ” ಎಂದು ಮಗನನ್ನು ಪಂಡಿತರ ಕಾಲ ಮೇಲೆ ಬೀಳಿಸಿದನಂತೆ.

ಎಂಟು ವರ್ಷದ ಹುಡುಗ ನೋಡುಕ್ಕೆ ಮುತ್ತುಗದ ಹೂವಿನ ಹಾಗಿದ್ದನಂತೆ. ಚೆಲುವಾಗಿದ್ದನಂತೆ. ಪಂಡಿತರ ಹೆಂಡತಿ “ಕರಕೊಂಡು ಹೋಗೋಣ ಅಂದ್ರೆ. ಮನೆಗೆ ನೆರವಾದ ಹಾಗೂ ಆಗುತ್ತೆ. ಸುತ್ತು ಕೆಲಸಕ್ಕೆ ಪುಕಟ್ಟು ಹುಡುಗ ಸಿಕ್ಕಿದ ಹಾಗೂ ಆಗುತ್ತೆ” ಎಂದು ಪಿಸುಮಾತಿನಲ್ಲಿ ಪೀಡಿಸಿದಳಂತೆ. ಪ್ರಸನ್ನ ರಾಗಿದ್ದ ಪಂಡಿತರು ಒಪ್ಪಿ, ಹುಡುಗನನ್ನು ಕರೆದುಕೊಂಡು ತಮ್ಮೂರಿಗೆ ಬಂದರು.

ಮನೆಯಲ್ಲಿ ಹುಡುಗ ಬಲು ವಿಧೇಯನಾಗೇ ಇದ್ದನಂತೆ. ಹಾಕಿದ್ದುಂಡು ಹೇಳಿದ್ದು ಮಾಡ್ತಾ ಇದ್ದನಂತೆ. ಆದರೆ ಪಂಡಿತರು ಕಲಿಸಲು ಕೂತರೆ ಶಿಷ್ಯ ಸೊನ್ನೆ. ಮೂರೇದಿನ ಆದಮೇಲೆ ಪಂಡಿತರು ಹೆಂಡತಿಗೆ ಹೇಳಿದರಂತೆ “ಈ ಮಂಕು ಮುಂಡೇದಕ್ಕೆ ಎಣ್ಣೆಯಾವುದು, ಬೆಣ್ಣೆಯಾವುದು ಗೊತ್ತಾಗುಲ್ಲ. ಕಾಯಿ ಯಾವುದು ಹಣ್ಣು ಯಾವುದು ತಿಳಿಯುಲ್ಲ. ಪೈಸೆ ಯಾವುದು ರೂಪಾಯಿ ಯಾವುದು ಅರಿತಿಲ್ಲ. ಇದಕ್ಕೆ ಯಾಕೆ ತುಪ್ಪ ಬಡಿಸ್ತಿ. ಊಟಕ್ಕೆ ಬೇವಿನ ಎಣ್ಣೆ ಹಾಕು” ಎಂದು.

ಪತಿವ್ರತಾ ಪರಾಯಣೆ, ಹುಡುಗನಿಗೆ ಅನ್ನ ಹಾಕಿ, ಬೇವಿನ ಎಣ್ಣೆ ಬಡಿಸಿ ಸಾರು ಹಾಕುತ್ತಿದ್ದಳಂತೆ. ಕಮಕ್ ಕಿಮಕ್ ಅನ್ನದೆ ಹುಡುಗ ಅದನ್ನೇ ಮೆದ್ದು ತೇಗುತ್ತಿದ್ದನಂತೆ.

ಚರಕ ಶುಶ್ರುತರ ಕಾಲದಿಂದ ಬೇವಿನ ಎಣ್ಣೇನ ಮದ್ದಾಗಿ ಉಪಯೋಗಿಸುತ್ತಿದ್ದರಲ್ಲ! ಮೈಗೆ ಕಾಂತಿ ಬರಲಿ, ಹೊಳಪು ಮೆರೆಯಲಿ, ಬೇನೆಗಳಾವುದೂ ಬಾರದೆ ಇರಲಿ ಎಂಬ ಕಾರಣಗಳಿಗಾಗಿ.

ಸಂಜೀವಪ್ಪನ ಮಗ ಹೊರವಾಗಿ ಸ್ಫುರದ್ರೂಪಿಯಾಗಿ ಬೆಳೆಯ ಹತ್ತಿದನಂತೆ. ತಲೆ ಖಾಲಿ ಇದ್ದರೂ ಗುಂಗುರು ಕೂದಲನ್ನು ಗಂಟುಹಾಕಿ ಕಟ್ಟಿದರೆ ಚೆಲುವಾಗಿ ಕಾಣಿಸುತ್ತಿದ್ದನಂತೆ.

ಪಂಡಿತರು ಶಿಷ್ಯನಿಗೆ ಪಾಠ ಕಲಿಸಲು ಅಸಮರ್ಥರಾದರೂ, ಹುಡುಗ ಒಲವಿನಿಂದ ಭಕ್ತಿಯಿಂದ ಹೇಳಿದಹಾಗೆ ಕೇಳುತ್ತಿದ್ದುದರಿಂದ, ಎಷ್ಟೇ ದುಡಿಸಿದರೂ ನಗುತ್ತಲೇ ಇದ್ದುದರಿಂದ, ಅಚ್ಚುಮೆಚ್ಚಾಗಿದ್ದನಂತೆ. ಬೆಳಗಿನ ಝಾಮದಲ್ಲೇ ಎದ್ದುಹೋಗಿ ಕತ್ತಲು ಕತ್ತಲಲ್ಲೇ ಸಾಹುಕಾರ ತಿಮ್ಮಯ್ಯನವರ ಮನೆಗೆ ಹೋಗಿ ಯಾರಿಗೂ ಕಾಣದ ಹಾಗೆ ಹೂವು ತುಳಸಿಗಳನ್ನು ಕದ್ದು ತರುತ್ತಿದ್ದನಂತೆ.

ಒಂದು ಬೆಳಿಗ್ಗೆ ಎಂದಿನಂತೆ ಸಂಪಿಗೆ ಮರ ಹತ್ತಿ ಹೂವು ಕೊಯ್ದು ಇಳಿದನಂತೆ. ಮರದ ಕೆಳಗೆ ೬-೭ ವರ್ಷದ ಹುಡುಗಿಯೊಂದು ನಿಂತಿತ್ತಂತೆ. "ನನಗೂ ಎರಡು ಹೂವು ಕೊಡು" ಎಂದು ಸಂಜ್ಞೆ ಮಾಡಿದಳಂತೆ ಆ ಹುಡುಗಿ. ಸಂತೋಷದಿಂದ ನಾಲ್ಕು ಸಂಪಿಗೆ ಹೂಗಳನ್ನು ಆ ಹುಡುಗಿಗೆ ಕೊಟ್ಟನಂತೆ.

ಎಂಟು ವರ್ಷಗಳಾದುವು ಶಿಷ್ಯವೃತ್ತಿ ಶುರುಮಾಡಿ, ಸಂಜೀವಪ್ಪನ ಮಗ. ಈಗ ಚೆಂದುಳ್ಳಿ ಯುವಕನಾಗಿದ್ದಾನೆ. ಆದರೆ ಹೂವು ತುಳಸಿ ಕಿತ್ತುತರಲು ತಪ್ಪದೇ ಹೋಗುತ್ತಿದ್ದನಂತೆ. ಕತ್ತಲಲ್ಲಿ ಕದ್ದ ಹೂವಿನಲ್ಲಿ ಪಾಲು ಬೇಡಲು, ಬೆಳೆಯುತ್ತಾ ಇದ್ದ ಹುಡುಗಿ, ಸಾಹುಕಾರ ತಿಮ್ಮಯ್ಯನ ತೋಟದಲ್ಲಿ ಕಾದಿರುತ್ತಿದ್ದಳಂತೆ.

ಒಂದು ಬೆಳಿಗ್ಗೆ ಹುಡುಗಿಯ ಕೈಯಲ್ಲಿ ಹೂವು ಕೊಟ್ಟಿದ್ದಾನಂತೆ. ಕೂಡಲೇ ಹುಡುಗಿ ಇವನ ಕೈ ಹಿಡಿದುಕೊಂಡು, ಮಾತಾಡದೆ, ಮಾತನ್ನು ಇವನೂ ಆಡದಂತೆ ಬಾಯ ಮೇಲೆ ಬೆರಳಿರಿಸಿ, ಮನೆಯೊಳಕ್ಕೆ ಕರೆದುಕೊಂಡು

ಹೋದಳಂತೆ. ಅಲ್ಲಿ ಸಾಹುಕಾರ ತಿಮ್ಮಯ್ಯ ಆತನ ಹೆಂಡತಿ ಇಬ್ಬರೂ ಬೈಠಕ್ ಖಾನೆಯಲ್ಲಿ ಕುಳಿತಿದ್ದರಂತೆ. ಬಂದ ಹುಡುಗನನ್ನು ನೋಡಿ ರೇಗಲಿಲ್ಲವಂತೆ. ಆದರದಿಂದಲೇ ಮಾತನಾಡಿಸಿದರಂತೆ. ಯಾರು ಎತ್ತ ಯಾಕೆ ಬಂದಿದ್ದ ಎಲ್ಲ ವನ್ನೂ ವಿಚಾರಿಸಿಕೊಂಡರಂತೆ. ಆಮೇಲೆ ಹೇಳಿದರಂತೆ:—"ಚೆಲುವ! ನಿನ್ನ ಕಂಡು ನಮ್ಮ ಒಬ್ಬಳೇ ಮಗಳು ಮೆಚ್ಚಿಕೊಂಡಿದ್ದಾಳೆ. ಅವಳನ್ನು ಮದುವೆ ಯಾದರೆ ತುಂಬಾ ಸಂತೋಷ. ನಮ್ಮ ಮನೆಯಲ್ಲೇ ಇದ್ದು ಬಿಡಬಹುದು. ನಮ್ಮ ಹುಡುಗಿಯನ್ನು ಕಂಡೇ ಇದ್ದಿ. ಬಲು ಚೆಲುವೆ. ಒಂದು ಮಾತ ನಾಡುಲ್ಲ. ಎದುರು ಬೀಳುಲ್ಲ. ಮೂಗಿ ಅಷ್ಟೇ! ಅದರಿಂದೇನು ಕಷ್ಟ" ಎಂದೆಲ್ಲಾ ಹೇಳಿದರಂತೆ. ಚೆಲುವ ಒಪ್ಪಿಕೊಂಡನಂತೆ. "ಮುಂದಿನ ಏರ್ಪಾ ಡನ್ನು ನೀವು ಯಾವಾಗ ಬೇಕಾದರೂ ಮಾಡಿಕೊಳ್ಳಿ. ನನ್ನ ಏರ್ಪಾಡು ನಾನು ಮಾಡಿಕೋತೀನಿ" ಎಂದು ಹೇಳಿದನಂತೆ.

ಪಕ್ಷಮಾಸ ಮುಗಿದು ಹೋಗಲಿ. ಆಮೇಲೆ ಮಾತು ಆಡೋಣ. ವಿಜಯ ದಶಮಿ ಹೊತ್ತಿಗೆ ಕಂಕಣ ಕಟ್ಟಸೋಣ ಎಂದರಂತೆ ಸಾಹುಕಾರರು.

* * * * *

ಮೂರು ನಾಲ್ಕು ದಿನಗಳಾಗಿರಬಹುದಂತೆ. ಊಟಕ್ಕೆ ಕೂತಿದ್ದಾರೆ ಪಂಡಿತರು. ಹೊಸಿಲಾಚೆ ಶಿಷ್ಯ ಚೆಲುವ ಉಣ್ಣುಕ್ಕೆ ಕೂತಿದ್ದಾನೆ. ಗುರು ಪತ್ನಿ ವಾಡಿಕೆಯಂತೆ ಅನ್ನ ಬೇವಿನ ಎಣ್ಣೆ ಬದನೆಕಾಯಿ ಹುಳಿ ಬಡಿಸಿದಳಂತೆ.

"ಅಮ್ಮಾ! ಯಾಕೋ ಇವತ್ತು ಕಹಿಯಾಗಿದೆಯಲ್ಲ, ತುತ್ತು!" ಎಂದ ನಂತೆ ಚೆಲುವ.

"ಶಿಷ್ಯನಿಗೆ ಬುದ್ಧಿ ಮೂಡಿದೆ ಕಣೆ. ಬೇವಿನ ಎಣ್ಣೆ ಬಡಿಸಿದರೆ ಕಹಿ ಎಂದು ಕಂಡುಹಿಡಿದಿದ್ದಾನೆ. ಇನ್ನು ಮೇಲೆ ತನ್ನ ಜೀವನ ತಾನು ಮಾಡಿಕೋತಾನೆ, ನಾವು ಕಲಿಸೋದು ಏನೂ ಇಲ್ಲ" ಎಂದು ಪಂಡಿತರು ಉದ್ಗಾರ ತೆಗೆದರಂತೆ.

ವಿಜಯದಶಮಿ ದಿನ ಸಂಜೀವಪ್ಪನ ಮಗ ಚೆಲುವನಿಗೆ; ಸಾಹುಕಾರ್ ತಿಮ್ಮಯ್ಯನವರ ಮಗಳನ್ನು ಕೊಟ್ಟು ಮಾಡಿದ ಮದುವೆಯಲ್ಲಿ ಪಂಡಿತರಿಗೆ ಭಾರಿ ಗುರುದಕ್ಷಿಣೆ ಸಿಕ್ಕಿತಂತೆ. ಅಷ್ಟೂ ವರ್ಷಗಳು ಅನ್ನ ಹಾಕಿ ಬೆಳೆಸಿದ್ದ ಗುರುಪತ್ನಿಗೆ ಪೀತಾಂಬರದ ಉಡುಗೊರೆ ಕೊಟ್ಟರಂತೆ.

"ವಿದುರಾಶ್ವತ್ಥಕ್ಕೆ ಹೋಗಿ ಬಂದಮೇಲೆ, ನನಗೆ ಮಕ್ಕಳಾಗದೇ ಇದ್ದರೂ

ಚಿಂತೆಯಿಲ್ಲ. ಇಂತಹ ಮಗ, ದೊರಕಿದನಲ್ಲಾ" ಎಂದು ಗುರುಪತ್ನಿ ಹೇಳಿದಳಂತೆ.

" ಕೆಂದುಟಿಯ ಸವಿತುತ್ತು ಉಂಡಮೇಲೆ ನಮ್ಮ ಚೆಲುವನಿಗೆ ಬೇವಿನ ಎಣ್ಣೆ ಕಹಿ ಎಂದು ಗೊತ್ತಾಯ್ತು. ವಿದ್ಯೆ ಕಲಿಸುವ ವಿಧಾನಗಳು ಎಷ್ಟು ತರಹಾ ಇವೆ. ನನಗೊತ್ತಿರೋದು ಒಂದು ಶುಷ್ಕ ಮಾರ್ಗ ಮಾತ್ರ" ಎಂದು ಪಂಡಿತರಂದಂತೆ.

ಹೋಗಿ ಬಂದೂ ಮೂಗಿ, ಪಂಡಿತರಿಗೆ, ಅವರ ಹೆಂಡತಿಗೆ ನಮಸ್ಕಾರ ಮಾಡಿದಳಂತೆ.

ಎಂದು ಶಿಷ್ಯ-ಬೇವಿನ ಎಣ್ಣೆಯ ಕತೆಯನ್ನು ನವ್ಯ ಅಡುಗೂಲಜ್ಜಿ ಮೊಮ್ಮಕ್ಕಳಿಗೆ ಹೇಳಿದಳಂತೆ.

ತೋಳ ಕುರಿಯ ಕತೆ

ಇಂದಾನೊಂದು ಕಾಲದಲ್ಲಿ ಒಂದು ತೋಳ ಇತ್ತಂತೆ. ಬೇಕಾ ಬಿಟ್ಟಿ ಅಲೆಯುತ್ತಾ, ಸಿಕ್ಕಾಪಟ್ಟೆ ತಿಂದು ಉಂಡು, ತೋಳನ ಹಾಗೇ ಬೆಳೆದಿತ್ತಂತೆ, ಈ ತೋಳ. ಒಂದು ತರಹಾ ಸೀಟಿ ಹೊಡೆಯೋದಂತೆ :—ಕೇಳಿಸಿಕೊಂಡವರೆಲ್ಲಾ ಕುರಿಗಳಂತೆ ತಲೆ ಬಗ್ಗಿಸಿಕೊಂಡು ಬೇಗ ಬೇಗ ಹೊರಟು ಹೋಗುತ್ತಿದ್ದರಂತೆ. ಇದನ್ನು ಕಂಡು ತೋಳನಿಗೆ ತನ್ನ ಸಾಮರ್ಥ್ಯದಲ್ಲಿ, ತುಂಬ ನಂಬಿಕೆ ಉಂಟಾಯಿತಂತೆ.

ಒಂದು ಸಂಜೆ ತೋಳ ಕಬ್ಬನ್ ಪಾರ್ಕಿಗೆ ಹೋಗಿತ್ತಂತೆ. ಬೊಂಬೂ ದ್ವೀಪದ ಹತ್ತಿರ ಸಿಗರೇಟ್ ಸೇದುತ್ತಾ ಕುಳಿತಿತ್ತಂತೆ. ದೂರದಲ್ಲಿ ಒಂದು ಕುರಿ ಕೂತಿದ್ದದ್ದು ಕಾಣಿಸಿತಂತೆ. ವಾಕಿಂಗ್ ಹೋಗೋಹಾಗೆ ಅತ್ತ ಹೋಗಿ ಕುರಿಯನ್ನು ಹತ್ತಿರ ನೋಡಿತಂತೆ, ಕುರಿ ಲಕ್ಷಣವಾಗಿತ್ತಂತೆ. ಮಾಂಸಖಂಡ ಗಳಿಂದ ತುಂಬಿಕೊಂಡಿತ್ತಂತೆ. ದುಂಡು ದುಂಡಾಗಿರಬೇಕಾದಲ್ಲಿ ದುಂಡುದುಂಡಾಗಿ ತ್ತಂತೆ. ತೋಳನ ಬಾಯಲ್ಲಿ ಜೊಲ್ಲು ಆಡಿತಂತೆ. ಹೊಟ್ಟೆಯಲ್ಲಿ ಚಿಗುಳಿ ಇಟ್ಟ ಹಾಗಾಯಿತಂತೆ. ಸೊಂಟ ಮಿಾಟಿದ ಹಾಗಾಯಿತಂತೆ. ಏನಾದರೂ ಉಪಾಯ ಹೂಡಿ ಇದನ್ನು ಗಿಟ್ಟಿಸಬೇಕು ಎಂದು ಅಂದುಕೊಂಡಿತಂತೆ.

"ಅಲ್ಲಾ ! ಕುರಿಮುರಿ ! ಈ ವಿಹಾರ ಸ್ಥಳದಲ್ಲಿ ಚಾಕಲೇಟ್ ತಿಂದು ಬೆಳ್ಳಿ ಕಾಗದ ಎಸೀಬಾರದು ಅಂತ ಗೊತ್ತಿಲ್ವಾ ? ಪೆಪ್ಪರಮಿಂಟು ತಿಂದು ಅಂಟಿನ ಕಾಗದಾನ ಹಾಕಬಾರದು ಅಂತ ತಿಳಿದಿಲ್ವಾ ! ಬಾಳೆಹಣ್ಣು ತಿಂದು ಸಿಪ್ಪೆ ಯನ್ನು ಎಸೀಬಾರದು ಅಂತ ಅರಿತಿಲ್ವಾ ! ಇದಕ್ಕೆಲ್ಲಾ ಶಿಕ್ಷೆ ಅನುಭವಿಸಲೇ ಬೇಕು. ಈಗ ಹಿಡಿದುಕೊಂಡು ಹೋಗ್ತೀನಿ. ಸದ್ದಿಲ್ಲದೆ 'ಬಾ' ಎಂದಿತಂತೆ, ತೋಳ.

"ಇದೇನು ಹೇಳ್ತಾ ಇದಿ, ತೋಳಾ ! ಚಾಕಲೇಟ್ ಇತ್ತೇ ಇತ್ತಿಲ್ಲ ನನ್ನ ಹತ್ತಿರ, ಅದನ್ನು ತಿಂದು, ಬೆಳ್ಳಿಕಾಗದ ಎಸಿಯುಕ್ಕೆ, ಪೆಪ್ಪರಮಿಂಟು ಕಂಡು ಮೂರು ವಾರ ಆಯ್ತು. ಬಾಳೆ ಹಣ್ಣೋ, ಅದನ್ನು ತಿಂದರೆ ಸೀತ ಆಗುತ್ತೆ ನನಗೆ. ಅದನ್ನು ಮುಟ್ಟೋದೂ ಇಲ್ಲ, ಅಂದಮೇಲೆ ನನ್ನ ತಪ್ಪೇನು ? ನಾನು

ಯಾಕೆ ಶಿಕ್ಷೆ ಅನುಭವಿಸಬೇಕು? ನೀನು ಯಾಕೆ ಹಿಡಕೊಂಡು ಹೋಗಬೇಕು?" ಎಂದು ಕುರಿಮರಿ ತುಸು ಧೈರ್ಯದಿಂದಲೇ ಆದರೂ ವಿನಯವಾಗೇ ಕೇಳಿತಂತೆ.

"ಇಲ್ಲಿ ನೋಡು! ಎಷ್ಟು ಚಾಕಲೇಟ್ ಬೆಳ್ಳಿಕಾಗದಗಳು ಬಿದ್ದಿವೆ, ಪೆಪ್ಪರ ಮಿಂಟ್ ರಂಗಿನ ಕಾಗದಗಳು ಹಾರಾಡುತ್ತಿವೆ. ಇದನ್ನೆಲ್ಲಾ ನೀನೇ ಹಾಕಿದೆಯೋ, ಅಥಾವಾ ನಿನ್ನ ಅಕ್ಕತಂಗಿಯರೋ, ಅಮ್ಮ ಚಿಕ್ಕಮ್ಮಂದಿರೋ ಯಾರಾದರೇನು, ನಿನ್ನನ್ನು ಹಿಡಕೊಂಡು ಹೋಗಲೇಬೇಕು, ಅವರೆಲ್ಲಾ ನಿನ್ನ ಸಂಬಂಧಿಗಳೇ, ನಿನ್ನವರೇ. ಅವರ ತಪ್ಪಿಗೆ ನೀನು ಶಿಕ್ಷೆ ಅನುಭವಿಸಬೇಕು. ಸದ್ದಿಲ್ಲದೆ ನನ್ನ ಜತೆ ಬಾ" ಎಂದು ಗದರಿಸಿತಂತೆ, ತೋಳ.

"ಓಹೋ! ಈ ತೋಳ ಹಳೆ ಕತೆಯನ್ನು ಜ್ಞಾಪಿಸಿಕೊಂಡು ದಬಾಯಿಸುತ್ತಿದೆ. ಈಗ ಸಂಜೆ ೬-೩೦ ಆಯಿತು. ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ಸೂರ್ಯ ಮುಳುಗುತ್ತಾನೆ. ಅಖಾಡಾದಿಂದ ವ್ಯಾಯಾಮ ಮುಗಿಸಿಕೊಂಡು ನರಸಿಂಹ ಬರುತ್ತಾ ಇರಬೇಕು. ಇನ್ನೂ ಕಾಲಾವಕಾಶ ಇದೆ ಎಂದು ಮೆಲ್ಲಗೆ ಬರುತ್ತಾ ಇರಬಹುದು. ನರಸಿಂಹ ಬರುವನಕ ಈ ತೋಳವನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಇಲ್ಲದೆ ಇದ್ದರೆ ಕಷ್ಟವಾಗಬಹುದು, ಮ್ಯಾಟನಿ ಮುಗಿಯಿತು ಎಂದು ಬೇಗ ಇಲ್ಲಿಗೆ ಬಂದಿದ್ದು ತಪ್ಪಾಯಿತು, ಈಗ ಏನಾದರೂ ಉಪಾಯ ಹೂಡಬೇಕು" ಎಂದು ಕುರಿಮರಿ ಯೋಚಿಸಿತಂತೆ.

ಒಂದು ಸಾರಿ ಕಣ್ಣನ್ನು ಪಿಳಪಿಳನೆ ಮಿಟಕಿಸಿತಂತೆ. ಬಲ ತೋಳ ಮೇಲಿದ್ದ ಉಣ್ಣೆಯನ್ನು ಸೆರಗಿನಂತೆ ಹಾರಿಸಿತಂತೆ.

"ತೋಳಕುಮಾರ! ನೀನೇ ಅಲ್ಲವೇ ಮೊನ್ನೆ ಸಿನಿಮಾ ಮಂದಿರದ ಹತ್ತಿರ ಸೀಟಿ ಹಾಕಿದ್ದು. ಹೆಂಗಸರಿಗೆ ಟಿಕೆಟ್ ಮಾರುತ್ತಿದ್ದ ಕಿಟಿಕೆಯಬಳಿ ನಿಂತಿದ್ದ ಕುರಿಗಳೆಲ್ಲಾ ಬೆದರಿ ಬೆವತಿದ್ದು" ಎಂದು ಕೇಳಿತಂತೆ.

"ನಾನೇ! ಅಲ್ಲೇ ಇದ್ದೆಯಾ ನೀನು! ಅವತ್ತು ನಾನು ಹಾಕಿದ್ದ ಷರಾಯಿ ನೋಡಿದೆಯಾ? ದರ್ಜಿ ಬಲು ಮೆಹರ್ಬಾನ್ ಮಾಡಿ ಅದನ್ನು ಹೊಲಿದು ಕೊಟ್ಟಿದ್ದ, ಹಾಕಿಕೊಳ್ಳುವುದಕ್ಕೆ ಸ್ವಲ್ಪ ಕಷ್ಟ. ಆದರೆ ಹಾಕಿಕೊಂಡಮೇಲೆ ಬಗ್ಗಿದರೆ, ಹಿಂಜೇಬಿನಲ್ಲಿರುವ ನಾಣ್ಯವು ಅಕ್ಷರ ಮೇಲಾಗಿದೆಯೋ ಅಶೋಕಚಕ್ರ ಮೇಲಾಗಿದೆಯೋ ತಿಳಿಯುತ್ತೆ. ಅಷ್ಟು ಬಿಗಿಯಾಗಿ ಹೊಲಿದುಕೊಟ್ಟಿದ್ದಾನೆ" ಎಂದಿತಂತೆ ತೋಳ.

"ಹೌದು! ಅಲ್ಲೇ ಇದ್ದೆ ನಾನು, ಎಲ್ಲಾ ನೋಡಿದೆ ನಾನು. ಅಂದಹಾಗೆ ಹಾಗೆ ಸೀಟಿ ಹೊಡೆಯೋದನ್ನು ಎಲ್ಲಿ ಕಲಿತೆ? ನಿನ್ನ ಗುರುಗಳ್ಯಾರು?" ಎಂದು ಕುರಿಮರಿ ಕೇಳಿತಂತೆ.

"ಯಾರೇನು ಹೇಳಿಕೊಡೋದು? ನಾನೇ ಕಲಿತುಕೊಂಡೆ. 'ಎನ್ನರಸಿ ಚೆನ್ನರಸಿ' ಹಾಡನ್ನು ಕೂಡ ಸೀಟಿ ಹೋಡೆಯೋದರಲ್ಲೇ ನುಡಿಸಬಲ್ಲೆ" ಎಂದು ತೋಳ ತನ್ನ ತೋಳನ್ನು ಕುಣಿಸಿತಂತೆ.

"ಹಾಗಾದರೆ ಆ ರೀತಿ ಸೀಟಿ ಹೊಡಿ, ತೋಳಕುಮಾರ?" ಎಂದು ಉತ್ಸಾಹದಿಂದ ಕುರಿಮರಿ ಕೇಳಿತಂತೆ, ಬಲಗಾಲ ಗೊರಸಿಂದ ನೆಲವನ್ನು ಕೆರೆಯಿತಂತೆ.

ತೋಳನಿಗೆ ಚತುರ್ಭುಜ ಆದಹಾಗೆ ಆಗಲೇ ಆಯಿತಂತೆ, ಸೀಟಿ ಹಾಕಲು ಶುರುಮಾಡಿತಂತೆ. ದೊಡ್ಡದಾಗಿ ಸೀಟಿ ಹಾಕಿತಂತೆ.

* * * * *

ಕಬ್ಬನ್ ಪಾರ್ಕಿನ ಲೈಬ್ರರಿ ಹತ್ತಿರ ಅಖಾಡಾದಿಂದ ಹಿಂತಿರುಗಿದ್ದ ನರಸಿಂಹ, ಕಡಲೆಕಾಯಿ ತಿನ್ನುತ್ತಾ ಕೂತಿದ್ದನಂತೆ. "ಇಷ್ಟುಬೇಗ ಹೋಗಿ ಅಲ್ಲಿ ಯಾಕೆ ಕಾಯುತ್ತಾ ಕೂರಬೇಕು" ಎಂದು.

ಅವನಿಗೂ ಈ ಸೀಟಿ ಕೇಳಿಸಿತಂತೆ. ಜಟ್ಟಂತ ಎದ್ದು ಬೊಂಬೂದ್ವೀಪದ ಕಡೆಗೆ ಓಡಿದನಂತೆ. ಎರಡೇ ನಿಮಿಷಗಳಲ್ಲಿ ಬೊಂಬೂದ್ವೀಪವನ್ನು ಸೇರಿದನಂತೆ.

ಸಿಮೆಂಟ್ ಬೆಂಚಿನ ಹತ್ತಿರ ತೋಳ ನಿಂತಿತ್ತಂತೆ. ಬೆಂಚಿನಮೇಲೆ ಕುರಿಮರಿ ಕೂತಿತ್ತಂತೆ. ನರಸಿಂಹನ್ನ ಕಂಡು ಕುರಿಮರಿ ತೋಳನ ಕೈ ಹಿಡಿದುಕೊಂಡಿತಂತೆ. ಬಲವಾಗಿ ಹಿಡಿದುಕೊಂಡಿತಂತೆ.

ತೋಳನಿಗೆ ಖುಷಿ ಉಕ್ಕಿ ಇನ್ನೂ ಸೀಟಿ ಹೊಡೆಯುತ್ತಾ ಇತ್ತ ನೋಡಿತಂತೆ. ನರಸಿಂಹ ಕಾಣಿಸಿತಂತೆ. "ಓಡಿಬಿಡೋಣ" ಎಂದು ತೋಳ ಭಂಗಿತಂತೆ. ಆದರೆ ಕುರಿಮರಿ ಹಿಡಿತ ಬಲವಾಗೇ ಇತ್ತು. ತೊಟ್ಟಿಲ ತೂಗೋ ಕೈಯಿ ತೋಳನನ್ನು ಹಿಡಿದೇ ಇತ್ತು.

ನರಸಿಂಹ ಘರ್ಜಿಸುತ್ತಾ ಬಂದನಂತೆ. ತೋಳನ ಮೆಡಶಿರಕ್ಕೆ ತನ್ನ ಪಂಜದಿಂದ ಒಂದನ್ನು ಬಲವಾಗಿ ನುಡಗಿದನಂತೆ.

ತೋಕೆ ಮುದುರಿಕೊಂಡು ತೋಳ ನೆಲದಮೇಲೆ ಬಿತ್ತಂತೆ, ಧಪ್ಪಂತ. ಬಿದ್ದ ತೋಳದ ಕತ್ತನ್ನು ಹಿಡಿದು ನರಸಿಂಹ ಒಂದು ನರಾನ ಹೊರಳಿಸಿದನಂತೆ.

*   *   *   *   *

"ಬಾ! ತಂಗೀ! ಇನ್ನುಮೇಲೆ ಈ ತೋಳ ಸೀಟಿ ಹೊಡೆಯುಕ್ಕೆ ಆಗುಲ್ಲ, ಆ ನರಾನೇ ತಿರುಚಿದ್ದೀನಿ, ಕುರಿಮರಿಗಳ ಹತ್ತಿರ ಬರೋದೂ ಇಲ್ಲ. ಇದೇ ರೀತಿ ಷಿಕಾರಿಮಾಡಿ ತೋಳಗಳ ಹುಟ್ಟು ಅಡಗಿಸೋಣ, ಆದರೆ, ತಂಗೀ ಸ್ವಲ್ಪ ಹೆದರಿಕೆ ಆಗಲಿಲ್ಲವೇ?" ಎಂದನಂತೆ ನರಸಿಂಹ, ತನ್ನ ತಲೆ ಗೂದಲನ್ನು ಹಿಂದಕ್ಕೆ ಸರಿಸುತ್ತಾ.



"ಹೆದರಿಕೆ ಯಾಕೆ? ಅಣ್ಣಾ! ಅಖಾಡದಲ್ಲಿ ಜು ಜುಟ್ಸು ಕಲಿಸಿದ್ದಿರಲ್ಲ. ಆ ಹಿಡಿತವನ್ನೇ ತೋಳನಿಗೆ ಹಾಕಿದೆ. ಇಲ್ಲದೇ ಇದ್ದರೆ ತೋಳ ಓಡಿಹೋಗಿ ಬಿಡ್ತಿತ್ತು. ಕುರಿಮರಿ ಹಿಡಿತ, ಆದರೂ ತಪ್ಪಿಸಿಕೊಳ್ಳಲು ಆಗಲಿಲ್ಲ," ಎಂದು ಕುರಿಮರಿ ಹೇಳಿತಂತೆ.

ಬೊಂಬೂದ್ವೀಪದಿಂದ ನರಸಿಂಹ, ಕುರಿಮರಿ ಇಬ್ಬರೂ ಹೊರಬರುತ್ತಿದ್ದಾಗ, ತೋಳ ನಕ್ಷತ್ರಗಳನ್ನು ಎಣಿಸುತ್ತಾ ಇತ್ತಂತೆ.

ಎಂದು ನವ್ಯ ಅಡುಗೂಲಜ್ಜಿ ತೋಳ ಕುರಿಮರಿಯ ಕತೆಯನ್ನು ಮೊಮ್ಮಕ್ಕಳಿಗೆ ಹೇಳುತ್ತಾ, "ಅದಕ್ಕೇ ನೀವೂ ಅಖಾಡಾಕ್ಕೆ ಹೋಗಿ, ಆತ್ಮ ರಕ್ಷಣೆಯ ಉಪಾಯಗಳನ್ನು ಕಲಿಯಿರಿ, ಕಾಲ ನವ್ಯವಾಗಿದೆ" ಎಂದಳಂತೆ.

ಅಡುಗೂಲಜ್ಜಿಯು ಕತೆಯನು ಹೇಳಲು
ಕಾಡಿನ ಮೃಗಗಳು ಮಾತಾಡುವುವು
ನಲಿದಾಡುವುವು
ಮೈನವಿರೇಳುವುದು

ಅಡುಗೂಲಜ್ಜಿಯು ನವ್ಯವ ಬಳಸಲು
ನಾಡಿನ ಮೃಗಗಳು ಕೆಣಕಾಡುವುವು
ನಗೆಯಾಡುವುವು
ಮೈ ಕುಲುಕಾಡುವುದು.

*   *   *

ಹುಲ್ಲಾದ ಬೆಟ್ಟದಡಿ, ಮನೆಗೆ ಮಲ್ಲಿಗೆಯಾದ
ಕಲ್ಲಾದ ಕಷ್ಟಗಳ ಮಳೆಯ ವಿಧಿ ಸುರಿಸೆ
ಬೆಲ್ಲ ಸಕ್ಕರೆಯಾದ ಕಲಿಯಬಂದವರಿಂಗೆ
ಎಲ್ಲರೊಳುವೊಂದಿವನು ಯೆಂಡ್ಕುಡ್ಕ ರತ್ನ.

